ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಲೋಹಿಯಾ
ಸಮಾಜವಾದ ದರ್ಶನ

ಡಿ. ಎಸ್. ನಾಗಭೂಷಣ



ಲೋಹಿಯಾ
ಸಮಾಜವಾದ ದರ್ಶನ

ಡಿ. ಎಸ್. ನಾಗಭೂಷಣ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

LOHIA SAMAJAVADA DARSHANA (Socialism of Dr. Rama Manohar Lohia) by **D.S. NAGABHUSHANA,** HIG-5, 'Nudi', KHB Colony, Kallahally Extn.,Vinobanagar SHIMOGA - 577 204, Tel: 08182-248574, Moblie: 94492 42284 Published by : Ashoka N. Chalavadi, Administrative Officer, Kannada Pustaka Pradhikara (Kannada Book Authority), Kannada Bhavana, J.C. Road, Bangalore-002.

Pages : xii + 108 Price : 40/-

First Edition : March 2006

Revised Edition : 2008

Copies : 1000

ಪ್ರತಿಗಳು : 1000

ಪುಟಗಳು : xii + 108

ಬೆಲೆ : ೪೦/–

ಮುಖಪುಟ ವಿನ್ಯಾಸ : **ವಿ.ರಾಜ್** (ವಿಶ್ವಾಸ್ ಪ್ರಿಂಟ್ಸ್)

ISBN : 81-7713-256-3

ಪ್ರಕಾಶಕರು :

ಅಶೋಕ ಎನ್. ಚಲವಾದಿ

ಆಡಳಿತಾಧಿಕಾರಿಗಳು

ಕನ್ನಡ ಪುಸ್ತಕ ಪ್ರಾಧಿಕಾರ, ಜೆ.ಸಿ. ರಸ್ತೆ

ಬೆಂಗಳೂರು–೫೬೦ ೦೦೨

ಕರಡು ತಿದ್ದಿದವರು : ಲೇಖಕರು

Printed at :

ವಿಶ್ವಾಸ್ ಪ್ರಿಂಟ್ಸ್

VISHWAS PRINTS

23, 3rd Cross, Nanjamba Agrahara

Chamarajpet, Bangalore - 560 018

Ph : 26604835

ಲೇಖಕನ ಮಾತು

ಈ ಪುಸ್ತಕ ೨೦೦೬ ರಲ್ಲಿ ತುಮಕೂರಿನ 'ನೆಲಸಿರಿ' ಪ್ರಕಾಶನದಿಂದ ಮೊದಲ ಮುದ್ರಣ ಕಂಡು ಆ ವರ್ಷದ ಕೊನೆಯ ಹೊತ್ತಿಗೇ ಪ್ರತಿಗಳೆಲ್ಲ ಖರ್ಚಾಗಿ ಹೋದವು. ಹೀಗಾಗಿ ಹೋದ ವರ್ಷವೆಲ್ಲ ಈ ಪುಸ್ತಕಕ್ಕೆ ಹಲವಾರು ಕಡೆಗಳಿಂದ ಬೇಡಿಕೆ ಬಂದರೂ, ಮೂಲ ಪ್ರಕಾಶನ ಅದರದೇ ಆದಕಾರಣಗಳಿಂದಾಗಿ ತಾತ್ಕಾಲಿಕವಾಗಿಯಾದರೂ ಸ್ಥಗಿತಗೊಂಡ ಕಾರಣ, ಪುಸ್ತಕ ಪುರ್ನಮುದ್ರಣಗೊಳ್ಳಲು ಸಾಧ್ಯವಾಗಲಿಲ್ಲ. ಈಗ ಪುನರ್ಮುದ್ರಣ ನಿರಂತರ ಆರಂಭದ ಹೊತ್ತಿಗೆ ಕನ್ನಡ ಪುಸ್ತಕ ಪ್ರಾಧಿಕಾರ ಇದರ ಪರಿಷ್ಕೃತ ಆವೃತ್ತಿಯನ್ನು ಹೊರತರಲು ಮುಂದೆ ಬಂದಿದೆ. ಇದಕ್ಕಾಗಿ ಪ್ರಾಧಿಕಾರದ ಎಲ್ಲ ಸದಸ್ಯರಿಗೂ, ಪದಾಧಿಕಾರಿಗಳಿಗೂ; ವಿಶೇಷವಾಗಿ ಅದರ ಅಧ್ಯಕ್ಷರಾದ ಎಸ್. ಜಿ. ಸಿದ್ಧರಾಮಯ್ಯನವರಿಗೆ ನಾನು ಕೃತಜ್ಞನಾಗಿದ್ದೇನೆ. ಸಮಾಜವಾದ ಕುರಿತ ಅವರ ಆಸಕ್ತಿ ಹಾಗೂ ಒಲವುಗಳೇ ಈ ಪುಸ್ತಕದ ಪರಿಷ್ಕೃತ ಆವೃತ್ತಿ ಹೊರಬರಲು ಕಾರಣವಾಗಿದೆ ಎಂದರೂ ತಪ್ಪಾಗಲಾರದು.

ಮೊದಲು ಈ ಪುಸ್ತಕ ಮುದ್ರಣವಾದಾಗ, ಹಸ್ತಪ್ರತಿ ಒಂದು ಗಡುವಿನಲ್ಲಿ ತಯಾರಾಗಬೇಕಾದ ಒತ್ತಡವಿತ್ತು. ಲೋಹಿಯಾ ಜನ್ಮದಿನ ಮಾರ್ಚ್ ೨೩ ರಂದು ಬಿಡುಗಡೆಯಾಗಬೇಕೆಂಬ ನಿರ್ಧಾರದ ನಂತರ ಪುಸ್ತಕದ ಬರವಣಿಗೆಯನ್ನು ಆರಂಭಿಸಲಾಯಿತು! ಇದರಿಂದಾಗಿ ಬರವಣಿಗೆಯಲ್ಲಿ ಕೆಲವು ತೊಡಕುಗಳು ಉಳಿದುಕೊಂಡವು. ಈ ಪರಿಷ್ಕೃತ ಆವೃತ್ತಿಯಲ್ಲಿ ಆ ತೊಡಕುಗಳನ್ನು ನಿವಾರಿಸಲಾಗಿದೆ. ಉದ್ದುದ್ದವಾಗಿ ಸಂಕೀರ್ಣವಾಗಿದ್ದ ವಾಕ್ಯಗಳನ್ನು ಸರಳಗೊಳಿಸಲಾಗಿದ್ದು. ಈಗ ಓದನ್ನು ಸುಗಮಗೊಳಿಸಲಾಗಿದೆ. ಪುಸ್ತಕದ ಪೂರ್ವನಿರ್ಧರಿತ ಗಾತ್ರದ ಕಾರಣದಿಂದಾಗಿ ಬಿಟ್ಟು ಹೋಗಿದ್ದ ಕೆಲವು ಸಂಗತಿಗಳ ವಿವರಗಳನ್ನು ಸ್ಪಷ್ಟಪಡಿಸಲಾಗಿದೆ ಮತ್ತು ಕಣ್ತಪ್ಪಿನಿಂದಾಗಿ ಉಳಿದು ಹೋಗಿದ್ದ ಮುದ್ರಣ ದೋಷಗಳನ್ನು ಆದಷ್ಟೂ ತಿದ್ದಲಾಗಿದೆ. ಹಾಗೇ ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಸಾಮಾಜಿಕ ನ್ಯಾಯದ ಪರಿಕಲ್ಪನೆಯೇ ಅಪ್ರಸ್ತುತ ಎಂದು ವಾದಿಸುವುದು ಎಷ್ಟು ಅಸಂಗತ ಎನ್ನುವುದನ್ನು ಮನವರಿಕೆ ಮಾಡಿಕೊಡಲು, ಮೀಸಲಾತಿ ಪ್ರಶ್ನೆ ಕುರಿತು ಸಮಕಾಲೀನ ಚರ್ಚೆಯನ್ನೊಳಗೊಂಡ ನನ್ನದೊಂದು ಲೇಖನವನ್ನು ಅನುಬಂಧವಾಗಿ ಸೇರಿಸಲಾಗಿದೆ. ಇದರಿಂದಾಗಿ ಈ ಪುಸ್ತಕದ ಚೌಕಟ್ಟು, ನೋಟ ವಿಸ್ತಾರವಾಗಿ; ಇದರ ಉಪಯುಕ್ತತೆಯೂ ಹೆಚ್ಚಿದೆ ಎಂದು ನಾನು ಭಾವಿಸಿದ್ದೇನೆ.

ಈ ಪುಸ್ತಕ ಲೋಹಿಯಾ ಅವರ ವ್ಯಕ್ತಿತ್ವ ಮತ್ತು ತತ್ವ ಚಿಂತನೆಯನ್ನು ಪರಿಚಯಿಸುವುದರ ಜೊತೆ ಜೊತೆಗೇ ಸಮಾಜವಾದದ ವಿಶ್ವ ಇತಿಹಾಸ, ಭಾರತೀಯ ಸಮಾಜವಾದದ ಇತಿಹಾಸ ಹಾಗೂ ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸಗಳನ್ನು ಸೂಕ್ಷ್ಮವಾಗಿ ಪರಿಚಯ ಮಾಡಿಕೊಡುವುದನ್ನು ಓದುಗರು ಗಮನಿಸಬಹುದು. ಜೊತೆಗೆ ಇಂದಿನ ಹೊಸ ಸಾಮಾಜಿಕ-ಆರ್ಥಿಕ-ಸಾಂಸ್ಕೃತಿಕ ಅಂತಾರಾಷ್ಟ್ರೀಯ ಸಂದರ್ಭದಲ್ಲಿ ಸಮಾಚಾರವನ್ನು ಸಮಕಾಲೀನಗೊಳಿಸಬೇಕಾದ ಅಗತ್ಯ-ಅನಿವಾರ್ಯತೆಗಳನ್ನು ಮನಗಾಣಿಸುವ ಪ್ರಯತ್ನವಾಗಿ ಈವರೆಗಿನ ಸಮಾಜವಾದಿ ಚಳುವಳಿಯನ್ನು ಕುರಿತ ಒಂದು ಹಿನ್ನೋಟ-ಮುನ್ನೋಟಗಳನ್ನೊಂಡ ಲೇಖನವೊಂದನ್ನು ಈ ಪುಸ್ತಕ ಒಳಗೊಂಡಿದೆ. ಹೀಗಾಗಿ ಈ ಪುಸ್ತಕ ಸಮಾಜವಾದವನ್ನು ಕುರಿತಂತೆ ಆಸಕ್ತಿ-ಕುತೂಹಲಗಳುಳ್ಳ ಹಿರಿ-ಕಿರಿಯರೆಲ್ಲರ ಗಮನ ಸೆಳೆಯಬಲ್ಲದೆಂಬುದು ನನ್ನ ಆಶಯ.

ವಿಶ್ವಾಸ್ ಪ್ರಿಂಟ್ಸ್‌ನ ಗೆಳೆಯರು ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿದ್ದಾರೆ. ವಿಶ್ವಾಸ್ ಪ್ರಿಂಟ್ಸ್‌ನ ವಿರಾಜ್ ರವರು ಚೆಂದದ ಮುಖಪುಟ ವಿನ್ಯಾಸ ಮಾಡಿದ್ದಾರೆ. ಈ ಪುಸ್ತಕದ ಅಂತಿಮ ಕರುಡನ್ನು ಓದಿ ತಿದ್ದಿದ ಕಿರಿಯ ಗೆಳೆಯ ಧರ್ಮಪ್ಪ ಇವರೆಲ್ಲರಿಗೂ ಮತ್ತು ಪುಸ್ತಕದ ಮೊದಲ ಮುದ್ರಣವನ್ನು ಓದಿ ಪ್ರತಿಕ್ರಿಯಿಸಿದ ಎಲ್ಲ ಓದುಗರಿಗೂ ನಾನು ಕೃತಜ್ಞ.

೨೦.೩.೨೦೦೮ — **ಡಿ. ಎಸ್. ನಾಗಭೂಷಣ**

ಶಿವಮೊಗ್ಗ

ಲೇಖಕನ ಮಾತು (ಮೊದಲ ಮುದ್ರಣಕ್ಕೆ)

ಸಮಾಜವಾದದ ಕಾಲ ಮುಗಿಯಿತು ಎಂಬ ಅಭಿಪ್ರಾಯ ಪ್ರಚಲಿತವಾಗ ತೊಡಗಿರುವ ಸಂದರ್ಭದಲ್ಲಿ ಸಮಾಜವಾದ ದರ್ಶನ ಕುರಿತ ಈ ಪುಸ್ತಕ ಹೊರಬರುತ್ತಿದೆ. ಈಗ ಜಾಗತೀಕರಣದ ವಕ್ತಾರರು ಯಶಸ್ವಿಯಾಗಿ ಹಬ್ಬಿಸುತ್ತಿರುವ ಏಕಪಕ್ಷೀಯ ಚಿಂತನಾಲಹರಿಗೆ ಸಿಕ್ಕಿ ಸಮಾಜವಾದದ ಬಗ್ಗೆ ಹೊಸ ತಲೆಮಾರಿನ ಯುವಜನ ಪ್ರತಿಕೂಲ ಅಭಿಪ್ರಾಯವನ್ನಷ್ಟೇ ರೂಪಿಸಿಕೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸಮಾಜವಾದವೆಂದರೆ ನಿಜವಾಗಿ ಏನು, ವಿಶೇಷತಃ ಡಾ. ರಾಮಮನೋಹರ ಲೋಹಿಯಾ ರೂಪಿಸಿದ, ಪ್ರತಿಪಾದಿಸಿದ ಸಮಾಜವಾದವೆಂತಹುದು ಎಂಬುದನ್ನು ಪರಿಚಯ ಮಾಡಿಕೊಡುವ ಉದ್ದೇಶದಿಂದ ಈ ಪುಸ್ತಕ ರಚಿತವಾಗಿದೆ. ಇದಕ್ಕೆ ಪೂರಕವಾಗಷ್ಟೇ ಲೋಹಿಯಾ ಅವರ ಜೀವನ ಚಿತ್ರ ಹಾಗೂ ಅವರು ತಮ್ಮ ಗೆಳೆಯರೊಡನೆ ಕಟ್ಟಿದ ಸಮಾಜವಾದಿ ಪಕ್ಷ ಮತ್ತು ಆಂದೋಲನಗಳ ಕಥೆಯನ್ನು ನಿರೂಪಿಸಲಾಗಿದೆ. ಮನುಷ್ಯನನ್ನು ಸಮೂಹದ ಕಷ್ಟ ಸುಖಗಳೆರಡರಿಂದಲೂ ಬೇರ್ಪಡಿಸಿ ಅಸಾಮಾಜಿಕನನ್ನಾಗಿ ಮಾಡುವ ಮೂಲಕ ಲೌಕಿಕ ಅಭ್ಯುದಯ ಮತ್ತು ಆಧ್ಯಾತ್ಮಿಕ ಉನ್ನತಿಗಳೆರಡೂ ಪರಿಕಲ್ಪನೆಗಳನ್ನು ವಿಕ್ಷಿಪ್ತಗೊಳಿಸುತ್ತಿರುವ ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಸಮಾಜವಾದ, ಹಿಂದೆಂದಿಗಿಂತಲೂ ಹೆಚ್ಚು ಅಗತ್ಯವಾಗಿದೆ. ಅದಕ್ಕಾಗಿ ಅದು ತನ್ನ 'ಸರ್ವಶ್ರೇಷ್ಠತನದ' ವ್ಯಸನದಿಂದ ಹುಟ್ಟಿದ ಹಳೆಯ ಹಠವಾದಿ, ನಿರರ್ಥಕ ಚಾಳಿಗಳನ್ನು ಬಿಟ್ಟು, ರಚನಾತ್ಮಕವಾಗಿ ಸಮಾಜದ ಮಾನವೀಕರಣ ಚಳುವಳಿಯಾಗಿ ಪ್ರಸ್ತುತಗೊಳ್ಳಬೇಕಾಗಿದೆ. ಲೇಖಕನ ಈ ಆಶಯವೂ ಈ ರಚನೆಯ ಪುಸ್ತಕದ ಹಿಂದೆ ಕೆಲಸ ಮಾಡಿದೆ. ಪುಸ್ತಕದ ಸೀಮಿತ ಉದ್ದೇಶದ ಕಾರಣದಿಂದಾಗಿ ತತ್ವ ವಿಶ್ಲೇಷಣೆಯ ವಿಷಯದಲ್ಲಿ ತೀರಾ ವಿವರಗಳಿಗೆ ಹೋಗದಿರುವುದರಿಂದ, ಕೆಲವರಿಗೆ ಈ ವಿಶ್ಲೇಷಣೆ ಸ್ಥೂಲವಾಯಿತೇನೋ ಎಂದೆನಿಸಿದರೆ ಆಶ್ಚರ್ಯವೇನಿಲ್ಲ.

ಈ ಪುಸ್ತಕ ಇನ್ನಷ್ಟು ವಿವರವಾಗಿ, ಸಮೃದ್ಧವಾಗಿ ಎಂದೋ ಬರಬೇಕಿತ್ತು. ನಮ್ಮ ಕಾಲದ ಅತ್ಯುತ್ತಮ ಸಮಾಜವಾದಿ ಚಿಂತಕ ಕಿಷನ್ ಪಟ್ನಾಯಕರು ಈ ಬಗ್ಗೆ ಪದೇ ಪದೇ ನನಗೆ ನೆನಪಿಸುತ್ತಿದ್ದರು. ಆದರೆ ಸುತ್ತ ಸೂಕ್ತ ವಾತಾವರಣ ಇಲ್ಲದಿದ್ದಾಗ ಇಂತಹ ಪುಸ್ತಕ ಬರೆಯುವುದು ಕಷ್ಟ. ಯಾರಿಗಾಗಿ, ಯಾಕಾಗಿ ಬರೆಯಬೇಕು ಎಂಬ ಪ್ರಶ್ನೆಗಳನ್ನು ಎದುರಿಸಿ ಬರೆಯಬೇಕಾದ ಕಷ್ಟವದೆ ಎಂದು ಅವರಿಗೆ ಹೇಳುತ್ತಿದ್ದೆ. ಕಿಷನ್ ಆಗ ನಕ್ಕು

ಸುಮ್ಮನಾಗಿ ಬಿಡುತ್ತಿದ್ದರು. ಕಳೆದ ೨೫ ವರ್ಷಗಳಲ್ಲಿ ಸಮಾಜವಾದಿಗಳೆನಿಸಿಕೊಂಡವರು ಆಡಿದ ಅಧಿಕಾರದ ಆಟಗಳನ್ನು ನೋಡಿ ಬೇಸತ್ತಾಗಲೆಲ್ಲ, ತಮ್ಮ ಪರಿಶುದ್ಧ ಸರಳ ನಡೆ ನುಡಿಗಳ ಮೂಲಕ ನನ್ನಂತಹವರಲ್ಲಿ ಸಮಾಜವಾದದ ಬಗ್ಗೆ ಭರವಸೆ ತುಂಬುತ್ತಿದ್ದವರು ಕಿಷನ್‌ಜಿ. ನಾಲ್ಕು ವರ್ಷಗಳ ಹಿಂದೆ ಶಿವಮೊಗ್ಗದ ಸಮಾಜವಾದಿ ಶಿಬಿರದಲ್ಲಿ 'ಸಮಾಜವಾದ ಮುಂದಿನ ದಾರಿ' ಎಂಬ ವಿಷಯದ ಬಗ್ಗೆ, ಅವರು ಮಾಡಿದ ಅದ್ಭುತ ಭಾಷಣ ಬುದ್ಧನ ಕೊನೆಯ ಉಪದೇಶದ ಮಾತುಗಳಂತೆ ನನ್ನ ಕಿವಿಗಳಲ್ಲಿ ಈಗಲೂ ಮಾರ್ದನಿಸುತ್ತಿವೆ. ಈಗ ಅವರಿಲ್ಲ. ಅವರ ನೆನಪಿಗಾದರೂ ಈ ಪುಸ್ತಕ ಬರೆಯುವುದು ನನ್ನ ಕರ್ತವ್ಯವಾಗಿತ್ತು.

ಸಮಾಜವಾದಿ ಚಳುವಳಿಯೆಂಬುದಿಲ್ಲದ ಈ ಕಾಲದಲ್ಲೂ ಸಮಾಜವಾದದ ಹಿಂದೆ ಬಿದ್ದಿರುವ ನನ್ನ ಯುವ ಮಿತ್ರರೇ ಈಗ ಈ ಪುಸ್ತಕವನ್ನು ನನ್ನಿಂದ ಬರೆಸಿದ್ದಾರೆ. ಈ ಸಂಬಂಧ ತುಮಕೂರಿನ ನಟರಾಜಪ್ಪ, ಚಾಮರಾಜನಗರದ ಶ್ರೀನಿವಾಸ ಕುಮಾರ್ ಹಾಗೂ ಮೈಸೂರಿನ ಬಿ. ರಾಜೇಶ್‌ರನ್ನು ಇಲ್ಲಿ ಹೆಸರಿಸಲೇಬೇಕಿದೆ. ಅವರು ತಮ್ಮೊಂದಿಗೆ ಮಲ್ಲಿಕಾ ಬಸವರಾಜು, ಪಲ್ಲವಿ, ಬೆಳ್ಳಿ, ಅಪೂರ್ವ ಡಿಸಿಲ್ವ, ರವಿಚಂದ್ರನ್ ಮುಂತಾದ ವಿವಿಧ ಜಿಲ್ಲೆಗಳ ಗೆಳೆಯರು ಕಟ್ಟಿಕೊಂಡಿರುವ 'ನೆಲಸಿರಿ'ಯ ಮೂಲಕ ಈ ಪುಸ್ತಕವನ್ನು ಪ್ರಕಟಿಸುತ್ತಿದ್ದಾರೆ. ಇವರೆಲ್ಲರಿಗೂ ಹಾಗೂ ಈ ಪುಸ್ತಕದ ಅಕ್ಷರಜೋಡಣೆ ಮಾಡಿದ ಬೆಂಗಳೂರಿನ ಆರ್. ಎಸ್. ಶ್ರೀಧರ್ ದಂಪತಿಗಳು ಮತ್ತ ನನ್ನ ಮೇಲಿನ ವಿಶ್ವಾಸದಿಂದಲೋ, ಲೋಹಿಯಾ ಮೇಲಿನ ಪ್ರೀತಿಯಿಂದಲೋ ಈ ಪುಸ್ತಕದ ಮುದ್ರಣದ ಉಸ್ತುವಾರಿ ನೋಡಿಕೊಂಡ ಬಳ್ಳಾರಿಯ ಲೋಹಿಯಾ ಪ್ರಕಾಶನದ ಸಿ. ಚೆನ್ನಬಸವಣ್ಣ ಅವರಿಗೂ ಈ ಲೇಖಕ ಋಣಿಯಾಗಿದ್ದಾನೆ.

೧೬.೩.೨೦೦೬ ಡಿ.ಎಸ್. ನಾಗಭೂಷಣ

ಮೈಸೂರು

ಒಂದು ದಿನ ಒಳಕೊಂಡಿತ್ತು ನೋಡಾ

ನಮ್ಮ ಕಣ್ಣೆದುರಿಗೆ ಎರಡು ವಾಸ್ತವಗಳಿವೆ. ಒಂದು ಜನಾಂಗಿಕ ಸಂಸ್ಕೃತಿಯ ಸ್ಮೃತಿ ಸಂಚಯಗಳಂತಿರುವ ಜನಪದ ಪುರಾಣ ಕಥನಗಳನ್ನು ತಲೆಮಾರಿನಿಂದ ತಲೆಮಾರಿಗೆ ಬಾಯಿಂದ ಬಾಯಿಗೆ ನೆನಪಿನ ವಾಹಕದಲ್ಲಿ ಸೃಜನಶೀಲವಾಗಿ ಕಾಪಾಡಿಕೊಂಡು ಬಂದ ಮೌಖಿಕ ಜಗತ್ತು. ಇದು ಈಗಾಗಲೇ ನಮ್ಮ ನಡುವೆ ಕಣ್ಮರೆಯಾಗುತ್ತಿರುವ ಜಗತ್ತು. ಇನ್ನೊಂದು–ಬದುಕಿನ ಎಲ್ಲ ಜ್ಞಾನಶಾಖೆಗಳ ಮಾಹಿತಿ ಭಂಡಾರವನ್ನೂ ತನ್ನ ಸೂಚ್ಯಂಕದಲ್ಲಿ ದಾಖಲಿಸಿಕೊಳ್ಳುತ್ತಾ, ಮನುಷ್ಯನ ಸೃಜನಶ್ರಮದ ಕಾಲದೀರ್ಘತೆಯನ್ನು ತನ್ನ ಅನುಕ್ಷಣಗಳ ಹ್ರಸ್ವತೆಗೆ ತಂದಿಟ್ಟುಕೊಂಡು ದೈತ್ಯ ಸಾಧನೆಯನ್ನು ಮೆರೆಯುತ್ತಿರುವ ಗಣಕ ಜಗತ್ತು. ಇದು ದಿನದಿಂದ ದಿನಕ್ಕೆ ಗಣನೆಗೆ ಸಿಗದ ವೇಗದಲ್ಲಿ ಚಲಿಸುತ್ತಿರುವ ಜ್ಞಾನ ಜಗತ್ತು.

ಮೌಖಿಕ ಸೃಜನ ಪ್ರತಿಭೆಯ ಪ್ರತೀಕ ಸಿರಿಯಜ್ಜಿ. ಗಣಕ ಜ್ಞಾನದ ವೇಗದ ಪ್ರತೀಕ ಶಕುಂತಲಾದೇವಿ. ಸಿರಿಯಜ್ಜಿಯದು ಕೇವಲ ನೆನಪಲ್ಲ ; ಅದೊಂದು ಸೃಜನ ಪ್ರತಿಭೆ. ಅದು ಭೂತವಲ್ಲ, ವರ್ತಮಾನ. ಪರಂಪರೆಯನ್ನು ಅರಗಿಸಿಕೊಂಡು ಸಮಕಾಲೀನವಾದ ಸೃಜನೆ. ಅದು ಕೇವಲ ವ್ಯಕ್ತಿಯಲ್ಲ, ಅದೊಂದು ಸಮುದಾಯ ಪ್ರಜ್ಞೆ. ಶಕುಂತಲಾ ದೇವಿಯವರ ಜ್ಞಾನಶಕ್ತಿ ೨ X ೨=೪ರ ಲೆಕ್ಕಾಚಾರದ ಅಗಾಧ ನೆನಪಿನ ಕೋಶ. ಇದು ತಾಂತ್ರಿಕ ನೈಪುಣ್ಯತೆ ಹಾಗು ಪರಿಕಲ್ಪನೆಗಳ ಅದ್ಭುತ ಸಮೀಕರಣದ ಜ್ಞಾನಶಕ್ತಿ. ಇಲ್ಲಿ ಪರಿಭಾವಿಸಬೇಕಾದ ಬಹು ಮುಖ್ಯ ವಿಚಾರವೆಂದರೆ, ಮೊದಲನೆಯದು ಭಾವಪ್ರಭೆಯ ಸೃಜನೆಯ ಫಲ. ಎರಡನೆಯದು ಬುದ್ಧಿ ಸಂಚಯದ ತರ್ಕದ ಫಲ. ಇಂದು ಈ ಎರಡು ವಾಸ್ತವಗಳ ನಡುವೆ ಅಕ್ಷರ ಲೋಕದ ಚಲನೆ ಹಲವು ಸವಾಲುಗಳಿಗೆ ಹಲವು ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿದೆ.

ಜ್ಞಾನದ ಶೋಧ ವಿಸ್ತರಣೆಗೊಂಡಂತೆ, ಬಹಳಷ್ಟು ಆತಂಕಗಳು ನಿತ್ಯದ ಭಯಗಳಾಗಿ ನಮ್ಮೆದುರು ಬಿಚ್ಚಿಕೊಳ್ಳುತ್ತಿವೆ. ಮಾಹಿತಿ ತಂತ್ರಜ್ಞಾನದ ವೇಗದಾಳಿಗೆ ಸಿಲುಕಿ ಜಗತ್ತಿನ ಬಹುತೇಕ ಭಾಷೆಗಳು ಕಣ್ಮರೆಯಾಗುವ ಆತಂಕವನ್ನು ಹಲವು ಜನ ಭಾಷಾತಜ್ಞರು ಗಂಭೀರ ಸಮಸ್ಯೆಯಾಗಿ ಜಗತ್ತಿನ ಮುಂದಿಟ್ಟಿದ್ದಾರೆ. ಈ ಆತಂಕದ ಆವರಣದಲ್ಲಿ ನಮ್ಮ ಕನ್ನಡ ಭಾಷೆಯ ಸ್ಥಿತಿ ಏನು? ಇದು ಇಂದು ನಾವು ಕೇಳಿಕೊಳ್ಳಬೇಕಾದ ಪ್ರಮುಖ ಪ್ರಶ್ನೆ. ಭಾಷೆ ಎಂಬುದು ಕೇವಲ ಸಂವಹನ ಸಂಕೇತವಲ್ಲ. ಅದು ಸಮುದಾಯದ ಸಂಸ್ಕೃತಿ, ನಾಗರಿಕತೆ, ಸೃಜನಶಕ್ತಿ, ಬುದ್ಧಿಭಾವಗಳು ಸಂಲಗ್ನಗೊಂಡ ಬದುಕಿನ ಪ್ರತೀಕ. ಅದು ಸಮುದಾಯದ ಉಸಿರು. ಇಂಥ ಭಾಷೆಯ ಅಳಿಯುವಿಕೆ ಎಂದರೆ ಬದುಕಿನ ಎಲ್ಲಾ ಕ್ಷೇತ್ರಗಳ ಪ್ರಮುಖ ವ್ಯಾವಹಾರಿಕತೆ ಯಿಂದ ಆ ಭಾಷೆಯನ್ನ ಹೊರಗಿಡುವುದು; ಆಡಳಿತ ಶಿಕ್ಷಣ ಸಂಪರ್ಕಮಾಧ್ಯಮ ಸ್ಥಾನದಿಂದ ಆ ಭಾಷೆಯನ್ನು ಕಣ್ಮರೆ ಮಾಡುವುದು. ಇದರ ಅರ್ಥ ಬಹುದೊಡ್ಡ ಭಾಷಿಕ ಸಮುದಾಯ ವೊಂದನ್ನು ಜ್ಞಾನದ ಬೆಳಕಿನಿಂದ

ದೂರವಿಡುವುದು. ಜಾಗತಿಕ ಬದುಕಿನ ಸುಖ ಸವಲತ್ತುಗಳಿಂದ ವಂಚಿಸುವುದು. ಇಂಥ ಹಲವು ಆಘಾತಕಾರೀ ಆತಂಕಗಳ ವಾತಾವರಣದಲ್ಲಿ ಇಂದು ಕನ್ನಡ ಅಕ್ಷರ ಲೋಕ ತನ್ನ ಸ್ಥಿತಿಯನ್ನು ಕಂಡುಕೊಳ್ಳಬೇಕಾಗಿದೆ.

ಸಾವಿರಾರು ವರ್ಷಗಳ ಇತಿಹಾಸದಲ್ಲಿ ಸಾಂಸ್ಕೃತಿಕ, ರಾಜಕೀಯ ದಬ್ಬಾಳಿಕೆಯನ್ನು ಸಮರ್ಥವಾಗಿ ಎದುರಿಸಿ, ಬೆಳೆದುಬಂದ ಕನ್ನಡ ಭಾಷೆಗೆ, ಕನ್ನಡ ಬದುಕಿಗೆ ಆತಂಕ ಆಘಾತಗಳು ಮೈಯುಂಡ ಬಾಳು. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳಿಂದ ಮೊದಲ್ಗೊಂಡು ಹಿತಮಿತ ಮೃದುವಚನ, ನುಡಿ ಟಠಡಢಣ, ಮಾತು ಜ್ಯೋತಿರ್ಲಿಂಗ, ಹಲಗೆ ಬಳಪವ ಪಿಡಿಯದೊಂದಗ್ಗಳಿಕೆಯಲ್ಲಿ ಒಲಿದಂತೆ ಹಾಡಿದ ಹಲವು ಕಾಲದ ಹಲವು ನಿಟ್ಟಿನ ನುಡಿಸಾಧಕರ ಮಾರ್ಗದೇಸಿಗಳ ಸಮಾಹಿತದಲ್ಲಿ ತನಗೆದುರಾದ ಆತಂಕ ಆಘಾತಗಳನ್ನು ಅರಗಿಸಿಕೊಂಡು ಕನ್ನಡದ ದೀಪ ಬೆಳಗಿದೆ. ಇದರರ್ಥ ಆಯಾ ಕಾಲದ ಕನ್ನಡ ಸಮುದಾಯ ತನ್ನ ಕಾಲದ ಸವಾಲುಗಳಿಗೆ ತಕ್ಕ ವಿವೇಕ ತೋರಿ ಸೃಜನಶೀಲವಾಗಿದೆ. ಆದರೆ, ಇಂದಿನ ಆತಂಕ ಹಿಂದೆಂದಿನ ಆಕ್ರಮಣಗಳಿಗಿಂತ ಭಯಾನಕವಾದುದು. ಈ ಭಯಾನಕತೆಯನ್ನು ಎದುರಿಸುವ ಹಾಗು ಆರೋಗ್ಯಕರವಾಗಿ ಅದನ್ನು ಅರಗಿಸಿಕೊಂಡು ಬೆಳೆಯುವ ಸತ್ವಶಕ್ತಿ ಭಾಷೆಗಿದ್ದರೂ, ಭಾಷಿಕ ಸಮುದಾಯದ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುವ ಸಂಗತಿ. ಈ ಇಚ್ಛಾಶಕ್ತಿ ಹೊರಗಿನಿಂದ ಆಮದು ಮಾಡಿಕೊಳ್ಳುವ ಸರಕಲ್ಲ ಬದುಕನ್ನು ರೂಪಿಸುವ ಪ್ರಭುತ್ವ ಹಾಗು ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವ ಜನಸಮುದಾಯದೊಳಗೆ ಅರಿವೇ ಗುರುವಾಗಿ ಮೂಡಬೇಕಾದ ಪ್ರಜ್ಞಾವಿಶೇಷ. ಈ ಪ್ರಜ್ಞಾವಿಶೇಷ ಸಿರಿಯಜ್ಜಿಯ ಸಮುದಾಯವನ್ನು ಕಡೆಗಣಿಸದೆ ಸಮೀಕರಣದ ಜ್ಞಾನಶಕ್ತಿಗೆ ಮಣೆ ಹಾಕಬೇಕಿದೆ. ಸಾಮಾಜಿಕ ನ್ಯಾಯವನ್ನು ಸಂಸ್ಕೃತಿಯ ರುಚಿ ವಿಶೇಷತೆಯನ್ನು ಪರಿಭಾವನೆಗೆ ತಂದುಕೊಂಡು ಜಂಗಮಶೀಲವಾಗಬೇಕಿದೆ. ಅತಿರೇಕಗಳ ಅವಾಂತರದಿಂದ ಸಮುದಾಯವನ್ನು ಕಾಪಾಡುವ ಶಕ್ತಿ ಅಕ್ಷರ ಲೋಕಕ್ಕಿದೆ. ಆದ್ದರಿಂದ ಅಕ್ಷರ ಲೋಕ ಸೃಜನಶೀಲತೆಯನ್ನು ಎಚ್ಚರದಿಂದ ಉಳಿಸಿಕೊಳ್ಳುತ್ತಾ, ಜ್ಞಾನದ ಹೊಸ ವಿಸ್ತರಣೆಗೆ ತೆರೆದುಕೊಳ್ಳುವ ಅಗತ್ಯವಿದೆ.

ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳಿಗೆ ಪ್ರತಿಸ್ಪಂದಿಸುತ್ತಾ ಬೆಳೆಯುವ ಭಾಷೆಯ ಸೃಜನಶೀಲತೆ ಪ್ರಕಾಶಿಸುತ್ತದೆ. ವೈಜ್ಞಾನಿಕ ವಿಚಾರ ಸೃಜನಶೀಲಭಾವದಲ್ಲಿ ಅಭಿವ್ಯಕ್ತಗೊಂಡಾಗ ಅದಕ್ಕೊಂದು ಮಾನವೀಯತೆಯ ಪ್ರಭೆ ಪ್ರಾಪ್ತವಾಗುತ್ತದೆ. ಹೊಸಕಾಲದ ಸಂವೇದನೆಗಳಿಗೆ ವೈಜ್ಞಾನಿಕ ವಿಚಾರಗಳಿಗೆ ತಾತ್ವಿಕ ತರ್ಕದೀಪ್ತಿಗಳಿಗೆ ತೆರೆದುಕೊಳ್ಳುವ ನಮ್ಯಗುಣ ಜೀವಂತ ಭಾಷೆಯೊಂದರ ದೊಡ್ಡಶಕ್ತಿ. ಕಾಲದ ಅಗತ್ಯಗಳಿಗೆ ಸ್ಪಂದಿಸಬಲ್ಲ ನಮ್ಯಗುಣ ಕನ್ನಡ ಭಾಷೆಯ ದೊಡ್ಡ ಶಕ್ತಿ. ಜಾಗತಿಕ ಮಟ್ಟದಲ್ಲಿ ವಿಸ್ತರಣೆಗೊಳ್ಳುತ್ತಿರುವ ಎಲ್ಲ ಜ್ಞಾನಶಾಖೆಗಳ ಪಾರಿಭಾಷಿಕ ಶಬ್ದ ಸಂಪತ್ತನ್ನು ಸ್ವೀಕರಿಸುತ್ತಾ, ತನ್ಮುಖೇಣ ವಿಷಯಜ್ಞಾನವನ್ನು ಅರಗಿಸಿಕೊಂಡು ಕನ್ನಡದ ಜ್ಞಾನ ಚೇತನಗಳ ಇಚ್ಛಾಶಕ್ತಿ ಈ ದಿಸೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಬೇಕಾದ ಅಗತ್ಯವಿದೆ, ಅಲ್ಲಮನ ಒಂದು ವಚನ ಹೀಗಿದೆ –

ಹಿಂದಿಣ ಅನಂತವನು ಮುಂದಣ ಅನಂತವನು
ಒಂದು ದಿನ ಒಳಕೊಂಡಿತ್ತು ನೋಡಾ

ಒಂದು ದಿನವನೊಳಕೊಂಡು ಮಾತಾಡುವ ಮಹಾಂತನ
ಕಂಡು ಬಲ್ಲವರಾರಯ್ಯ
ಆದ್ಯರು ವೇದ್ಯರು ಅನಂತ ಹಿರಿಯರು ಕಾಲದಂತುವನರಿಯದೆ
ಅಂತೆ ಹೋದರು ಕಾಣಾ ಗುಹೇಶ್ವರ

ಜಗತ್ತಿನ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ. ಮುಂದಣ ಭವಿಷ್ಯದ ಅನಂತತೆ ಇದೆ. ವರ್ತಮಾನದಲ್ಲಿ ಈ ಎರಡೂ ಸಂಲಗ್ನಗೊಂಡ ಭಾವದಲ್ಲಿ ಸೃಜನಶೀಲ ವಾದಾಗ ಅದು ಅಳಿಯದ ಮಾತಾಗುತ್ತದೆ. ಆ ಮಾತು ಜ್ಯೋತಿರ್ಲಿಂಗ ರೂಪಿಯಾಗುತ್ತದೆ. ನಿಜವಾದ ಪುಸ್ತಕಗಳು ಮಾತು ಜ್ಯೋತಿರ್ಲಿಂಗವಾದ ಸಂಸ್ಕೃತಿ ಸಂಚಯದ ಜ್ಞಾನದೀವಿಗೆಗಳು. ಜ್ಞಾನವನ್ನು ಕೇವಲ ಪಂಡಿತಮಾನ್ಯರ ಸ್ವತ್ತಾಗಿಸದೆ, ಜನಸಾಮಾನ್ಯರ ಬದುಕಾಗಿಸುವುದು ಅಕ್ಷರಲೋಕದ ಗುರಿಯಾಗಬೇಕು. ಜ್ಞಾನ ಪರಂಪರೆಗಳನ್ನು ಶೋಧನೆಗೆ ಹಚ್ಚುತ್ತಾ, ಆತ್ಮಾವಲೋಕನದ ಒಳಮುಖೀದರ್ಶನ ದೀಪ್ತಿಯಲ್ಲಿ ಸತ್ಯವನ್ನು ಮನಗಾಣಿಸಬೇಕು. ಕಂಡ ಸತ್ಯದ ಬೆಳಕಿನಲ್ಲಿ ವರ್ತಮಾನದ ದಾರಿ ತೆರೆದು ಭವಿಷ್ಯದ ಮುಂಗಾಣ್ಕೆಯಿಂದ ಗುರಿಯ ಕಡೆ ಹೆಜ್ಜೆ ಹಾಕಬೇಕು. ಇದು ಬದುಕಿನ ಗತಿಶೀಲ ಗುಣವಾದಾಗ ಅತಿರೇಕಗಳಿಗೆ ಅವಕಾಶವಿರುವುದಿಲ್ಲ.

ಇದು ಜಾಗತೀಕರಣದ ಯುಗ. ಈ ಪ್ರಕ್ರಿಯೆಯ ವೇಗ ಅಪರಿಮಿತವಾದಷ್ಟು ಅಪಾಯಕಾರಿಯೂ ಆಗಿದೆ. ಜಾಗತೀಕರಣದ ದಾಳಿಯಲ್ಲಿ ಏಕಸಂಸ್ಕೃತಿ, ಏಕಜೀವನಶೈಲಿ, ಏಕಾಧಿಪತ್ಯಕ್ಕೆ ಜಗತ್ತನ್ನು ಒಳಗುಮಾಡುವುದರಿಂದ ಆಗುವ ದುಷ್ಪರಿಣಾಮವೆನಂದರೆ, ಜೀವನ ವೈವಿಧ್ಯತೆಯ ಬಹುಮುಖಿ ಸಂಸ್ಕೃತಿಗಳ ಸಾವು. ಅತಿರೇಕದ ವೈಪರೀತ್ಯಕ್ಕೆ ಒಳಗಾಗಿ ಬದುಕನ್ನು ಬರಡಾಗಿಸುವ ಹಾಗು ಅಸಮಾನತೆಯ ಪ್ರಮಾಣವನ್ನು ಆಗಾಧವಾಗಿಸುವ ಅಪಾಯದಿಂದ ಈ ಸಮುದಾಯಗಳನ್ನು ರಕ್ಷಿಸುವ ಅಗತ್ಯ ಇಂದಿನ ತುರ್ತು. ಈ ತುರ್ತಿನ ಸನ್ನಿವೇಶದಲ್ಲಿ ವಿವೇಕದ ದಾರಿ ತೋರಿ ಅತಿರೇಕಕ್ಕೆ ಕಡಿವಾಣವನ್ನು ಹಾಕಿ ಸಂಸ್ಕೃತಿಯನ್ನು, ಬದುಕನ್ನು ಮಾನವಕೋಟಿಯನ್ನು ಸಂರಕ್ಷಿಸಬಲ್ಲ ಶಕ್ತಿ ಅಕ್ಷರಲೋಕಕ್ಕಿದೆ. ಏಕರೂಪೀ ಗುಣದಿಂದ ಕೂಡಿದ ಗಣಕೀಕರಣದ ಏಕಾಧಿಪತ್ಯಕಿಂತ ಬಹುರೂಪಿ ಗುಣದ ಪ್ರತಿಭಾ ಸಂಪನ್ನತೆಯಿಂದ ಹೊಳೆವ ಅಕ್ಷರಲೋಕ ಜಗತ್ತಿನ ವೈವಿಧ್ಯತೆಯನ್ನು ಸಂರಕ್ಷಿಸುತ್ತದೆ.

ಪುಸ್ತಕಗಳು ಅಕ್ಷರ ಲೋಕದ ಮೂರ್ತರೂಪಗಳು ; ಅಮೂರ್ತವಾದ ಜ್ಞಾನಸಂಪತ್ತನ್ನು ಧಾರಣ ಮಾಡಿಕೊಂಡ ಶಬ್ದರೂಪಗಳು. ಶಬ್ದ ಕೇವಲ ಅಭಿದಾವೃತ್ತಿಯಲ್ಲಿ ನೆಲೆ ನಿಲ್ಲುವುದಲ್ಲ, ವ್ಯಂಜನಾ ವ್ಯಾಪಾರದಲ್ಲಿ ಅನುಭಾವಿಕವಾಗುವುದು. ಈ ವ್ಯಂಜನಾ ವ್ಯಾಪಾರ ಬುದ್ಧಿಭಾವಗಳ ವಿದ್ಯುದಾಲಿಂಗನ ಪ್ರಭೆಯ ಫಲಿತ. ಹೀಗಾಗಿ ಪುಸ್ತಕಗಳು ಸಂಸ್ಕೃತಿ ನಾಗರಿಕತೆಗಳ ಸಂಚಯಿತ ಫಲವಾದಷ್ಟೇ ಸಂಸ್ಕೃತಿಯನ್ನು ನಿರಂತರವಾಗಿ ಉಜ್ಜೀವಿಸುವ ಧಾತುದ್ರವ್ಯಗಳು.

ಕನ್ನಡ ಪುಸ್ತಕ ಪ್ರಾಧಿಕಾರವು ಕರ್ನಾಟಕದಾದ್ಯಂತ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಸದುದ್ದೇಶದಿಂದ ಪ್ರಾರಂಭವಾದ ಒಂದು ಸಂಸ್ಕೃತಿ ಕೇಂದ್ರ. ವಾಚನಾಭಿರುಚಿಯನ್ನು

ಬೆಳೆಸುವುದು ಹಾಗು ಪುಸ್ತಕೋದ್ಯಮವನ್ನು ಆರೋಗ್ಯಕರವಾಗಿ ಪೋಷಿಸುವುದು ಪ್ರಾಧಿಕಾರದ ಹೊಣೆಯಾಗಿರುತ್ತದೆ. ಅದಕ್ಕಾಗಿ ಹಲವು ರೀತಿಯ ಕಾರ್ಯಯೋಜನೆಗಳನ್ನು ಪ್ರಾಧಿಕಾರ ರೂಪಿಸಿಕೊಂಡಿದೆ. ಯುವಸಮುದಾಯದಲ್ಲಿ ವಾಚನಾಭಿರುಚಿ ಹೆಚ್ಚಿಸಲು ವಾಚನಾಭಿರುಚಿ ಕಮ್ಮಟಗಳನ್ನು ನಡೆಸುತ್ತಿದೆ. ಪ್ರಕಾಶಕರು, ಲೇಖಕರು ಹಾಗು ಓದುಗರ ನಡುವೆ ಚಿಂತನಾ ಕಮ್ಮಟಗಳನ್ನು ನಡೆಸುತ್ತಿದೆ. ಇವುಗಳ ಜೊತೆಗೆ ಎರಡನೆಯ ಆದ್ಯತೆಯಾಗಿ ಪುಸ್ತಕ ಪ್ರಕಟಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಶೈಕ್ಷಣಿಕ ಶಿಸ್ತಿನಲ್ಲಿ ಅಧ್ಯಯನ ಮಾಡುವ ಪರಾಮರ್ಶನ ಗ್ರಂಥಗಳ ಜೊತೆಗೆ ಜನಸಾಮಾನ್ಯರಿಗೆ ಅಗತ್ಯವಾಗಿ ಬೇಕಾದ ಅರಿವನ್ನು ಹಂಚುವ ಪುಸ್ತಕಗಳ ಪ್ರಕಟಣೆಯೂ ಪ್ರಾಧಿಕಾರದ ಉದ್ದೇಶವಾಗಿದೆ.

* * * * *

ಕನ್ನಡ ಓದುಗ ಜಗತ್ತಿಗೆ ಲೋಹಿಯಾ ಸಿದ್ಧಾಂತ ಚಿರಪರಿಚಿತವಾದುದು. ಮತ್ತೆ ಮತ್ತೆ ಯುವ ಪೀಳಿಗೆಗೆ ಅದನ್ನು ಮುಟ್ಟಿಸುವ ಅಗತ್ಯವಿದೆ. ತನ್ಮೂಲಕ ಲೋಹಿಯಾ ಅವರ ವಿಚಾರಗಳಿಂದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳ ಬಗ್ಗೆ ನಮ್ಮ ಪೀಳಿಗೆಯಲ್ಲಿ ಒಂದು ಖಚಿತ ನೈತಿಕ ದೃಷ್ಟಿ ಮೂಡೀತೆಂಬ ಕ್ಷೀಣ ಆಸೆ. ಇಂಥ ಒಂದು ಕಾರ್ಯದಲ್ಲಿ ತಮ್ಮ ಲೋಹಿಯಾ ಸಮಾಜದರ್ಶನ ಪುಸ್ತಕವನ್ನು ಪ್ರಾಧಿಕಾರದ ಪ್ರಕಟಣೆಗೆ ನೀಡಿರುವ ಗೆಳೆಯ ಡಿ.ಎಸ್. ನಾಗಭೂಷಣ ಅವರಿಗೆ ಪ್ರಾಧಿಕಾರದ ಆತ್ಮೀಯ ಕೃತಜ್ಞತೆಗಳು.

ಪ್ರೊ ಎಸ್.ಜಿ. ಸಿದ್ದರಾಮಯ್ಯ
ಅಧ್ಯಕ್ಷರು.
ಕನ್ನಡ ಪುಸ್ತಕ ಪ್ರಾಧಿಕಾರ

ಈಚಿನ ತಲೆಮಾರಿನವರೆಗೂ
ಸಮಾಜವಾದದ ನಂದಾದೀಪ ಹಚ್ಚಿಟ್ಟಿದ್ದ
ಸಮಾಜವಾದಿ ಸಂತ
ಕಿಷನ್ ಪಟ್ನಾಯಕರ
ನೆನಪಿಗೆ

ಪರಿವಿಡಿ

೧. ಸಮಾಜವಾದಿ ತತ್ವವಿಕಾಸ : ಲೋಹಿಯಾ ಪ್ರವೇಶ

ಸಮಾನತೆ, ಮಾನವ ಜನಾಂಗದ ಆದಿಮ ತುಡಿತವೇನೋ ಎಂಬಷ್ಟರಮಟ್ಟಿಗೆ ನಮ್ಮ ಸಂಸ್ಕೃತಿ-ನಾಗರೀಕತೆಗಳು ರೂಪುತಳೆಯುವಲ್ಲಿ, ಪಲವಾರು ರೀತಿಯಲ್ಲಿ ಪ್ರೇರಣೆ ಒದಗಿಸಿದೆ; ನಿರ್ದೇಶಕ ಶಕ್ತಿಯಾಗಿ ಕೆಲಸ ಮಾಡುತ್ತಾ ಬಂದಿದೆ. ಮನುಷ್ಯ ಅಂದಂದಿನ ಬದುಕಿನ ಅಗತ್ಯಗಳನ್ನು ಪೂರೈಸಿಕೊಳ್ಳುವಷ್ಟು ಮಾತ್ರ ಆತನ ಬುದ್ಧಿ ವಿಕಾಸಗೊಂಡಿದ್ದ ಹಂತದಲ್ಲಿ—ಅಂದರೆ ಬೇಟೆ ಸಂಸ್ಕೃತಿಯ ಆದಿಮ ಸಮಾಜದಲ್ಲಿ—ಸಮಾನತೆ ತಾನೇ ತಾನಾಗಿತ್ತು, ಸಹಜವಾಗಿತ್ತು. ಮನುಷ್ಯನ ವೈಯಕ್ತಿಕತೆ ಸುಪ್ತವಾಗಷ್ಟೇ ಇದ್ದ ಕಾಲವದು. ಸಾಮೂಹಿಕತೆಯಲ್ಲೇ ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡು ಉಳಿದುಕೊಳ್ಳುವುದಷ್ಟೇ ಆತನ ಬದುಕಿನ ಗುರಿಯಾಗಿತ್ತು. ಕ್ರಮೇಣ ಬೆಂಕಿಯ ಅನ್ವೇಷಣೆ, ಬೇಸಾಯದ ಆವಿಷ್ಕಾರ, ವಿವಾಹ ಸಂಸ್ಥೆಯ ಉದಯ, ಕುಟುಂಬ ವ್ಯವಸ್ಥೆಯ ವಿಕಾಸಗಳೊಂದಿಗೆ ನಾಳೆಯ ಅಗತ್ಯ, ತನ್ನ ಕುಟುಂಬದ ಕ್ಷೇಮಾಭ್ಯುದಯ ಮುಂತಾದ ವಿಚಾರಗಳು ಜಾಗೃತಗೊಂಡವು. ಇದರಿಂದಾಗಿ, ಬದುಕುಳಿಯುವುದಕ್ಕಾಗಷ್ಟೇ ಸಹಜ ಕ್ರಿಯಾಶೀಲನಾಗಿದ್ದ ಮನುಷ್ಯ ಚೆನ್ನಾಗಿ—'ಸುಖ'ವಾಗಿ—ಬದುಕುವ ಪ್ರೇರಣೆಗೆ ಒಳಗಾಗಿ ಈ ಸಹಜ ಕ್ರಿಯಾಶೀಲತೆಯಾಚೆಯ 'ಶ್ರಮ'ವನ್ನು ಕಂಡುಕೊಂಡ. ಈ 'ಶ್ರಮ' ಅಥವಾ 'ದುಡಿಮೆ'ಯ ಪರಿಕಲ್ಪನೆಯೇ ಮುಂದೆ 'ಆಸ್ತಿ' ಕಲ್ಪನೆಗೆ ದಾರಿ ಮಾಡಿಕೊಟ್ಟಿತು. ಅಲ್ಲಿಂದಾಚೆಗೆ ಸಮುದಾಯವೆಂಬುದು ಹಲವು ನೆಲೆಯ ಸಮೀಕರಣಗಳನ್ನಾಧರಿಸಿದ 'ಸಮಾಜ'ವಾಗಿ ಪರಿವರ್ತಿತವಾಗಿ, ವಿವಿಧ ಹಿತಾಸಕ್ತಿಗಳ ಘರ್ಷಣೆಗೆ ಎಡೆಮಾಡಿಕೊಟ್ಟಿತು. ಈ ಅರ್ಥದಲ್ಲೇ ಸಹಜ ಕೃಷಿಯ ಋಷಿ ಫುಕೊವೊಕಾ, ಜೀವ ಜಗತ್ತಿನಲ್ಲಿ ಮನುಷ್ಯ ಮಾತ್ರ ಬದುಕಲು ದುಡಿಯುತ್ತಾ ದುಃಖಿತನಾಗಿರುವುದು ಎಂದು ನಮ್ಮ ನಾಗರೀಕತೆ ಕುರಿತು ಮಾರ್ಮಿಕವಾಗಿ ನುಡಿದಿರುವುದು.

ಖಾಸಗಿ ಆಸ್ತಿ-ಸಾಮಂತಶಾಹಿಯ ಉದಯ

ಅದೇನೇ ಇರಲಿ, ಸಾಮೂಹಿಕವಾಗಿ ಬದುಕುವ ದಾರಿಯಿಂದ ಕವಲೊಡೆದ ಮನುಷ್ಯ ಸಂಸ್ಕೃತಿ ವೈಯುಕ್ತಿಕ ಅಥವಾ ಖಾಸಗಿ ಆಸ್ತಿಯ ಆಧಾರದ ಮೇಲೆ ಬದುಕನ್ನು ಕಟ್ಟಿಕೊಳ್ಳತೊಡಗಿದ ಮೇಲೆ, ಆವರೆಗಿನ ಬದುಕುವ ರೀತಿನೀತಿಗಳಲ್ಲೇ ಅಂತರ್ಗತವಾಗಿದ್ದ

ಸಹಜ ಸಮಾನತೆ ಮಾಯವಾಗತೊಡಗಿತು. ಬದುಕು ವೈಯುಕ್ತಿಕ ನೆಲೆಯಲ್ಲಿ ಅರ್ಥ ಪಡೆಯತೊಡಗಿ, ವೈಯುಕ್ತಿಕ ಶಕ್ತಿ-ಸಾಮರ್ಥ್ಯಗಳಿಗನುಗುಣವಾದ ಆಸ್ತಿ ನಿರ್ಮಾಣದ ಪ್ರೇರಣೆ ಒದಗಿತು. ಇದರಿಂದಾಗಿ 'ಅಸಮಾನತೆ' ಎಂಬ ಸಾಮಾಜಿಕ ಅಸಮತೋಲನವೊಂದು ಸೃಷ್ಟಿಯಾಗತೊಡಗಿತು. ಈ ಶಕ್ತಿ ಸಾಮರ್ಥ್ಯಗಳು ನಾನಾ ರೂಪಗಳನ್ನು ತಳೆದು, ಹಲವು ಅಧಿಕಾರ ಕೇಂದ್ರಗಳು ಸೃಷ್ಟಿಯಾಗತೊಡಗಿದವು. ಇದರ ಪರಿಣಾಮವಾಗಿ 'ಶ್ರಮ'ಕ್ಕೆ ಆಧಾರವನ್ನೂ 'ಅಧಿಕಾರ'ಕ್ಕೆ ನೆಲೆಯನ್ನೂ ಒದಗಿಸಿದ 'ಭೂಮಿ'ಯ ಮೇಲೆ 'ಮಾಲಿಕತ್ವ'ದ ಪರಿಕಲ್ಪನೆ ಜಾರಿಗೆ ಬಂತು. ಇದೇ ಮುಂದೆ ಊಳಿಗಮಾನ್ಯ, ಸಾಮಂತಶಾಹಿ ಪದ್ಧತಿಗಳಿಗೆ ಕಾರಣವಾಯಿತು.

ಈ ಊಳಿಗಮಾನ್ಯ-ಸಾಮಂತಶಾಹಿ ವ್ಯವಸ್ಥೆಯ ಒಡಲಲ್ಲೇ ಅಸಮಾನತೆಯ ಬೀಜವಿದ್ದುದರಿಂದ, ಇದರಿಂದುಂಟಾಗುತ್ತಿದ್ದ ಸಾಮಾಜಿಕ ಅಸಮತೋಲನವನ್ನು ನಿವಾರಿಸಿಕೊಳ್ಳಲು ಅನೇಕ ರೀತಿಯ ಸಾಮಾಜಿಕ ಒಪ್ಪಂದಗಳು ರೂಪುಗೊಂಡವು. ಆಯಾಯಾ ಕಾಲದ ಸಾಮಾಜಿಕ ಹಿತದ ಪರಿಕಲ್ಪನೆಯನ್ನಾಧರಿಸಿ ರೂಪಿತವಾದ ಈ ಶ್ರಮ ವಿಭಜನೆ ಒಪ್ಪಂದಗಳು, ಕಾಲಕ್ರಮದಲ್ಲಿ ವಿವಿಧ ರೀತಿಯ ಸಾಮಾಜಿಕ ಸಂಸ್ಥೆಗಳಿಗೆ ಕಾರಣವಾದವು. ಈ ಸಾಮಾಜಿಕ ಸಂಸ್ಥೆಗಳು ಕೆಲವು ಸಂಸ್ಕೃತಿಗಳಲ್ಲಿ ಜಾತಿ ವ್ಯವಸ್ಥೆಯ ರೂಪ ತಳೆದರೆ, ಕೆಲವು ಸಂಸ್ಕೃತಿಗಳಲ್ಲಿ ವರ್ಗ ವ್ಯವಸ್ಥೆಯ ರೂಪು ತಳೆದವು. ಅವು ಆಯಾ ಕಾಲದ ಸಾಮಾಜಿಕ ಸ್ಥಿರತೆಯ ಅಗತ್ಯಕ್ಕನುಗುಣವಾಗಿ ತಮ್ಮದೇ ಆದ ನೀತಿ ಸಂಹಿತೆಗಳನ್ನು ರೂಢಿಸಿಕೊಂಡವು. ಆದರೆ ಈ ಸಂಸ್ಥೆಗಳು ಸಮಾಜದಲ್ಲಿನ ಅಸಮತೋಲನವನ್ನು ತತ್ಕಾಲೀನವಾಗಿ ನಿವಾರಿಸಿಕೊಳ್ಳುವಲ್ಲಿ ಸಮರ್ಥವಾಗಿದ್ದುವೇ ಹೊರತು, ಆ ಅಸಮತೋಲನಕ್ಕೆ ಕಾರಣವಾಗಿದ್ದ 'ಅಸಮಾನತೆ'ಯನ್ನು ಪರಿಹರಿಸಿಕೊಳ್ಳುವ ಸಾಮರ್ಥ್ಯ ಹೊಂದಿರಲಿಲ್ಲ. ಹೀಗಾಗಿ ಜಾತಿ ಅಸಮಾನತೆ, ವರ್ಗ ತಾರತಮ್ಯಗಳ ವಿರುದ್ಧ ಅಸಮಾಧಾನ, ಪ್ರತಿಭಟನೆ, ಬಂಡಾಯಗಳು ಮಾನವ ಇತಿಹಾಸದುದ್ದಕ್ಕೂ ದಾಖಲಾಗಿರುವುದನ್ನು ನಾವು ಗಮನಿಸಬಹುದು. ಇವಕ್ಕೆಲ್ಲ ಮತ್ತೆ ಮೂಲ ಪ್ರೇರಣೆ ಎಂದರೆ, ಮಾನವನ ಅಂತಃಕರಣದಲ್ಲಿರುವ 'ಸಮಾನತೆ'ಯ ತುಡಿತವೇ ಆಗಿದೆ. ಈ ತುಡಿತ ಒಂದು ನೆಲೆಯಲ್ಲಿ ಮೈತ್ರಿ, ಪ್ರೀತಿ, ಕರುಣೆಗಳನ್ನು ಆಧರಿಸಿದ ಧಾರ್ಮಿಕ ಭಾವನೆಯಾಗಿ ಅಭಿವ್ಯಕ್ತಗೊಂಡಿದ್ದರೆ, ಇನ್ನೊಂದು ನೆಲೆಯಲ್ಲಿ ಸಮಾನತೆಯ ಲೌಕಿಕ ರೂಪಗಳ ಅನ್ವೇಷಣೆಯ ಜನಾಂದೋಲನವಾಗಿ ಅಭಿವ್ಯಕ್ತಗೊಂಡಿದೆ. ಸಮಾಜವಾದ ಇಂತಹ ಅಭಿವ್ಯಕ್ತಿಯ ಆಧುನಿಕ ರೂಪಗಳಲ್ಲೊಂದಾಗಿದೆ.

ಹಣ, ಬಂಡವಾಳಗಳ ಪರಿಕಲ್ಪನೆ-ಸಮಾಜವಾದಕ್ಕೆ ಪ್ರೇರಣೆ

ಸಾಮಂತಶಾಹಿ ಸಂಸ್ಕೃತಿಯು, ಯಜಮಾನ-ಪುರೋಹಿತ-ಗುಲಾಮ ವ್ಯವಸ್ಥೆಯ

ಮೂಲಕ ಆಸ್ತಿ ಮತ್ತು ಅಧಿಕಾರಗಳನ್ನು ರಾಜ್ಯ-ಸಾಮ್ರಾಜ್ಯಗಳ್... ವಸಾಹತುಗಳಾಗಿ ವಿಸ್ತರಿಸುತ್ತಾ ಹೋಯಿತು. ಇದರ ಪರಿಣಾಮವಾಗಿ, ಸ...್ತಿನ ಕ್ರೋಢೀಕರಣ ವಾಗತೊಡಗಿತು. ಈ ಕ್ರೋಢೀಕರಣ ಮನುಷ್ಯನಲ್ಲಿ ಹೊಸ ...ಾಹಸ-ಅನ್ವೇಷಣೆಗಳ ಪ್ರವೃತ್ತಿಯನ್ನು ಪ್ರೇರೇಪಿಸಿತು. ಈ ಪ್ರೇರೇಪಣೆ, ಕ್ರೋಢೀಕೃತ ಸಂಪತ್ತನ್ನು ಈ ಹೊಸ ಸಾಹಸ-ಅನ್ವೇಷಣೆಗಳಿಗೆ 'ಹೂಡಿಕೆ' ಎಂದು ಪರಿಗಣಿಸಬಹುದಾದ, ಹೊಸ ವ್ಯಾಪಾರೀ ನೋಟವೊಂದನ್ನು ಪ್ರದಾನ ಮಾಡಿತು. ನಂತರ ಸಂಪತ್ತು, 'ಹಣ'ವೆಂಬ ಸಾಂಕೇತಿಕ ವಿನಿಮಯ ಮಾಧ್ಯಮದ ಪರಿಕಲ್ಪನೆಗೆ ಕಾರಣವಾಗಿ, 'ಬಂಡವಾಳ'ವಾಗಿ ಮಾರ್ಪಟ್ಟಿದ್ದು ಈ ಹೊಸ ವ್ಯಾಪಾರೀ ನೋಟದಿಂದಾಗಿಯೇ. ಯುರೋಪ್‌ನಲ್ಲಿ ಹದಿನಾರನೇ ಶತಮಾನದಲ್ಲಿ ಆರಂಭವಾಗಿ ಇಪ್ಪತ್ತನೇ ಶತಮಾನದವರೆಗೂ ಜಗತ್ತಿನಾದ್ಯಂತ ಪ್ರತಿಧ್ವನಿಸಿದ ಪುನರುಜ್ಜೀವನ ಯುಗದ ತುಂಬಾ ನಾವು ಕಾಣುವುದು ಈ ಬಂಡವಾಳದ ಪೂರ್ವಭಾವೀ ಆಟವನ್ನೇ. ಹೊಸ ರೀತಿಯ ನೌಕೆಗಳ ನಿರ್ಮಾಣ, ಖಂಡಾಂತರ ಸಮುದ್ರಯಾನ, ಸಿಡಿಮದ್ದಿನ ಆಸ್ಫೋಟ, ಅಧಿಕಾರ ವಿಸ್ತರಣೆಯ ಹೊಸ ಉಪಾಯಗಳು, ರಾಜ್ಯಾಧಿಕಾರದ ವಿಸ್ತೃತ ರೂಪಗಳು, ಅದರ ಪರಿಣಾಮವಾಗಿ ಧರ್ಮಾಧಿಕಾರದ ವಿರುದ್ಧ ಬಂಡಾಯ, ಚಿತ್ರಕಲೆ, ವಾಸ್ತುಶಿಲ್ಪಗಳ ರೀತಿ-ನೀತಿಗಳಲ್ಲಿ ಕ್ರಾಂತಿಕಾರಿ ಬದಲಾವಣೆ ಇತ್ಯಾದಿ ಯುಗಪ್ರವರ್ತಕ ಬೆಳವಣಿಗೆಗಳಿಗೆ ಕಾರಣವಾದ ಈ ಬಂಡವಾಳದ ಪರಿಕಲ್ಪನೆ, ಭೂಮಾಲಿಕತ್ವ ಆಧಾರಿತವಾದ ಆಸ್ತಿ-ಅಧಿಕಾರ ವ್ಯವಸ್ಥೆಯನ್ನು ಬಂಡವಾಳ ಕೇಂದ್ರಿತ ವ್ಯವಸ್ಥೆಯನ್ನಾಗಿ ಮಾರ್ಪಡಿಸಿತು.

ಇದರ ಪರಿಣಾಮವೆಂದರೆ ಭೂ ಆಧಾರಿತವಾಗಿದ್ದ ಆಸ್ತಿ ನಿರ್ಮಾಣದ ಚಟುವಟಿಕೆಗಳು ಬಂಡವಾಳ ಆಧಾರಿತವಾಗತೊಡಗಿದವು. ಬಂಡವಾಳವು, ಮಾನವ ಶ್ರಮವನ್ನು ಕಡಿಮೆ ಮಾಡುವಂತಹ ಹೊಸ ಉಪಾಯಗಳ ಆವಿಷ್ಕಾರಕ್ಕೆ ಮನುಷ್ಯನನ್ನು ಪ್ರಚೋದಿಸಿ, ಯಂತ್ರ ನಿರ್ಮಾಣಕ್ಕೆ ಕಾರಣವಾಯಿತು. ಬಟ್ಟೆ ಗಿರಣಿ ಹಾಗೂ ಉಗಿ ಎಂಜಿನ್‌ಗಳ ವಿನ್ಯಾಸ ಈ ಹೊಸ ಬಂಡವಾಳ ಯುಗದ ಹೆಗ್ಗುರುತುಗಳೆನಿಸಿಕೊಂಡು, ಯಂತ್ರ ನಾಗರೀಕತೆಗೆ ನಾಂದಿ ಹಾಡಿತು. ಈ ಯಂತ್ರ ನಾಗರೀಕತೆ ಮನುಷ್ಯನಲ್ಲಿ ಹೊಸ ತೆರನ ಸುಖ-ಸಮೃದ್ಧಿಗಳ ರುಚಿ ಹುಟ್ಟಿಸಿ, ಬಂಡವಾಳವಾದೀ ನಾಗರೀಕತೆಯ ಹೊಸ ಘಟ್ಟವನ್ನೇ ಅನಾವರಣ ಗೊಳಿಸಿತು. ಬರೀ ದುಡಿಮೆಗಾರನಾಗಿದ್ದ ಸಾಮಾನ್ಯ ಮನುಷ್ಯ, ಗ್ರಾಹಕನೂ ಆಗತೊಡಗಿದ ಘಟ್ಟ ಇದು. ಈ ಸಂಕ್ರಮಣ ಕಾಲದಲ್ಲೇ ಸಮಾಜವಾದದ ಕಲ್ಪನೆ ಗರಿಗೆದರಿದ್ದು. ಪುನರುಜ್ಜೀವನ ಯುಗದ ಅರಿವಿನಿಂದ ಉದ್ದೀಪಿತಗೊಂಡು 'ಜಾಗೃತ'ವಾದ ಸಮಾಜ ಬಂಡವಾಳವಾದ ಸೃಷ್ಟಿಸಿದ ಹೊಸ ನೆಲೆಯ ಆಸ್ತಿ ಸಂಬಂಧಗಳಿಗೆ ಪ್ರತಿಕ್ರಿಯಿಸಿದ ಒಂದು ವಿಚಾರ ವಿನ್ಯಾಸವೇ ಸಮಾಜವಾದ.

ಸಮಾಜವಾದಿ ಕಲ್ಪನಾ ಲೋಕ-'ಯುಟೋಪಿಯಾ'ಗಳ ರಚನೆ

ಈ ವಿಚಾರ ವಿನ್ಯಾಸ ರೂಪುಗೊಳ್ಳುವುದಕ್ಕೆ ಪೂರ್ವ ತಯಾರಿ ಎಂಬಂತೆ ಸಮಾಜವಾದದ ಆಶಯಗಳನ್ನು ಹೊತ್ತ—ಸಮಾನತೆಯ ನೆಲೆಯ ಆದರ್ಶ ರಾಜ್ಯದ ಕಲ್ಪನೆಗಳನ್ನೊಳಗೊಂಡ—ಅನೇಕ ಕಥಾನಕಗಳು ಪುಸ್ತಕರೂಪದಲ್ಲಿ ಬರತೊಡಗಿದ್ದವು. ಇವು ದುರ್ಬಲರಿಗೆ ಅಭಯ ನೀಡುವ ನಮ್ಮ ಜಾನಪದ ಕಥಾನಕಗಳಿದ್ದಂತೆ. 'ಯುಟೋಪಿಯಾ' ಎಂದು ಕರೆಯಲ್ಪಡುವ ಈ ಕಲ್ಪನಾ ಕಥೆಗಳಲ್ಲಿ, ಆಗಿನ ಕಾಲದ ಸಮಾಜದಲ್ಲಿ ಸುಪ್ತವಾಗಿದ್ದ ಸಮಾನತೆಯ ಹಂಬಲ ವಿವಿಧ ರೂಪಗಳಲ್ಲಿ ವ್ಯಕ್ತವಾಗಿರುವುದನ್ನು ಕಾಣಬಹುದು. ಯಾವುದರ ಕೊರತೆಯೂ ಇಲ್ಲದ ಭೂಖಂಡ, ಯಜಮಾನ-ಪುರೋಹಿತ-ಗುಲಾಮರೆನ್ನದೆ ಎಲ್ಲರ ಸೀಮಿತ ದುಡಿಮೆಯನ್ನಾಧರಿಸಿದ ಜಗತ್ತು, ಖಾಸಗಿ ಆಸ್ತಿಯೆನ್ನುವುದಿಲ್ಲದ ಸಾಮೂಹಿಕ ಒಡೆತನದ ಆರ್ಥಿಕತೆ, ಬರಲಿರುವ ವಿಜ್ಞಾನಯುಗದಲ್ಲಿನ ಕಾರ್ಮಿಕ ರಾಜ್ಯ, ಸಮಾನತೆ-ಸಮೃದ್ಧಿಗಳ ಸ್ತ್ರೀರಾಜ್ಯ—ಇವು ಈ 'ಯುಟೋಪಿಯಾ'ಗಳ ವಸ್ತುಗಳು. ಹದಿನಾರನೇ ಶತಮಾನದ ಆರಂಭದಲ್ಲಿ ಥಾಮಸ್ ಮೋರ್‌ನಿಂದ ಮೊದಲ್ಗೊಂಡ ಈ 'ಯುಟೋಪಿಯಾ'ಗಳ ರಚನೆ, 'ಸಮಾನತೆ'ಯ ಆದರ್ಶ ಉತ್ತುಂಗಸ್ಥಿತಿ ಮುಟ್ಟಿದ ಇಪ್ಪತ್ತನೇ ಶತಮಾನದ ಆಲ್ಡಸ್ ಹಕ್ಸ್ಲಿಯ 'ದಿ ಬ್ರೇವ್ ನ್ಯೂ ವರ್ಲ್ಡ್'ವರೆಗೂ ಹಬ್ಬಿದೆ. ಇವುಗಳೆಲ್ಲದರಲ್ಲೂ ಕಾಣುವುದು ಶ್ರಮ ಮತ್ತು ಬಿಡುವುಗಳ ಸಮಾನ ಹಂಚಿಕೆಯ ಆದರ್ಶ ಹಾಗೂ ಶೋಷಣೆಯ ಅರಿವಿನ ಸ್ಫೋಟ.

ಭೂಮಿಯಿಂದ ಬಿಡುಗಡೆ-ಕಾರ್ಮಿಕ ಸಂಘಟನೆಗೆ ನಾಂದಿ

'ಶ್ರಮ'ದ ಮೌಲ್ಯ ನಿಷ್ಕರ್ಷೆ ಹಾಗೂ ಅದರಿಂದ ಉದ್ಭವಿಸುವ ಶೋಷಣೆಯ ಅರಿವನ್ನು ಕುರಿತ ಜಿಜ್ಞಾಸೆಯೇ ಸಮಾಜವಾದದ ತಾತ್ವಿಕ ಅಡಿಗಲ್ಲು. ಸಾಮಂತಶಾಹಿ ವ್ಯವಸ್ಥೆಯಲ್ಲಿ ಆಸ್ತಿ ನಿರ್ಮಾಣಕ್ಕೆ-'ಶ್ರಮ'ಕ್ಕೆ-ಭೂಮಿಯೇ ಆಧಾರವಾಗಿದ್ದರೆ, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಭೂಮಿಯ ಜೊತೆಗೆ ಹಣ ಮತ್ತು ತಂತ್ರಜ್ಞಾನ ಸೇರಿಕೊಂಡು ಭೂಮಿಯ ಪ್ರಾಧಾನ್ಯವನ್ನು ಮಸುಕುಗೊಳಿಸಿತು. ಅಲ್ಲದೆ ಭೂಮಿ ಮತ್ತು ಶ್ರಮಿಕನ ನಡುವಣ ಸ್ಥಿರ (ಗ್ರಾಮ) ಸಂಬಂಧ, ಒಡೆಯ ಮತ್ತು ಶ್ರಮಿಕನ ನಡುವಣ ಚರ (ನಗರ) ಸಂಬಂಧವಾಗಿ ಮಾರ್ಪಾಡಾಯಿತು. ಅಂದರೆ ದುಡಿಮೆಗಾರ ತನ್ನ ಒಡೆಯನನ್ನು ಬದಲಾಯಿಸಿಕೊಳ್ಳಬಹುದಾದ ಆಯ್ಕೆಯ ಸ್ವಾತಂತ್ರ್ಯವೊಂದು ಹುಟ್ಟಿ ಕೊಂಡಿತು. ಇದರಿಂದಾಗಿ ಸಾಮಾಜಿಕ ಸಂರಚನೆಯಲ್ಲೂ, ಜನಸಾಮಾನ್ಯರ (ಶ್ರಮಿಕ) ಆಲೋಚನಾ ಕ್ರಮದಲ್ಲೂ ಕ್ರಾಂತಿಕಾರಿ ಬದಲಾವಣೆಗಳುಂಟಾದವು. ಗಣಿ-ಗಿರಣಿ-ಕಾರ್ಯಾಗಾರಗಳಲ್ಲಿ 'ಶ್ರಮ'ವು ಉತ್ಪನ್ನಗಳ ರೂಪದಲ್ಲಿ ಒಂದು 'ಮೌಲ್ಯ'ವನ್ನು ಸೃಷ್ಟಿಸುತ್ತಿದ್ದು, ಅದು ಇಡಿಯಾಗಿ ಲಾಭದ ರೂಪದಲ್ಲಿ ಮಾಲೀಕನ ಪಾಲಾಗಿ ಕಾರ್ಮಿಕ

'ಶೋಷಣೆ'ಗೆ ಒಳಗಾಗುತ್ತಿದ್ದಾನೆ ಎಂಬ ಅರಿವು ಕಣ್ದೆರೆಯಿತು. ಜೊತೆಗೆ ಈ ಶೋಷಣೆಯು ಹಸಿವು, ಬಡತನ, ಅವಮಾನಗಳ ಮೂಲಕ ವ್ಯಕ್ತವಾಗುತ್ತಿದ್ದು, ಇವಕ್ಕೆಲ್ಲ ಶ್ರಮಿಕರ ಇಚ್ಛಾಶಕ್ತಿಯ ಕೊರತೆಯೇ ಕಾರಣವಾಗಿದೆ; ಸಂಘಟನೆ ಮೂಲಕ ಈ ಇಚ್ಛಾಶಕ್ತಿಯನ್ನು ಉದ್ದೀಪಿಸಿಕೊಂಡು ಬಂಡವಾಳದ ಪ್ರಯೋಜನಗಳನ್ನು ಶ್ರಮಿಕರೂ ಪಡೆದುಕೊಳ್ಳುವ ಮೂಲಕ ಈ ಶೋಷಣೆಯನ್ನು ನಿವಾರಿಸಿಕೊಳ್ಳಬಹುದೆಂಬ ಜಾಗೃತಿಯೂ ಮೂಡಿತು. ಇದರಿಂದಾಗಿ ಮಾಲಿಕ-ಶ್ರಮಿಕನ ನಡುವಣ ಸಂಬಂಧದಲ್ಲಿ 'ವಿಷಮತೆ' ಉದ್ಭವಿಸಿತು. ಸಂಬಂಧದಲ್ಲಿನ ಈ 'ವಿಷಮತೆ'ಯ ನಿವಾರಣೆ ಬಗ್ಗೆ ವಿವಿಧ ನೆಲೆಗಳಲ್ಲಿ ನಡೆದ ಜಿಜ್ಞಾಸೆ ಮತ್ತು ಇದರ ಫಲವಾಗಿ ರೂಪಿತವಾದ ವಿವಿಧ ಕಾರ್ಯಕ್ರಮಗಳೇ ಜಗತ್ತಿನಲ್ಲಿ ಸಮಾಜವಾದಿ ತತ್ವಚಿಂತನೆಯನ್ನು ರೂಪಿಸಿದ್ದು.

ಫ್ರೆಂಚ್ ಕ್ರಾಂತಿ-ಸಮಾಜವಾದಿ ಆಂದೋಲನದ ಆರಂಭ

೧೩೮೧ರಲ್ಲಿ ಇಂಗ್ಲೆಂಡ್‌ನಲ್ಲಿ ನಡೆದ ಪ್ರಪ್ರಥಮ ರೈತ ಹೋರಾಟದಲ್ಲೇ ಸಮಾಜವಾದದ ದನಿ ಇತ್ತೆಂದು ಹೇಳಲಾಗುವುದಾದರೂ, ೧೭೮೯ರ ಫ್ರೆಂಚ್ ಕ್ರಾಂತಿಯೇ ಆಧುನಿಕ ಸಮಾಜವಾದಿ ಚಳುವಳಿಯ ಆರಂಭಿಕ ಘಟ್ಟ ಎಂದು ಗುರುತಿಸಲಾಗುತ್ತದೆ. ಫ್ರೆಂಚ್ ಕ್ರಾಂತಿ ಸಾಮಂತಶಾಹಿಯ ಕೊನೆಯ ಅವತಾರವೆನಿಸಿದ್ದ ರಾಜತ್ವವನ್ನು, ಅಸಮಾನತೆಯಿಂದ ಹುಟ್ಟುವ ಆರ್ಥಿಕ ಮತ್ತು ಬೌದ್ಧಿಕ ಶೋಷಣೆಗಳ ನೆಲೆಯಲ್ಲಿ ಪ್ರಶ್ನಿಸಿದ ಮೊದಲ ಆಂದೋಲನ. ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಗಳ ಆದರ್ಶಗಳನ್ನಾಧರಿಸಿದ ಈ ಆಂದೋಲನವು, ರಾಜ-ಪುರೋಹಿತ ಸಂಬಂಧವನ್ನು ಕಿತ್ತೊಗೆಯಿತು. ಆ ಮೂಲಕ ಈ ಆಂದೋಲನ ಸರ್ವ ಸಮಾನತೆಯ ಹೊಸ ಸಮಾಜದ ಕನಸನ್ನು ಬಿತ್ತುವಲ್ಲಿ ಸಾಧಿಸಿದ ಯಶಸ್ಸು, ಸಾಮಾಜಿಕ ಪುನಾರಾಚನೆ ಕುರಿತು ಚಿಂತನೆಯ ಅನೇಕ ಅಲೆಗಳನ್ನು ಎಬ್ಬಿಸಿತು. ಫ್ರೆಂಚ್ ಕ್ರಾಂತಿಯ ರೂವಾರಿ ಎನಿಸಿದ ರೂಸೋ 'ಅಸಮಾನತೆಯನ್ನು ಕುರಿತ ಪ್ರಬಂಧ' ಎಂಬ ತನ್ನ ಲೇಖನದಲ್ಲಿ, ಆಸ್ತಿಯ ಕಲ್ಪನೆಯೇ ಸ್ಪರ್ಧೆ ಮತ್ತು ಹಿತಾಸಕ್ತಿಗಳ ಘರ್ಷಣೆಯಿಂದ ಹುಟ್ಟುವ ವೈರ, ಲಾಭದಾಸೆ ಮುಂತಾದ ಅಸಮಾನತೆಯ ಪ್ರೇರಕಶಕ್ತಿಗಳಿಗೆ ಕಾರಣ ಎಂದು ಸಾರಿ, ಸಮಾಜವಾದಿ ತತ್ವ ಚಿಂತನೆಗೆ ಚಾಲನೆ ನೀಡಿದ. ನಂತರ ಸ್ಯಾಂಸಿಮೋಂ, ಶಾರ್ಲ್ ಫೂರಿಯೆ ಹಾಗೂ ರಾಬರ್ಟ್ ಓವನ್ ಮುಂತಾದ ಚಿಂತಕರು, ರಾಬರ್ಟ್ ಮಾಲ್ಥಸ್, ಡೇವಿಡ್ ರಿಕಾರ್ಡೊ, ಹಾಡ್ಜ್‌ಸ್ಕಿನ್, ವಿಲಿಯಂ ಥಾಮಸ್ ಮುಂತಾದವರ ಆರ್ಥಿಕ ವಿಶ್ಲೇಷಣೆಗಳ ಬೆಳಕಿನಲ್ಲಿ ಸಮಾಜವಾದಿ ಚಿಂತನೆಗೆ ಸ್ಪಷ್ಟ ರೂಪುರೇಷೆ ನೀಡಲು ಪ್ರಯತ್ನಿಸಿದರು. ಮಾಲಿಕ-ಕಾರ್ಮಿಕ ಸಂಬಂಧದ ವಿಷಮತೆ, ದುಡಿಮೆಗಾರರ ದಾರಿದ್ರ್ಯವನ್ನು ಹೆಚ್ಚಿಸುತ್ತಾ ಹೋಗುತ್ತದೆ ಎಂಬ ಅರ್ಥಶಾಸ್ತ್ರೀಯ ವಿಶ್ಲೇಷಣೆಗಳನ್ನು ಅಧ್ಯಯನ

ಮಾಡಿದ ಈ ಚಿಂತಕರು, ಈ ದರಿದ್ರೀಕರಣವನ್ನು ತಡೆದು ನಿವಾರಿಸಲು ಹಲವು ಮಾರ್ಗೋಪಾಯಗಳನ್ನು ಮಂಡಿಸಿದರು. ದುಡಿಯುವವರು ಮತ್ತು ಅನುಭವಿಸುವವರು ಎಂಬ ಎರಡು ವರ್ಗಗಳನ್ನು ಗುರುತಿಸಿದ ಸ್ಯಾಂಸಿಮೋಂ, ದುಡಿಯುವ ವರ್ಗವನ್ನು ಸಂಘಟಿಸಿ ಸಮಾಜದ ನಾಯಕತ್ವವನ್ನು ಅವರಿಗೆ ವಹಿಸಿದರೆ ಸಮಾನತೆಯ ಸಮಾಜವನ್ನು ನಿರ್ಮಿಸಬಹುದು; ಇದಕ್ಕೆ ಧರ್ಮ ಮತ್ತು ವಿಜ್ಞಾನಗಳ ಸಮನ್ವಯದಿಂದ ಹುಟ್ಟುವ ಹೊಸ ನೋಟದ ಬೆಂಬಲ ಅತ್ಯಗತ್ಯ ಎಂದು ಪ್ರತಿಪಾದಿಸಿದ. ವ್ಯಕ್ತಿಯ ಶಕ್ತಿ-ಸಾಮರ್ಥ್ಯ-ಪ್ರತಿಭೆಗಳು ಅರಳಲು ಬೇಕಾದ ಸ್ವಾತಂತ್ರ್ಯ ಮತ್ತು ಅವಕಾಶಗಳಿರುವ; ಆದರೆ ಆದಾಯದ ಮೇಲೆ ನಿಯಂತ್ರಣವಿರುವ ಸಾಮುದಾಯಿಕ ಬದುಕನ್ನು ಶಾರ್ಲ್‌ಫೂರಿಯೆ ಆದರ್ಶವಾಗಿ ಮುಂದಿಟ್ಟ.

ಸಹಕಾರಿ ತತ್ವಕಲ್ಪನೆ-ಹೊಸ ಜಗತ್ತಿನ ಅಭೀಪ್ಸೆ

ಸ್ಯಾಂಸಿಮೋಂ ಮತ್ತು ಶಾರ್ಲ್‌ಫೂರಿಯೆ ಫ್ರೆಂಚ್ ಚಿಂತಕರಾಗಿದ್ದರೆ, ಇಂಗ್ಲೆಂಡಿನ ರಾಬರ್ಟ್ ಓವನ್ ಎಲ್ಲರ ದುಡಿಯುವ ಹಕ್ಕು ಮತ್ತು ಮಾಲಿಕತ್ವದ ಹಕ್ಕನ್ನು ಪ್ರತಿಪಾದಿಸಿದ ಜಗತ್ತಿನ ಮೊದಲ ಚಿಂತಕನೆನಿಸಿದ್ದಾನೆ. ಕಾರ್ಮಿಕರ ಬೃಹತ್ ಸಂಘಟನೆಯನ್ನು ಕಟ್ಟಿದ ಈತ, ಕಾರ್ಮಿಕ ಕಲ್ಯಾಣಕ್ಕಾಗಿ ಸಹಕಾರಿ ಗ್ರಾಮಗಳನ್ನೇ ನಿರ್ಮಿಸಿ ಜಗತ್ತಿನಾದ್ಯಂತ ಸಹಕಾರಿ ಆಂದೋಲನಕ್ಕೆ ಕಾರಣನಾದ. ಹೀಗೆ ಕೈಗಾರಿಕೀಕರಣದಲ್ಲಿ ಮುಂದಾಳತ್ವ ವಹಿಸಿದ್ದ ಫ್ರಾನ್ಸ್ ಮತ್ತು ಇಂಗ್ಲೆಂಡ್‌ಗಳಲ್ಲೇ ಕಾರ್ಮಿಕ ಸಂಘಟನೆ, ಮುಷ್ಕರ, ಪುನರ್ವಸತಿ, ಸಾಮಾಜಿಕ ಭದ್ರತೆ, ಮಾಲಿಕತ್ವದಲ್ಲಿ ಪಾಲು ಮುಂತಾದ ಸಮಾಜವಾದಿ ಚಿಂತನೆ-ಚಟುವಟಿಕೆಗಳು ಆರಂಭವಾದವು. ಈ ಕ್ರಿಯಾಶೀಲ ವಾತಾವರಣದಲ್ಲೇ 'ಕ್ಷುದ್ರ ಮತ್ತು ಅನೈತಿಕ'ವಾಗಿದ್ದ ಜಗತ್ತನ್ನು ಹೊಸದಾಗಿ ನೈತಿಕ ನೆಲೆಯ ಮೇಲೆ ಕಟ್ಟುವ ಅಭೀಪ್ಸೆ-ಹಠ ಸೃಷ್ಟಿಯಾಗಿ, ಸಮಾಜವಾದವೆಂಬುದು ಚಿಂತನೆ-ಹೋರಾಟಗಳೆರಡೂ ಕೂಡಿಕೊಂಡ ಆಂದೋಲನವಾಯಿತು. ಇದರ ಪರಿಣಾಮವಾಗಿ ಅರ್ಥಶಾಸ್ತ್ರ ಮತ್ತು ರಾಜ್ಯಶಾಸ್ತ್ರಗಳ ಚೌಕಟ್ಟುಗಳೇ ಪರಿಷ್ಕಾರಗೊಂಡವು. ಅರ್ಥಶಾಸ್ತ್ರ ಕೇವಲ ಸಂಪತ್ತಿನ ವಿತರಣೆಗೆ ಸಂಬಂಧಪಟ್ಟ ನಿಯಮ-ಸೂತ್ರಗಳ ಅಧ್ಯಯನವಾಗಿರದೆ, ಸಂಪತ್ತಿನ ಉತ್ಪಾದನೆಯ ರೀತಿ-ನೀತಿಗಳ ಅಧ್ಯಯನವೂ ಆಗಿದೆ; ಮತ್ತು ಸಂಪತ್ತೆಂಬುದು ಕೇವಲ ಜಡವಸ್ತುವಾಗಿರದೆ, ಮನುಷ್ಯನ ಇಚ್ಛಾಶಕ್ತಿಯ ಮೂರ್ತ ರೂಪವಾಗಿದೆ. ಅದರಿಂದ ಅದರ ಒಡೆತನವೂ ಆ ಇಚ್ಛಾಶಕ್ತಿಯನ್ನವಲಂಬಿಸಿದೆ ಎಂಬ ಹೊಸ ಅರಿವು ಅನಾವರಣ ವಾಯಿತು. ಹಾಗೆಯೇ ರಾಜ್ಯಶಕ್ತಿ ಎಂಬುದು ಸಂಪತ್ತಿನ ಒಡೆತನದಿಂದ ದತ್ತವಾದ ಅಧಿಕಾರದಿಂದ ಹುಟ್ಟುವುದು ಎಂಬ ಪಾರಂಪರಿಕ ಕಲ್ಪನೆಗೆ ವ್ಯತಿರಿಕ್ತವಾಗಿ, ಜನತೆಯ ಇಚ್ಛಾಶಕ್ತಿಗೆ ಅನುಗುಣವಾಗಿ ಅದು ವ್ಯವಸ್ಥಿತಗೊಳ್ಳಬಲ್ಲುದು ಎಂಬ ಹೊಸ ವಿಶ್ವಾಸವೂ ಸೃಷ್ಟಿಯಾಯಿತು.

ಹೀಗೆ ಸುಧಾರಣೆಗಳ ರೂಪದಲ್ಲಿ ಆರಂಭವಾಗಿ, ಹೊಸ ಜಗತ್ತನ್ನೇ ಸೃಷ್ಟಿಸುವ ಅಭೀಪ್ಸೆಯಾಗಿ ಮಾರ್ಪಾಟಾದ ಸಮಾಜವಾದಿ ಚಿಂತನೆ ಇಂಗ್ಲೆಂಡ್-ಫ್ರಾನ್ಸ್‌ಗಳಾಚೆಗೆ, ಅಂದರೆ ಇನ್ನೂ ಅಷ್ಟೇನೂ ಕೈಗಾರೀಕರಣಕ್ಕೆ ಒಡ್ಡಿಕೊಳ್ಳದ ಜರ್ಮನಿ ಮತ್ತು ಇತರ ಐರೋಪ್ಯ ದೇಶಗಳಿಗೆ ಹರಡತೊಡಗಿದಾಗ, ಅದಕ್ಕೆ ಇನ್ನಿತರ ಆಯಾಮಗಳು ದೊರಕ ತೊಡಗಿದವು. ಈ ಹಿನ್ನೆಲೆಯಲ್ಲಿ ತತ್ವಜ್ಞಾನದಲ್ಲಿ ಮುಂದಿದ್ದ, ಹೆಗೆಲ್‌ನಂತಹ ಉಜ್ವಲ ತಾರ್ಕಿಕ ಪ್ರತಿಭೆಯ ತತ್ವಜ್ಞಾನಿಯ ತವರಾಗಿದ್ದ ಜರ್ಮನಿಯಲ್ಲಿ, ಕಾರ್ಲ್‌ಮಾರ್ಕ್ಸ್ ಮತ್ತು ಲೂಯಿ ಬ್ಲಾಂಕ್‌ರಂತಹ ಇಬ್ಬರು ಮಹಾನ್ ಸಮಾಜವಾದಿ ಚಿಂತಕರು ರೂಪುಗೊಳ್ಳತೊಡಗಿದ್ದರು.

ಇತಿಹಾಸದ ವ್ಯಾಖ್ಯಾನ-ಹೆಗೆಲ್, ಮಾರ್ಕ್ಸ್‌ರ ತತ್ವಚಿಂತನೆ

ಭೌತಿಕ ಜಗತ್ತು ಎಂದರೆ ಮನುಷ್ಯ ತನ್ನ ಅಸ್ತಿತ್ವದ ಅನ್ವೇಷಣೆಯ ಹಾದಿಯಲ್ಲಿ ತನ್ನ ಗ್ರಹಿಕೆಗೆ ದಕ್ಕಿಸಿಕೊಳ್ಳುತ್ತಾ ಹೋಗುವ ಒಂದು ವಿದ್ಯಮಾನವಾಗಿದ್ದು, ಮನುಷ್ಯ ಪ್ರಜ್ಞೆ ವಿಕಾಸಗೊಂಡಂತೆ ಭೌತಿಕ ಜಗತ್ತೂ ವಿಕಾಸಗೊಳ್ಳುತ್ತಾ ಹೋಗುತ್ತದೆ. ಹೀಗೆ ಮನುಷ್ಯನ ವಿಚಾರಶೀಲತೆ ಮತ್ತು ಅದರಿಂದಾಗಿ ವಿನ್ಯಾಸಗೊಳ್ಳುತ್ತ ಹೋಗುವ ಭೌತಪರಿಸರ ಪರಸ್ಪರ ವಿಕಾಸಶೀಲ ಸಂಬಂಧ ಹೊಂದುತ್ತಾ ಒಂದು ದ್ವಂದ್ವಶಕ್ತಿಯಾಗಿ ರೂಪುಗೊಳ್ಳುತ್ತದೆ. ಈ ದ್ವಂದ್ವ ಶಕ್ತಿ ಮನುಷ್ಯನ ಇತಿಹಾಸವನ್ನು ನಿರ್ಮಿಸುತ್ತದೆ ಎಂಬುದು ಹೆಗೆಲ್‌ನ ತತ್ವಜ್ಞಾನದ ಕಾಣ್ಕೆ. ಆದರೆ ಇದು ಆ ಕಾಲದ ತತ್ವಜ್ಞಾನಿಗಳ ಮಧ್ಯೆ ವಿವಾದಕ್ಕೆ ಈಡಾಗಿತ್ತು. ಸಂಪತ್ತಿನ ಉತ್ಪಾದನೆಯಲ್ಲಿ ತೊಡಗುವ ಮನುಷ್ಯನ ಕ್ರಿಯಾಶಕ್ತಿಯೇ ಜಗತ್ತನ್ನು ಬದಲಾಯಿಸುತ್ತಾ ರೂಪಿಸುತ್ತಾ ಹೋಗುತ್ತದೆಂಬ ಇತಿಹಾಸದ ಆರ್ಥಿಕ ವ್ಯಾಖ್ಯಾನಗಳು ಇದಕ್ಕೆ ಪ್ರತಿಕ್ರಿಯೆ ರೂಪದಲ್ಲಿ ಬರತೊಡಗಿದ್ದವು. ಜೊತೆಗೆ ಆ ವೇಳೆಗಾಗಲೇ ಒಂದು ಸ್ಪಷ್ಟ ರೂಪ ಪಡೆಯತೊಡಗಿದ್ದ ಸಮಾಜವಾದಿ ವಿಚಾರ ಮಂಥನವು, ಹೆಗೆಲ್ ಪ್ರತಿಪಾದಿಸಿದ ಪ್ರಜ್ಞೆ (ಅಭೌತ) ಮತ್ತು ಪರಿಸರ (ಭೌತ)ಗಳ ನಡುವಣ ದ್ವಂದಾತ್ಮಕ ಸಂಬಂಧದ ಜಿಜ್ಞಾಸೆಯನ್ನು ಬಳಸಿಕೊಂಡು, ಮನುಷ್ಯನನ್ನು ಸಮಾಜದ ಆರ್ಥಿಕ ರಚನೆಯ ಮಧ್ಯದಲ್ಲಿಟ್ಟು ಆತನ ಭವಿಷ್ಯವನ್ನು ಪರಿಶೀಲಿಸುವ ಪ್ರಯತ್ನ ಮಾಡಿತು. ಈ ಪ್ರಯತ್ನ ಒಂದು ಸಿದ್ಧಾಂತವಾಗಿ ರೂಪು ತಳೆದದ್ದು ಕಾರ್ಲ್ ಮಾರ್ಕ್ಸ್‌ನ ಅಧ್ಯಯನದ ಫಲದಿಂದ. ಇದಕ್ಕೆ ಅವಕಾಶ ಒದಗಿಸಿದ್ದು, ಇಂಗ್ಲೆಂಡ್‌ನ ಕೈಗಾರೀಕರಣದಿಂದ ಆಕರ್ಷಿತರಾಗಿ ಉದ್ಯೋಗ ಅರಸಿಕೊಂಡು ಅಲ್ಲಿಗೆ ವಲಸೆ ಹೋಗಿದ್ದ ಜರ್ಮನಿಯ ಕಾರ್ಮಿಕ ವರ್ಗ.

ಕಮ್ಯೂನಿಸ್ಟ್ ಪ್ರಣಾಳಿಕೆ-ದ್ವಂದ್ವಾತ್ಮಕ ಭೌತವಾದ

ಈ ಕಾರ್ಮಿಕ ವರ್ಗ ತನ್ನ ಸಮುದಾಯ(ಕಮ್ಯೂನಿಟಿ)ದ ಕ್ಷೇಮಾಭ್ಯುದಯಕ್ಕಾಗಿ 'ಕಮ್ಯೂನಿಸ್ಟ್ ಲೀಗ್' ಎಂಬ ಸಂಘಟನೆಯನ್ನು ರೂಪಿಸಿಕೊಂಡಿತ್ತು. ಅದು ತನಗಾಗಿ ಒಂದು ಕಾರ್ಯಕ್ರಮ ಪ್ರಣಾಳಿಕೆಯನ್ನು ಸಿದ್ಧಪಡಿಸಿಕೊಡುವಂತೆ, ಆ ವೇಳೆಗೆ ಜರ್ಮನಿಯಲ್ಲಿ ಸಮಾಜವಾದಿ ಚರ್ಚೆ-ಸಂಘಟನೆಗಳಲ್ಲಿ ತೊಡಗಿ ಹೆಸರಾಗಿದ್ದ ಕಾರ್ಲ್ ಮಾರ್ಕ್ಸ್‌ನನ್ನು ಆಹ್ವಾನಿಸಿತು. ಆಗ ಸಿದ್ಧಗೊಂಡಿದ್ದೇ ಜಗತ್ತಿನಾದ್ಯಂತ ಕಾರ್ಮಿಕ ರಾಜ್ಯದ ಕನಸನ್ನು ಬಿತ್ತಿದ 'ಕಮ್ಯೂನಿಸ್ಟ್ ಪ್ರಣಾಳಿಕೆ'. ಇದನ್ನು ಸಿದ್ಧಪಡಿಸುವಲ್ಲಿ ಇಂಗ್ಲೆಂಡ್‌ನ ಏಂಗೆಲ್ಸ್ ಎಂಬ ಚಿಂತಕ ಮಾರ್ಕ್ಸ್‌ನಿಗೆ ನೆರವಾದ. ಫ್ರಾನ್ಸ್‌ನ ರಾಜಕೀಯ ಚಿಂತನೆ, ಇಂಗ್ಲೆಂಡ್‌ನ ಅರ್ಥಶಾಸ್ತ್ರೀಯ ಸಂಶೋಧನೆಗಳು ಹಾಗೂ ಜರ್ಮನಿಯ ತತ್ವಜ್ಞಾನದ ಪರಿಕಲ್ಪನೆಗಳು ಮುಪ್ಪರಿಗೊಂಡು ರೂಪುಗೊಂಡ ಈ ಪ್ರಣಾಳಿಕೆ, ಹೆಗೆಲ್‌ವಾದವನ್ನು ತಿರುಗುಮುರುಗಾಗಿಸಿತು. ಇತಿಹಾಸವನ್ನು ಆರ್ಥಿಕ-ಭೌತವಾದಿ-ನೆಲೆಯಲ್ಲಿ ವ್ಯಾಖ್ಯಾನಿಸುವ ಪ್ರಯತ್ನ ಮಾಡಿತು. ಮಾನವ ಇತಿಹಾಸವೆಂದರೆ ಆಸ್ತಿ ಅಥವಾ ಸಂಪತ್ತಿನ ಉತ್ಪಾದನೆಯ ರೀತಿ-ನೀತಿಗಳ ಮೇಲೆ ಆಧಾರಗೊಂಡು ಆರ್ಥಿಕ ನೆಲೆಯಲ್ಲಿ ವಿಂಗಡಿತವಾಗಿ, ವಿಕಾಸವಾಗುತ್ತಾ ಹೋಗುವ ವರ್ಗಗಳ ನಡುವಣ ತಿಕ್ಕಾಟ-ಹೋರಾಟಗಳ ಇತಿಹಾಸ ಎಂಬುದು ಈ ಕಮ್ಯೂನಿಸ್ಟ್ ಪ್ರಣಾಳಿಕೆಯ ಪ್ರತಿಪಾದನೆಯಾಗಿತ್ತು. ಹಾಗಾಗಿ ಬಂಡವಾಳವಾದಿ ಸಂದರ್ಭದ ಇಂತಹ ವರ್ಗ ಹೋರಾಟಕ್ಕೆ ಪ್ರೇರಕ ವಾತಾವರಣ ನಿರ್ಮಿಸುವುದಷ್ಟೇ ಸದ್ಯದ ಕೆಲಸ ಎಂದು ಮಾರ್ಕ್ಸ್ ಸೂಚಿಸಿದ.

ಮನುಷ್ಯನ ಕೆಲಸ ಇತಿಹಾಸವನ್ನು ವ್ಯಾಖ್ಯಾನಿಸುವುದಷ್ಟೇ ಅಲ್ಲ, ಅದನ್ನು ಬದಲಾಯಿಸುವುದೂ ಆಗಿದೆ ಎಂದು ಘೋಷಿಸಿದ ಮಾರ್ಕ್ಸ್, ನಂತರದ ದಿನಗಳಲ್ಲಿ ಬಂಡವಾಳವಾದವನ್ನು ವಿಶ್ಲೇಷಿಸಿ, 'ದಾಸ್ ಕ್ಯಾಪಿಟಲ್' ಎಂಬ ಸುಪ್ರಸಿದ್ಧ ಗ್ರಂಥದ ಮೂಲಕ ಇತಿಹಾಸದ ತನ್ನ ಈ ಭೌತವಾದೀ ವ್ಯಾಖ್ಯಾನಕ್ಕೆ ಒಂದು ಅರ್ಥಶಾಸ್ತ್ರೀಯ ಸಮರ್ಥನೆ ಒದಗಿಸಿದ. ಇದು ದ್ವಂದ್ವಾತ್ಮಕ ಭೌತವಾದವೆಂದೇ ಪ್ರಸಿದ್ಧವಾಯಿತು. ಮಾರ್ಕ್ಸ್‌ನ ಪ್ರಕಾರ ತಂತ್ರಜ್ಞಾನಾಧಾರಿತ ಕೈಗಾರೀಕರಣಕ್ಕೆ ಕಾರಣವಾದ ಬಂಡವಾಳವಾದವು ಭೂ ಆಧಾರಿತ ಆರ್ಥಿಕತೆಯನ್ನು ನೆಚ್ಚಿಕೊಂಡಿದ್ದ ಸಾಮಂತಶಾಹಿಯ ಜೀತ-ಗುಲಾಮ ವ್ಯವಸ್ಥೆಯನ್ನು ಕೊನೆಗೊಳಿಸಿದ 'ಪ್ರಗತಿಪರ' ವಿದ್ಯಮಾನವಾಗಿದೆ. ಅದು ಕ್ರಮೇಣ ಉತ್ಪಾದನೆಯ ತಾಂತ್ರೀಕರಣದ ಪ್ರಗತಿಶೀಲತೆಯ ಪರಿಣಾಮವಾಗಿ ಬಂಡವಾಳದ ಕೇಂದ್ರೀಕರಣಕ್ಕೆ ಕಾರಣವಾಗುತ್ತದೆ. ಇದರಿಂದಾಗಿ ಉತ್ಪಾದನೆ ಇನ್ನಷ್ಟು ಸುಧಾರಿತವಾದ ತಾಂತ್ರೀಕರಣಕ್ಕೆ ಒಳಪಟ್ಟು, ಶ್ರಮಿಕರ ವೇತನ ಕಡಿತ ಹಾಗೂ ನಿರುದ್ಯೋಗಕ್ಕೆ ದಾರಿ ಮಾಡಿಕೊಡುತ್ತದೆ. ಇದು ಕಾರ್ಮಿಕರ ಒಗ್ಗಟ್ಟು-ಸಂಘಟನೆಯನ್ನು ತೀವ್ರಗೊಳಿಸುತ್ತದೆ.

ಕ್ರಮೇಣ ಬಂಡವಾಳಗಾರ ಹಾಗೂ ಶೋಷಿತ ಕಾರ್ಮಿಕರ ನಡುವಣ ಸಂಬಂಧವನ್ನು ವಿಷಮಗೊಳಿಸುತ್ತಾ ಹೋಗುತ್ತದೆ ಮತ್ತು ಉತ್ಪಾದನೆಯ ಮೇಲೆ ಸ್ವಾಮ್ಯ ಸಾಧಿಸುವ ಮತ್ತು ಆ ಮೂಲಕ ಬಂಡವಾಳಗಾರರ ವರ್ಗವನ್ನೇ ಇಲ್ಲವಾಗಿಸುವ ಕಾರ್ಮಿಕ ಕ್ರಾಂತಿಗೆ ಆಹ್ವಾನ ನೀಡುತ್ತದೆ. ಅಂತಿಮವಾಗಿ ಈ ಕ್ರಾಂತಿ ವಿಜ್ಞಾನ-ತಂತ್ರಜ್ಞಾನಗಳನ್ನು ಬಂಡವಾಳಗಾರರ ಮುಷ್ಠಿಯಿಂದ ಮುಕ್ತಿಗೊಳಿಸಿ ಅವನ್ನು ದುಡಿಯುವ ವರ್ಗದ ಕೈಗೊಪ್ಪಿಸುತ್ತದೆ.

ಬಂಡವಾಳವಾದ ತನ್ನ ಗೋರಿಯನ್ನು ತಾನೇ ತೋಡಿಕೊಳ್ಳುವ ಈ ವೈರುಧ್ಯವನ್ನು ಮಾರ್ಕ್ಸ್, ಬಂಡವಾಳವು ಉತ್ಪಾದಿಸುವ ಸರಕಿನಲ್ಲಿ ಕಾರ್ಮಿಕನ ಶ್ರಮವನ್ನೂ ಮೀರಿ ಅಡಕವಾಗಿರುವ 'ಹೆಚ್ಚುವರಿ ಮೌಲ್ಯ' ಎಂಬ ಅರ್ಥಶಾಸ್ತ್ರೀಯ ಪರಿಕಲ್ಪನೆಯ ಮೂಲಕ ವಿವರಿಸುತ್ತಾನೆ. ಹಾಗೇ ಆಸ್ತಿ, ಅಧಿಕಾರ, ಧರ್ಮ ಇತ್ಯಾದಿಗಳು ವಿಷಮ ವರ್ಗ ಸಂಬಂಧಗಳ ಪ್ರತಿರೂಪಗಳಾಗಿವೆ ಎನ್ನುತ್ತಾನೆ. ಕಾರ್ಮಿಕ ಕ್ರಾಂತಿ ಈ ಎಲ್ಲ ವರ್ಗ ಪ್ರತಿರೂಪಗಳನ್ನು ವಿಸರ್ಜಿಸಿ, ಇವುಗಳ ಮೇಲೆ ಆಧಾರಗೊಂಡಿದ್ದ ರಾಜ್ಯ ವ್ಯವಸ್ಥೆಯೆಂಬ ಮಹಾಸಂಸ್ಥೆಯನ್ನೇ ಇಲ್ಲವಾಗಿಸುವುದು ಎಂದು ಮಾರ್ಕ್ಸ್‌ವಾದ ಸಿದ್ಧಾಂತಿಸುತ್ತದೆ. ಇಂತಹ ಭವ್ಯ ಕ್ರಾಂತಿಯ ಹೆರಿಗೆ ಮಾಡಿಸುವ ಸೂಲಗಿತ್ತಿ, ಮೇಲೆ ಸೂಚಿಸಿದಂತೆ ಪ್ರಗತಿಪರ ತಂತ್ರಜ್ಞಾನವೇ ಆಗಿರುವುದರಿಂದ, ಮಾರ್ಕ್ಸ್ ತಾನು ಪ್ರತಿಪಾದಿಸಿದ ಈ ಸಮಾಜವಾದವನ್ನು ವೈಜ್ಞಾನಿಕ ಸಮಾಜವಾದವೆಂದು ಕರೆದ. ರಾಜ್ಯ ವ್ಯವಸ್ಥೆಯೇ ನಷ್ಟವಾಗಿ ಮನುಷ್ಯ ಎಲ್ಲ ಬಂಧನಗಳಿಂದ ಮುಕ್ತನಾಗಿ ಸಹಜ ಸಂತೋಷದ ಬದುಕು ನಡೆಸುವುದಕ್ಕೆ ಅನುವು ಮಾಡಿಕೊಡುವ ಕಾರ್ಮಿಕ ಕ್ರಾಂತಿ ತನ್ನ ಈ ಗುರಿ ಮುಟ್ಟಲು ಸಾಧ್ಯವಾಗಲು, ಕಾರ್ಮಿಕರ ನಿರಂಕುಶ ಪ್ರಭುತ್ವ ಅನಿವಾರ್ಯ ಎಂದು ಮಾರ್ಕ್ಸ್ ಪ್ರತಿಪಾದಿಸಿದ.

ಲೂಯಿ ಬ್ಲೊಂಕ್-ಜನತಾಂತ್ರಿಕ ಸಮಾಜವಾದ

ಆದರೆ ಮೂಲತಃ ಹೆಗೆಲ್‌ವಾದಿಯಾದ ಲೂಯಿ ಬ್ಲೊಂಕ್, ಇಂತಹ ಕಾರ್ಮಿಕ ಕ್ರಾಂತಿಯ ಒಡಲಲ್ಲೇ ಹೊಸ 'ಪಟ್ಟಭದ್ರ' ವರ್ಗವೊಂದರ ಬೀಜವಡಗಿದೆ ಎನ್ನುತ್ತಾನೆ. ಅದು ಸಮಾಜದಲ್ಲಿ ಹೊಸ ವೈರುಧ್ಯಗಳನ್ನು ಸೃಷ್ಟಿಸುವ ಸಂಭವ ಇರುವುದರಿಂದ, ಸರ್ವಾಧಿಕಾರದ ಗುರಿಯಿಟ್ಟುಕೊಂಡ ಕಾರ್ಮಿಕ ಕ್ರಾಂತಿಗೆ ಆಸ್ಪದ ಕೊಡದ ರೀತಿಯಲ್ಲಿ ವರ್ಗ ವಿಷಮತೆಗಳನ್ನು ನಿವಾರಿಸುವ ಉಪಕ್ರಮಗಳನ್ನು ಆತ ಪ್ರತಿಪಾದಿಸುತ್ತಾನೆ. ವರ್ಗ ವಿಷಮತೆ ಒಟ್ಟಾರೆ ಸಮಾಜದಲ್ಲಿ ಉಂಟುಮಾಡುವ ಅನಾಹುತಗಳನ್ನು ಜನತೆಗೆ ವಿವರಿಸುವ ರಾಜಕೀಯ ಶಿಕ್ಷಣದ ಜನತಾಂತ್ರಿಕ ಆಂದೋಲನವನ್ನು ರೂಪಿಸಬೇಕು

ಮತ್ತು ವಯಸ್ಕ ಮತದಾನ ಆಧರಿಸಿದ ಪ್ರಭುತ್ವದ ಮೂಲಕ ವರ್ಗಾಧಾರಿತ ಸಮಾಜವನ್ನು ಒಗ್ಗೂಡಿಸಬೇಕೆಂದು ಬ್ಲೋಂಕ್ ವಾದಿಸುತ್ತಾನೆ. ಇಂತಹ ಜನತಾಂತ್ರಿಕ ಪ್ರಭುತ್ವವು ಬಂಡವಾಳವನ್ನು ನಿರ್ವಹಿಸುವ ಅಧಿಕಾರವನ್ನು ಕಾರ್ಮಿಕವರ್ಗಕ್ಕೆ ನೀಡಿ ಉದ್ಯಮಗಳನ್ನು ಬೆಳೆಸಿ ಸಮಾಜದ ಒಟ್ಟಾರೆ ಹಿತವನ್ನು ಕಾಪಾಡಬಹುದು ಎಂದು ಆತ ಅಭಿಪ್ರಾಯ ಪಡುತ್ತಾನೆ. ವ್ಯಕ್ತಿಸ್ವಾತಂತ್ರ್ಯ, ದುಡಿಮೆಯ ಅಧಿಕಾರಗಳಿರುವ ವರ್ಗರಹಿತ ಸಮಾಜ ನಿರ್ಮಾಣವನ್ನು ಪ್ರತಿಪಾದಿಸುವ ಈ ಸಿದ್ಧಾಂತ, ಜನತಾಂತ್ರಿಕ ಸಮಾಜವಾದವೆಂದು ಹೆಸರಾಯಿತು.

ಸಮಾಜವಾದಿ ವೈವಿಧ್ಯ - ಲೋಹಿಯಾ ಪ್ರವೇಶ

ಇವುಗಳಲ್ಲದೆ ಆ ಕಾಲದ ಅನೇಕ ರೀತಿಯ ಚಿಂತನ-ಮಂಥನಗಳನ್ನಾಧರಿಸಿ ಸಾಮಂತವಾದಿ ಸಮಾಜವಾದ, ವೈಚಾರಿಕ ಸಮಾಜವಾದ, ಕ್ರಿಶ್ಚಿಯನ್ ಸಮಾಜವಾದ, ಅರಾಜಕ ಸಮಾಜವಾದ, ಪ್ರಾಧ್ಯಾಪಕರ ಸಮಾಜವಾದ, ಕ್ರಮೇಣವಾದಿ (ಫೇಬಿಯನ್) ಸಮಾಜವಾದ ಮುಂತಾದ ಹೆಸರುಗಳೂ, ಸಮಾಜವಾದಿ ವಿಚಾರಧಾರೆಗಳೂ ಪ್ರಚಲಿತಕ್ಕೆ ಬಂದವು. ಆದರೆ ಇವೆಲ್ಲವೂ ಕ್ರಮೇಣ ವೈಜ್ಞಾನಿಕ ಸಮಾಜವಾದ ಹಾಗೂ ಜನತಾಂತ್ರಿಕ ಸಮಾಜವಾದವೆಂಬ ಎರಡು ಪ್ರಮುಖ ಧಾರೆಗಳಲ್ಲಿ ಲೀನವಾದವು. ಹೀಗೆ ವಿಲೀನವಾಗಲು, ಇವುಗಳಿಂದ ಉದ್ದೀಪ್ತವಾದ ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆಗಳ ವಿಶ್ವಸಮ್ಮೇಳನಗಳು, ರಾಷ್ಟ್ರಕಲ್ಪನೆಯ ಅಡಿಯಲ್ಲಿ ಸೃಷ್ಟಿಯಾದ ವಿವಿಧ ರಾಷ್ಟ್ರಗಳ ಸಮಾಜವಾದಿ ಪಕ್ಷಗಳು, ಅವುಗಳ ಕಾರ್ಯಕ್ರಮಗಳು, ಸೋಲು-ಗೆಲುವುಗಳು ಮತ್ತು ಜರ್ಮನಿಯಲ್ಲಿ ಕಾಣಿಸಿಕೊಂಡ ಜನಾಂಗವಾದ ಹಾಗೂ ಸರ್ವಾಧಿಕಾರಿ ಪ್ರವೃತ್ತಿಗಳು ಕಾರಣವಾದವು. ಹಾಗೇ, ಈ ಮಧ್ಯೆ ಮಾರ್ಕ್ಸ್‌ವಾದದ ನಿರೀಕ್ಷೆಗೆ ವ್ಯತಿರಿಕ್ತವಾಗಿ ರಷ್ಯಾದಲ್ಲುಂಟಾದ ಕಮ್ಯೂನಿಸ್ಟ್ ಕ್ರಾಂತಿ ಮತ್ತು ಅದು ಪೂರ್ವ ಯುರೋಪ್ ರಾಷ್ಟ್ರಗಳಲ್ಲಿ ಉಂಟು ಮಾಡಿದ ರಾಜಕೀಯ ಉತ್ಪಾತಗಳು ಮತ್ತು ಇದಕ್ಕೆ ಪ್ರತಿಕ್ರಿಯೆ ಎಂಬಂತೆ ಪಶ್ಚಿಮ ಯುರೋಪ್ ರಾಷ್ಟ್ರಗಳಲ್ಲಿ ಮೂಡಿದ–ಶ್ರೀಮಂತಿಕೆ ಮೇಲೆ ತೆರಿಗೆ ಹಾಕಿ, ಪ್ರಜೆಗಳಿಗೆ ನಿರುದ್ಯೋಗ ಭತ್ಯೆ, ಆರೋಗ್ಯ ಭರವಸೆ ಯೋಜನೆ ಮುಂತಾದ ಸಾಮಾಜಿಕ ಭದ್ರತೆ ಒದಗಿಸುವ–ಕಲ್ಯಾಣ ರಾಜ್ಯ ರೂಪದ ಸಮಾಜವಾದಿ ವಿಚಾರಗಳೂ ಈ ವಿಲೀನ ಪ್ರಕ್ರಿಯೆಗೆ ಪ್ರೇರೇಪಣೆ ಒದಗಿಸಿದವು.

ಇಂತಹ ಸಂಧಿಕಾಲದ ಒಂದು ಅವಧಿಯಲ್ಲೇ ರಾಮಮನೋಹರ ಲೋಹಿಯಾ ಜರ್ಮನಿಯಲ್ಲಿ ಸಂಶೋಧನ ವಿದ್ಯಾರ್ಥಿಯಾಗಿದ್ದುದು ಹಾಗೂ ಈ ಎಲ್ಲ ಬೆಳವಣಿಗೆಗಳಿಂದ ನೇರ ಪ್ರಭಾವಿತರಾಗಿ ತಮ್ಮ ಮನಸ್ಸಿನಲ್ಲಿ, ತಾವು ಮುಂದೆ ಪ್ರತಿಪಾದಿಸಿದ ಭಾರತೀಯ ಸಮಾಜವಾದದ ಎರಕ ಸಿದ್ಧಗೊಳಿಸಿಕೊಂಡದ್ದು.

೨. ಲೋಹಿಯಾ ವ್ಯಕ್ತಿತ್ವ ವಿಕಾಸ : ಭಾರತದಲ್ಲಿ ಸಮಾಜವಾದದ ಉದಯ

ರಾಮಮನೋಹರ ಲೋಹಿಯಾ ಅವರ ಪೂರ್ವಜರು ಈಗಿನ ಉತ್ತರ ಪ್ರದೇಶದಲ್ಲಿರುವ ಮಿರ್ಜಾಪುರದ ಶ್ರೀಮಂತ ವೈಶ್ಯ ಮನೆತನಕ್ಕೆ ಸೇರಿದವರು. ಆ ಮನೆತನದವರು ಕಬ್ಬಿಣ(ಲೋಹ)ದ ವ್ಯಾಪಾರ ಮಾಡುತ್ತಿದ್ದುದರಿಂದ, ಆ ಮನೆತನ ಲೋಹಿಯಾ ಮನೆತನ ಎಂದೇ ಹೆಸರಾಗಿತ್ತು. ರಾಮಮನೋಹರರ ಮುತ್ತಾತ ಲಾಲಾ ಮನಸುಖರಾಂ ಕುಟುಂಬಕ್ಕೆ ಮಿರ್ಜಾಪುರದಲ್ಲಿ ಕಷ್ಟಗಳ ಸರಮಾಲೆಯೇ ಎದುರಾದಾಗ, ಇಡೀ ಕುಟುಂಬ ಗಂಗಾ ತೀರದ ಆ ಊರನ್ನು ಬಿಟ್ಟು ತಮಸಾ ನದಿಯ ದಂಡೆಯಲ್ಲಿರುವ ಅಯೋಧ್ಯೆಗೆ ವಲಸೆ ಬಂದಿತು. ನಂತರ ಪಕ್ಕದ ಅಕ್ಬರಪುರದಲ್ಲಿ ವ್ಯಾಪಾರ ಆರಂಭಿಸಿತು. ಆದರೆ ಅಲ್ಲಿ ವ್ಯಾಪಾರ ಕೈ ಹತ್ತದೆ, ರಾಮಮನೋಹರರು ಹುಟ್ಟುವ ಹೊತ್ತಿಗೆ ಕುಟುಂಬ ಆರ್ಥಿಕವಾಗಿ ಶ್ರೀಮಂತಿಕೆಯಿಂದ ಸಾಧಾರಣ ಮಟ್ಟಕ್ಕೆ ಇಳಿದಿತ್ತು. ರಾಮಮನೋಹರರ ತಂದೆ ಹೀರಾಲಾಲರು, ಮನೆತನದ ವ್ಯಾಪಾರ ವೃತ್ತಿಗಿಂತ ಹೆಚ್ಚಾಗಿ ಆಗ ತಾನೇ ಗಾಂಧೀಜಿ ನಾಯಕತ್ವದಲ್ಲಿ ಗರಿಗೆದರುತ್ತಿದ್ದ ಸ್ವಾತಂತ್ರ್ಯಹೋರಾಟದ ಕಾಂಗ್ರೆಸ್ ಚಟುವಟಿಕೆಗಳಲ್ಲಿ ಆಸಕ್ತಿ ವಹಿಸತೊಡಗಿದ್ದರು.

ತಮಸಾ ತೀರದಲ್ಲಿ ಬಾಲ್ಯ-ಮುಂಬೈನಲ್ಲಿ ರಾಜಕೀಯ ಚಟುವಟಿಕೆ

ಹೀರಾಲಾಲ್-ಶ್ಯಾಮಾ ದಂಪತಿಗಳಿಗೆ ಒಬ್ಬನೇ ಮಗನಾಗಿ ರಾಮಮನೋಹರ ಲೋಹಿಯಾ ಜನಿಸಿದ್ದು ೧೯೧೦ರ ಮಾರ್ಚ್ ೨೩ರಂದು. ಹೀರಾಲಾಲ್ ಅಯೋಧ್ಯಾ ನಾಡಿಗೆ ಸೇರಿದವರಾಗಿದ್ದರೆ, ಶ್ಯಾಮಾ ಮಿಥಿಲೆಯ ಹೆಣ್ಣು. ಅವರು ನೆಲೆಸಿದ್ದ ಅಕ್ಬರಪುರ, ಪುರಾಣದ ಪ್ರಕಾರ ಶ್ರೀರಾಮನು ವನವಾಸಕ್ಕೆ ಹೊರಟ ನಂತರ ಮೊದಲ ರಾತ್ರಿ ಕಳೆದ ಜಾಗವಾಗಿತ್ತು. ಹೀಗೆ ರಾಮಾಯಣದ ದಟ್ಟ ನೆನಪುಗಳಿಂದ ತುಂಬಿ ಹೋಗಿದ್ದ ಆ ಮಣ್ಣಿನಲ್ಲಿ ಬಾಲಕ ರಾಮಮನೋಹರ ಆಡಿ ನಲಿದ. ಆತ ಎರಡೂವರೆ ವರ್ಷದ ಮಗುವಾಗಿದ್ದಾಗಲೇ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದ. ಗಾಂಧೀಜಿ ಶಿಷ್ಯರಾಗಿದ್ದ ಹೀರಾಲಾಲ್ ಮರುಮದುವೆ ಮಾಡಿಕೊಳ್ಳಲು ಒಪ್ಪದಿದ್ದುದರಿಂದ, ಮಗು ಲೋಹಿಯಾ ಅಜ್ಜಿಯ ಮಡಿಲಲ್ಲಿ ಬೆಳೆಯತೊಡಗಿದ. ನೆರೆಯ ಕ್ಷೌರಿಕ ಕುಟುಂಬಕ್ಕೆ

ಸೇರಿದ ಸರಯೂ ದೇವಿಯೂ ಮಗುವಿನ ಪಾಲನೆ-ಪೋಷಣೆಗಳಲ್ಲಿ ತೊಡಗಿದಳು. ಆಕೆಯ ಮಗ ರಾಮನಂದನ ಬಾಲಕ ಲೋಹಿಯಾನ ಜೊತೆಗಾರ. ಇಬ್ಬರೂ ತಮಸಾ ನದಿ ದಂಡೆಯಲ್ಲಿ ಆಡಿ ಪಾಡಿ ಬೆಳೆದರು. ಲೋಹಿಯಾಗೆ ಕೊಳಲೂದುವುದು ಅಚ್ಚುಮೆಚ್ಚು.

ಗೆಳೆಯರಿಬ್ಬರೂ ತಮ್ಮ ಪ್ರಾಥಮಿಕ ಶಾಲಾ ವಿದ್ಯಾಭ್ಯಾಸವನ್ನು ಅಕ್ಬರ್‌ಪುರದಲ್ಲೇ ಆರಂಭಿಸಿದರಾದರೂ, ೧೯೧೮ರ ಅಹಮದಾಬಾದ್ ಕಾಂಗ್ರೆಸ್ ಅಧಿವೇಶನಕ್ಕೆ ಹೀರಾಲಾಲ್ ಹೊರಟಾಗ ಬಾಲಕ ರಾಮಮನೋಹರ ಲೋಹಿಯಾ ಕೂಡಾ ತಂದೆ ಜೊತೆಗೆ ಹೊರಟ. ಈ ಅಧಿವೇಶನದಲ್ಲೇ ಮೊದಲಬಾರಿಗೆ ಕಾಂಗ್ರೆಸ್ಸಿಗರ ಕಿವಿಯ ಮೇಲೆ ಎಂ.ಎನ್. ರಾಯ್ ಅವರ ಒಂದು ಕರಪತ್ರದ ಮೂಲಕ ಸಮಾಜವಾದ ಎಂಬ ಶಬ್ದ ಕಿವಿಗೆ ಬಿದ್ದುದು ಎಂಬುದು ಕಾಕತಾಳೀಯವಾದ ಸಂಗತಿಯಾದರೂ, ಕುತೂಹಲದ ಸಂಗತಿಯೂ ಆಗಿದೆ... ಅದೇನೇ ಇರಲಿ, ಅಧಿವೇಶನ ಮುಗಿದ ನಂತರ ಹೀರಾಲಾಲರಿಗೆ ಮುಂಬೈನಲ್ಲಿ ನೆಲಸುವ ಮನಸ್ಸಾಗಿ, ಲೋಹಿಯಾರನ್ನು ಅಲ್ಲಿನ ಮಾರವಾಡಿ ವಿದ್ಯಾಲಯಕ್ಕೆ ಸೇರಿಸಿದರು. ೧೯೨೦ರಲ್ಲಿ ಲೋಕಮಾನ್ಯ ಬಾಲಗಂಗಾಧರ ತಿಲಕರು ನಿಧನರಾದಾಗ ಮುಂಬೈ ನಗರ ಶೋಕತಪ್ತವಾಯಿತು. ಇಡೀ ನಗರ ಸುರಿಯುತ್ತಿದ್ದ ಮಳೆಯನ್ನು ಲೆಕ್ಕಿಸದೆ ತಿಲಕರಿಗೆ ಶ್ರದ್ಧಾಂಜಲಿ ಅರ್ಪಿಸಲು ಮೆರವಣಿಗೆ ಹೊರಟಿತು. ಬಾಲಕ ರಾಮಮನೋಹರನ ಮನಸ್ಸಿನ ಮೇಲೆ ಇದು ಗಾಢ ಪ್ರಭಾವ ಬೀರಿ, ಸ್ವಾತಂತ್ರ್ಯ ಹೋರಾಟದ ಬಗ್ಗೆ ಆಸಕ್ತಿ-ಕುತೂಹಲಗಳನ್ನು ಹುಟ್ಟಿಸಿತು. ಅಂದು ಬಾಲಕ ರಾಮಮನೋಹರ ತನ್ನ ಶಾಲೆಯನ್ನು ಮುಚ್ಚಿಸಿ ಇಡೀ ವಿದ್ಯಾರ್ಥಿ ಸಮೂಹವನ್ನು ತಿಲಕರ ಅಂತ್ಯಕ್ರಿಯೆ ನಡೆಯುತ್ತಿದ್ದ ಸ್ಥಳಕ್ಕೆ ಕರೆದೊಯ್ದು, ಅಂತಿಮ ಪ್ರಣಾಮ ಸಲ್ಲಿಸಿದ. ಇದು ಲೋಹಿಯಾ ಜೀವನದ ಪ್ರಪ್ರಥಮ ರಾಜಕೀಯ ಚಟುವಟಿಕೆ.

ಶಾಲೆಗೆ ಬಹಿಷ್ಕಾರ - ಗಾಂಧೀಜಿ ದರ್ಶನ

೧೯೨೦ ಎಂದರೆ ಭಾರತದ ಸ್ವಾತಂತ್ರ್ಯಹೋರಾಟ ಹೊಸ ಮಜಲನ್ನು ಪ್ರವೇಶಿಸಿದ ವರ್ಷ. ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹದ ಹಲವು ಪ್ರಯೋಗಗಳನ್ನು ನಡೆಸಿ ಭಾರತಕ್ಕೆ ಹಿಂದಿರುಗಿದ್ದ ಗಾಂಧೀಜಿ; ಅಹಮದಾಬಾದ್‌ನಲ್ಲಿ ಆಶ್ರಮ ಸ್ಥಾಪಿಸಿಕೊಂಡು ದೇಶಾದ್ಯಂತ ಸಂಚರಿಸುತ್ತಾ ಸ್ವಾತಂತ್ರ್ಯ ಹೋರಾಟಕ್ಕೆ ಜನಸಾಮಾನ್ಯರನ್ನು ಅಣಿಗೊಳಿಸಿ, ಅದರ ನೇತೃತ್ವ ವಹಿಸಿಕೊಂಡ ವರ್ಷ. ಖಿಲಾಫತ್ ಚಳುವಳಿ, ಚಂಪಾರಣ್ ಸತ್ಯಾಗ್ರಹಗಳ ಮೂಲಕ ಹೋರಾಟದ ಹೊಸ ಮಾದರಿಯ ಆವಿಷ್ಕಾರ ಮಾಡಿ ಜನಮನ್ನಣೆ ಗಳಿಸಿದ್ದ ಗಾಂಧೀಜಿ, ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ಮೂಲಕ ಇಡೀ ದೇಶವನ್ನು ಕಂಗೆಡಿಸಿದ್ದ ಬ್ರಿಟಿಷ್ ಸರ್ಕಾರದ ವಿರುದ್ಧ ಪೂರ್ಣ ಪ್ರಮಾಣದ

ಕಾರ್ಯಾಚರಣೆ ರೂಪದಲ್ಲಿ ಅಸಹಕಾರ ಚಳುವಳಿಗೆ ಕರೆಕೊಟ್ಟ ವರ್ಷವದು. ವಿದೇಶೀ ವಸ್ತುಗಳ ಬಹಿಷ್ಕಾರ, ಬ್ರಿಟಿಷ್ ಸರ್ಕಾರದ ಬಿರುದು ಬಾವಲಿಗಳ ವಾಪಸಾತಿ, ಸವಿನಯ ಕಾನೂನುಭಂಗ, ರಾಷ್ಟ್ರೀಯ ಶಿಕ್ಷಣ ಶಾಲೆಗಳ ಆರಂಭ ಮುಂತಾದ ಕಾರ್ಯಕ್ರಮಗಳ ಮೂಲಕ ದೇಶ ಅಲ್ಲೋಲ ಕಲ್ಲೋಲವಾಯಿತು. ಇದರಿಂದಾಗಿ ಬಾಲಕ ರಾಮಮನೋಹರನ ಮನಸ್ಸೂ ತಳಮಳಿಸಿತು. ಶಾಲೆಯನ್ನು ತ್ಯಜಿಸಿದ. ಈ ಬಾಲಕ ತನ್ನದೇ ಬಾಲಕರ ಪಡೆ ಕಟ್ಟಿಕೊಂಡು ಬೀದಿಗಿಳಿದ. ಟ್ರ್ಯಾಂ-ಗಾಡಿ ವಿದೇಶಿ ಎಂದು ಅದರ ವಿದ್ಯುತ್ ಸಂಪರ್ಕ ಕಡಿದು ಹಾಕಿ, ಬ್ರಿಟಿಷ್ ಸರ್ಕಾರದ ವಿರುದ್ಧ ತನ್ನ ಅಸಹಕಾರದ ಸಾಂಕೇತಿಕ ಪ್ರದರ್ಶನ ಮಾಡಿ ತೋರಿಸಿದ. ಈ ಮಧ್ಯೆ ಕಾನೂನುಭಂಗ ಚಳುವಳಿಯಲ್ಲಿ ಭಾಗವಹಿಸಿ, ಹೀರಾಲಾಲರೂ ಸೆರಮನೆ ಸೇರಿದ್ದರು.

ನಂತರದ ದಿನಗಳಲ್ಲಿ ಅಶಾಂತವಾಗಿದ್ದ ಮುಂಬೈ ಬಿಟ್ಟು ಹೀರಾಲಾಲರು ಮಗನೊಂದಿಗೆ ಅನಿವಾರ್ಯವಾಗಿ ಅಕ್ಬರಪುರಕ್ಕೆ ವಾಪಸಾಗಬೇಕಾಯಿತು. ಅದಕ್ಕೆ ಮುನ್ನ ಮುಂಬೈನಲ್ಲೇ ಲೋಹಿಯಾಗೆ ಗಾಂಧೀಜಿಯ ಮೊದಲ ದರ್ಶನವಾಯಿತು. ಗಾಂಧೀಜಿ ಯನ್ನು ಭೇಟಿಮಾಡಲು ಹೊರಟಿದ್ದ ತಂದೆಯ ಜೊತೆಗೆ ಹೋದ ಬಾಲಕ ಲೋಹಿಯಾ, ಗಾಂಧೀಜಿಯ ಪಾದಮುಟ್ಟಿ ನಮಸ್ಕರಿಸಿ ಆಶೀರ್ವಾದ ಪಡೆದ. ಆಗ ಆರಂಭವಾದ ಈ ಸಂಬಂಧ, ಗಾಂಧೀಜಿಯವರ ಕೊನೆಯ ದಿನಗಳವರೆಗೂ ವಿವಿಧ ನೆಲೆಗಳಲ್ಲಿ ಬೆಳೆಯುತ್ತಾ ಅರಳುತ್ತಾ ಹೋಗಿ, ಭಾರತೀಯ ಸಮಾಜವಾದಿ ಚಳುವಳಿಗೆ ಹೊಸ ಬೆಡಗೊಂದು ಪ್ರಾಪ್ತವಾಗಲು ಕಾರಣವಾಯಿತು. ಇದೇ ಕಾಲಕ್ಕೆ ಲೋಹಿಯಾ ಜೊತೆ ಅಷ್ಟೇನೂ ಮಧುರವಾಗಿ ಕೊನೆಗೊಳ್ಳದ ಮತ್ತೊಂದು ಸಂಬಂಧವೂ ಆರಂಭವಾಯಿತು. ಫೈಜಾಬಾದ್ ರೈತ ಚಳುವಳಿಯ ಸಂಬಂಧ ಬಂದಿದ್ದ ಜವಾಹರಲಾಲ್ ನೆಹ್ರೂ, ಹೀರಾಲಾಲರ ಪರಿಚಯದ ಮೇಲೆ ಅಕ್ಬರಪುರದ ಲೋಹಿಯಾ ಮನೆಯಲ್ಲೇ ತಂಗಿಹೋದರು.

ಕಾಲೇಜು ಶಿಕ್ಷಣ-ದೊಡ್ಡ ಗುರಿ

೧೯೨೨ರ ಹೊತ್ತಿಗೆ ಹಿಂಸಾತ್ಮಕ ಚೌರಿ ಚೌರ ಪ್ರಕರಣದಿಂದಾಗಿ ಗಾಂಧೀಜಿ ಅಸಹಕಾರ ಚಳುವಳಿಯನ್ನು ಹಿಂತೆಗೆದುಕೊಂಡರು. ಅವರು ಈ ಸಂದರ್ಭದಲ್ಲಿ ಖಾದಿ ಪ್ರಚಾರ, ಹರಿಜನ ಸೇವೆ ಮುಂತಾದ ರಚನಾತ್ಮಕ ಕಾರ್ಯಕ್ರಮಗಳಿಗೆ ಕರೆಕೊಟ್ಟಾಗ ಹೀರಾಲಾಲರು ತಮ್ಮ ಮಗನೊಂದಿಗೆ ಮತ್ತೆ ಮುಂಬೈಗೆ ಬಂದರು. ಲೋಹಿಯಾ ಮತ್ತೆ ಶಾಲೆ ಸೇರಿದರು. ೧೯೨೪ರಲ್ಲಿ ಮೆಟ್ರಿಕ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದರು. ಈ ಮಧ್ಯೆ ಅವರು ಗಯಾದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಪ್ರತಿನಿಧಿಯಾಗಿ ಹೋಗಿ ಬಂದಿದ್ದರು. ನಂತರ ಕಾಲೇಜು ಶಿಕ್ಷಣಕ್ಕಾಗಿ ಲೋಹಿಯಾ

ಸೇರಿದ್ದು, ಅಸಹಕಾರ ಚಳುವಳಿಯ ಅಂಗವಾಗಿ ದೇಶೀಮೌಲ್ಯಗಳನ್ನಾಧರಿಸಿದ ಶಿಕ್ಷಣಕ್ಕೆಂದೇ ಮದನಮೋಹನ ಮಾಲವೀಯರು ಬನಾರಸ್‌ನಲ್ಲಿ ಆರಂಭಿಸಿದ್ದ ಕಾಶಿ ವಿಶ್ವವಿದ್ಯಾಲಯವನ್ನು. ಹೆಚ್ಚು ಓದುಗುಳಿಯಾಗಿರದ ಲೋಹಿಯಾ ತಮ್ಮ ಪಠ್ಯಕ್ರಮವನ್ನು ಚಿಕಿತ್ಸಕ ದೃಷ್ಟಿಯಿಂದ ನೋಡುವ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರು. ಹಾಗೆಯೇ ದಿಟ್ಟ ವಿದ್ಯಾರ್ಥಿಯೂ ಆಗಿದ್ದರು. ಇತಿಹಾಸಶಾಸ್ತ್ರದ ಶ್ರದ್ಧಾವಂತ ವಿದ್ಯಾರ್ಥಿಯಾಗಿದ್ದ ಅವರು ತನ್ನ ಸಹ ವಿದ್ಯಾರ್ಥಿಗಳನ್ನುದ್ದೇಶಿಸಿ, ಬ್ರಿಟಿಷ್ ಇತಿಹಾಸಕಾರರು ಬರೆದಿದ್ದ ಭಾರತದ ಇತಿಹಾಸವನ್ನು ಮೆಳ್ಳೆಗಣ್ಣಿನ ಇತಿಹಾಸ ಎಂದು ನಿರೂಪಿಸುವ ಭಾಷಣಗಳನ್ನು ಮಾಡುತ್ತಿದ್ದರು. ಆಗಲೇ ಶಿಕ್ಷಣವನ್ನು ಉದ್ಯೋಗದ ಗುರಿಯಿಂದ ಬೇರ್ಪಡಿಸಿದ್ದ ಲೋಹಿಯಾ, ಪರೀಕ್ಷೆಗಳಿಗೆ ಅಗತ್ಯಕ್ಕಿಂತ ಹೆಚ್ಚು ಪ್ರಾಮುಖ್ಯತೆ ನೀಡಿದವರಲ್ಲ. ಇಂಟರ್ ಪರೀಕ್ಷೆಯ ಕೆಲವೇ ದಿನಗಳ ಮುನ್ನ ಅವರು ಆಪ್ತ ಗೆಳೆಯರೊಂದಿಗೆ ಪಕ್ಕದ ಬೌದ್ಧ ಯಾತ್ರಾಸ್ಥಳ ಸಾರನಾಥಕ್ಕೆ ಪ್ರವಾಸ ಹೊರಟರು. ಇದರಿಂದ ಆಶ್ಚರ್ಯಗೊಂಡು ಪ್ರಶ್ನಿಸಿದವರಿಗೆ ಅವರು ಕೊಟ್ಟ ಉತ್ತರ: "ಹಗಲು ರಾತ್ರಿ ಓದುತ್ತಿರುವವರಿಗೆ ಅತಿ ದೊಡ್ಡ ಪರೀಕ್ಷೆ ಪಾಸುಮಾಡಿ ದೊಡ್ಡ ಸರ್ಕಾರಿ ನೌಕರರಾಗುವ ಗುರಿ. ಆದರೆ ನಮಗೆ ಜಗತ್ತಿನ ದೊಡ್ಡ ಮನುಷ್ಯರಾಗುವ ಗುರಿ!" ಹದಿಹರೆಯದ ಆರಂಭದಲ್ಲೇ ಇಷ್ಟು ಆತ್ಮವಿಶ್ವಾಸ ಹಾಗೂ ದೊಡ್ಡ ಕನಸು ಹೊತ್ತಿದ್ದ ಲೋಹಿಯಾ ಸಹಜವಾಗಿಯೇ ೧೯೨೬ರ ಗೌಹಾತಿ ಕಾಂಗ್ರೆಸ್ ಅಧಿವೇಶನದಲ್ಲಿ ತಂದೆಯೊಂದಿಗೆ ಪ್ರತಿನಿಧಿಯಾಗಿ ಭಾಗವಹಿಸಿದ್ದಷ್ಟೇ ಅಲ್ಲ, ಗೊತ್ತುವಳಿಯೊಂದರ ಬಗ್ಗೆ ಮಾತನಾಡಲು ಹೆಸರು ನೊಂದಾಯಿಸಿಕೊಂಡಿದ್ದರು. ಆದರೆ ಸಣ್ಣ ವಯಸ್ಸಿನ ಕಾರಣ ಅದು ಸಾಧ್ಯವಾಗಲಿಲ್ಲ.

ಕಂಪಿಸುತ್ತಿದ್ದ ಕಲ್ಕತ್ತಾ – ಅರಳಿದ ಲೋಹಿಯಾ ಯೌವ್ವನ

೧೯೨೭ರಲ್ಲಿ ಇಂಟರ್‌ನಲ್ಲಿ ತೇರ್ಗಡೆಯಾದ ಲೋಹಿಯಾ, ಪದವಿ ಶಿಕ್ಷಣಕ್ಕಾಗಿ ತಮ್ಮ ತಂದೆ ಸಣ್ಣ ವ್ಯಾಪಾರ ಆರಂಭಿಸಿದ್ದ ಕಲ್ಕತ್ತಾಕ್ಕೆ ಹೋಗಬೇಕಾಯಿತು. ಅಲ್ಲಿ ಮತ್ತೆ ರಾಷ್ಟ್ರೀಯತೆಯ ಕೇಂದ್ರವೆನಿಸಿದ್ದ, ಆದರೆ ತುಂಬ ಸಾಮಾನ್ಯ ವಿದ್ಯಾರ್ಥಿಗಳ ದೊಡ್ಡಿ ಎನಿಸಿದ್ದ ಈಶ್ವರಚಂದ್ರ ವಿದ್ಯಾಸಾಗರ ಕಾಲೇಜ್ ಸೇರಿದರು. ಕಲ್ಕತ್ತಾ ಲೋಹಿಯಾರ ಯೌವ್ವನವನ್ನು ರೂಪಿಸಿದ ಮತ್ತು ಮುಂದೆ ಅವರು ದೀರ್ಘಕಾಲದ ಒಡನಾಟ ಇರಿಸಿಕೊಂಡ ನಗರ. ಆಗ ಆ ಕಾಳಿನಗರ ಅನೇಕ ಧಾರ್ಮಿಕ-ಸಾಮಾಜಿಕ-ರಾಜಕೀಯ ಸುಧಾರಣಾ ಚಳುವಳಿಗಳಿಂದ ಕಂಪಿಸುತ್ತಿತ್ತು. ರಾಮಕೃಷ್ಣ ಪರಮಹಂಸ - ವಿವೇಕಾನಂದರ ಧಾರ್ಮಿಕ ಚಳುವಳಿ, ರಾಜಾರಾಮ ಮೋಹನರಾಯ್ ಈಶ್ವರಚಂದ್ರ ವಿದ್ಯಾಸಾಗರರ ಸಾಮಾಜಿಕ ಚಳುವಳಿ ಹಾಗೂ ಬಂಕಿಮಚಂದ್ರ-ರವೀಂದ್ರನಾಥ ಠಾಕೂರರ ಸಾಂಸ್ಕೃತಿಕ ಚಳುವಳಿಯ ಪ್ರತಿಸ್ಪಂದನಗಳು ಇಡೀ ನಗರವನ್ನು ಆವರಿಸಿದ್ದವು. ಇದರ ಜೊತೆಗೆ

ಭಾರತಕ್ಕೆ ಸ್ವಯಮಾಧಿಕಾರ ನೀಡುವ ಸಂಬಂಧ ಅಧ್ಯಯನಕ್ಕಾಗಿ ಬರುತ್ತಿದ್ದ ಸೈಮನ್ ಆಯೋಗಕ್ಕೆ ಪ್ರತಿಕ್ರಿಯಿಸಬೇಕಾದ ರೀತಿ ನೀತಿಗಳ ಬಗ್ಗೆ ನಡೆದಿದ್ದ ರಾಷ್ಟ್ರೀಯ ಚರ್ಚೆ ಸೇರಿ, ನಗರದ ವಾತಾವರಣಕ್ಕೆ ಹೊಸ ರಂಗು ಬಂದಿತ್ತು. ಅದೇ ತಾನೇ ಯೌವ್ವನಕ್ಕೆ ಕಾಲಿಡುತ್ತಿದ್ದ ಲೋಹಿಯಾಗೆ ಇದೊಂದು ರೋಮಂಚನಕಾರಿ ಅನುಭವವಾಗಿತ್ತು.

ತಂದೆ ಹೀರಾಲಾಲ್, ಮಗ ಸ್ವತಂತ್ರವಾಗಿ ಬೆಳೆಯಲೆಂಬ ಸದುದ್ದೇಶದಿಂದ ಲೋಹಿಯಾರನ್ನು ವಿದ್ಯಾರ್ಥಿ ನಿಲಯಕ್ಕೆ ಸೇರಿಸಿ, ತಿಂಗಳಿಗೆ ೫೦ ರೂಪಾಯಿಗಳನ್ನು ಖರ್ಚಿಗೆಂದು ನೀಡುತ್ತಿದ್ದರು. ಒಳ್ಳೆಯ ನಾಟಕ-ಸಿನಿಮಾ ನೋಡುವ, ಪುಸ್ತಕ ಕೊಳ್ಳುವ, ಗೆಳೆಯರೊಂದಿಗೆ ತಿಂಡಿ ತಿನ್ನುತ್ತಾ ಪ್ರಚಲಿತ ವಿಷಯಗಳ ಬಗ್ಗೆ ಗಂಭೀರ ಚರ್ಚೆ ನಡೆಸುವ ಹವ್ಯಾಸ ಬೆಳೆಸಿಕೊಂಡಿದ್ದ ಲೋಹಿಯಾ, ವಿದ್ಯಾರ್ಥಿ ಸಂಘಟನೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡರು. ವಿದ್ಯಾರ್ಥಿ ಸಮೂಹದಲ್ಲಿ ಖಾದಿ ತೊಡುವುದೇ ಒಂದು ಧೈರ್ಯ-ಸಾಹಸದ, ಬಂಡಾಯ ಪ್ರವೃತ್ತಿಯ ಸಂಕೇತವಾಗಿದ್ದ ಆ ದಿನಗಳಲ್ಲಿ ತಾವು ಖಾದಿತೊಟ್ಟು, ಆ ಬಗ್ಗೆ ತಮ್ಮ ಗೆಳೆಯರಿಗೂ ಸ್ಫೂರ್ತಿ ನೀಡುತ್ತಿದ್ದರು. ಅಲ್ಲದೆ, ಲೋಹಿಯಾ, ತಾವು ಓದಿದ ಒಳ್ಳೆಯ ಇಂಗ್ಲಿಷ್ ಪುಸ್ತಕಗಳನ್ನು ಕುರಿತು, ಪ್ರಚಲಿತ ಧಾರ್ಮಿಕ-ಸಾಮಾಜಿಕ-ರಾಜಕೀಯ ವಿದ್ಯಮಾನಗಳನ್ನು ಕುರಿತು, ಪ್ರಮುಖವಾಗಿ ಬಂಗಾಳಿ ಭಾಷಿಕರೇ ಇದ್ದ ವಿದ್ಯಾರ್ಥಿ ಗುಂಪುಗಳನ್ನುದ್ದೇಶಿಸಿ ಇಂಗ್ಲಿಷ್‌ನಲ್ಲಿ ವಿಚಾರ ಪ್ರಚೋದಕ ಭಾಷಣ ಮಾಡುತ್ತಿದ್ದರು. ಜೊತೆಗೆ ಸೈಮನ್ ಆಯೋಗದ ವಿರುದ್ಧ ದೇಶಾದ್ಯಂತ ಆರಂಭವಾದ ಬಹಿಷ್ಕಾರ ಕಾರ್ಯಕ್ರಮಗಳಿಗಾಗಿ, ವಿದ್ಯಾರ್ಥಿಗಳನ್ನು ಸಂಘಟಿಸಿದರು. ನಗರಾದ್ಯಂತ ಮೆರವಣಿಗೆಗಳನ್ನು ನಡೆಸಿ ಧಿಕ್ಕಾರ ಕೂಗಿದರು. ಹೀಗಾಗಿ ಬಂಗಾಳದ ವಿದ್ಯಾರ್ಥಿ ರಾಜಕಾರಣದಲ್ಲಿ ರಾಮಮನೋಹರ ಲೋಹಿಯಾ ಬಹು ಬೇಗನೇ ಹೆಸರು ಮಾಡಿದರು. 'ಅಖಿಲ ವಂಗ ವಿದ್ಯಾರ್ಥಿ ಸಂಘ'ದ ಸಮ್ಮೇಳನವೊಂದರಲ್ಲಿ ಸುಭಾಷ್ ಚಂದ್ರಬೋಸರ ಗೈರುಹಾಜರಿಯಲ್ಲಿ ಲೋಹಿಯಾ ಪ್ರಧಾನ ಭಾಷಣ ಮಾಡಿ ತಮ್ಮ ಪ್ರಖರ ಬೌದ್ಧಿಕತೆ, ರಾಜಕೀಯ ಒಳನೋಟಗಳ ಮೂಲಕ ಕಲ್ಕತ್ತೆ ನಗರದ ಯುವ ಜನತೆಯ ಮನ ಗೆದ್ದರು. ನಂತರದ ದಿನಗಳಲ್ಲಿ ಅವರು ಅಖಿಲ ವಂಗ ವಿದ್ಯಾರ್ಥಿ ಸಂಘಟನೆಯ ಸಕ್ರಿಯ ಸದಸ್ಯರೂ ಆದರು.

ಕಲ್ಕತ್ತಾ ಕಾಂಗ್ರೆಸ್ ಅಧಿವೇಶನ - ನೆಹರೂ, ಸುಭಾಷ್ ಪರಿಚಯ

೧೯೨೮ರ ಕಲ್ಕತ್ತಾ ಕಾಂಗ್ರೆಸ್ ಅಧಿವೇಶನ ಲೋಹಿಯಾ ಅವರ ರಾಜಕೀಯ ಜೀವನಕ್ಕೆ ನಿಜವಾದ ನಾಂದಿ ಹಾಡಿದ ಘಟನೆ. ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಮೋತಿಲಾಲ್ ನೆಹರೂ, ಸೈಮನ್ ಆಯೋಗ ರಚನೆಗೆ ಪ್ರತಿಕ್ರಿಯೆಯಾಗಿ, ಕಾಂಗ್ರೆಸ್ ಪರವಾಗಿ ತಾವು ವಿವಿಧ ರಾಜಕೀಯ ಗುಂಪು - ಪಕ್ಷಗಳೊಡನೆ ಸಮಾಲೋಚನೆ ನಡೆಸಿದ್ದರು. ಅದರ

ಆಧಾರದ ಮೇಲೆ, ಭಾರತಕ್ಕೆ ನೀಡಬೇಕಾದ ಸ್ವಯಮಾಧಿಕಾರದ ಸ್ವರೂಪವನ್ನು ನಿರ್ಣಯಿಸುವ ರಾಜ್ಯಾಂಗದ ಕರಡೊಂದನ್ನು ಒಳಗೊಂಡ ತಮ್ಮ ವರದಿಯನ್ನು ಈ ಅಧಿವೇಶನದಲ್ಲಿ ಮಂಡಿಸಿದರು. ಬ್ರಿಟಿಷ್ ಚಕ್ರಾಧಿಪತ್ಯದ ವ್ಯಾಪ್ತಿಯಲ್ಲಿ ಸಂಪೂರ್ಣ ಜವಾಬ್ದಾರಿ ಸರ್ಕಾರ ರಚಿಸಲು (ಡೊಮಿನಿಯನ್ ಸ್ಥಾನಮಾನ) ಅನುವು ಮಾಡಿಕೊಡುವ ಫೆಡರಲ್ ಮಾದರಿಯ ರಾಜ್ಯಾಂಗವನ್ನು ಈ ವರದಿ ಶಿಫಾರ್ಸು ಮಾಡಿತ್ತು. ಇದನ್ನು ಅಧಿವೇಶನ ಹಲವು ತಿದ್ದುಪಡಿಗಳೊಂದಿಗೆ ಒಪ್ಪಿಕೊಂಡು, ಅದನ್ನು ಜಾರಿ ಮಾಡಿಸಲು ಗಾಂಧೀಜಿಗೆ ಒಂದು ವರ್ಷದ ಗಡುವು ನೀಡಿತು. ಲೋಹಿಯಾ ಈ ಮುನ್ನ ಎರಡು - ಮೂರು ಕಾಂಗ್ರೆಸ್ ಅಧಿವೇಶನಗಳಿಗೆ ಹೋಗಿದ್ದರಾದರೂ, ವಯಸ್ಸಿನ ಕಾರಣದಿಂದಾಗಿ ಸಕ್ರಿಯವಾಗಿ ಭಾಗವಹಿಸಲಾಗಿರಲಿಲ್ಲ ಹಾಗೂ ಕ್ಷಿಪ್ರವಾಗಿ ಬದಲಾಗುತ್ತಿದ್ದ ಆ ಕಾಲದ ಭಾರತೀಯ ರಾಜಕಾರಣದ ಚಿತ್ರ ಅವರ ಪೂರ್ಣ ಗ್ರಹಿಕೆಗೆ ಸಿಕ್ಕಿರಲಿಲ್ಲ. ಆದರೆ ಈ ಅಧಿವೇಶನದ ಹೊತ್ತಿಗೆ ಹದಿನೆಂಟರ ಲೋಹಿಯಾ ಪ್ರಬುದ್ಧರಾಗಿದ್ದರು. ಅಪಾರ ಓದು, ಚರ್ಚೆ, ಸಂಘಟನೆ ಹಾಗೂ ತಂದೆಯ ಸ್ಫೂರ್ತಿ ಇವುಗಳಿಂದಾಗಿ ಅಧಿವೇಶನದ ನಡಾವಳಿಯ ಹಿನ್ನೆಲೆ-ಮುನ್ನೆಲೆಗಳನ್ನು ಗ್ರಹಿಸಬಲ್ಲವರಾಗಿದ್ದರು. ಹೀಗಾಗಿ ಈ ಅಧಿವೇಶನದ ಸಂಘಟನೆಯಲ್ಲಿ ಲೋಹಿಯಾ ಸಕ್ರಿಯ ಕಾರ್ಯಕರ್ತರಾಗಿ ಪಾಲ್ಗೊಂಡು, ಗಾಂಧೀಜಿ ಮೊದಲಾಗಿ ಕಾಂಗ್ರೆಸ್ಸಿನ ಎಲ್ಲ ಹಿರಿಯ ನಾಯಕರನ್ನೂ ಹತ್ತಿರದಿಂದ ಕಂಡು ಕೇಳಿ, ಅವರ ವ್ಯಕ್ತಿತ್ವ ವಿಚಾರಗಳ ಅಂದಾಜು ಮಾಡಲು ಸಾಧ್ಯವಾಯಿತು.

ಈ ಅಧಿವೇಶನದ ಚಪ್ಪರದ ಕೆಳಗೇ ಹಲವು ವರ್ಷಗಳ ಹಿಂದೆ ಅಕ್ಬರಪುರದ ತಮ್ಮ ಮನೆಯಲ್ಲಿ ನೋಡಿದ್ದ ಜವಾಹರಲಾಲರೊಂದಿಗೆ ಗೆಳೆತನವೂ ಶುರುವಾದದ್ದು. ಕಾಂಗ್ರೆಸ್ ಸಂಘಟನೆಯೊಳಕ್ಕೆ ಪ್ರತಿಭಾವಂತ ಯುವಜನರನ್ನು ಸೆಳೆದು ಆಂದೋಳನಕ್ಕೆ ಹೊಸ ಹುರುಪು ತರಲು ಪ್ರಯತ್ನಿಸುತ್ತಿದ್ದ, ತನ್ನ ಆಸ್ತಿಪಾಸ್ತಿಗಳನ್ನೆಲ್ಲಾ ಸ್ವರಾಜ್ಯ ಸಾಧನೆಗಾಗಿ ಕಾಂಗ್ರೆಸ್‌ಗೆ ಧಾರೆಯೆರೆದಿದ್ದ ಮನೆತನಕ್ಕೆ ಸೇರಿದ್ದ ಹಾಗೂ ಕ್ರಾಂತಿಭೂಮಿಯಾಗಿ ಅರಳುತ್ತಿದ್ದ ರಷ್ಯಾ ಸೇರಿದಂತೆ ಯುರೋಪ್‌ನ ಹಲವಾರು ದೇಶಗಳಿಗೆ ಆಗ ತಾನೇ ಭೇಟಿ ನೀಡಿ ಬಂದಿದ್ದ ಕೇಂಬ್ರಿಡ್ಜ್ ಪದವೀಧರ ಜವಾಹರಲಾಲ್ ನೆಹರೂ, ಕಾಂಗ್ರೆಸ್ ಆಂದೋಲನದ ನವತಾರೆಯಾಗಿದ್ದರು. ಸಹಜವಾಗಿಯೇ ಯುವಕ ಲೋಹಿಯಾ, ದೇಶದ ಯುವಜನತೆಯ ಆಕರ್ಷಣೆಯ ಕೇಂದ್ರವಾಗಿದ್ದ ಜವಾಹರರೆಡೆಗೆ ಆಕರ್ಷಿತರಾದರು. ಅವರೊಂದಿಗೆ ಅನೌಪಚಾರಿಕವಾಗಿ ಮಾತನಾಡುತ್ತಾ, ತಮ್ಮ ಗೆಳೆಯರೆಲ್ಲರನ್ನು ನೆಹರೂಗೆ ಪರಿಚಯಿಸಿದರು. ನಂತರದ ಕೆಲವೇ ತಿಂಗಳುಗಳಲ್ಲಿ ನಡೆದ ಯುವ ಸಮ್ಮೇಳನವೊಂದರ ಅಧ್ಯಕ್ಷತೆ ವಹಿಸಲು ಕಲ್ಕತ್ತಾಕ್ಕೆ ಬಂದ ಜವಾಹರರೊಂದಿಗೆ ಲೋಹಿಯಾರ ಒಡನಾಟ ಇನ್ನಷ್ಟು ಬೆಳೆಯಿತು. ನೆಹರೂ ಕೂಡಾ ಲೋಹಿಯಾರ

ಪ್ರಚಂಡ ಬುದ್ಧಿಮತ್ತೆ, ರಾಷ್ಟ್ರಪ್ರೇಮ ಹಾಗೂ ಆಕರ್ಷಕ ಭಾಷಣ ಪ್ರತಿಭೆಯನ್ನು ಮೆಚ್ಚಿ ತಮ್ಮ ಆಪ್ತ ಬಳಗಕ್ಕೆ ಸೇರಿಸಿಕೊಂಡರು. ಆದರೆ ಏಕೋ, ಇದೇ ಸಮ್ಮೇಳನದ ಸಂಘಟನಾ ಸಮಿತಿಯಲ್ಲಿ ಲೋಹಿಯಾರ ಜೊತೆ ಕೆಲಸಮಾಡಿದ ಸುಭಾಷ್‌ಚಂದ್ರ ಬೋಸ್‌ರ ವ್ಯಕ್ತಿತ್ವ ಲೋಹಿಯಾರನ್ನು ಪ್ರಭಾವಿತಗೊಳಿಸಲಿಲ್ಲ. ಸುಭಾಷರ ವ್ಯಕ್ತಿತ್ವದಲ್ಲೇ ಅಂತರ್ಗತವಾಗಿದ್ದ ಸೈನಿಕ ಶಿಸ್ತು, ಆಗ ಅಲೆಮಾರಿ ಬುದ್ಧಿಜೀವಿಯಾಗಿ ಅರಳುತ್ತಿದ್ದ ಲೋಹಿಯಾರ ಉದಾರವಾದಿ ವೈಚಾರಿಕತೆಯ ಚೌಕಟ್ಟಿಗೆ ಹೊಂದಲಿಲ್ಲವೇನೋ!

ಉನ್ನತ ವಿದ್ಯಾಭ್ಯಾಸದ ಇಚ್ಛೆ-ಒಲ್ಲದ ಮನಸ್ಸಿನಿಂದ ಲಂಡನ್‌ಗೆ

ಹೀಗೆ ಅನೇಕ ಪಠ್ಯೇತರ ಚಟುವಟಿಕೆಗಳಲ್ಲಿ ಮಗ್ನರಾಗಿ ಔಪಚಾರಿಕ ಓದಿನ ಕಡೆ ಅಷ್ಟೇನೂ ಗಮನ ಕೊಡದ ರಾಮಮನೋಹರ ೧೯೨೯ರಲ್ಲಿ ರಾಜಕೀಯಶಾಸ್ತ್ರ, ಇತಿಹಾಸ ಹಾಗೂ ಅರ್ಥಶಾಸ್ತ್ರ ವಿಷಯಗಳಲ್ಲಿ ಎರಡನೇ ದರ್ಜೆಯ ಆನರ್ಸ್ ಪದವಿ ಪಡೆದು ಕಾಲೇಜಿನಿಂದ ಹೊರಬಂದರು. ತಂದೆ ಹೀರಾಲಾಲ್‌ಗೆ ಮಗ ವಿದ್ಯಾಭ್ಯಾಸ ಮುಂದುವರಿಸಬೇಕೆಂಬ ಆಸೆ. ಜವಾಹರರಿಂದ ಆಕರ್ಷಿತರಾಗಿದ್ದ ಲೋಹಿಯಾಗೆ ವಿದೇಶದಲ್ಲಿ ಉನ್ನತ ವಿದ್ಯಾಭ್ಯಾಸ ಮಾಡಬೇಕೆಂಬ ಇಚ್ಛೆ. ಅದೂ, ಆಗ ರಾಜಕೀಯ ತತ್ವಜ್ಞಾನದ ವಿಷಯದಲ್ಲಿ ಅತಿಶ್ರೇಷ್ಠ ಅಧ್ಯಯನ ಕೇಂದ್ರವೆನಿಸಿದ್ದ ಜರ್ಮನಿಯ ಬರ್ಲಿನ್ ವಿಶ್ವವಿದ್ಯಾಲಯಕ್ಕೆ ಹೋಗಬೇಕೆಂಬ ಹಂಬಲ. ಆದರೆ ಅದರ ಖರ್ಚು-ವೆಚ್ಚ? ತಮ್ಮ ಮತ್ತು ಮಗನ ಜೀವನೋಪಾಯಕ್ಕಾಗಷ್ಟೇ ಸಣ್ಣ ವ್ಯಾಪಾರವೊಂದನ್ನು ನಡೆಸುತ್ತಿದ್ದ ಹೀರಾಲಾಲರಿಗೆ ವಿದೇಶ ವಿದ್ಯಾಭ್ಯಾಸದ ಖರ್ಚನ್ನು ಭರಿಸುವ ಶಕ್ತಿ ಇರಲಿಲ್ಲ. ಈ ಮಧ್ಯೆ ಅಗರವಾಲ್ ಸಮುದಾಯ ನಿಧಿ, ತಮ್ಮ ಸಮುದಾಯದ ಪ್ರತಿಭಾವಂತ ಯುವಕನನ್ನು ಲಂಡನ್‌ಗೆ ಕಳಿಸಲು ಮುಂದೆ ಬಂದಿತು. ಹೀಗಾಗಿ ೧೯ ವರ್ಷದ ರಾಮಮನೋಹರ ಲೋಹಿಯಾ ೧೯೨೯ರ ಜುಲೈನಲ್ಲಿ ಉನ್ನತ ವಿದ್ಯಾಭ್ಯಾಸಕ್ಕೆಂದು ಲಂಡನ್‌ಗೆ ಹೊರಟರು. ಆ ವರ್ಷವೇ, ಮುಂದಿನ ವರ್ಷಗಳಲ್ಲಿ ಲೋಹಿಯಾರ ಸಮಾಜವಾದಿ ಒಡನಾಡಿಯಾದ ಜಯಪ್ರಕಾಶ್ ನಾರಾಯಣರು ಉನ್ನತ ವಿದ್ಯಾಭ್ಯಾಸ ಮುಗಿಸಿ ಅಮೆರಿಕಾದಿಂದ ಹಿಂದಿರುಗಿದರು.

ವಿದ್ಯಾರ್ಥಿ ಜೀವನದುದ್ದಕ್ಕೂ ಬ್ರಿಟಿಷ್ ಸರ್ಕಾರವನ್ನು ವಿರೋಧಿಸಿಕೊಂಡು ಬಂದಿದ್ದ ಲೋಹಿಯಾ, ಒಲ್ಲದ ಮನಸ್ಸಿನಿಂದಲೇ ಲಂಡನ್‌ಗೆ ಬಂದಿಳಿದರು. ಆದರೆ ಒಂದೆರಡು ತಿಂಗಳುಗಳ ಅವಧಿಯಲ್ಲೇ ಅಲ್ಲಿ ಜೀವನ ಅಸಹನೀಯವೆನಿಸಿತು. ಭಾರತೀಯರನ್ನು ವಸಾಹತು ಪ್ರಜೆಗಳೆಂದು ಕೀಳಾಗಿ ಕಾಣುತ್ತಿದ್ದ; ಭಾರತದ ಬಗ್ಗೆ ಗೌರವವನ್ನೇ ಹೊಂದಿರದ ಅಲ್ಲಿನ ಪ್ರತಿಷ್ಠಿತ ವರ್ಗದ ನಡಾವಳಿ ಲೋಹಿಯಾರನ್ನು ಸಹಜವಾಗಿಯೇ ಕೆಣಕಿತು. ಆದಷ್ಟು ಬೇಗ ಆ ದೇಶ ಬಿಟ್ಟು ಹೊರಡಲು ಅವರು

ನಿರ್ಧರಿಸಿದರು. ಇದಕ್ಕೆ ಪೂರಕವಾಗಿ ಲಂಡನ್ ವಿಶ್ವವಿದ್ಯಾಲಯದ ಗ್ರಂಥಪಾಲಕರೊಬ್ಬರು ಲೋಹಿಯಾರ ಅಧ್ಯಯನ ಶ್ರದ್ಧೆಯನ್ನು ಗಮನಿಸಿ ಅವರಿಗೆ, ಬರ್ಲಿನ್ ಮಾತ್ರ ಸದ್ಯಕ್ಕೆ ರಾಜಕೀಯ ಅರ್ಥಶಾಸ್ತ್ರದ ಶ್ರೇಷ್ಠ ಅಧ್ಯಯನ ಕೇಂದ್ರವಾಗಿದ್ದು, ಅಲ್ಲಿಗೆ ಹೋಗಲು ಸೂಚಿಸಿದರು. ಹೆಚ್ಚು ದಿನ ತಡ ಮಾಡದೆ ಲೋಹಿಯಾ ಬರ್ಲಿನ್‌ಗೆ ಹೊರಟರು.

ಬರ್ಲಿನ್‌ನಲ್ಲಿ ಲೋಹಿಯಾ - ಧರ್ಸಾನಾದಲ್ಲಿ ಉಪ್ಪಿನ ಸತ್ಯಾಗ್ರಹ

ಬರ್ಲಿನ್‌ನಲ್ಲಿ ಲೋಹಿಯಾ ಆ ಕಾಲಕ್ಕೆ ವಿಶ್ವದ ಶ್ರೇಷ್ಠ ಅರ್ಥಶಾಸ್ತ್ರಜ್ಞರಲ್ಲೊಬ್ಬರೆನಿಸಿದ್ದ ಪ್ರೊ|| ವರ್ನರ್ ಜೆಂಬಾರ್ಟ್ ಅವರನ್ನು ತಮ್ಮ ಅಧ್ಯಾಪಕರನ್ನಾಗಿ ಆರಿಸಿಕೊಂಡು, ಅವರ ಮಾರ್ಗದರ್ಶನದಲ್ಲಿ ಅಧ್ಯಯನ ಆರಂಭಿಸಿದರು. ಅಲ್ಲಿ ಇಂಗ್ಲಿಷ್ ಬಳಕೆಯಲ್ಲೇ ಇಲ್ಲದ ಭಾಷೆಯಾಗಿದ್ದುದರಿಂದ, ಮೊದಲಿಗೆ ಲೋಹಿಯಾ ಜರ್ಮನ್ ಭಾಷೆ ಕಲಿತು ಅದನ್ನು ಅಧ್ಯಯನದ ಮಾಧ್ಯಮ ಭಾಷೆಯಾಗಿ ಬಳಸುವಷ್ಟು ಪರಿಶ್ರಮ ಸಾಧಿಸಬೇಕಾಯಿತು. ಕೆಲವೇ ತಿಂಗಳುಗಳಲ್ಲಿ ಈ ಪರಿಶ್ರಮ ಸಾಧಿಸಿದ ಲೋಹಿಯಾ, ತಮ್ಮ ಅಧ್ಯಯನಕ್ಕಾಗಿ 'ಉಪ್ಪು ಮತ್ತು ಸತ್ಯಾಗ್ರಹ' ಎಂಬ ರಾಜಕೀಯ ಅರ್ಥಶಾಸ್ತ್ರದ ವಿಷಯವನ್ನು ಆರಿಸಿಕೊಂಡರು. ಇದಕ್ಕೆ ಸ್ಫೂರ್ತಿ, ಲೋಹಿಯಾರ ಯುವ ಮನಸ್ಸಿನಲ್ಲಿ ಸುಪ್ತವಾಗಿ ಅರಳುತ್ತಿದ್ದ ಗಾಂಧಿ ವಿಚಾರಧಾರೆ ಬಗೆಗಿನ ಕುತೂಹಲ. ಗಾಂಧೀಜಿ ಪ್ರತಿಪಾದಿಸಿದ್ದ ಸತ್ಯಾಗ್ರಹದ ಪರಿಕಲ್ಪನೆಯಲ್ಲಿ ಧರ್ಮ, ರಾಜಕೀಯ ಮತ್ತು ಅರ್ಥಶಾಸ್ತ್ರ ಮುಪ್ಪುರಿಗೊಂಡಿತ್ತು. ಅದು ಆಗ ೧೯೩೦ರಲ್ಲಿ ಭಾರತದಲ್ಲಿ ದೊಡ್ಡ ಆಂದೋಲನವಾಗಿ ಹಬ್ಬಿದ್ದ ಉಪ್ಪಿನಸತ್ಯಾಗ್ರಹದ ಮೂಲಕ ಅನಾವರಣಗೊಂಡು, ಸ್ವಾತಂತ್ರ್ಯ ಹೋರಾಟದ ತಾತ್ವಿಕ ಸಮಗ್ರತೆಯನ್ನು ವಿಷದೀಕರಿಸುವಂತಿತ್ತು. ಸ್ವತಃ ಲೋಹಿಯಾ ಅವರ ತಂದೆ ಹೀರಾಲಾಲರು ಧರ್ಸಾನಾ ಎಂಬಲ್ಲಿ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿ ಪೋಲೀಸ್ ದೌರ್ಜನ್ಯಕ್ಕೆ ಒಳಗಾಗಿದ್ದರು. ಅದರ ಆಧಾರದ ಮೇಲೆ ಉಪ್ಪಿನ ಸತ್ಯಾಗ್ರಹದ ಪರಿಣಾಮಗಳ ಬಗ್ಗೆ ಮಗನಿಗೆ ಒಂದು ವಿಸ್ತಾರವಾದ ಪತ್ರ ಬರೆದಿದ್ದರು. ಹೀಗಾಗಿ ಲೋಹಿಯಾ ಉಪ್ಪಿನ ಸತ್ಯಾಗ್ರಹವನ್ನು ನೆಪವಾಗಿಟ್ಟುಕೊಂಡು, ಗಾಂಧೀಜಿ ನೇತೃತ್ವದಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟದ ಮೂಲಕ ವ್ಯಕ್ತವಾಗುತ್ತಿದ್ದ ಹೊಸ ರಾಜಕೀಯ ದಾರ್ಶನಿಕತೆಯನ್ನು ಗುರುತಿಸಿ, ವಿಶ್ಲೇಷಿಸುವ ಪ್ರೇರಣೆಗೆ ಒಳಗಾದರು.

ಸಮಾಜವಾದಿ ಚಳುವಳಿಯಲ್ಲಿ ಗೊಂದಲ - ಹಿಟ್ಲರ್‌ಗೆ ಜನ ಬೆಂಬಲ

ಇದಕ್ಕೆ ಜರ್ಮನಿಯಲ್ಲಿ ಆಗ ರೂಪುಗೊಳ್ಳುತ್ತಿದ್ದ ಸಂಕೀರ್ಣ ರಾಜಕೀಯ ವಾತಾವರಣವೂ ಕಾರಣವಾಗಿತ್ತು. ರಷ್ಯಾದ ಅಕ್ಟೋಬರ್ ಕ್ರಾಂತಿಯನ್ನು ಮಾರ್ಕ್ಸ್‌ವಾದದ ವಿಜಯವೆಂದೇ ನಂಬಿದ ಮಾರ್ಕ್ಸ್‌ವಾದೀ ಸಮಾಜವಾದಿಗಳು, ಎಲ್ಲ ದೇಶಗಳ

ಸಮಾಜವಾದಿಗಳೂ ರಷ್ಯಾದ ಕ್ರಾಂತಿ ಮಾದರಿಯನ್ನೇ ಅನುಸರಿಸಬೇಕೆಂದು ಸಮಾಜವಾದಿ ಅಂತಾರಾಷ್ಟ್ರೀಯ ವೇದಿಕೆಗಳ ಮೇಲೆ ಒತ್ತಡ ಹೇರತೊಡಗಿದಾಗ ಸಮಾಜವಾದಿ ಚಳುವಳಿ ಗೊಂದಲಕ್ಕೀಡಾಯಿತು. ವಿವಿಧ ದೇಶಗಳಲ್ಲಿ ಅಸ್ತಿತ್ವದಲ್ಲಿದ್ದ ಸಮಾಜವಾದಿ ಪಕ್ಷಗಳು ಹೊಸದಾಗಿ ಉದಯವಾಗತೊಡಗಿದ್ದ ರಾಷ್ಟ್ರೀಯತಾ ಭಾವನೆಗಳಿಂದ ಪ್ರೇರಿತವಾಗಿ, ತಂತಮ್ಮ ದೇಶಗಳಲ್ಲಿನ ಸಾಮಾಜಿಕ - ಆರ್ಥಿಕ ಪರಿಸ್ಥಿತಿಗಳಿಗನುಗುಣವಾಗಿ ತಂತಮ್ಮ ರಾಜಕೀಯ ಮಾರ್ಗೋಪಾಯಗಳನ್ನು ಅನ್ವೇಷಿಸಿಕೊಳ್ಳತೊಡಗಿದವು. ಆದರೆ ಇದಕ್ಕೆ ಪ್ರತಿಕ್ರಿಯೆಯಾಗಿ, ರಷ್ಯಾದ ಮಾದರಿಯ ಕ್ಷಿಪ್ರಕ್ರಾಂತಿಯ ಮೂಲಕ ರಾಜ್ಯಾಧಿಕಾರವನ್ನು ಪಡೆದು ಕಾರ್ಮಿಕ ಸರ್ವಾಧಿಕಾರದ ಮೂಲಕ ಸಮಾಜವಾದಿ ಕಾರ್ಯಕ್ರಮವನ್ನು ಜಾರಿಗೆ ತರಬೇಕೆಂದು ವಾದಿಸುವ ಕಮ್ಯೂನಿಸ್ಟ್ ಪಕ್ಷಗಳೂ ಈ ದೇಶಗಳಲ್ಲಿ ಹುಟ್ಟಿಕೊಂಡವು. ಇದರ ಪರಿಣಾಮವಾಗಿ ಸಮಾಜವಾದಿ ಪಕ್ಷಗಳು ಇಬ್ಭಾಗವಾಗತೊಡಗಿದವು. ಒಂದು ಮಾದರಿಯ ಸಮಾಜವಾದ ಮತ್ತೊಂದು ಮಾದರಿಯ ಸಮಾಜವಾದದ ವಿರುದ್ಧ ಕೆಲಸ ಮಾಡತೊಡಗಿತ್ತು. ಇದರಿಂದಾಗಿ, ಈ ಮುನ್ನ ಸಮಾಜವಾದಿ ಚಳುವಳಿಯಿಂದಾಗಿ ಮಂಕಾಗಿ ಹಿಂದೆ ಸರಿದಿದ್ದ ಬಂಡವಾಳವಾದಿ ಬಲಪಂಥೀಯ ರಾಜಕೀಯ ಚಿಂತನೆಯ ಪಕ್ಷಗಳು ಮತ್ತೆ ಮೇಲುಗೈ ಸಾಧಿಸತೊಡಗಿದ್ದವು.

ಜರ್ಮನಿಯಲ್ಲಿ, ಆ ವೇಳೆಗೆ-ಮುವ್ವತ್ತರ ದಶಕದ ಆರಂಭದ ಹೊತ್ತಿಗೆ-ಜಗತ್ತಿನಾದ್ಯಂತ ಕಂಡುಬಂದ ಆರ್ಥಿಕ ಹಿಂಜರಿತದ ಪರಿಣಾಮವಾಗಿ ಜನತೆ ತತ್ತರಿಸ ತೊಡಗಿತ್ತು. ಇದನ್ನು ಬಳಸಿಕೊಂಡ ಹಿಟ್ಲರ್ ೧೫ ಅಂಶಗಳ ಆರ್ಥಿಕ ಪುನರುತ್ಥಾನದ ಕಾರ್ಯಕ್ರಮ ಮುಂದಿಟ್ಟುಕೊಂಡು, ತನ್ನದೇ ರಾಷ್ಟ್ರೀಯ ಸಮಾಜವಾದಿ ಪಕ್ಷ ಸ್ಥಾಪಿಸಿಕೊಂಡು ಜನರನ್ನು ಸೆಳೆಯತೊಡಗಿದ್ದ. ಜನಾಂಗ ಶ್ರೇಷ್ಠತೆಯನ್ನು ಪ್ರತಿಪಾದಿಸಿ ಜನರನ್ನು ಹುರಿದುಂಬಿಸುತಿದ್ದ ಹಿಟ್ಲರ್, ಸಮಾಜವಾದಿ ಪರಿಕಲ್ಪನೆಯನ್ನೇ ವಿಕ್ಷಿಪ್ತಗೊಳಿಸಿ ಸಮಾಜವಾದಿ ಚಳುವಳಿಯನ್ನು ಮತ್ತಷ್ಟು ಗೊಂದಲಕ್ಕೆ ತಳ್ಳಿದ್ದ. ಕಮ್ಯೂನಿಸ್ಟರು ಸಮಾಜವಾದಿಗಳನ್ನು ಮಟ್ಟ ಹಾಕಲು ಇವನನ್ನು ಬೆಂಬಲಿಸ ತೊಡಗಿದಾಗ, ಸಮಾಜವಾದಿಗಳು ಪ್ರಜಾಪ್ರಭುತ್ವವಾದಿ ಮುಂದಗಾಮಿಗಳೊಂದಿಗೆ ಮೈತ್ರಿಮಾಡಿಕೊಳ್ಳಬೇಕಾಯಿತು. ಈ ಎಲ್ಲ ಗೊಂದಲದ ಪರಿಣಾಮವೆಂದರೆ, ರಾಷ್ಟ್ರೀಯ ಸಮಾಜವಾದದ ಮುಖವಾಡ ಹೊತ್ತಿದ್ದ ನಾಜಿ ಪಕ್ಷ ಸರ್ವಾಧಿಕಾರವನ್ನೇ ಒಂದು ಆದರ್ಶ ರಾಜ್ಯಪದ್ಧತಿಯಾಗಿ ಪ್ರತಿಪಾದಿಸತೊಡಗಿ, ಜನಬೆಂಬಲ ಗಳಿಸಲಾರಂಭಿಸಿದ್ದು.

ಐರೋಪ್ಯ ರಾಜಕಾರಣದ ವಿಶ್ಲೇಷಣೆ - ಕಮ್ಯೂನಿಸ್ಟರೊಂದಿಗೆ ಸಂಘರ್ಷ

ರಾಜಕೀಯ ತತ್ವಜ್ಞಾನದಲ್ಲಿ ಮೊದಲಿನಿಂದಲೂ ಆಳವಾದ ಆಸಕ್ತಿ ಬೆಳೆಸಿಕೊಂಡಿದ್ದ ಲೋಹಿಯಾಗೆ ಈ ಎಲ್ಲ ಬೆಳವಣಿಗೆಯನ್ನು ವಿಶ್ಲೇಷಿಸಿ, ಆ ವಿಶ್ಲೇಷಣೆಯ ನಡುವೆ

ಗಾಂಧೀಜಿಯನ್ನಿಟ್ಟು ನೋಡುವ ತವಕ ಉಂಟಾಗಿರಬೇಕು. ಇದರ ಭಾಗವಾಗಿ ಅವರು ಮೂಲ ಜರ್ಮನ್ ಭಾಷೆಯಲ್ಲೇ ಇದ್ದ ಕಾರ್ಲ್ ಮಾರ್ಕ್ಸ್ ಹಾಗೂ ಹೆಗೆಲ್‌ರ ಸಾಹಿತ್ಯವನ್ನು ಆಮೂಲಾಗ್ರವಾಗಿ ಓದಿಕೊಂಡರು. ಐರೋಪ್ಯ ದೇಶಗಳಲ್ಲಿ ರೂಪುಗೊಳ್ಳುತಿದ್ದ ಜನತಾಂತ್ರಿಕ ಸಮಾಜವಾದಿ ವಿಚಾರಧಾರೆಗಳ ಹಾಗೂ ಪ್ರಯೋಗಗಳ ಅಧ್ಯಯನ ಮಾಡಿದರು. ಇವುಗಳ ಮಧ್ಯೆ ಹಿಟ್ಲರನ ಉನ್ನತಿಯ ಕಾರಣಗಳನ್ನು ಗುರುತಿಸಲು ಪ್ರಯತ್ನಿಸಿದರು. ಇದಕ್ಕಾಗಿ ಆಗಿನ ಜರ್ಮನಿಯ ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯ ಆಸಕ್ತಿ ವಹಿಸಿದರು; ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸಿದರು. ಇದರ ಪರಿಣಾಮವೋ ಎಂಬಂತೆ ತಾವು ಅಧ್ಯಕ್ಷರಾಗಿದ್ದ ಭಾರತೀಯ ವಿದ್ಯಾರ್ಥಿಗಳು ರೂಪಿಸಿಕೊಂಡಿದ್ದ ಮಧ್ಯ ಯೂರೋಪ್‌ನ ಭಾರತೀಯ ಸಂಘದಲ್ಲಿ, ಕಮ್ಯೂನಿಸ್ಟ್ ಕಾರ್ಯಕರ್ತರು ಗಾಂಧಿ-ಇರ್ವಿನ್ ಒಪ್ಪಂದವನ್ನು ಖಂಡಿಸಿ ಗೊತ್ತುವಳಿ ಮಂಡಿಸಿದಾಗ, ಲೋಹಿಯಾ ಆ ಗೊತ್ತುವಳಿ ಸೋಲುವಷ್ಟು ಪ್ರಭಾವಶಾಲಿಯಾದ ರಾಜಕೀಯ ವಿಶ್ಲೇಷಣೆ ಮಾಡಿ, ಎಲ್ಲರನ್ನು ದಂಗುಬಡಿಸಿದರು.

ಲೀಗ್ ಆಫ್ ನೇಷನ್ಸ್‌ನಲ್ಲಿ ಸಿಳ್ಳು-ಭಾರತದಲ್ಲಿ ಕುತೂಹಲ

ಜರ್ಮನಿಯಲ್ಲಿದ್ದಾಗಲೇ ಲೋಹಿಯಾ ಭಾರತದಲ್ಲಿ ಸುದ್ದಿ ಮಾಡಿದ ಪ್ರಸಂಗ ಬಹಳ ಸ್ವಾರಸ್ಯಕರವಾಗಿದೆ. ಮೊದಲ ಮಹಾಯುದ್ಧದ ಪರಿಣಾಮವಾಗಿ ಜಗತ್ತಿನ ದೇಶಗಳ ನಡುವಣ ಪರಸ್ಪರ ಸೌಹಾರ್ದ ವರ್ಧನೆ ಹಾಗೂ ಘರ್ಷಣೆಗಳ ನಿವಾರಣೆಗಾಗಿ ರಚಿತವಾಗಿದ್ದ ಲೀಗ್ ಆಫ್ ನೇಷನ್ಸ್‌ನ ಅಧಿವೇಶನವೊಂದು ೧೯೩೦ರಲ್ಲಿ ಜೀನಿವಾದಲ್ಲಿ ನಡೆದಿತ್ತು. ಆ ಅಧಿವೇಶನದಲ್ಲಿ ಭಾರತದ ಪ್ರತಿನಿಧಿಯನ್ನಾಗಿ ಬಿಕಾನೇರ್‌ನ ಮಹಾರಾಜನನ್ನು ಬ್ರಿಟಿಷ್ ಸರ್ಕಾರ ಕಳಿಸಿತ್ತು. ಆತ ಭಗತ್‌ಸಿಂಗ್ - ಸುಖದೇವರ ನೇಣು ಹಾಗೂ ಉಪ್ಪಿನ ಸತ್ಯಾಗ್ರಹ, ಅರಣ್ಯ ಸತ್ಯಾಗ್ರಹ, ಕರನಿರಾಕರಣೆ ಮುಂತಾದ ಪ್ರತಿಭಟನೆಗಳ ಮೂಲಕ ಸದಾ ಉದ್ವಿಗ್ನಗೊಂಡು ಅಶಾಂತವಾಗಿದ್ದ ಭಾರತವನ್ನು, ಬ್ರಿಟಿಷ್ ಪ್ರಭುತ್ವದಡಿಯ ಕಲ್ಯಾಣ ರಾಜ್ಯವನ್ನಾಗಿ ಬಿಂಬಿಸುವ ಉದ್ದೇಶಗಳನ್ನು ಹೊಂದಿದ್ದ. ಇದನ್ನು ಪತ್ರಿಕೆಗಳ ಮೂಲಕ ಅರಿತ ಲೋಹಿಯಾ, ಜಿನೀವಾಗೆ ತೆರಳಿ ಅಲ್ಲಿದ್ದ ಭಾರತೀಯ ಗೆಳೆಯನೊಬ್ಬನ ಮೂಲಕ ಅಧಿವೇಶನ ನಡೆಯುತ್ತಿದ್ದ ಸಭಾಗೃಹದ ಪ್ರೇಕ್ಷಕರ ಗ್ಯಾಲರಿಗೆ ಪಾಸ್ ಗಿಟ್ಟಿಸಿಕೊಂಡರು. ಬಿಕನೇರ್ ಮಹಾರಾಜ ತನ್ನ ಸರದಿ ಬಂದಾಗ ಎದ್ದು ನಿಂತು ಬ್ರಿಟಿಷ್ ಸರ್ಕಾರದ ಗುಣಗಾನ ಮಾಡತೊಡಗಿದಾಗ, ಲೋಹಿಯಾ ಪ್ರೇಕ್ಷಕರ ಗ್ಯಾಲರಿಯಿಂದ ಇಡೀ ಸಭಾಗೃಹ ಬೆಚ್ಚಿ ಬೀಳುವಂತೆ ಪ್ರತಿಭಟನೆಯ ರೂಪದಲ್ಲಿ ಸಿಳ್ಳು ಹೊಡೆದರು. ಸಭೆಯಲ್ಲಿ ಕೋಲಾಹಲವಾಯಿತು. ಭಾರತದ ಪ್ರತಿನಿಧಿಯಾಗಿ ಬಂದಿದ್ದ ಬಿಕಾನೇರ್ ಮಹಾರಾಜನ ಭಾಷಣ ವಿಡಂಬನೆಗೆ ಒಳಗಾಯಿತು. ಇದರಿಂದಾಗಿ ಸಭಾಗೃಹದಿಂದ

ಹೊರಹಾಕಲ್ಪಟ್ಟ ಲೋಹಿಯಾ, ಬಿಕಾನೇರ್ ಮಹಾರಾಜನ ಪ್ರತಿನಿಧಿತ್ವವನ್ನು, ಆತನ ಭಾಷಣದ ಟೊಳ್ಳುತನವನ್ನು ಖಂಡಿಸಿ ಸ್ಥಳೀಯ ಪತ್ರಿಕೆಯೊಂದಕ್ಕೆ ಪತ್ರ ಬರೆದರು. ಭಾರತದಲ್ಲಿನ ಜನಸಾಮಾನ್ಯರ ಕಡುಬಡತನದ ಪರಿಸ್ಥಿತಿ ಮತ್ತು ಬ್ರಿಟಿಷ್ ಸರ್ಕಾರದ ದಮನಕಾರೀ ನೀತಿಗಳನ್ನು ವಿವರಿಸಿದ್ದ ಆ ಪತ್ರವನ್ನು ಪ್ರಕಟಿಸಿದ್ದ ಪತ್ರಿಕೆಯ ಪ್ರತಿಗಳನ್ನು ಅವರು ಮಾರನೆಯ ದಿವಸ ಸಭಾಭವನದ ಹೊರಬಾಗಿಲಲ್ಲಿ ನಿಂತು ಎಲ್ಲ ಪ್ರತಿನಿಧಿಗಳಿಗೆ ಹಂಚಿದರು. ಇದು ಭಾರತದಲ್ಲಿನ ವೃತ್ತಪತ್ರಿಕೆಗಳಲ್ಲಿ ದೊಡ್ಡ ಸುದ್ದಿಯಾಗಿ, ಭಾರತದ ಜನತೆ 'ಯಾರು ಈ ಲೋಹಿಯಾ?' ಎಂದು ಕುತೂಹಲದಿಂದ ಕಾದು ನೋಡುವಂತಾಯಿತು.

ಡಾಕ್ಟರೇಟ್ ಪದವಿ ಪ್ರದಾನ - ಸ್ವದೇಶಕ್ಕೆ ಪ್ರಯಾಣ

ಈ ಮಧ್ಯೆ ಜರ್ಮನಿಯಲ್ಲಿ ಹಿಟ್ಲರ್ ಅಧಿಕಾರಕ್ಕೆ ಬರುವುದು ಖಚಿತವಾಗತೊಡಗಿತ್ತು. ರಾಜಕೀಯವಾಗಿ ಪರಿಸ್ಥಿತಿ ಕಾವೇರ ತೊಡಗಿತ್ತು. ಲೋಹಿಯಾ ಅವರ ಅಧ್ಯಯನ ಕೊನೆಯ ಹಂತಕ್ಕೆ ಬಂದು, ೧೯೩೨ರ ಕೊನೆಯ ಹೊತ್ತಿಗೆ 'ಉಪ್ಪು ಮತ್ತು ಸತ್ಯಾಗ್ರಹ' ಎಂಬ ಸಂಶೋಧನ ಪ್ರಬಂಧ ಸಿದ್ಧವಾಗಿತ್ತು. ಇದಕ್ಕಾಗಿ ಅವರು 'ಸಣ್ಣದು ಸುಂದರ' ಪುಸ್ತಕದ ಮೂಲಕ ಮುಂದೆ ಪ್ರಸಿದ್ಧರಾದ ಷುಮೇಕರ್ ಸೇರಿದಂತೆ ಅನೇಕ ಸಮಾಜವಾದಿ ಅರ್ಥಶಾಸ್ತ್ರಜ್ಞರ ಸಲಹೆ-ಸಹಾಯ ಪಡೆದಿದ್ದರು. ಲೋಹಿಯಾರ ಮಾರ್ಗದರ್ಶಕ ಪ್ರಾಧ್ಯಾಪಕ ಜೆಂಬಾರ್ಟ್ ಅವರು ಸ್ವತಃ ಸಮಾಜವಾದಿ ವಿಚಾರಧಾರೆಯವರೇ ಆಗಿದ್ದರು. ನಾಜಿವಾದವನ್ನು ವಿರೋಧಿಸುತಿದ್ದ ಈ ಸಮಾಜವಾದಿ ಗುಂಪಿಗೆ ಮುಂದಿನ ದಿನಗಳು ಕಷ್ಟದ ದಿನಗಳು ಎಂದು ಬಗೆದ ಷುಮೇಕರ್, ಲೋಹಿಯಾರ ಮೌಖಿಕ ಪರೀಕ್ಷೆಯನ್ನು ಬೇಗ ಮುಗಿಸಿ ಅವರನ್ನು ಭಾರತಕ್ಕೆ ಕಳಿಸಿಕೊಡುವ ಏರ್ಪಾಡು ಮಾಡುವಂತೆ ಪ್ರೊ|| ಜೆಂಬಾರ್ಟ್‌ಗೆ ಸೂಚಿಸಿದರು. ಅದರಂತೆ ಪ್ರೊ|| ಜೆಂಬಾರ್ಟ್ ಎಲ್ಲ ಔಪಚಾರಿಕತೆಗಳನ್ನು ನಿಗದಿತ ದಿನಕ್ಕಿಂತ ಬಹುಮುಂಚೆಯೇ ಮುಗಿಸಿ ಲೋಹಿಯಾರನ್ನು ಜರ್ಮನಿಯಿಂದ ಬೀಳ್ಕೊಟ್ಟರು. ೧೯೩೩ರ ಆರಂಭದಲ್ಲಿಯೇ ಲೋಹಿಯಾ, ಡಾಕ್ಟರೇಟ್ ಪದವಿ ಪಡೆದು ಕೊಲೊಂಬೋ ಮೂಲಕ ಹಡಗಿನಲ್ಲಿ ಸ್ವದೇಶಕ್ಕೆ ಮರಳಿದರು.

ಅವರು ಮದ್ರಾಸ್ (ಈಗಿನ ಚೆನ್ನೈ)ನಲ್ಲಿ ಹಡಗಿನಿಂದ ಇಳಿದಾಗ ಅವರ ಬಳಿ ಏನೂ ಇರಲಿಲ್ಲ. ಪುಸ್ತಕ ಮತ್ತು ಇತರೆಲ್ಲ ವಸ್ತುಗಳನ್ನೂ, ಹಡುಗು ಏರುವಾಗಲೇ ಜರ್ಮನ್ ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡಿತ್ತು. ಹಾಗಾಗಿ ಅಲ್ಲಿಂದ ಕಲ್ಕತ್ತಾಕ್ಕೆ ಹೋಗಲು ಪ್ರಯಾಣದ ಖರ್ಚನ್ನು ಅವರು ಹೊಂದಿಸಿಕೊಳ್ಳಬೇಕಿತ್ತು. ಅವರು

ನೇರವಾಗಿ 'ದಿ ಹಿಂದೂ' ಪತ್ರಿಕೆಯ ಕಛೇರಿಗೆ ಹೋಗಿ ತಾನು ಜರ್ಮನಿಯಿಂದ ಬಂದಿದ್ದು, ಇತ್ತೀಚಿನ ಅಂತಾರಾಷ್ಟ್ರೀಯ ಬೆಳವಣಿಗೆಯ ಬಗ್ಗೆ ಲೇಖನ ಬರೆದು ಕೊಡುವುದಾಗಿ ಅಲ್ಲಿನ ಸಂಪಾದಕ ವರ್ಗಕ್ಕೆ ತಿಳಿಸಿದರು. ಸಂಪಾದಕ ವರ್ಗ ತಕ್ಷಣ ಒಪ್ಪಿಗೆ ನೀಡಿತು. ಒಂದೆರಡು ತಾಸುಗಳಲ್ಲಿಯೇ ಲೋಹಿಯಾ, ಆ ದಿನಗಳಲ್ಲಿ ಜರ್ಮನಿಯ ಚುನಾವಣೆಗಳಲ್ಲಿ ವಿಜಯ ಸಾಧಿಸಿದ್ದ ಹಿಟ್ಲರನ ರಾಜಕಾರಣವು ವಿಶ್ವ ರಾಜಕಾರಣದ ಮೇಲೆ ಏನು ಪರಿಣಾಮಗಳನ್ನುಂಟು ಮಾಡೀತು ಎಂಬುದರ ಬಗ್ಗೆ 'ಹಿಟ್ಲರ್‌ವಾದದ ಭವಿಷ್ಯ' ಎಂಬ ಲೇಖನ ಬರೆದು ಕೊಟ್ಟರು. ಪ್ರತಿಯಾಗಿ ೨೦ ರೂಪಾಯಿಗಳ ಗೌರವಧನ ಪಡೆದು, ಪತ್ರಿಕೆಯ ಮೂಲಕವೇ ಪರಿಚಯವಾದ ಸ್ನೇಹಿತರೊಬ್ಬರ ಮನೆಯಲ್ಲಿ ಊಟ ಮಾಡಿ ನಿರುಮ್ಮಳವಾಗಿ ಕಲ್ಕತ್ತಾ ರೈಲು ಹತ್ತಿದರು.

ಗಾಂಧೀಜಿ ಕುರಿತ ನಿರಾಶೆ - ಎಡಪಂಥೀಯ ಚಿಂತನೆಗೆ ಚಾಲನೆ

ಲೋಹಿಯಾ ಭಾರತಕ್ಕೆ ಹಿಂದಿರುಗಿದ ಸಮಯವೆಂದರೆ ಗಾಂಧೀಜಿ ನೇತೃತ್ವದ ಸ್ವಾತಂತ್ರ್ಯ ಹೋರಾಟ ಕವಲುದಾರಿ ಹಿಡಿದಿದ್ದ ಸಮಯ. ಉಪ್ಪಿನ ಸತ್ಯಾಗ್ರಹದ ಸ್ಫೂರ್ತಿಯೊಂದಿಗೆ ಭುಗಿಲೆದ್ದಿದ್ದ ವಿವಿಧ ರೂಪಗಳ ಸವಿನಯ ಕಾನೂನುಭಂಗ ಚಳುವಳಿಗಳನ್ನು ವೈಸ್‌ರಾಯ್ ಇರ್ವಿನ್‌ರೊಡನೆ ಮಾಡಿಕೊಂಡ ಒಪ್ಪಂದದನುಸಾರ ಗಾಂಧೀಜಿ ಹಿಂತೆಗೆದುಕೊಂಡಿದ್ದರು. ನಂತರ ಲಂಡನ್‌ನಲ್ಲಿ ನಡೆದ ಎರಡನೇ ದುಂಡು ಮೇಜಿನ ಪರಿಷತ್ತಿಗೆ ಹೋಗಿ ನಿರಾಶರಾಗಿ ವಾಪಸಾಗಿದ್ದರು. ಈ ಪರಿಷತ್ತಿನಲ್ಲಿ ಭಾರತಕ್ಕೆ ನೀಡಬೇಕಾದ ಸ್ವಾತಂತ್ರ್ಯ - ಸ್ವಯಮಾಧಿಕಾರಗಳ ವ್ಯಾಪ್ತಿ ಮತ್ತು ಸ್ವರೂಪದ ಬಗ್ಗೆ ನಡೆದ ಚರ್ಚೆಯಲ್ಲಿ ಮುಸ್ಲಿಮರ, ಅಸ್ಪೃಶ್ಯರ ಮತ್ತು ರಾಜಸಂಸ್ಥಾನಾಧೀಶರ ಪರವಾಗಿ ಒಡಕು ಧ್ವನಿಗಳು ಕೇಳಿ ಬಂದು, ಅವು ದೇಶಾದ್ಯಂತ ಅಶಾಂತವಾಗಿ ಪ್ರತಿಧ್ವನಿಸತೊಡಗಿದ್ದವು. ಅದೇ ವೇಳೆಗೆ ಜಗತ್ತಿನಾದ್ಯಂತ ಕಂಡು ಬಂದ ಆರ್ಥಿಕ ಹಿಂಜರಿತದ ಪರಿಣಾಮವಾಗಿ, ಭಾರತದ ರೈತ-ಕಾರ್ಮಿಕರು ಕಡು ದಾರಿದ್ರ್ಯಕ್ಕೀಡಾಗಿದ್ದರು. ಇವರನ್ನು, ಕೆಲವೇ ವರ್ಷಗಳ ಹಿಂದೆ ಸಂಭವಿಸಿದ್ದ ರಷ್ಯಾದ ಕ್ರಾಂತಿಯಿಂದ ಸ್ಫೂರ್ತಿಗೊಂಡ ವಾಮಪಂಥೀಯ ಗುಂಪೊಂದು ಮಾರ್ಕ್ಸ್‌ವಾದಿ ವಿಚಾರಧಾರೆಯ ಆಧಾರದ ಮೇಲೆ ಸಂಘಟಿಸುವ ಪ್ರಯತ್ನಗಳಲ್ಲಿ ತೊಡಗಿತ್ತು.

ಕಾಂಗ್ರೆಸ್‌ನೊಳಗೇ ಗಾಂಧೀಜಿಯ ವೈಯಕ್ತಿಕ ಸತ್ಯಾಗ್ರಹ, ಬಂಡವಾಳದಾರರನ್ನು ಓಲೈಸುವಂತೆ ತೋರುವ ಟ್ರಸ್ಟೀಶಿಪ್, ಖಾದಿ-ಗ್ರಾಮೋದ್ಯೋಗಗಳ ಮೂಲಕ ಆರ್ಥಿಕ ಪುನಾರಚನೆ ಮುಂತಾದ ಪರಿಕಲ್ಪನೆಗಳು ಹಾಗೂ ಪದೇಪದೇ ಒಪ್ಪಂದ ಮುರಿದು ದಮನಕಾರಿ ನೀತಿ ಅನುಸರಿಸುತ್ತಿದ್ದ ಬ್ರಿಟಿಷ್ ಸರ್ಕಾರದೊಡನೆ ನಿರ್ಣಾಯಕ

ಸಂಘರ್ಷಕ್ಕಿಳಿಯದೆ ಅದರೊಡನೆ ನಿರಂತರ ಸಂವಾದದಲ್ಲಿದ್ದಂತೆ ತೋರುತ್ತಿದ್ದ ರಾಜಕೀಯ ನೀತಿಯು, ಅವರ ಯುವ ಅನುಯಾಯಿಗಳಲ್ಲಿ ಅಸಮಾಧಾನದ ಅಲೆಗಳನ್ನೆಬ್ಬಿಸಿತ್ತು. ಇವರೆಲ್ಲ ಆಗ ತಾನೇ ಅಮೆರಿಕಾದಿಂದ ಕಮ್ಯೂನಿಸ್ಟ್ ವಿಚಾರಧಾರೆಯೊಂದಿಗೆ ಉನ್ನತ ವ್ಯಾಸಂಗ ಮುಗಿಸಿ ಬಂದಿದ್ದ ಯುವಕ ಜಯಪ್ರಕಾಶ ನಾರಾಯಣರ ನೇತೃತ್ವದಲ್ಲಿ, ಸ್ವಾತಂತ್ರ್ಯಹೋರಾಟದೊಂದಿಗೆ ಸಮಾನತೆಯ ಗುರಿ ಹೊಂದಿದ ಸಾಮಾಜಿಕ ಕ್ರಾಂತಿಯನ್ನೂ ಪ್ರಚೋದಿಸುವ ಸಾಧ್ಯತೆ-ಬಾಧ್ಯತೆಗಳ ಬಗ್ಗೆ ಸಂವಾದದಲ್ಲಿ ತೊಡಗಿದ್ದರು.

ಅಲೆಮಾರಿಯಾದ ಲೋಹಿಯಾ-ಗಾಂಧಿಸಂಪರ್ಕ

ಲೋಹಿಯಾ ಕಲ್ಕತ್ತಾ ತಲುಪಿದಾಗ ಸವಿನಯ ಕಾನೂನು ಭಂಗ ಚಳುವಳಿಯ ಎರಡನೇ ಹಂತದ ಪರಿಣಾಮವಾಗಿ, ಗಾಂಧೀಜಿ ಮತ್ತು ಅವರ ಯುವ ಅನುಯಾಯಿಗಳೂ ಸೇರಿದಂತೆ ಕಾಂಗ್ರೆಸ್‌ನ ನಾಯಕರೆಲ್ಲರೂ ಸೆರಮನೆಯಲ್ಲಿದ್ದರು. ಲೋಹಿಯಾ ತಾವು ಸರ್ಕಾರಿ ಹುದ್ದೆಗೆ ಸೇರದೆ ಸಾರ್ವಜನಿಕ ಜೀವನದಲ್ಲಿ ಸಕ್ರಿಯವಾಗಿರಲು ನಿಶ್ಚಯಮಾಡಿಕೊಂಡಿದ್ದರಾದರೂ, ಆಗ ಕಾಂಗ್ರೆಸ್ ರಾಜಕಾರಣ ಕೆಲಕಾಲ ಸ್ಥಗಿತಗೊಂಡಿದ್ದ ಕಾರಣದಿಂದಾಗಿ ಕನಿಷ್ಠ ಜೀವನೋಪಾಯಕ್ಕಾಗಿ ಪರದಾಡುವ ಸ್ಥಿತಿ ಉಂಟಾಯಿತು. ತಂದೆ ಹೀರಾಲಾಲ್ ಕಲ್ಕತ್ತಾದಲ್ಲಿ ಹಿಂದಿ ಪ್ರಚಾರ ಸಭಾದ ಚಟುವಟಿಕೆಗಳಲ್ಲಿ ತೊಡಗಿದ್ದರಾದರೂ, ಮಗನನ್ನು ಸಾಕುವ ಸ್ಥಿತಿಯಲ್ಲಿರಲಿಲ್ಲ; ಮಗ ಕೂಡಾ ತಂದೆಯ ಆಶ್ರಯದಲ್ಲಿರಲು ಒಪ್ಪುವ ಸ್ಥಿತಿಯಲ್ಲಿರಲಿಲ್ಲ. ಲೋಹಿಯಾ ಸ್ನೇಹಿತರೊಡನೆ ಅಡ್ಡಾಡುತ್ತಾ ಆಹ್ವಾನವಿದ್ದೆಡೆ ಅಂತಾರಾಷ್ಟ್ರೀಯ ರಾಜಕಾರಣದ ಬಗ್ಗೆ ವಿದ್ವತ್‌ಪೂರ್ಣ ಭಾಷಣಗಳನ್ನು ಮಾಡುತ್ತಾ ಸ್ನೇಹಿತರ ಕೋಣೆಗಳಲ್ಲಿ, ಮಾರವಾಡಿ ವಿದ್ಯಾರ್ಥಿ ನಿಲಯಗಳಲ್ಲಿ ಮಲಗುತ್ತಾ ದಿನ ಕಳೆಯುತ್ತಿದ್ದರು. ಮದನಮೋಹನ ಮಾಲವೀಯರ ಶಿಫಾರ್ಸಿನ ಮೇರೆಗೆ ಕೆಲಕಾಲ ಉದ್ಯಮಿ ಆರ್.ಡಿ. ಬಿರ್ಲಾರ ಆಪ್ತಕಾರ್ಯದರ್ಶಿಯಾಗಿ ಕೆಲಸ ಮಾಡಿ, ಅದರಲ್ಲಿ ಆಸಕ್ತಿ ಇಲ್ಲದೆ ಆ ಕೆಲಸಬಿಟ್ಟರು. ನಂತರ ತಂದೆಯ ಶಿಫಾರ್ಸಿನ ಮೇರೆಗೆ ಮತ್ತೋರ್ವ ಉದ್ಯಮಿ ಹಾಗೂ ಗಾಂಧಿವಾದಿ ಜಮನ್‌ಲಾಲ್ ಬಜಾಜ್‌ರ ಜೊತೆ ಇರಲಾರಂಭಿಸಿದರು. ಬಜಾಜ್ ತಮ್ಮನ್ನು ಅಳಿಯನನ್ನಾಗಿ ಮಾಡಿಕೊಳ್ಳುವ ಯೋಚನೆಯಲ್ಲಿದ್ದಾರೆ ಎಂದು ತಿಳಿದೊಡನೆ ಅಲ್ಲಿಂದ ಕೂಡಾ ಸ್ಥಳ ಖಾಲಿ ಮಾಡಿದರು. ಈ ಮಧ್ಯೆ ಗಾಂಧೀಜಿ ಸೆರೆಮನೆಯಿಂದ ಬಿಡುಗಡೆ ಹೊಂದಿದ್ದರು. ೧೯೩೩ರಲ್ಲಿ ಪೂನಾದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಸಂದರ್ಭದಲ್ಲಿ ಬಜಾಜರ ಮನೆಯಲ್ಲಿ ಲೋಹಿಯಾ ಗಾಂಧಿದರ್ಶನ ಪಡೆದು, ತಮ್ಮ ಪರಿಚಯ ಮಾಡಿಕೊಂಡರು. ಗಾಂಧೀಜಿ ಲೋಹಿಯಾಗೆ ತಮ್ಮ ಸಂಪರ್ಕದಲ್ಲಿರಲು ಸೂಚಿಸಿದರು.

ಸಮಾಜವಾದಿಗಳ ಮೊದಲಸಭೆ - ಪಕ್ಷ ಸ್ಥಾಪನೆಯ ನಿರ್ಧಾರ

೧೯೩೪ರ ಆರಂಭದ ಹೊತ್ತಿಗೆ ಸೆರೆಮನೆಯಲ್ಲಿದ್ದ ಬಹುತೇಕ ಎಲ್ಲ ಕಾಂಗ್ರೆಸ್ ನಾಯಕರು ಬಿಡುಗಡೆ ಹೊಂದಿದ್ದರು. ನಾಸಿಕ್ ಸೆರೆಮನೆಯಲ್ಲಿ ಒಟ್ಟಿಗಿದ್ದ ಜಯಪ್ರಕಾಶ ನಾರಾಯಣ, ಮಿನೂ ಮಸಾನಿ, ಅಶೋಕ ಮೆಹ್ತಾ, ಯೂಸುಫ್ ಮೆಹ್ರೋಲಿ, ಅಚ್ಯುತ ಪಟವರ್ಧನ್ ಮುಂತಾದ ತರುಣರು ಕಾಂಗ್ರೆಸ್ಸನ್ನು 'ಜಡತೆ'ಯಿಂದ ಹೊರತರಲು, ಅದರ ಸಾಂಪ್ರಾದಾಯಿಕ ರಾಜಕಾರಣಕ್ಕೆ ಚಿಕಿತ್ಸೆ ನೀಡಲು, ಸಾಮಾಜಿಕ ಕ್ರಾಂತಿ ಕಾರ್ಯಕ್ರಮ ಗಳನ್ನಾಧರಿಸಿದ ಎಡಪಂಥೀಯ ರಾಜಕಾರಣಕ್ಕೆ ಚಾಲನೆ ನೀಡಲು, ಕಾಂಗ್ರೆಸ್ಸಿನೊಳಗೇ ಸಮಾಜವಾದಿ ಗುಂಪೊಂದನ್ನು ರಚಿಸಿಕೊಳ್ಳಲು ನಿರ್ಧರಿಸಿದ್ದರು. ಇವರಿಗೆಲ್ಲ ಈ ಮುನ್ನ ತಮ್ಮ ಇತರ ಸ್ನೇಹಿತರಾದ ಕಮಲಾದೇವಿ ಚಟ್ಟೋಪಾಧ್ಯಾಯ, ಅರುಣಾ ಅಸಿಫ್ ಅಲಿ, ಪುರುಷೋತ್ತಮ ತ್ರಿಕಂದಾಸ್, ಎನ್.ಜಿ. ಗೋರೆ, ಎಸ್.ಎಂ. ಜೋಷಿ ಮುಂತಾದವ ರೊಂದಿಗೆ ರೈತ ಮತ್ತು ಕಾರ್ಮಿಕರ ಸಂಘಟನೆಯಲ್ಲಿ ತೊಡಗಿದ್ದ ಅನುಭವವಿತ್ತು. ಈ ಹಿನ್ನೆಲೆಯಲ್ಲಿ ೧೯೩೪ರಲ್ಲಿ ಪಾಟ್ನಾದಲ್ಲಿ ಏರ್ಪಾಟಾಗಿದ್ದ ಕಾಂಗ್ರೆಸ್‌ನ ಸಾಮಾನ್ಯ ಅಧಿವೇಶನದ ಸಮಯದಲ್ಲೇ ಸಮಾಜವಾದಿ ವಿಚಾರಧಾರೆಗೆ ಒಲಿದಿದ್ದ ಕಾಂಗ್ರೆಸ್ ಕಾರ್ಯಕರ್ತರ ಸಭೆಯೊಂದನ್ನು ನಡೆಸಲು ಈ ಗುಂಪು ನಿರ್ಧರಿಸಿತು. ಮೂಲತಃ ಬಿಹಾರದವರೇ ಆದ ಜಯಪ್ರಕಾಶ್ ನಾರಾಯಣ ಈ ಸಮಾವೇಶವನ್ನು ಆಯೋಜಿಸುವ ಜವಾಬ್ದಾರಿ ಹೊತ್ತರು. ಅವರು ಬನಾರಸ್‌ನ ಕಾಶಿ ವಿದ್ಯಾಲಯದಲ್ಲಿ ಪ್ರಾಧ್ಯಾಪಕ ರಾಗಿದ್ದುಕೊಂಡು ಸಮಾಜವಾದಿ ವಿಚಾರಧಾರೆಯ ಪ್ರಬಲ ಪ್ರತಿಪಾದಕರಾಗಿದ್ದ ಆಚಾರ್ಯ ನರೇಂದ್ರ ದೇವ ಹಾಗೂ ಡಾ।। ಸಂಪೂರ್ಣಾನಂದರನ್ನು ಸಂಪರ್ಕಿಸಿ, ಸಕಲ ಸಿದ್ಧತೆ ಗಳನ್ನು ಮಾಡಿದರು. ಆ ಹೊತ್ತಿಗಾಗಲೇ ಡಾ।। ಸಂಪೂರ್ಣಾನಂದರು 'ಭಾರತಕ್ಕೊಂದು ಸಮಾಜವಾದಿ ಕಾರ್ಯಕ್ರಮ' ಎಂಬ ಕಿರುಪುಸ್ತಕ ಪ್ರಕಟಿಸಿ, ಸಮಾಜವಾದಿಗಳ ಒಂದು ಪಕ್ಷದ ಸ್ಥಾಪನೆಯ ಅಗತ್ಯವನ್ನು ಪ್ರಸ್ತಾಪಿಸಿದ್ದರು. ೧೯೩೪ರ ಮೇ ೧೭ರಂದು ಪಾಟ್ನಾದ 'ಅಂಜುಮಾನ್-ಎ-ಇಸ್ಲಾಮಿಯಾ' ಸಭಾಂಗಣದಲ್ಲಿ ಡಾ।। ಪೂರ್ಣಾನಂದರ ಸಂಚಾಲಕತ್ವ ದಲ್ಲಿ ಭಾರತದ ಇತಿಹಾಸದಲ್ಲಿ ಮೊದಲ ಬಾರಿಗೆ ಸಮಾಜವಾದಿಗಳ ಸಭೆ ನಡೆಯಿತು. ಸಹಜವಾಗಿಯೇ ಡಾ।। ರಾಮಮನೋಹರ ಲೋಹಿಯಾ ಈ ಸಮ್ಮೇಳನಕ್ಕೆ ಆಹ್ವಾನಿತರಾಗಿ ಬಂದರು.

ಈ ಸಭೆ, ಕಾಂಗ್ರೆಸ್ ಅಡಿಯಲ್ಲಿಯೇ ಕಾಂಗ್ರೆಸ್ ಸಮಾಜವಾದಿ ಪಕ್ಷ (ಕಾಂಗ್ರೆಸ್ ಸೋಶಲಿಸ್ಟ್ ಪಾರ್ಟಿ) ಎಂಬ ಪಕ್ಷವನ್ನು ಸ್ಥಾಪಿಸಿಕೊಳ್ಳಲು ನಿರ್ಧರಿಸಿತು. ಚುನಾವಣೆಗಳ ಮೂಲಕ ರಾಜ್ಯಾಧಿಕಾರ ಹಿಡಿದು, ಕೇಂದ್ರೀಕೃತ ಯೋಜನಾಬದ್ಧ ಆರ್ಥಿಕ ಆಡಳಿತ ಹಾಗೂ ಸಾಮೂಹಿಕ ಕೃಷಿ ಪದ್ಧತಿಗಳ ಮೂಲಕ ರೈತ ಕಾರ್ಮಿಕರ ಸರ್ವಾಧಿಕಾರವಿರುವ ಸಮಾಜವಾದಿ ಸಮಾಜ ಸ್ಥಾಪಿಸುವ ತನ್ನ ಕರಡು ನೀತಿಯನ್ನೂ ಪ್ರಕಟಿಸಿತು.

ಲೋಹಿಯಾ, ಸಮಾಜವಾದಿ ಸಮಾಜ ಸ್ಥಾಪನೆಯ ಗುರಿಯೊಂದಿಗೆ ಸಂಪೂರ್ಣ ಸ್ವರಾಜ್ಯದ ಗುರಿಯನ್ನೂ ಪಕ್ಷದ ನೀತಿ ನಿರೂಪಣೆಯಲ್ಲಿ ಅಳವಡಿಸಿಕೊಳ್ಳಬೇಕೆಂಬ ತಿದ್ದುಪಡಿ ಸೂಚಿಸಿದರು. ಆದರೆ ಇದು ಕಾಂಗ್ರೆಸ್‌ನ ಆಗಿನ ನೀತಿಗೆ ವಿರುದ್ಧವಾಗಿದ್ದುದರಿಂದ ತಿದ್ದುಪಡಿಯನ್ನು ಕೈಬಿಡಲಾಯಿತು. ಆಚಾರ್ಯ ನರೇಂದ್ರ ದೇವ ಅವರನ್ನು ಹೊಸ ಪಕ್ಷದ ಅಧ್ಯಕ್ಷರನ್ನಾಗಿ ಆರಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ನರೇಂದ್ರ ದೇವ ಅವರು, ಮಧ್ಯಮ ವರ್ಗದ ಆಂದೋಲನವಾಗಿರುವ ರಾಷ್ಟ್ರೀಯ ಆಂದೋಲನವನ್ನು ವರ್ಗಪ್ರಜ್ಞೆಯ ಆಧಾರದ ಮೇಲೆ ಪುನರ್ರೂಪಿಸುವ ರೀತಿಯಲ್ಲಿ ಜನಸಂಘಟನೆ ಮಾಡಲು ಕರೆಕೊಟ್ಟರು. ಜಯಪ್ರಕಾಶ್ ನಾರಾಯಣ ಪ್ರಧಾನ ಕಾರ್ಯದರ್ಶಿಯಾದರು. ಲೋಹಿಯಾ ಪಕ್ಷದ ಸಂಘಟನಾ ಹಾಗೂ ನೀತಿ ನಿರೂಪಣಾ ಸಮಿತಿಯ ಸದಸ್ಯರಾದರು. ಬರುವ ಅಕ್ಟೋಬರ್‌ನಲ್ಲಿ ಮುಂಬೈನಲ್ಲಿ ನಡೆಯಲಿರುವ ಕಾಂಗ್ರೆಸ್‌ನ ವಾರ್ಷಿಕ ಅಧಿವೇಶನದ ಸಮಯದಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ಅಖಿಲಭಾರತ ಸಮಾವೇಶ ಕರೆಯಲೂ ಈ ಸಭೆಯಲ್ಲಿ ತೀರ್ಮಾನಿಸಲಾಯಿತು.

ಪಕ್ಷದ ಮೊದಲ ಸಮಾವೇಶ-ಸಮಾಜವಾದಿ ಕಾರ್ಯಕ್ರಮಗಳ ನಿರೂಪಣೆ

೧೯೩೪ರ ಅಕ್ಟೋಬರ್ ೨೧ ಹಾಗೂ ೨೨ರಂದು ಮುಂಬೈನ ವೊರ್ಲಿಯ 'ರೆಡೆಮನಿ ಟೆರೇಸ್'ನಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ಮೊದಲ ಅಖಿಲಭಾರತ ಸಮಾವೇಶ ಏರ್ಪಾಡಾಯಿತು. ಈ ಹೊತ್ತಿಗೆ ಜಯಪ್ರಕಾಶ್ ನಾರಾಯಣರು 'ಸಮಾಜವಾದ ಏಕೆ?' ಎಂಬ ತಮ್ಮ ಸುಪ್ರಸಿದ್ಧ ಕೈಪಿಡಿಗಾಗಿ ಸಿದ್ಧತೆಯೆಂಬಂತೆ ಪ್ರಕಟಿಸುತ್ತಿದ್ದ ಕರಪತ್ರಗಳ ಮೂಲಕ ರಾಷ್ಟ್ರಾದ್ಯಂತ ಸಮಾಜವಾದದ ಬಗ್ಗೆ ಯುವಜನರಲ್ಲಿ ಕುತೂಹಲ ಹುಟ್ಟಿಸಿದ್ದರು. ಸುಮಾರು ೧೫೦ ಜನ ಪ್ರತಿನಿಧಿಗಳಾಗಿ ನೊಂದಾಯಿಸಿಕೊಂಡಿದ್ದ ಈ ಸಮಾವೇಶದ ಅಧ್ಯಕ್ಷತೆಯನ್ನು ಡಾ॥ ಸಂಪೂರ್ಣಾನಂದರು ವಹಿಸಿದ್ದರು. ತನ್ನನ್ನು ಲೆನಿನ್‌ವಾದಿ ಎಂದು ಕರೆದುಕೊಂಡ ಪಕ್ಷ, ಧರ್ಮ ನಿರಪೇಕ್ಷವಾದ ಮತ್ತು ಲಿಂಗ ಹಾಗೂ ಜಾತಿಭೇದವಿಲ್ಲದ ಸಮಾಜ ನಿರ್ಮಾಣದ ಗುರಿಯನ್ನು ಈ ಸಮಾವೇಶದಲ್ಲಿ ಘೋಷಿಸಿತು. ಭಾರತ ಬ್ರಿಟನ್‌ಗೆ ನೀಡಬೇಕಾದ ಹಾಗೂ ರೈತ-ಕಾರ್ಮಿಕರು ಜಮೀನ್ದಾರರಿಗೆ ನೀಡಬೇಕಾದ ಸಾಲಗಳ ರದ್ದತಿ, ಭೂಸುಧಾರಣೆಯ ಮೂಲಕ ಜಮಿನ್ದಾರಿ ಪದ್ಧತಿ ಹಾಗೂ ಯಾವುದೇ ಪರಿಹಾರವಿಲ್ಲದೆ ರಾಜತ್ವದ ಪದ್ಧತಿಯ ನಿರ್ಮೂಲನ, ವಿದೇಶೀ ವ್ಯಾಪಾರದ ಸರ್ಕಾರಿ ಏಕಸ್ವಾಮ್ಯ, ಮುಖ್ಯ ಕೈಗಾರಿಕೆಗಳ, ವಿಮಾಸಂಸ್ಥೆಗಳ ಹಾಗೂ ಸಾರ್ವಜನಿಕ ಸೇವಾಸಂಸ್ಥೆಗಳ ಸಾಮಾಜಿಕ ಒಡೆತನ ಹಾಗೂ ಕೃಷಿ ಸಹಕಾರಿ ಸಂಸ್ಥೆಗಳ ಸ್ಥಾಪನೆ ಮುಂತಾದ ಕಾರ್ಯಕ್ರಮಗಳನ್ನು ತನ್ನ ಪಕ್ಷದ ಪ್ರಣಾಳಿಕೆಯಲ್ಲಿ ಅಳವಡಿಸಿಕೊಂಡಿತು. ಬದ್ಧ ಕಾರ್ಯಕರ್ತರಿಗಷ್ಟೇ ಸೀಮಿತಗೊಂಡ ದೀಕ್ಷಾ ಸದಸ್ಯತ್ವದ (ಕೇಡರ್) ಆಧಾರದ

ಮೇಲೆ ರಾಷ್ಟ್ರಾದ್ಯಂತ ಪಕ್ಷದ ಶಾಖೆಗಳನ್ನು ತೆರೆಯಲು ನಿರ್ಧರಿಸಲಾಯಿತು. ಕಾಂಗ್ರೆಸ್ ಎದುರು ನೋಡುತ್ತಿದ್ದ, ೧೯೩೫ರ ಭಾರತ ಸರ್ಕಾರದ ಕಾಯಿದೆ ಅಡಿಯಲ್ಲಿ ರಾಜ್ಯಶಾಸನ ಸಭಾ ಚುನಾವಣೆಗಳಲ್ಲಿ ಭಾಗವಹಿಸುವುದನ್ನು ವಿರೋಧಿಸಲಾಯಿತು. ಪಕ್ಷದ ತತ್ವ ಹಾಗೂ ಕಾರ್ಯಕ್ರಮಗಳನ್ನು ಪ್ರಚುರಪಡಿಸಲು 'ಕಾಂಗ್ರೆಸ್ ಸೋಶಲಿಸ್ಟ್' ಎಂಬ ಮಾಸಪತ್ರಿಕೆಯನ್ನು ಹೊರತರಲು ನಿರ್ಧರಿಸಲಾಯಿತು. ಈ ಪತ್ರಿಕೆಗೆ ಡಾ॥ ರಾಮ ಮನೋಹರ ಲೋಹಿಯಾರನ್ನು ಸಂಪಾದಕರನ್ನಾಗಿ ಆಯ್ಕೆ ಮಾಡಲಾಯಿತು.

೩. ಸ್ವಾತಂತ್ರ್ಯ ಹೋರಾಟದಲ್ಲಿ ಲೋಹಿಯಾ: ಗಾಂಧೀಜಿ ನೆರಳಲ್ಲಿ ಸಮಾಜವಾದ

ಕಾಂಗ್ರೆಸ್ ಸಮಾಜವಾದಿ ಪಕ್ಷವು ವರ್ಗ ಹೋರಾಟದ ಮಾರ್ಕ್ಸ್‌ವಾದಿ ಪರಿಭಾಷೆಯಲ್ಲೇ ತನ್ನ ಗೊತ್ತುಗುರಿಗಳನ್ನು ಮಂಡಿಸಿತಾದರೂ, ಅದು ಆ ವೇಳೆಗೆ ಭಾರತದಲ್ಲೂ ತಲೆ ಎತ್ತಿದ್ದ ಕಮ್ಯೂನಿಸ್ಟ್ ಪಕ್ಷದೊಂದಿಗೆ ತನ್ನನ್ನು ಗುರುತಿಸಿಕೊಳ್ಳಲು ಇಷ್ಟಪಡಲಿಲ್ಲ. ಇದಕ್ಕೆ ಕಾರಣಗಳು ಹಲವಾರು. ಭಾರತದಲ್ಲಿ ಆಗ ಬೆರಳೆಣಿಕೆಯಷ್ಟಿದ್ದ ಕಮ್ಯೂನಿಸ್ಟರು ಭಾರತದ ರಾಷ್ಟ್ರೀಯ ಆಂದೋಲನವನ್ನು ರಷ್ಯಾದ ನೇತೃತ್ವದಲ್ಲಿ ನಡೆಯಬೇಕಾದ ಜಾಗತಿಕ ಕಾರ್ಮಿಕ ಕ್ರಾಂತಿಯ ಭಾಗವೆಂದು ಪರಿಗಣಿಸಿ ಅದರ ಟೀಕೆ ಮಾಡುತ್ತಿದ್ದರು. ಅವರ ಕಣ್ಣಿನಲ್ಲಿ ಗಾಂಧೀಜಿ ಭಾರತೀಯ ಬಂಡವಾಳದಾರರ ಏಜೆಂಟರಾಗಿದ್ದರು; ಕಾಂಗ್ರೆಸ್ ಪಕ್ಷ ಜಮೀನ್ದಾರ-ಬಂಡವಾಳದಾರರ ಪಕ್ಷವಾಗಿತ್ತು ಹಾಗೂ ಅದರ ನೇತೃತ್ವದ ರಾಷ್ಟ್ರೀಯ ಆಂದೋಲನ, ಬ್ರಿಟಿಷ್ ಸರ್ಕಾರದೊಂದಿಗೆ ಅಧಿಕಾರ ಹಂಚಿಕೊಳ್ಳುವ ಉದ್ದೇಶದಿಂದ ಸಂಧಾನಕೋರ ಪಾತ್ರವನ್ನಷ್ಟೇ ವಹಿಸಿತ್ತು. ಜೊತೆಗೆ ಕೆಲವು—ಮೀರತ್ ಕೊಲೆ ಪಿತೂರಿ ಮುಂತಾದ—ಭಯೋತ್ಪಾದಕ ಚಟುವಟಿಕೆಗಳೊಂದಿಗೆ ಗುರುತಿಸಿಕೊಂಡ ಕಮ್ಯೂನಿಸ್ಟ್ ಪಕ್ಷ, ಬ್ರಿಟಿಷ್ ಸರ್ಕಾರದಿಂದ ನಿಷೇಧಕ್ಕೊಳಗಾಗಿ ಭೂಗತವಾಗಿತ್ತು.

ಮಾರ್ಕ್ಸ್‌ವಾದಿ ಗುರಿ - ಗಾಂಧಿಮಾರ್ಗ!

ಆದರೆ ಕಾಂಗ್ರೆಸ್ ಸಮಾಜವಾದಿಗಳಾದರೋ ಗಾಂಧಿ ಮಾರ್ಗದರ್ಶನದ ರಾಷ್ಟ್ರೀಯ ಆಂದೋಲನದಿಂದ ಪ್ರಭಾವಿತರಾಗಿ ಅಹಿಂಸೆಯಲ್ಲಿ ನಂಬಿಕೆ ಇಟ್ಟವರು. ಸ್ವಾತಂತ್ರ್ಯ ಹೋರಾಟವನ್ನು ಕಮ್ಯೂನಿಸ್ಟರಂತೆ ಜಾಗತಿಕ ಕಾರ್ಮಿಕ ಕ್ರಾಂತಿಯ ಜೊತೆ ಜೋಡಿಸಿಕೊಂಡು ನೋಡುವ ತಾತ್ವಿಕ ಒತ್ತಾಯಕ್ಕೆ ಒಳಗಾಗದವರು. ರಾಷ್ಟ್ರೀಯ ಆಂದೋಲನವನ್ನೇ ಒಂದು ದುಡಿಯುವ ವರ್ಗದ ಕ್ರಾಂತಿಯನ್ನಾಗಿ ಪರಿವರ್ತಿಸುವ ಹಂಬಲವುಳ್ಳವರಾಗಿದ್ದವರು. ಅವರಿಗೆ ರಷ್ಯಾದ ಕ್ರಾಂತಿ ಸ್ಫೂರ್ತಿಯಾಗಿತ್ತೇ ಹೊರತು, ಅನುಕರಣೆಯ ಮಾದರಿಯಾಗಿರಲಿಲ್ಲ. ಅವರಿಗೆ ಗಾಂಧೀಜಿಯ ಖಾದಿ-ಗ್ರಾಮೋದ್ಯೋಗ, ಹರಿಜನ ಸೇವೆ, ಟ್ರಸ್ಟಿಶಿಪ್ ಪರಿಕಲ್ಪನೆ ಮುಂತಾದ ಆರ್ಥಿಕ-ಸಾಮಾಜಿಕ ನೀತಿಗಳ

ಬಗ್ಗೆ ಭಿನ್ನಾಭಿಪ್ರಾಯವಿತ್ತಾದರೂ, ಸತ್ಯಾಗ್ರಹ ಪರಿಕಲ್ಪನೆ ಮೂಲಕ ಕಾಂಗ್ರೆಸ್ಸನ್ನು ಒಂದು ಬೃಹತ್ ಜನಾಂದೋಲನವನ್ನಾಗಿ ರೂಪಿಸಿದ್ದ ಅವರ ಬದ್ಧತೆ ಹಾಗೂ ಕರ್ತೃತ್ವಶಕ್ತಿಯ ಬಗ್ಗೆ ನಂಬಿಕೆ-ಗೌರವಗಳಿದ್ದವು. ಹೀಗಾಗಿ ಕಾಂಗ್ರೆಸ್ ಸಮಾಜವಾದಿ ಪಕ್ಷ, ಗಾಂಧಿಮಾರ್ಗದಲ್ಲಿ ಮಾರ್ಕ್ಸ್‌ವಾದಿ ಗುರಿಗಳನ್ನು ಮುಟ್ಟುವ ದೊಡ್ಡ ಸವಾಲನ್ನೇ ಆಹ್ವಾನಿಸಿತ್ತು. ಬಹುತೇಕ ತರುಣ-ತರುಣಿಯರಿಂದಲೇ ಕೂಡಿದ್ದ ಕಾಂಗ್ರೆಸ್ ಸಮಾಜವಾದಿಗಳ ಗುಂಪನ್ನು ಸರ್ದಾರ್ ಪಟೇಲ್, ರಾಜೇಂದ್ರ ಪ್ರಸಾದ್, ಗೋವಿಂದ ವಲ್ಲಭ ಪಂತ್ ಮುಂತಾದ ಹಿರಿಯ ನಾಯಕರು ಆದಷ್ಟು ಬೇಗ ನಿವಾರಿಸಿಕೊಳ್ಳಬೇಕಾದ 'ಅಧಿಕ ಪ್ರಸಂಗಿಗಳ ಗುಂಪು' ಎಂದು ಪರಿಗಣಿಸಿದರೆ, ಕಮ್ಯೂನಿಸ್ಟರು ಇವರನ್ನು ಸಮಾಜವಾದಿ ಮುಖವಾಡದ ಫ್ಯಾಸಿಸ್ಟರು ಎಂದು ದೂಷಿಸತೊಡಗಿದ್ದರು. ಭಾರತೀಯ ಸಮಾಜವಾದ ತನ್ನ ಆರಂಭಿಕ ಘಟ್ಟದಲ್ಲೇ ಎದುರಿಸಿದ ಈ ಬಿಕ್ಕಟ್ಟಿನಿಂದ ಅದನ್ನು ತಮ್ಮದೇ ಸೃಜನಶೀಲ ಸಂಯೋಜಿತ ನೀತಿ ನಿರೂಪಣೆ ಹಾಗೂ ಕಾರ್ಯಕ್ರಮಗಳ ಮೂಲಕ ಪಾರು ಮಾಡಲೆತ್ನಿಸಿದವರು ರಾಮಮನೋಹರ ಲೋಹಿಯಾ. ಅವರು ಈ ಪ್ರಯತ್ನದಲ್ಲಿ ಅನೇಕ ಏಳು ಬೀಳುಗಳನ್ನು ಕಂಡರು; ಟೀಕೆ-ಟಿಪ್ಪಣಿಗಳನ್ನು ಎದುರಿಸಿದರು. ಒಂದರ್ಥದಲ್ಲಿ ಲೋಹಿಯಾ ಅವರ ಈ ಸಾಹಸ-ದುಸ್ಸಾಹಸದ ಕಥೆಯೇ ಭಾರತೀಯ ಸಮಾಜವಾದಿ ಆಂದೋಲನದ ಕಥೆಯೂ ಆಗಿದೆ ಎಂದರೆ ತಪ್ಪಾಗಲಾರದು.

ನೆಹರೂ ಸ್ನೇಹ- ವಿದೇಶ ವ್ಯವಹಾರ ವಿಭಾಗದ ಉಸ್ತುವಾರಿ

ನೆಹರೂ ತಮ್ಮನ್ನು ಸಮಾಜವಾದಿ ಎಂದು ಕರೆದುಕೊಳ್ಳುತ್ತಿದ್ದರಾದರೂ, ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ಅವರು ಸೇರಲಿಲ್ಲ. ಅವರು ರಷ್ಯಾದ ಪ್ರಥಮ ಪಂಚವಾರ್ಷಿಕ ಯೋಜನೆಯ ಯಶಸ್ಸನ್ನು ಮೆಚ್ಚಿ ಮಾತನಾಡುತ್ತಿದ್ದರಾದರೂ, ಅವರ ಒಲವು ಬ್ರಿಟಿಷ್ ಲೇಬರ್ ಪಕ್ಷದ ಉದಾರವಾದಿ ಜನತಾಂತ್ರಿಕ ಸಮಾಜವಾದದ ಕಡೆಗೇ ಇತ್ತು. ಹೀಗಾಗಿ ಅವರು ಮಾರ್ಕ್ಸ್‌ವಾದಿ ಪರಿಭಾಷೆಯಲ್ಲಿ ಮಾತಾಡತೊಡಗಿದ್ದ ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ಸೇರದೆ, ಮಿಶ್ರ ಹಿತಾಸಕ್ತಿಗಳಿಂದ ಕೂಡಿದ್ದ ಕಾಂಗ್ರೆಸ್‌ಗೇ, ದೂರದೃಷ್ಟಿಯ ರಾಜಕೀಯ ಜಾಣ್ಮೆಯ ಪ್ರತೀಕವಾಗಿ ತಮ್ಮ ನಿಷ್ಠೆಯನ್ನು ಮುಡಿಪಾಗಿಟ್ಟರು. ಆದರೆ ಅವರು ಕಾಂಗ್ರೆಸ್ ಸಮಾಜವಾದಿಗಳೊಂದಿಗೆ ಸ್ನೇಹದಿಂದಿದ್ದು, ತಾವು ಕಾಂಗ್ರೆಸ್ ಅಧ್ಯಕ್ಷರಾದಾಗ ಅವರಲ್ಲನೇಕರನ್ನು– ಆಚಾರ್ಯ ನರೇಂದ್ರ ದೇವ, ಜಯಪ್ರಕಾಶ್ ನಾರಾಯಣ್, ಅಚ್ಯುತ ಪಟವರ್ಧನ್–ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿಯ ಪದಾಧಿಕಾರಿಗಳನ್ನಾಗಿ ನೇಮಕ ಮಾಡಿದರು. ಅಷ್ಟೇ ಅಲ್ಲ, ಲೋಹಿಯಾ ಅವರ ಅಂತಾರಾಷ್ಟ್ರೀಯ ರಾಜಕಾರಣದ ಜ್ಞಾನವನ್ನು ಬಳಸಿಕೊಳ್ಳಲು ೧೯೩೬ರ ಲಕ್ನೋ ಕಾಂಗ್ರೆಸ್ ಅಧಿವೇಶನದ ಸಮಯದಲ್ಲಿ ಕಾಂಗ್ರೆಸ್ ಪಕ್ಷದ ವಿದೇಶ

ವ್ಯವಹಾರ ವಿಭಾಗವೊಂದನ್ನು ತೆರೆದು, ಅದಕ್ಕೆ ಅವರನ್ನು ಕಾರ್ಯದರ್ಶಿಯನ್ನಾಗಿ ನೇಮಿಸಿದರು.

ವಿಶ್ವ ಇತಿಹಾಸದಲ್ಲಿ ಆ ೧೯೩೦ರ ದಶಕ ಎಂದರೆ, ಅಂತಾರಾಷ್ಟ್ರೀಯ ರಾಜಕಾರಣ ಬಿಸಿ ಏರಿ ಹೊಸ ಸ್ವರೂಪ ಪಡೆಯುತ್ತಿದ್ದ ಅವಧಿ. ಆರ್ಥಿಕ ಹಿಂಜರಿತದ ಪರಿಣಾಮಗಳು ಯುರೋಪ್‌ನಲ್ಲಿ ರಾಷ್ಟ್ರೀಯ ಆಂದೋಲನಗಳನ್ನು ಬಡಿದೆಬ್ಬಿಸಿದವು; ಸಾಮ್ರಾಜ್ಯಗಳ ಗಡಿಗಳು ತುಯ್ದಾಟಕ್ಕೆ ಸಿಕ್ಕಿದವು. ಹೀಗಾಗಿ ಮುಂದೆ ಜಗತ್ತಿನ ರಾಜಕೀಯ ನಕ್ಷೆಯನ್ನೇ ಬದಲಾಯಿಸಿದ ಎರಡನೇ ಮಹಾಯುದ್ಧದ ಕಾರ್ಮೋಡಗಳು ಕವಿಯುತ್ತಿದ್ದ ವಿಶ್ವದ ಮಹಾ ಬಿಕ್ಕಟ್ಟಿನ ಕಾಲವದು. ಹಾಗೇ ಏಷ್ಯಾ ಹಾಗೂ ಆಫ್ರಿಕಾದ ವಸಾಹತುಗಳು ಜಾಗ್ರತಗೊಳ್ಳುತ್ತಿದ್ದ ಪರ್ವಕಾಲ. ವಿಶ್ವ ರಾಜಕಾರಣದ ಇಂತಹ ಸಂಕ್ರಮಣ ಘಟ್ಟದಲ್ಲಿ ವಿವಿಧ ದೇಶಗಳ ರಾಷ್ಟ್ರೀಯ ಆಂದೋಲನಗಳು ಹಾಗೂ ಸರ್ಕಾರಗಳೊಂದಿಗೆ ಸಂಪರ್ಕ ಬೆಳೆಸಿ, ಕಾಂಗ್ರೆಸ್‌ನ ರಾಷ್ಟ್ರೀಯ ಆಂದೋಲನಕ್ಕೆ ಬೆಂಬಲ ಸಂಘಟಿಸಿಕೊಳ್ಳುವ ಮತ್ತು ಕಾಂಗ್ರೆಸ್‌ನ ಕಾರ್ಮಿಕ ಸಂಘಟನೆಗೆ ಅಂತಾರಾಷ್ಟ್ರೀಯ ಕಾರ್ಮಿಕ ಸಂಘಟನೆಗಳ ಸಂಪರ್ಕ ಒದಗಿಸುವ ನೆಲೆಯಲ್ಲಿ ಕಾರ್ಯ ನಿರ್ವಹಿಸಿದ ಲೋಹಿಯಾರ ಮಾಗದರ್ಶನದ ವಿದೇಶ ವ್ಯವಹಾರಗಳ ವಿಭಾಗ, ಸ್ವತಂತ್ರಭಾರತಕ್ಕಾಗಿ ಒಂದು ಸಮಗ್ರ ವಿದೇಶಿ ನೀತಿಯ ಅಸ್ತಿವಾರ ಹಾಕಿತು. ವಿವಿಧ ವಸಾಹತುಶಾಹಿ ಆಡಳಿತಗಳನ್ನು ಕುರಿತ ನೀತಿ ಹಾಗೂ ಅವುಗಳಲ್ಲಿನ ಭಾರತೀಯ ನಿವಾಸಿಗಳ ಸ್ಥಿತಿಗತಿಗಳ ಸಂಬಂಧ ತೆಗೆದುಕೊಳ್ಳಬೇಕಾದ ಕ್ರಮಗಳ ಬಗೆಗೆ ಒಂದು ವ್ಯಾಪಕ ವರದಿಯನ್ನು ಲೋಹಿಯಾ ೧೯೩೬ರ ಫೈಜಪುರ ಅಧಿವೇಶನದಲ್ಲಿ ಮಂಡಿಸಿ, ಎಲ್ಲರ ಮೆಚ್ಚುಗೆ ಗಳಿಸಿದರು. ಅಲ್ಲದೆ ವಿಭಾಗದ ಕಾರ್ಯದರ್ಶಿಯಾಗಿದ್ದ ಮೂರು ವರ್ಷಗಳ ಅವಧಿಯಲ್ಲಿ ಅವರು *'ನಾಗರಿಕ ಸ್ವಾತಂತ್ರ್ಯಗಳಿಗಾಗಿ ಹೋರಾಟ ಕುರಿತು'*, *'ಭಾರತದ ವಿದೇಶ ನೀತಿ'*, *'ಭಾರತ ಮತ್ತು ಚೀನಾ'*, *'ವಿದೇಶೀ ನೆಲದಲ್ಲಿ ಭಾರತೀಯ'*, *'ವಿದೇಶಿ ಗುತ್ತಿಗೆದಾರರ ದರೋಡೆ'*, *'ಸರ್ಕಾರಿ ಅಧಿಕಾರಿಗಳ ಸಂಬಳ ಸವಲತ್ತುಗಳು'* ಮುಂತಾದ ಕೈಪಿಡಿಗಳನ್ನು ಬರೆದು ಪ್ರಕಟಿಸುವ ಮೂಲಕ ರಾಷ್ಟ್ರೀಯ ಆಂದೋಲನದ ಇಬ್ಬರು ಉದಯೋನ್ಮುಖ ತಾರೆಗಳಲ್ಲೊಬ್ಬರಾಗಿ ಎಲ್ಲರ ಗಮನ ಸೆಳೆದರು. ಇಂತಹ ಇನ್ನೊಬ್ಬ ತಾರೆ ಎಂದರೆ ಜಯಪ್ರಕಾಶ್ ನಾರಾಯಣರು.

ಕಾಂಗ್ರೆಸ್‌ನಲ್ಲಿ ತಳಮಳ – ಲೋಹಿಯಾ ರಾಜೀನಾಮೆ

ಆದರೆ ಕಾಂಗ್ರೆಸ್‌ನೊಳಗಿನ ಸಂಪ್ರದಾಯವಾದಿ ನಾಯಕರಲ್ಲಿ, ಗಾಂಧೀಜಿಗೆ ಹತ್ತಿರವಾಗತೊಡಗಿ ಪ್ರಭಾವಶಾಲಿಗಳಾಗುತ್ತಿದ್ದ ಸಮಾಜವಾದಿಗಳ ಬಗ್ಗೆ ಅಸಹನೆ ಬೆಳೆಯುತ್ತಲೇ ಇತ್ತು. ಇದು ೧೯೩೮ರ ಹೊತ್ತಿಗೆ ಎರಡನೇ ಮಹಾಯುದ್ಧದ ಬಗೆಗೆ

ಕಾಂಗ್ರೆಸ್ ತಳೆಯಬೇಕಾದ ನಿಲುವನ್ನು ಕುರಿತ ಚರ್ಚೆಯಲ್ಲಿ ಸ್ಫೋಟಗೊಂಡಿತು. ಆ ಹೊತ್ತಿಗಾಗಲೇ ೧೯೩೫ರ ಕಾಯಿದೆ ಪ್ರಕಾರ ಚುನಾವಣೆಗಳಲ್ಲಿ ಸ್ಪರ್ಧಿಸಿ ಜವಾಬ್ದಾರಿ ಸರ್ಕಾರ ರಚನೆಯಲ್ಲಿ ಭಾಗವಹಿಸುವುದಕ್ಕೆ ಕಾಂಗ್ರೆಸ್ ಸಮಾಜವಾದಿ ಪಕ್ಷ ತನ್ನ ವಿರೋಧ ವ್ಯಕ್ತಪಡಿಸಿ ಹಿರಿಯ ಕಾಂಗ್ರೆಸ್ಸಿಗರನ್ನು ಕೆರಳಿಸಿತ್ತು. 'ಭಾರತೀಯ ಸ್ವಾತಂತ್ರ್ಯರಂಗ' ಎಂಬ ತಮ್ಮದೊಂದು ಲೇಖನದಲ್ಲಿ ಲೋಹಿಯಾ 'ಭಾರತೀಯರಿಗೆ ಸೀಮಿತ ಹಕ್ಕು-ಅಧಿಕಾರ ಗಳನ್ನಷ್ಟೇ ಕಲ್ಪಿಸಿಕೊಡುವ ೧೯೩೫ರ ಕಾಯಿದೆಯಡಿಯ ರಾಜ್ಯಾಂಗವನ್ನಾಧರಿಸಿದ ಜವಾಬ್ದಾರಿ ಸರ್ಕಾರದಲ್ಲಿ ಸಮಾಜವಾದಿಗಳು ಭಾಗವಹಿಸುವುದು ಉಚಿತವಲ್ಲವೆಂದು ಸೂಚಿಸಿದ್ದರು. ಹಾಗೇ ರೈತ-ಕಾರ್ಮಿಕರ ಹಾಗೂ ನಗರಗಳ ಬಡಬಗ್ಗರ ವರ್ಗ ಸಂಘಟನೆಯ ಮೂಲಕ ರಾಜಕೀಯ ಸ್ವಾತಂತ್ರ್ಯದ ಜೊತೆಗೆ ಸಾಮಾಜಿಕ-ಆರ್ಥಿಕ ಸ್ವಾತಂತ್ರ್ಯಗಳನ್ನು ಗಳಿಸುವ ಗುರಿಯೊಂದಿಗೆ ಸಂಪೂರ್ಣ ಹೋರಾಟ ಆರಂಭಿಸಲು' ಕರೆ ನೀಡಿದ್ದರು. ಇದಕ್ಕೆ ಪೂರಕವಾಗಿ ೧೯೩೮ರ 'ಕಾಂಗ್ರೆಸ್ ಸೋಶಲಿಸ್ಟ್' ಸಂಚಿಕೆಯೊಂದರಲ್ಲಿ ಲೋಹಿಯಾ ಯುದ್ಧವಿರೋಧಿ ಲೇಖನವೊಂದನ್ನು ಬರೆದರು. ಎರಡನೇ ಮಹಾಯುದ್ಧ ಫ್ಯಾಸಿಸ್ಟರ ಮತ್ತು ಸಾಮ್ರಾಜ್ಯವಾದಿಗಳ ನಡುವಣ ಯುದ್ಧವಾಗಲಿದ್ದು, ಈ ಯುದ್ಧದಲ್ಲಿ ಭಾರತದ ಜನತೆ ಯಾರ ಪರವಾಗಿಯೂ ನಿಲ್ಲದೆ ರಾಷ್ಟ್ರೀಯ ಆಂದೋಲನವನ್ನು ತೀವ್ರಗೊಳಿಸಿ ಬ್ರಿಟಿಷ್ ಸರ್ಕಾರದ ಮೇಲೆ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಒತ್ತಡ ಹೇರಬೇಕು ಎಂದು ಅವರು ಸಮಾಜವಾದಿಗಳ ನಿಲುವನ್ನು ಪ್ರತಿಪಾದಿಸಿದರು.

ಆದರೆ ನೆಹರೂ ಸೇರಿದಂತೆ ಕಾಂಗ್ರೆಸ್‌ನ ಬಹುತೇಕ ನಾಯಕರು ಯುದ್ಧದಲ್ಲಿ ಬ್ರಿಟನ್ನನ್ನು ಒಳಗೊಂಡ ಮಿತ್ರರಾಷ್ಟ್ರಗಳಿಗೆ ಬೆಂಬಲ ವ್ಯಕ್ತಪಡಿಸುವ ಅಪೇಕ್ಷೆ ಹೊಂದಿದ್ದರು. ಹೀಗಾಗಿ ಲೋಹಿಯಾ ಹಾಗೂ ಇತರ ಸಮಾಜವಾದಿಗಳ ನಿಲುವು ಈ ಕಾಂಗ್ರೆಸ್ ನಾಯಕರನ್ನು ತಳಮಳಕ್ಕೀಡು ಮಾಡಿತು. ಕಾಂಗ್ರೆಸ್‌ನಲ್ಲಿ ಸಮಾಜವಾದಿಗಳ ಪ್ರಭಾವವನ್ನು ನಿಯಂತ್ರಿಸಲು ಕಾಂಗ್ರೆಸ್ ೧೯೩೮ರ ತನ್ನ ಹರಿಪುರ ಸಮಾವೇಶದಲ್ಲಿ, ಇತರ ಪಕ್ಷಗಳ ಕಾರ್ಯಕಾರಿಣಿ ಸದಸ್ಯರಾಗಿರುವವರು ಕಾಂಗ್ರೆಸ್ಸಿನ ಪದಾಧಿಕಾರಿಗಳಾಗಿರುವಂತಿಲ್ಲ ಎಂಬ ಗೊತ್ತುವಳಿಯನ್ನು ಅಂಗೀಕರಿಸಿತು. ಇದರಿಂದಾಗಿ ಕಾಂಗ್ರೆಸ್ ಕಾರ್ಯಕಾರಿಣಿಯಲ್ಲಿದ್ದ ಸಮಾಜವಾದಿಗಳು ರಾಜೀನಾಮೆ ನೀಡಬೇಕಾಯಿತು. ಲೋಹಿಯಾ ಕೂಡಾ ವಿದೇಶ ವ್ಯವಹಾರ ವಿಭಾಗದ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಅವರಿಗೆ ಮೊದಲಬಾರಿಗೆ ನೆಹರೂ ಬಗ್ಗೆ ಅಸಮಾಧಾನ ಉಂಟಾಗಿತ್ತು.

ಕಮ್ಯೂನಿಸ್ಟರ ಸಂಯುಕ್ತರಂಗ - ಪಕ್ಷದೊಳಗೆ ತಳಮಳ

ಹೀಗೆ ಒಂದು ಕಡೆ ಲೋಹಿಯಾ ಮತ್ತು ಅವರ ಸಮಾಜವಾದಿ ಮಿತ್ರರು ಕಾಂಗ್ರೆಸ್ ನಾಯಕರ ಅಸಹನೆಗೆ ತುತ್ತಾಗುತ್ತಿರುವಾಗಲೇ, ಇನ್ನೊಂದೆಡೆ ಕಮ್ಯೂನಿಸ್ಟರ ಅಂತಾರಾಷ್ಟ್ರೀಯ ಪಿತೂರಿಯೊಂದಕ್ಕೆ ಬಲಿಯಾಗಬೇಕಾಯಿತು. ೧೯೩೬ರ ಕಮ್ಯೂನಿಸ್ಟ್ ಅಂತಾರಾಷ್ಟ್ರೀಯ ಒಕ್ಕೂಟವು ತನ್ನ ಜಾಗತಿಕ ರಾಜಕಾರಣದ ಒತ್ತಾಯಗಳಿಂದಾಗಿ ಎಲ್ಲ ದೇಶಗಳ ಕಮ್ಯೂನಿಸ್ಟರು ಆಯಾ ದೇಶಗಳ ರಾಷ್ಟ್ರೀಯ ಆಂದೋಲನಗಳಿಗೆ ಬೆಂಬಲ ವ್ಯಕ್ತಪಡಿಸಿ ಆಂದೋಲನಕಾರರೊಂದಿಗೆ ಸಂಯುಕ್ತರಂಗ ರಚಿಸಿಕೊಳ್ಳಬೇಕೆಂದು ಕರೆ ಕೊಟ್ಟಿತು. ಇದರ ಪರಿಣಾಮವಾಗಿ ಆವರೆಗೆ ಗಾಂಧೀಜಿಯನ್ನೂ, ಕಾಂಗ್ರೆಸ್ ಮತ್ತು ಕಾಂಗ್ರೆಸ್ ಸಮಾಜವಾದಿ ಪಕ್ಷಗಳನ್ನೂ ಕ್ರಾಂತಿವಿರೋಧಿ ಪಟ್ಟಭದ್ರರು ಎಂದು ದೂಷಿಸುತ್ತಿದ್ದ ಭಾರತದ ಕಮ್ಯೂನಿಸ್ಟರು, ಕಾಂಗ್ರೆಸ್ ಮನೆಯೊಳಕ್ಕೆ ನುಗ್ಗಲು ಕಾಂಗ್ರೆಸ್ ಸಮಾಜವಾದಿ ಪಕ್ಷದ ಬಾಗಿಲು ತಟ್ಟತೊಡಗಿದರು. ಜರ್ಮನಿಯಲ್ಲಿದ್ದಾಗ, ಈರೋಪಿನ ಹಲವಾರು ಸಮಾಜವಾದಿ ಪಕ್ಷಗಳನ್ನು ಒಡೆಯಲು ಹೋಗಿ ಫ್ಯಾಸಿಸ್ಟ್ ನಾಯಕರಿಗೆ ದಾರಿ ಮಾಡಿಕೊಟ್ಟಿದ್ದ ಕಮ್ಯೂನಿಸ್ಟರ ಅನಾಹುತಕಾರಿ ರಾಜಕೀಯವನ್ನು ಲೋಹಿಯಾ ಗಮನಿಸಿದ್ದರು. ಹೀಗಾಗಿ ಅವರು ಕಮ್ಯೂನಿಸ್ಟರಿಗೆ ಪಕ್ಷದೊಳಕ್ಕೆ ಪ್ರವೇಶ ನೀಡುವುದನ್ನು ವಿರೋಧಿಸಿದರು. ಆದರೆ ಮೊದಲಿಂದಲೂ ಕಮ್ಯೂನಿಸಂ ಬಗ್ಗೆ ಒಲವಿದ್ದ ಜಯಪ್ರಕಾಶ್ ನಾರಾಯಣ ಹಾಗೂ ಅವರ ಮಾರ್ಕ್ಸ್‌ವಾದಿ ಮಿತ್ರರು, ರಾಷ್ಟ್ರೀಯತಾ ಆಂದೋಲನವನ್ನು ಕಾಂಗ್ರೆಸ್ಸಿನ ಸಂಪ್ರದಾಯವಾದಿ ನಾಯಕತ್ವದಿಂದ ಮುಕ್ತಗೊಳಿಸಿ ಸಮಾಜವಾದಿ ಸಮಾಜ ನಿರ್ಮಾಣದ ಆಂದೋಲನವನ್ನಾಗಿ ರೂಪಿಸುವಲ್ಲಿ ನೆರವಾದಾರು ಎಂಬ ನಂಬಿಕೆ ಯಿಂದ ಕಮ್ಯೂನಿಸ್ಟರನ್ನು ಪಕ್ಷಕ್ಕೆ ಸೇರಿಸಿಕೊಳ್ಳಬೇಕೆಂದು ವಾದಿಸಿದರು. ಇದೆಲ್ಲದರ ಮಧ್ಯೆ ಅದೇ ವರ್ಷದ ತನ್ನ ಮೀರತ್ ಅಧಿವೇಶನದಲ್ಲಿ ಸಮಾಜವಾದಿ ಕಾಂಗ್ರೆಸ್ ಪಕ್ಷ, ಕಮ್ಯೂನಿಸ್ಟರಿಗೆ ಪ್ರವೇಶ ನೀಡಲು ಒಪ್ಪಿಗೆ ನೀಡಿತು.

ಇದರ ಫಲವಾಗಿ ಎರಡೇ ವರ್ಷಗಳಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲೂ, ವಿವಿಧ ಪ್ರಾಂತ್ಯಗಳ ಶಾಖೆಗಳಲ್ಲೂ ಕಮ್ಯೂನಿಸ್ಟರು ಸಂಯುಕ್ತರಂಗದ ಪದಾಧಿಕಾರಿಗಳಾಗಿ ಆಯ್ಕೆಯಾದರು. ಅಲ್ಲದೆ ಪಕ್ಷವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವ ಕಾರ್ಯತಂತ್ರಗಳನ್ನು ಅವರು ಶುರುಮಾಡಿದರು. ಆದರೆ ಆ ಹೊತ್ತಿಗೆ ಸೋವಿಯತ್ ಒಕ್ಕೂಟದಲ್ಲಿನ ಸ್ಟಾಲಿನ್ ನೇತೃತ್ವದ ರಾಜಕೀಯ ಅತ್ಯಾಚಾರಗಳನ್ನು ಅರಿತು ಕಮ್ಯೂನಿಸಂ ಬಗ್ಗೆ ಮಿನೂ ಮಸಾನಿ, ಅಶೋಕ ಮೆಹ್ತಾ ಮುಂತಾದ ಜಯಪ್ರಕಾಶರ ಮಿತ್ರರು ಭ್ರಮನಿರಸನಗೊಳ್ಳಲಾರಂಭಿಸಿದ್ದರು. ಹೀಗಾಗಿ ಅವರು ಕಾಂಗ್ರೆಸ್ ಸಮಾಜವಾದಿ ಪಕ್ಷದೊಳಗೆ ಕಮ್ಯೂನಿಸ್ಟರು ನಡೆಸಿದ್ದ ಕಾರ್ಯಾಚರಣೆಯ ಬಗ್ಗೆ ಜಾಗ್ರತರಾದರು. ಪಕ್ಷದ ೧೯೩೮ರ ಲಾಹೋರ್ ಸಮ್ಮೇಳನದ ಹೊತ್ತಿಗೆ,

ಕಾಂಗ್ರೆಸ್ ಸಮಾಜವಾದಿ ಪಕ್ಷದ ನೀತಿ ಕಾರ್ಯಕ್ರಮಗಳನ್ನು ಅಪಹಾಸ್ಯ ಮಾಡಿ ಆ ಪಕ್ಷವನ್ನು ತಮ್ಮ ಪಕ್ಷದ ಬಲವರ್ಧನೆಗಾಗಿ ಮಾತ್ರ ಮಧ್ಯವರ್ತಿಯಾಗಿ ಬಳಸಿಕೊಳ್ಳುವ ಕಾರ್ಯತಂತ್ರವನ್ನು ವಿವರಿಸುವ ಕಮ್ಯೂನಿಸ್ಟ್ ಸಾಹಿತ್ಯ ಸಮಾಜವಾದಿಗಳ ಕೈಗೆ ಸಿಕ್ಕಿತು. ಈ ಅಧಿವೇಶನದಲ್ಲಿ, ಸಂಯುಕ್ತರಂಗವನ್ನು ವಿಸರ್ಜಿಸಿ ಕಮ್ಯೂನಿಸ್ಟರನ್ನು ಪಕ್ಷದಿಂದ ಹೊರ ಹಾಕಬೇಕೆಂಬ ಒತ್ತಾಯ ಮೂಡಿಬಂತು. ಜಯಪ್ರಕಾಶ ನಾರಾಯಣ್ ಹಾಗೂ ಅವರ ಬೆಂಬಲಿಗರು ಈ ಒತ್ತಾಯಕ್ಕೆ ಮಣಿಯದಿದ್ದಾಗ ಲೋಹಿಯಾ, ಮೀನೂ ಮಸಾನಿ, ಅಶೋಕ ಮೆಹ್ತಾ ಹಾಗೂ ಅಚ್ಯುತ ಪಟವರ್ಧನ್‌ರೊಂದಿಗೆ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿಗೆ ರಾಜೀನಾಮೆ ನೀಡಿದರು. ಆಗ ರಾಜಿಗೆ ಬಂದ ಜಯಪ್ರಕಾಶರ ಗುಂಪು ಪಕ್ಷದ ಕಾರ್ಯಕಾರಿಣಿ ಚುನಾವಣೆಗಳಲ್ಲಿ ಭಾಗವಹಿಸಿದಂತೆ ಕಮ್ಯೂನಿಸ್ಟರ ಮೇಲೆ ನಿಷೇಧ ಹೇರಲು ಒಪ್ಪಿತು. ಲೋಹಿಯಾ ಹಾಗೂ ಅವರ ಮಿತ್ರರು ರಾಜೀನಾಮೆಗಳನ್ನು ವಾಪಸ್ ಪಡೆದರು.

ಕಮ್ಯೂನಿಸ್ಟರ ಉಚ್ಚಾಟನೆ - ಗಾಂಧೀಜಿ ನಂಟು

ಆದರೆ ೧೯೩೯ರ ಹೊತ್ತಿಗೆ, ತ್ರಿಪುರಾ ಕಾಂಗ್ರೆಸ್ ಅಧಿವೇಶನದಲ್ಲಿ ಸುಭಾಷ್ ಚಂದ್ರ ಬೋಸರು ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾಗಿ ಗಾಂಧೀಜಿಗೆ ಮುಜುಗರ ಉಂಟು ಮಾಡುವಷ್ಟರ ಮಟ್ಟಿಗೆ ಕಮ್ಯೂನಿಸ್ಟರು ಕಾಂಗ್ರೆಸ್ ಸಮಾಜವಾದಿ ಪಕ್ಷದ ಒಳಹೊಕ್ಕಿದ್ದರು. ಈ ಹಿನ್ನೆಲೆಯಲ್ಲಿ ಮತ್ತಷ್ಟು ವಿಚಾರಣೆಗಳು ನಡೆದಾಗ, ಕಾಂಗ್ರೆಸ್ ಮತ್ತು ಕಾಂಗ್ರೆಸ್ ಸಮಾಜವಾದಿ ಪಕ್ಷಗಳೆರಡನ್ನೂ ವಶಪಡಿಸಿಕೊಳ್ಳುವ ಕಮ್ಯೂನಿಸ್ಟ್ ಕಾರ್ಯತಂತ್ರದ ಸಮಗ್ರ ಚಿತ್ರ ಕೊಡುವ ಅನೇಕ ದಾಖಲೆಗಳು ದೊರೆತವು. ಸ್ವತಃ ಜಯಪ್ರಕಾಶರೇ ಕಮ್ಯೂನಿಸ್ಟರನ್ನು ಸಮಾಜವಾದಿಗಳ ಮತ್ತು ಇತರ ಯಾವುದೇ ಪ್ರಗತಿಪರ ಗುಂಪುಗಳ ಆಜನ್ಮ ಶತ್ರುವೆಂದು ಕರೆದರು. ೧೯೪೦ರ ರಾಮಗಢ ಅಧಿವೇಶನದಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷವು ಸಂಯುಕ್ತ ರಂಗವನ್ನು ವಿಸರ್ಜಿಸಿ, ಕಮ್ಯೂನಿಸ್ಟರನ್ನು ಪಕ್ಷದಿಂದ ಹೊರಹಾಕುವ ಗೊತ್ತುವಳಿಯನ್ನು ಅಂಗೀಕರಿಸಿತು. ಆ ಹೊತ್ತಿಗೆ ಕಾಲ ಮಿಂಚಿತ್ತು. ನಂಬೂದಿರಿಪಾದ್, ಎ.ಕೆ ಗೋಪಾಲನ್, ಸುಂದರಯ್ಯ, ರಾಜೇಶ್ವರರಾವ್ ಮುಂತಾದ ಕಮ್ಯೂನಿಸ್ಟ್ ನಾಯಕರು ದಕ್ಷಿಣ ಭಾರತದ ಬಹುತೇಕ ಕಡೆ ಕಾಂಗ್ರೆಸ್ ಸಮಾಜವಾದಿ ಪಕ್ಷದ ಶಾಖೆಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದರು!

ಗಾಂಧೀಜಿಗೆ ಮುಜುಗರ ತಂದ—ಕಾಂಗ್ರೆಸ್ ಅಧ್ಯಕ್ಷರಾಗಿ ಸುಭಾಷ್ ಚಂದ್ರ ಬೋಸರು ಆಯ್ಕೆಯಾದ—ಸಂದರ್ಭವು, ಆ ಹೊತ್ತಿಗೆ ಲೋಹಿಯಾ ಮನಸ್ಸಿನಲ್ಲಿ ಎರಕ ಗೊಳ್ಳುತ್ತಿದ್ದ ಸಮಾಜವಾದಿ ರಾಜಕಾರಣದ ಸ್ವರೂಪವನ್ನು ಸಂಕ್ಷಿಪ್ತವಾಗಿ ಪರಿಚಯಿಸುತ್ತದೆ. ಈ ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯಲ್ಲಿ ಎಲ್ಲ ಸಮಾಜವಾದಿಗಳೂ ಗಾಂಧೀಜಿ

ಅಭ್ಯರ್ಥಿ ಎನಿಸಿದ್ದ ಪಟ್ಟಾಭಿ ಸೀತಾರಾಮಯ್ಯನವರ ವಿರುದ್ಧ ಸ್ಪರ್ಧಿಸಿದ್ದ ಸುಭಾಷರ ಪರ ಮತ ಹಾಕಿದ್ದರೆ, ಲೋಹಿಯಾ ಮಾತ್ರ ಯಾರ ಪರವೂ ಮತ ಹಾಕದೆ ತಟಸ್ಥ ನೀತಿ ಅನುಸರಿಸಿದ್ದರು! ಸಾಮಾಜಿಕ ಪರಿವರ್ತನೆಯ ಹಾದಿ ಕುರಿತಂತೆ ಲೋಹಿಯಾಗೆ ಗಾಂಧೀಜಿಯೊಂದಿಗೆ ತೀವ್ರ ಭಿನ್ನಾಭಿಪ್ರಾಯವಿದ್ದಾಗ್ಯೂ, ಅಂದಿನ ಸಂದರ್ಭದಲ್ಲಿ ಗಾಂಧೀಜಿಯೇ ಕಾಂಗ್ರೆಸ್ ಎಲ್ಲರಿಗಿಂತ ದೊಡ್ಡ ನಾಯಕರಾಗಿದ್ದು; ಅವರ ನಾಯಕತ್ವವನ್ನು ಬಾರದೆಂಬುದೇ ಕಳೆದುಕೊಳ್ಳ ಬಾರದೆಂಬುದೇ ಲೋಹಿಯಾ ಅವರ ನಿಲುವಾಗಿತ್ತು.

೧೯೩೫ರಲ್ಲೇ ಲೋಹಿಯಾ, ಗಾಂಧೀಜಿಯ ಖಾದಿ-ಗ್ರಾಮೋದ್ಯೋಗ ನೀತಿಯನ್ನು ಖಂಡಿಸಿ, ಇಂತಹ ಕ್ಷುಲ್ಲಕ ಕಾರ್ಯಕ್ರಮಗಳಿಂದ ವಿದೇಶೀ ಆಳ್ವಿಕೆಯನ್ನು ಕೊನೆಗಾಣಿಸಲು ಸಾಧ್ಯವಿಲ್ಲವೆಂದು ವಾದಿಸುತ್ತಾ 'ಕಾಂಗ್ರೆಸ್ ಸೋಶಲಿಸ್ಟ್' ಪತ್ರಿಕೆಯಲ್ಲಿ ಲೇಖನವೊಂದನ್ನು ಬರೆದಿದ್ದರು. ಅದರ ಪ್ರತಿಯೊಂದನ್ನು ಗಾಂಧೀಜಿ ಅವಗಾಹನೆಗೂ ಅವರು ಕಳಿಸಿದ್ದರು. ಲೇಖನದ ಶೈಲಿಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಗಾಂಧೀಜಿ, ಭಿನ್ನಾಭಿಪ್ರಾಯವನ್ನು ಸಹನೆ-ಸೌಜನ್ಯಗಳೊಂದಿಗೆ ವ್ಯಕ್ತಪಡಿಸಲಾಗದವರೊಂದಿಗೆ ತಾನು ಪತ್ರವ್ಯವಹಾರ ಮಾಡಲಾರೆ ಎಂದು ಮಾರುತ್ತರ ಬರೆದಿದ್ದರು. ಇದರಿಂದ ಮುಜುಗರಗೊಂಡ ಲೋಹಿಯಾ, ದೊಡ್ಡವರಾದ ಗಾಂಧೀಜಿ ಲೇಖನದ ಭಾಷಾ ವೈಖರಿಯನ್ನು ನಿರ್ಲಕ್ಷಿಸಿ ಅದರ ಆಶಯಕ್ಕೆ ಪ್ರತಿಸ್ಪಂದಿಸಬಹುದಿತ್ತು ಎಂದು ವಿನಯದಿಂದ ಪತ್ರ ಬರೆದರು. ಅದಕ್ಕೆ ಕೂಡಲೇ ಗಾಂಧೀಜಿಯೂ ಪ್ರೀತಿ ವಿಶ್ವಾಸಗಳಿಂದ ಪ್ರತಿಕ್ರಿಯಿಸಿದರು. ಅಷ್ಟೇ ಅಲ್ಲ, ನಂತರದ ದಿನಗಳಲ್ಲಿ 'ಕಾಂಗ್ರೆಸ್ ಸೋಶಲಿಸ್ಟ್' ಪತ್ರಿಕೆಯಲ್ಲಿನ ಲೋಹಿಯಾರ ಲೇಖನಗಳನ್ನು ತಮ್ಮ 'ಹರಿಜನ' ಪತ್ರಿಕೆಯಲ್ಲಿ ಮರುಮುದ್ರಿಸತೊಡಗಿದರು. ಈ ಪ್ರೀತಿ ವಿಶ್ವಾಸ ಗಾಂಧೀಜಿ ಹತ್ಯೆಯಾದ ಹಿಂದಿನ ದಿನದವರೆಗೂ ವಿವಿಧ ನೆಲೆಗಳಲ್ಲಿ ಅರಳುತ್ತಾ ಹೋಗಿ, ಭಾರತೀಯ ಸಮಾಜವಾದಕ್ಕೊಂದು ಹೊಸ ತಾತ್ವಿಕ ಬೆಡಗನ್ನೇ ಒದಗಿಸಿತು.

ಗಾಂಧೀಜಿ ಮತ್ತು ಸಮಾಜವಾದಿಗಳ ನಡುವೆ ಇಂತಹ ಕುತೂಹಲಕಾರಿ ಹಾಗೂ ಸೃಜನಶೀಲ ಸಂಬಂಧ ಏರ್ಪಡುವಂತಹ ಹಂತ ತಲುಪಿದುದಕ್ಕೆ ಮುಖ್ಯಕಾರಣ, ಅವರಿಬ್ಬರ ನಡುವೆ ನಿರಂತರವಾಗಿ ನಡೆಯುತ್ತಿದ್ದ ತಾತ್ವಿಕ ಸಂವಾದ. ಸಮಾಜವಾದಿಗಳ ಪರ ಈ ಸಂವಾದದ ನೇತೃತ್ವ ವಹಿಸಿದ್ದವರು ಇಬ್ಬರು- ಜಯಪ್ರಕಾಶ್ ನಾರಾಯಣ ಹಾಗೂ ರಾಮಮನೋಹರ ಲೋಹಿಯಾ. ಆ ದಿನಗಳಲ್ಲಿ ಕಟ್ಟಾ ಮಾರ್ಕ್ಸ್‌ವಾದಿಯಾಗಿದ್ದ ಜೆ.ಪಿ.ಗೆ, ಗಾಂಧೀಜಿಯೊಂದಿಗೆ ಯಾವಾಗಲೂ ಗೌರವಪೂರ್ಣ ಭಿನ್ನಾಭಿಪ್ರಾಯವೇ. ಆದರೆ ಭಾರತೀಯ ಸಂದರ್ಭದಲ್ಲಿ ಮಾರ್ಕ್ಸ್‌ವಾದದ ಅನ್ವಯದ ಸಾಧ್ಯತೆ ಮತ್ತು ಪರಿಣಾಮಗಳ ಬಗ್ಗೆ ತಮ್ಮದೇ ಸಂದೇಹಗಳನ್ನು ಲೋಹಿಯಾ ಹೊಂದಿದ್ದರು. ದುಡಿಯುವ ವರ್ಗದ ಕ್ರಾಂತಿಯು ಹಿಟ್ಲರನ ಜರ್ಮನಿ ಅಥವಾ ಸ್ಟಾಲಿನ್‌ನ ರಷ್ಯಾದಲ್ಲಾದಂತೆ ದಾರಿ ತಪ್ಪದಿರಬೇಕಾದರೆ ಕೇವಲ ಆರ್ಥಿಕ ಕ್ರಾಂತಿಯಾಗದೆ

ಸಾಂಸ್ಕೃತಿಕ ಕ್ರಾಂತಿಯೂ ಆಗಬೇಕಾಗಿದೆ ಎಂಬ ಕಾಣ್ಕೆ ಅವರಿಗೆ ಇದ್ದಿತು. ಅವರು ಗಾಂಧಿ ದೃಷ್ಟಿಕೋನವನ್ನು ಜೆ.ಪಿಯಂತೆ ಸಂಪೂರ್ಣ ಅಲ್ಲಗೆಳೆಯದಾದರು. ಅವರಿಗೆ ಮಾರ್ಕ್ಸ್‌ವಾದಿಗಳಿಂದ ತುಂಬಿ ಹೋಗಿದ್ದ ಕಾಂಗ್ರೆಸ್ ಸಮಾಜವಾದಿ ಪಕ್ಷದಲ್ಲಿನ ಭೌತವಾದಿಗಳೊಂದಿಗೆ ಸರಸವಾಡುವುದಕ್ಕಿಂತ ಅಧ್ಯಾತ್ಮವಾದಿ ಗಾಂಧೀಜಿಯೊಡನೆ ಗುದ್ದಾಡುವುದು ಹೆಚ್ಚು ಪ್ರಿಯವೆನಿಸಿತ್ತು.

ಯುದ್ಧ ವಿರೋಧಿ ಪ್ರಚಾರ - ಮೊದಲ ಬಂಧನ

ಈ ಮಧ್ಯೆ ೧೯೩೯ರ ಮೇನಲ್ಲಿ ಹಿಟ್ಲರ್ ಪೋಲೆಂಡ್ ಮೇಲೆ ದಾಳಿ ಮಾಡಿದ ಪರಿಣಾಮವಾಗಿ, ಬ್ರಿಟನ್ ಜರ್ಮನಿಯ ಮೇಲೆ ಯುದ್ಧ ಘೋಷಿಸಿ, ಮಹಾಯುದ್ಧವನ್ನು ಪ್ರವೇಶಿಸಿತು. ಈ ಸಂದರ್ಭದಲ್ಲಿ, ಕಾಂಗ್ರೆಸ್ ಪಕ್ಷ ಬ್ರಿಟಿಷ್ ಸರ್ಕಾರದ ಪರ ವಹಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾಗ, ಬ್ರಿಟಿಷ್ ಸರ್ಕಾರದ ವಿರುದ್ಧ ನಾಗರಿಕ ಅಸಹಕಾರದ ಸತ್ಯಾಗ್ರಹಕ್ಕೆ ಕರೆ ಕೊಡುವಂತೆ ಗಾಂಧೀಜಿಯನ್ನು ಲೋಹಿಯಾ ಆಗ್ರಹಿಸಿದರು. ಜೊತೆಗೆ 'ಬಂಡವಾಳವಾದ, ಫ್ಯಾಸಿಸಂ ಹಾಗೂ ಸಾಮ್ರಾಜ್ಯವಾದಗಳು ಒಂದೇ ವಿಚಾರಧಾರೆಯ ಮೂರು ಮುಖಗಳಷ್ಟೇ ಆಗಿದ್ದು, ಬಂಡವಾಳದಾರರ ಹುನ್ನಾರ ಸ್ವದೇಶದಲ್ಲಿ ಫ್ಯಾಸಿಸಮ್ಮನ್ನೂ, ವಿದೇಶಗಳಲ್ಲಿ ಸಾಮ್ರಾಜ್ಯವಾದವನ್ನು ಹುಟ್ಟುಹಾಕುತ್ತದೆ' ಎಂದು ಅವರು ವಾದಿಸಿದರು. ಈ ಯುದ್ಧದಲ್ಲಿ ಯಾರ ಪರ ವಹಿಸುವುದೂ ಅಸಂಬದ್ಧವಾದ ಆಯ್ಕೆಯಾಗುವುದೆಂಬ ನಂಬಿಕೆಯಿಂದ ಯುದ್ಧವಿರೋಧಿ ಪ್ರಚಾರಾಂದೋಲನದಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡರು. ಈ ಸಂಬಂಧ ಲೋಹಿಯಾ ೧೯೩೯ರಲ್ಲಿ ತಮ್ಮ ಸಾರ್ವಜನಿಕ ಜೀವನದ ಮೊದಲ ಬಂಧನಕ್ಕೆ ಒಳಗಾದರು. ಆದರೆ ನ್ಯಾಯಾಲಯದಲ್ಲಿ ತಮ್ಮ ಪರ ತಾವೇ ವಾದಿಸಿ, ಕೆಲವೇ ದಿನಗಳಲ್ಲಿ ಬಿಡುಗಡೆಯೂ ಆದರು. ತಾವು ನಂಬಿದ್ದ ನೆಹರೂ ಆ ವರ್ಷದ ವಾರ್ಧಾ ಕಾಂಗ್ರೆಸ್ ಸಮಾವೇಶದಲ್ಲಿ, ಯುದ್ಧ ಮುಗಿದ ನಂತರ ಸ್ವಾತಂತ್ರ್ಯ ನೀಡುವುದಾದರೆ ಬ್ರಿಟಿಷ್ ಸರ್ಕಾರವನ್ನು ಬೆಂಬಲಿಸುವ ಗೊತ್ತುವಳಿಯನ್ನು ಮಂಡಿಸಿದಾಗ, ಲೋಹಿಯಾ ಸಿಡಿದೆದ್ದರು. ನೆಹರೂರನ್ನು 'ನಟ ಶಿರೋಮಣಿ' ಎಂದು ಮೂದಲಿಸಿದರು. ಇನ್ನು ಮುಂದೆ ಜನ ಇಬ್ಬರ-ಗಾಂಧೀಜಿ ಹಾಗೂ ನೆಹ್ರೂ-ಬದಲಾಗಿ ಒಬ್ಬರ–ಗಾಂಧೀಜಿ-ಮಾತನ್ನಷ್ಟೇ ಕೇಳಬೇಕಾಗುತ್ತದೆ ಎಂದು ಎಚ್ಚರಿಸಿದರು.

ಬ್ರಿಟಿಷ್ ಪ್ರಭುತ್ವದೊಂದಿಗೆ ಇನ್ನೂ ಸಂಧಾನದಲ್ಲಿ ತೊಡಗಿದ್ದ ಗಾಂಧೀಜಿ ಸತ್ಯಾಗ್ರಹಕ್ಕೆ ಇದು ಸಕಾಲವಲ್ಲ ಎಂದು ವಾದಿಸಿದರು. ಆದರೆ ಈ ಸಂಬಂಧ ಲೋಹಿಯಾ ಮಂಡಿಸಿದ ವಾದವನ್ನು ತಮ್ಮ 'ಹರಿಜನ' ಪತ್ರಿಕೆಯಲ್ಲಿ ಪ್ರಕಟಿಸಿದರು. ಹಾಗೇ ಯುದ್ಧವನ್ನು ಶಸ್ತ್ರಾಸ್ತ್ರಗಳ ರಾಜಕಾರಣವೆಂದು ವಿಶ್ಲೇಷಿಸಿ ಲೋಹಿಯಾ ಬರೆದಿದ್ದ ಲೇಖನವನ್ನು ಗಾಂಧೀಜಿ ತುಂಬ ಮೆಚ್ಚಿ, ಅದನ್ನೂ 'ಹರಿಜನ'ದಲ್ಲಿ ಪ್ರಕಟಿಸಿದರು. ಈ

ಮಧ್ಯೆ ೧೯೪೦ರ ಜೂನ್‌ನಲ್ಲಿ ಲೋಹಿಯಾರನ್ನು ಬ್ರಿಟಿಷ್ ಸರ್ಕಾರ ಯುದ್ಧ ವಿರೋಧಿಯಾದ ಪ್ರಚೋದನಕಾರಿ ಭಾಷಣ ಮಾಡಿದ್ದಕ್ಕಾಗಿ ಮತ್ತೊಮ್ಮೆ ಬಂಧಿಸಿ ಎರಡು ವರ್ಷಗಳ ಕಠಿಣ ಸೆರೆಮನೆ ವಾಸಕ್ಕೆ ದೂಡಿದಾಗ, ಗಾಂಧಿ ಅದನ್ನು ಅಕ್ಷಮ್ಯ ಎಂದು ಕರೆದರು. ನ್ಯಾಯಾಲಯದಲ್ಲಿ ಲೋಹಿಯಾ ನೀಡಿದ ಹೇಳಿಕೆಯನ್ನು ಮೆಚ್ಚುಗೆಯಿಂದ ಗಾಂಧೀಜಿ ಉದ್ಧರಿಸಿದರು. ಅಲ್ಲದೆ, ಬ್ರಿಟಿಷ್ ಸರ್ಕಾರದ ಇಂತಹ ಕೃತ್ಯಗಳು ತಮ್ಮನ್ನು. ಲೋಹಿಯಾ ಆಗ್ರಹಿಸಿದಂತೆ, ನಾಗರಿಕ ಅಸಹಕಾರ ಸತ್ಯಾಗ್ರಹದ ಕರೆ ಕೊಡಲು ಪ್ರೇರೇಪಿಸುತ್ತವೆ ಎಂದು ಎಚ್ಚರಿಸಿದರು.

ಕ್ರಿಪ್ಸ್ ಆಯೋಗದ ಆಗಮನ - ಲೋಹಿಯಾರ ವಿಶ್ವದೃಷ್ಟಿ

೧೯೪೧ರ ಸೆಪ್ಟೆಂಬರ್‌ನಲ್ಲಿ ಜಪಾನ್ ಅಮೆರಿಕಾದ ಪರ್ಲ್ ಹಾರ್ಬರ್ ಮೇಲಿನ ಯಶಸ್ವಿ ದಾಳಿಯ ಮೂಲಕ ಯುದ್ಧದಲ್ಲಿ ತನ್ನ ಮೇಲುಗೈಯನ್ನು ಸಾಧಿಸಿ ತೋರಿದಾಗ ಬ್ರಿಟನ್ ಕಂಗೆಟ್ಟಿತು. ಜಪಾನ್-ಜರ್ಮನಿ ಜೋಡಿ ಏಷ್ಯಾದಲ್ಲಿ ತನ್ನ ಆಕ್ರಮಣವನ್ನು ಯಶಸ್ವಿಯಾಗಿ ಮುಂದುವರಿಸಿದ್ದು, ಬ್ರಿಟಿಷ್-ಭಾರತ ಕೂಡಾ ಆಕ್ರಮಣಕ್ಕೆ ತುತ್ತಾಗುವ ಆತಂಕ ಎದುರಾಯಿತು. ಕೂಡಲೇ ಎಚ್ಚೆತ್ತುಗೊಂಡ ಬ್ರಿಟಿಷ್ ಸರ್ಕಾರ, ಸ್ವಾತಂತ್ರ್ಯ ನೀಡಿಕೆ ಸಂಬಂಧದ ಪ್ರಕ್ರಿಯೆಯನ್ನು ಪುನರಾರಂಭಿಸಿತು. ಈ ದಿಸೆಯಲ್ಲಿ ಹೊಸ ಸಂವಿಧಾನದ ಕರಡು ತಯಾರಿಸಲು ಕ್ರಿಪ್ಸ್ ಆಯೋಗವನ್ನು ಕಳಿಸುವ ವ್ಯವಸ್ಥೆ ಮಾಡಿತು. ಲೋಹಿಯಾ, ಸೇರಿದಂತೆ ಬಂಧಿತರಾಗಿದ್ದ ಎಲ್ಲ ಸ್ವಾತಂತ್ರ್ಯ ಹೋರಾಟಗಾರರನ್ನು ಬಿಡುಗಡೆ ಮಾಡಿತು. ಆದರೆ ಈ ಆಯೋಗ ಅನೇಕ ಸಂಘ ಸಂಸ್ಥೆಗಳೊಂದಿಗೆ ಮಾತುಕತೆ ನಡೆಸಿ ಸಿದ್ಧಪಡಿಸಿದ ಕರಡು ರಾಜ್ಯಾಂಗ, ದೇಶ ವಿಭಜನಾವಾದಿಗಳ ಹೊರತಾಗಿ ಯಾರಿಗೂ ಒಪ್ಪಿಗೆಯಾಗಲಿಲ್ಲ. 'ಸರ್ ಸ್ಟಾಫರ್ಡ್ ಕ್ರಿಪ್ಸ್‌ನ ರಹಸ್ಯ' ಎಂಬ ತಮ್ಮದೊಂದು ಕಿರುಪುಸ್ತಿಕೆಯಲ್ಲಿ ಲೋಹಿಯಾ, 'ಈ ಆಯೋಗವನ್ನು ಯುದ್ಧ ಸಂದರ್ಭದಲ್ಲಿ ಬ್ರಿಟನ್‌ನ ಹಿತಾಸಕ್ತಿ ಕಾಪಾಡಿಕೊಳ್ಳಲು ರಚಿಸಲಾಗಿರುವುದಷ್ಟೆ. ಬ್ರಿಟನ್ ರಾಜ್ಯವ್ಯವಸ್ಥೆ ಉಳಿಯಲು ಬ್ರಿಟಿಷ್ ಸಾಮ್ರಾಜ್ಯಶಾಹಿ ಉಳಿಯುವುದು ಅನಿವಾರ್ಯವಾಗಿದೆ. ಹೀಗಿರುವಾಗ ಚರ್ಚಿಲ್ ತನ್ನ ಸಾಮ್ರಾಜ್ಯವನ್ನು ತಂತಾನೇ ವಿಸರ್ಜಿಸಲಾರ' ಎಂದು ವಿಶ್ಲೇಷಿಸಿದರು.

ಇದೇ ಸಂದರ್ಭದಲ್ಲಿ 'ರಕ್ತಪಿಪಾಸು ಜಪಾನ್ ಮತ್ತು ಬುದ್ಧಿಗೇಡಿ ಬ್ರಿಟನ್' ಎಂಬ ತಮ್ಮದೊಂದು ಲೇಖನದಲ್ಲಿ ಯುದ್ಧ ಕುರಿತ ತಮ್ಮ ನಿಲುವನ್ನು ಹೀಗೆ ವಿಶ್ಲೇಷಿಸಿದರು: 'ಮಹಾತ್ಮಾಗಾಂಧಿ ಮತ್ತು ನನ್ನ ಇತಿಹಾಸದ ಸತ್ವಶೀಲತೆಯಿಂದ ನಾನು ಪ್ರಭಾವಿತನಾಗದಿದ್ದಲ್ಲಿ, ತುಳಿತ ಹಾಗೂ ಶೋಷಣೆಗೊಳಗಾದ ಏಷ್ಯಾ ಜನಾಂಗಕ್ಕೆ ಸೇರಿದ ನಾನು ಬ್ರಿಟನ್‌ಗೆ ಮಣ್ಣು ಮುಕ್ಕಿಸುತ್ತಿರುವ ಜಪಾನ್‌ನ ಮಿಲಿಟರಿ ನಾಯಕ

ಟೋಜೋನನ್ನು ಎತ್ತಿ ಹಿಡಿಯುತ್ತಿದ್ದೆನೋ ಏನೊ! ಆದರೆ ಟೋಜೋ, ಅತ್ಯಾಚಾರಗಳಲ್ಲಿ ಹಿಟ್ಲರನನ್ನು ಮೀರಿಸಿದ್ದಾನೆ.... ಟೋಜೊ-ಚರ್ಚಿಲ್-ಹಿಟ್ಲರ್ ಇವರ ನಡುವೆ ಯಾರನ್ನು ಆಯ್ಕೆ ಮಾಡಿದರೂ, ನಾವು ಕಟ್ಟಬೇಕೆಂದು ಕನಸು ಕಾಣುತ್ತಿರುವ ಉತ್ತಮ ಪ್ರಪಂಚವನ್ನು ಕಟ್ಟಲಾರೆವು.' ಆ ಹೊತ್ತಿಗಾಗಲೇ ಲೋಹಿಯಾ ರಾಷ್ಟ್ರೀಯ ಸ್ವಾತಂತ್ರ್ಯದ ಪ್ರಶ್ನೆಯನ್ನು, ಮುಂದೆ ಕಟ್ಟಬೇಕಾದ ಉತ್ತಮ ಪ್ರಪಂಚದೊಂದಿಗೆ ಜೋಡಿಸಿ ನೋಡುವ ವಿಶ್ವದೃಷ್ಟಿಯನ್ನು ರೂಪಿಸಿಕೊಳ್ಳುತ್ತಿದುದು ಈ ವಿಶ್ಲೇಷಣೆಯಿಂದ ವೇದ್ಯವಾಗುತ್ತದೆ. ಈ ಲೇಖನವನ್ನು ಬಹುವಾಗಿ ಮೆಚ್ಚಿದ ಗಾಂಧೀಜಿ, ಅದನ್ನು 'ಹರಿಜನ'ದಲ್ಲಿ 'ಸಂಬಂಧಪಟ್ಟ ಎಲ್ಲರ ಅವಗಾಹನೆಗಾಗಿ' ಎಂಬ ಟಿಪ್ಪಣಿಯೊಂದಿಗೆ ಪ್ರಕಟಿಸಿದರು. ಈ ಸಂದರ್ಭದಲ್ಲಿ ವಾರ್ಧಾ ಆಶ್ರಮದಲ್ಲಿ ಕೆಲ ದಿನಗಳ ಕಾಲ ಗಾಂಧೀಜಿಯೊಂದಿಗೆ ತಂಗಿದ ಲೋಹಿಯಾ, ಯುದ್ಧದ ಪರಿಣಾಮಗಳ ಬಗ್ಗೆ ಮತ್ತು ಈ ಯುದ್ಧ, ಗಾಂಧೀಜಿಯ ಮಧ್ಯಪ್ರವೇಶದಿಂದ ಎಲ್ಲ ವಸಾಹತು ರಾಷ್ಟ್ರಗಳ ಸ್ವಾತಂತ್ರ್ಯಕ್ಕೆ ದಾರಿ ಮಾಡಿಕೊಡಬಲ್ಲ ಸಾಧ್ಯತೆಗಳ ಬಗ್ಗೆ ಚರ್ಚಿಸಿದರು. ಹಾಗೇ ತಾವು ಕಟ್ಟಿಕೊಂಡಿದ್ದ ಹೊಸ ಪ್ರಪಂಚದ ನೀಲನಕ್ಷೆಯನ್ನೂ ಮಂಡಿಸಿದರು. ಇದರಲ್ಲಿ ಎಲ್ಲ ವಹಾಸತುಗಳಲ್ಲಿನ ಸಾಮ್ರಾಜ್ಯಶಾಹಿ ಬಂಡವಾಳದ ಮುಟ್ಟುಗೋಲು ಹಾಗೂ ಆ ಎಲ್ಲ ವಸಾಹತುಗಳ ವಿಮೋಚನೆ ಮತ್ತು ಯಾರು ಯಾವ ರಾಷ್ಟ್ರದಲ್ಲಿ ಬೇಕಾದರೂ ಸಂಚರಿಸುವ, ವಾಸಮಾಡುವ ವಿಶ್ವಪ್ರಜೆತನದ ಹಕ್ಕು ಮುಂತಾದ ವಿಚಾರಗಳನ್ನೊಳಗೊಂಡಿತ್ತು. ಲೋಹಿಯಾರ ಈ ಹೊಸ ವಿಶ್ವ ಪರಿಕಲ್ಪನೆಯನ್ನು ಗಾಂಧೀಜಿ ಕುತೂಹಲದಿಂದ ಕೇಳಿದರು.

'ಮಾಡು ಇಲ್ಲವೇ ಮಡಿ' – ಭೂಗತರಾದ ಲೋಹಿಯಾ

ಕೊನೆಗೂ ಗಾಂಧೀಜಿ, ದಿನೇ ದಿನೇ ಜಟಿಲವೂ ಅಪಾಯಕಾರಿಯೂ ಆಗುತ್ತಿದ್ದ ಯುದ್ಧ ಸಂದರ್ಭದ ಹಿನ್ನೆಲೆಯಲ್ಲಿ ಎಲ್ಲ ಪರ್ಯಾಯಗಳನ್ನೂ ಸಾಧ್ಯತೆಗಳನ್ನೂ ತೂಗಿ ನೋಡಿದರು. ಅನ್ಯ ಮಾರ್ಗವಿಲ್ಲದೆ, 'ಭಾರತ ಬಿಟ್ಟು ಹೊರಡಿ' ಎಂದು ಬ್ರಿಟಿಷ್ ಸರ್ಕಾರಕ್ಕೆ ಕರೆಕೊಡುವ ಗೊತ್ತುವಳಿಯೊಂದನ್ನು ಕಾಂಗ್ರೆಸ್ ಕಾರ್ಯಕಾರಣಿಗೆ ಕಳಿಸಿಕೊಟ್ಟರು. ನೆಹರೂ ಸೇರಿದಂತೆ ಹಲವು ಕಾಂಗ್ರೆಸ್ ನಾಯಕರ ಅಸಮಧಾನದ ನಡುವೆಯೂ, ೧೯೪೨ರ ಆಗಸ್ಟ್ ೮ರಂದು ಮುಂಬೈನಲ್ಲಿ ನಡೆದ ಕಾಂಗ್ರೆಸ್ ಕಾರ್ಯಕಾರಿಣಿ ಸಭೆ ಗಾಂಧೀಜಿಯ ಗೊತ್ತುವಳಿಯನ್ನು ಅನುಮೋದಿಸಿತು. ಅಂದು ಸಂಜೆ ನಡೆದ ಸಾರ್ವಜನಿಕ ಸಭೆಯಲ್ಲಿ ಗಾಂಧೀಜಿ ಬ್ರಿಟಿಷ್ ಸರ್ಕಾರದೊಂದಿಗೆ ಎಲ್ಲ ಸಂಧಾನಗಳೂ ಮುರಿದುಬಿದ್ದಿರುವುದರಿಂದ ಈಗ ಜನತೆಗೆ ಉಳಿದಿರುವುದು ಒಂದೇ ದಾರಿ—ಬ್ರಿಟಿಷ್ ಸರ್ಕಾರದ ವಿರುದ್ಧ ಅಸಹಕಾರ ಎಂದು ಘೋಷಿಸಿದರು. 'ಮಾಡು ಇಲ್ಲವೆ ಮಡಿ'

ಎಂದು ಜನತೆಗೆ ಕರೆಕೊಟ್ಟರು. ಭಾರತ ಬಿಟ್ಟು ಹೋಗುವ ತನ್ನ ಸ್ಪಷ್ಟ ನಿರ್ಧಾರ ಪ್ರಕಟಿಸಲು ಬ್ರಿಟಿಷ್ ಸರ್ಕಾರಕ್ಕೆ ೧೫ ದಿನಗಳ ಗಡುವನ್ನೂ ನೀಡಿದರು. ಪೋಲೀಸು ಮತ್ತು ಸೇನೆ ಸರ್ಕಾರದ ಜನತಾ ವಿರೋಧಿ ಆದೇಶಗಳನ್ನು ಪಾಲಿಸದಂತೆ ಕರೆಕೊಟ್ಟರು. ಜನತೆಯ ಎಲ್ಲ ವರ್ಗಗಳಿಗೆ ಅಹಿಂಸಾತ್ಮಕ ವಿರೋಧದ ವಿವಿಧ ಮಾದರಿಗಳನ್ನು ವಿವರಿಸಿದರು. ಮಾರನೆಯ ದಿನದ ಬೆಳಗಿನ ಹೊತ್ತಿಗೆ ಗಾಂಧೀಜಿ ಸೇರಿದಂತೆ ಕಾಂಗ್ರೆಸ್ಸಿನ ಎಲ್ಲ ನಾಯಕರನ್ನು ಬ್ರಿಟಿಷ್ ಸರ್ಕಾರ ಬಂಧಿಸಿ ಸೆರೆಮನೆಗೆ ದೂಡಿತು. ಆದರೆ ಲೋಹಿಯಾ ತಮ್ಮ ಗೆಳೆಯ ಅಚ್ಯುತ ಪಟವರ್ಧನ್ ಜೊತೆ ಭೂಗತರಾಗಿ ಬಂಧನ ತಪ್ಪಿಸಿಕೊಂಡರು.

ಒಂದು ವರ್ಷ ಒಂಭತ್ತು ತಿಂಗಳು ಕಾಲ ಮುಂದುವರಿದ ಲೋಹಿಯಾರ ಈ ಭೂಗತ ಜೀವನ, ಎಷ್ಟು ಸಾಹಸಮಯವೋ ಅಷ್ಟೂ ರೋಮಾಂಚನಕಾರಿಯೂ ಆಗಿತ್ತು. ಜನ ಗಾಂಧೀಜಿ ಬಂಧನದಿಂದಾಗಿ ದಿಕ್ಕುಗಾಣದೆ ರೊಚ್ಚಿಗೆದ್ದಿದ್ದರು. ಸರ್ಕಾರಿ ಆಸ್ತಿಪಾಸ್ತಿಯನ್ನು ನಾಶಮಾಡುವುದಕ್ಕೆ ತೊಡಗಿದ್ದರು. ಸರ್ಕಾರ 'ಕಂಡಲ್ಲಿ ಗುಂಡು' ಆಜ್ಞೆ ಹೊರಡಿಸಿತ್ತು. ಸರ್ಕಾರಿ ಆಸ್ತಿಪಾಸ್ತಿ ಹಾನಿ ಕುರಿತಂತೆ ವಿಶ್ವದ ಸಹಾನುಭೂತಿ ಗಳಿಸಲು ಬ್ರಿಟಿಷ್ ಸರ್ಕಾರ, ಬಿ.ಬಿ.ಸಿ. ಮೂಲಕ ಕಾಂಗ್ರೆಸ್ ಮೇಲೆ ಹಿಂಸಾಚಾರದ ಪ್ರಚೋದನೆಯ ಆಪಾದನೆ ಹೊರಿಸಿತು. ಇದರಿಂದಾಗಿ ದೇಶಾದ್ಯಂತ, ಸರ್ಕಾರಿ ಆಸ್ತಿಪಾಸ್ತಿಯನ್ನು ಹಾನಿಗೊಳಿಸುವುದು ಕಾಂಗ್ರೆಸ್ ಕಾರ್ಯಕ್ರಮವಾಗಿದೆ ಎಂಬ ಸುದ್ದಿ ಹಬ್ಬಿ, ಜನ ಸಾಮೂಹಿಕವಾಗಿ ಬುಡಮೇಲು ಕೃತ್ಯಗಳಲ್ಲಿ ತೊಡಗಿದರು. ಈ ಗೊಂದಲದ ಸಂದರ್ಭದಲ್ಲಿ ಕ್ರಾಂತಿಯನ್ನು ಸಂಘಟಿಸಿ ಸರ್ಕಾರವನ್ನು ಬುಡಮೇಲು ಮಾಡುವ ಯೋಜನೆಯನ್ನು, ಲೋಹಿಯಾ ಮತ್ತು ಅವರ ಹಾಗೆ ಬಂಧನವನ್ನು ತಪ್ಪಿಸಿಕೊಂಡಿದ್ದ ಕಮಲಾದೇವಿ ಚಟ್ಟೋಪಾಧ್ಯಾಯ, ಪೂರ್ಣಿಮಾ ಬ್ಯಾನರ್ಜಿ, ರಮಾನಂದನ್ ಮಿಶ್ರಾ, ಅರುಣಾ ಆಸೀಫ್ ಅಲಿ, ಸಾಣೆ ಗುರೂಜಿ ಮುಂತಾದ ಸಮಾಜವಾದಿ ಗೆಳೆಯರು ರೂಪಿಸಿದರು. ಕಾರ್ಯಕರ್ತರ ಸಣ್ಣ ಗುಂಪುಗಳನ್ನು ಸಂಘಟಿಸಿ ಅವರಿಗೆ ವೈಚಾರಿಕ ಹಾಗೂ ಕಾರ್ಯಾಚರಣೆಯ ತರಬೇತು ನೀಡುವುದು, ಸಣ್ಣ ಸಣ್ಣ ಕೈಪಿಡಿಗಳನ್ನು ಪ್ರಕಟಿಸುವುದು ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಈ 'ಆಗಸ್ಟ್ ಕ್ರಾಂತಿ'ಯ ಸಂದೇಶ ನೀಡಲು 'ರಾಷ್ಟ್ರೀಯ ಬಾನುಲಿ ಕೇಂದ್ರ'ಗಳನ್ನು ಸ್ಥಾಪಿಸುವುದು ಈ ಯೋಜನೆಯ ಮುಖ್ಯ ಕಾರ್ಯಕ್ರಮಗಳಾದವು. '*ಹೋರಾಟದ ಮುನ್ನಡೆ*', '*ಸ್ವಯಮಾಡಳಿತ ಹೇಗೆ?*' '*ಕ್ರಾಂತಿಗಾಗಿ ಸಿದ್ಧತೆ*' ಮುಂತಾದವು ಈ ಸಂಬಂಧ ಲೋಹಿಯಾ ಹೊರಡಿಸಿದ ಭೂಗತ ಕರಪತ್ರಗಳು. ಅಂಚೆಕಛೇರಿ, ರೈಲು ನಿಲ್ದಾಣಗಳ ಲೂಟಿ, ಟೆಲಿಗ್ರಾಫ್ ತಂತಿನಾಶ; ಮಿಲಿಟರಿ ಸಾಮಗ್ರಿ ಹೊತ್ತ ರೈಲುಗಳ ಧ್ವಂಸ ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಮುಂಬೈ ಮತ್ತು ಕಲ್ಕತ್ತಾಗಳಲ್ಲಿ

ಸಂಚಾರಿ ಬಾನುಲಿ ಕೇಂದ್ರಗಳ ಸ್ಥಾಪನೆ ಲೋಹಿಯಾ ಮತ್ತು ಅವರ ಗೆಳೆಯರು ಕೈಗೊಂಡ ಕಾರ್ಯಕ್ರಮಗಳು. ಇದರಿಂದಾಗಿ ಆಡಳಿತದ ಮೇಲೆ ನಿಯಂತ್ರಣ ಕಳೆದುಕೊಂಡ ಸರ್ಕಾರ, ಈ ಸಮಾಜವಾದಿ ಚಳುವಳಿಕಾರರ ಬೇಟೆ ಆರಂಭಿಸಿತು.

ಕಮ್ಯೂನಿಸ್ಟರ ಬದಲಾದ ನಿಲುವು - ಲೋಹಿಯಾಗೆ ಚಿತ್ರಹಿಂಸೆ

ಈ ಮಧ್ಯೆ ಮಹಾಯುದ್ಧ ತೆಗೆದುಕೊಂಡ ಅನಿರೀಕ್ಷಿತ ತಿರುವಿನ ಪರಿಣಾಮವಾಗಿ ಸೋವಿಯತ್ ಒಕ್ಕೂಟದ ಭದ್ರತೆಗೆ ಅಪಾಯ ಒದಗಬಹುದಾದ ಸಂದರ್ಭ ಉಂಟಾದಾಗ ಜಾಗತಿಕ ಮಟ್ಟದಲ್ಲಿ ಕಮ್ಯೂನಿಸ್ಟರು ಯುದ್ಧ ಕುರಿತ ತಮ್ಮ ನಿಲುವನ್ನು ಬದಲಿಸಿದರು. ಹೀಗಾಗಿ, ಆವರೆಗೆ ಎರಡನೇ ಮಹಾಯುದ್ಧವನ್ನು 'ಸಾಮ್ರಾಜ್ಯಶಾಹಿಗಳ ಯುದ್ಧ'ವೆಂದು ಕರೆಯುತ್ತಿದ್ದ ಭಾರತದ ಕಮ್ಯುನಿಸ್ಟರು, ಈಗ ಅದನ್ನು 'ಜನತಾ ಯುದ್ಧ' ಎಂದು ಕರೆಯಲಾರಂಭಿಸಿದರು. ಅಲ್ಲದೆ ಬ್ರಿಟಿಷ್ ಸರ್ಕಾರವನ್ನು ಬೆಂಬಲಿಸಿ ಚಳುವಳಿಕಾರರ ದಮನ ಹಾಗೂ ಬಂಧನ ಕಾರ್ಯಕ್ರಮಗಳಲ್ಲಿ ಸರ್ಕಾರಿ ಗೂಢಚಾರರೊಂದಿಗೆ ಸಹಕರಿಸತೊಡಗಿದರು. ಲೋಹಿಯಾಗೆ ಈಗ ಮಾರ್ಕ್ಸ್‌ವಾದದ ತಾತ್ವಿಕ ಶಿಸ್ತಿನ ಬಗ್ಗೆಯೇ ಅನುಮಾನವೆದ್ದಿತು. ಭಾರತದ ಕಮ್ಯೂನಿಸ್ಟರ ತತ್ವದಾರಿದ್ರ್ಯದ ಬಗ್ಗೆ ಜಿಗುಪ್ಸೆ ಪಟ್ಟುಕೊಂಡರು. ಅವರಲ್ಲಿ ಕಮ್ಯೂನಿಸ್ಟರ ತಾತ್ವಿಕ ಪರಿವೇಷವನ್ನು ಬಯಲು ಮಾಡುವ ಹಠ ಮೂಡಿತು. ಅವರು ಭೂಗತ ಜೀವನದ ಮಧ್ಯವೇ ಮಾರ್ಕ್ಸ್‌ವಾದದ ವಿಮರ್ಶೆ ಬರೆಯತೊಡಗಿದರು. ಮುಂದೆ ಇದು 'ಮಾರ್ಕ್ಸ್ ನಂತರದ ಅರ್ಥಶಾಸ್ತ್ರ' ಎಂಬ ಹೆಸರಲ್ಲಿ ಸುಪ್ರಸಿದ್ಧ ಸಂಶೋಧನ ಪ್ರಬಂಧವಾಗಿ ಪ್ರಕಟವಾಯಿತು.

ಲೋಹಿಯಾ ವೇಷ ಮರೆಸಿಕೊಂಡು ದೇಶಾದ್ಯಂತ ಅಲೆದಾಡಿ ಜನರನ್ನು ಹುರಿದುಂಬಿಸುತ್ತಿದ್ದರು. ಸರ್ಕಾರದ ಒತ್ತಡ ಹೆಚ್ಚಾದಾಗ ಅವರು ಭಾರತದ ಗಡಿಯನ್ನು ದಾಟಿ ನೇಪಾಳ ಹೊಕ್ಕರು. ಅಲ್ಲಿ ಜಯಪ್ರಕಾಶ ನಾರಾಯಣರ ಜೊತೆ ಸೇರಿ ಗಡಿ ಪ್ರದೇಶಗಳಲ್ಲಿ 'ಸ್ವಯಮಾಡಳಿತ ಪಡೆ' ಕಟ್ಟುವಲ್ಲಿ ಅವರೊಂದಿಗೆ ಸಹಕರಿಸಿದರು. ಅಲ್ಲಿಯೂ ಪೋಲೀಸ್ ಗೂಢಚಾರರು ಬೆನ್ನಟ್ಟಿ ಬಂದಾಗ ತಲೆ ತಪ್ಪಿಸಿಕೊಂಡು ಅಸ್ಸಾಂ ಪ್ರವೇಶಿಸಿ, 'ಆಜಾದ್ ಹಿಂದ್ ಫೌಜ್' ಮೂಲಕ ಬ್ರಿಟಿಷರ ವಿರುದ್ಧ ಯುದ್ಧ ಸಾರಿದ್ದ ಸುಭಾಷರ ಸಂಪರ್ಕಕ್ಕಾಗಿ ಯತ್ನಿಸಿದರು. ಅದು ಸಾಧ್ಯವಾಗದೆ ಹತಾಶರಾಗಿ ಕಲ್ಕತ್ತ ತಲುಪಿ ಮತ್ತೆ ಗೂಢಚಾರರ ಮುತ್ತಿಗೆಯಿಂದ ತಪ್ಪಿಸಿಕೊಂಡು ಮುಂಬೈಗೆ ಪ್ರಯಾಣ ಮಾಡಿದರು. ಕಲ್ಕತ್ತಾ ಪೋಲೀಸರಿಂದ ಪೂರ್ಣ ಮಾಹಿತಿ ಪಡೆದಿದ್ದ ಮುಂಬೈ ಪೋಲೀಸರು, ಮುಂಬೈನ ಸ್ನೇಹಿತರ ಮನೆಯೊಂದರಲ್ಲಿ ಮಾರು ವೇಷದಲ್ಲಿ ತಂಗಿದ್ದ ಲೋಹಿಯಾರನ್ನು ಬಂಧಿಸಿ ಲಾಹೋರ್‌ಗೆ ಒಯ್ದರು.

ಲಾಹೋರ್ ಕೋಟೆಯ ಸೆರಮನೆ ಎಂದರೆ, ಆಗ ಭಾರತದಲ್ಲೇ ಚಿತ್ರ ವಿಚಿತ್ರ ಹಿಂಸೆಗಳಿಂದ ಕುಪ್ರಸಿದ್ಧವಾಗಿದ್ದ ಬೃಹತ್ ಸೆರಮನೆ. ಕ್ರಾಂತಿಯ ಒಬ್ಬ ನೇತಾರ ಜಯಪ್ರಕಾಶ್ ನಾರಾಯಣ್ ಆಗಲೇ ಆ ಸೆರೆಮನೆಯಲ್ಲಿ ಹಿಂಸೆಗೆ ಗುರಿಯಾಗಿದ್ದರು. ಈಗ ಕ್ರಾಂತಿಯ ಇನ್ನೊಬ್ಬ ನೇತಾರ ಲೋಹಿಯಾರನ್ನೂ, ಸರ್ಕಾರವನ್ನು ಬುಡಮೇಲು ಗೊಳಿಸುವ ಹಿಂಸಾಚಾರದ ಆರೋಪ ಹೊರಿಸಿ ಅಲ್ಲಿಗೆ ದೂಡಿದರು. ಕೈಕಾಲುಗಳೆರಡಕ್ಕೂ ಭಾರವಾದ ಬೇಡಿ, ವಾರಗಟ್ಟಲೆ ನಿದ್ರಾರಹಿತ ವಿಚಾರಣೆಗಳು, ವಿಚಾರಣೆಗೆ ಬಗ್ಗದಿದ್ದಾಗ ಕಲ್ಲು ನೆಲದ ಮೇಲೆ ಬೇಡಿ ಸಹಿತ ಉರುಳಾಟದ ಶಿಕ್ಷೆ, ಕತ್ತಲೆ ತುಂಬಿದ ಕೋಣೆಯಲ್ಲಿ ಸರಪಳಿ ಬಂಧನದ ಏಕಾಂತವಾಸ—ಹೀಗೆ ನಾನಾ ತರಹದ ಶಿಕ್ಷೆಗೆ ಲೋಹಿಯಾ ಒಳಪಟ್ಟರು. ಕೊನೆಗೂ 'ಕ್ರಾಂತಿ ಕಾರ್ಯಕ್ರಮ'ದ ವಿವರಗಳ ಬಗ್ಗೆ ಬಾಯಿ ಬಿಡದಿದ್ದಾಗ, ನ್ಯಾಯಾಲಯದ ಮಧ್ಯಪ್ರವೇಶದಿಂದಾಗಿ ಅವರನ್ನು ಆಗ್ರಾ ಸೆರೆಮನೆಗೆ ಸ್ಥಳಾಂತರಿಸಲಾಯಿತು. ಅಲ್ಲಿ ಆ ಹೊತ್ತಿಗಾಗಲೇ ವೃದ್ಧರಾಗಿದ್ದ ತಂದೆ ಹೀರಾಲಾಲ್, ಮಗನನ್ನು ಕಂಡು ಕೊನೆಯ ವಿದಾಯ ಹೇಳಿದರು. ನಂತರ ಕೆಲವೇ ದಿನಗಳಲ್ಲಿ ಅವರು ಕಲ್ಕತ್ತಾದ ಬಸ್‌ವೊಂದರಲ್ಲಿ ಪ್ರಯಾಣ ಮಾಡುತ್ತಿದ್ದಾಗಲೇ ಹೃದಯಾಘಾತದಿಂದ ನಿಧನರಾದರು. ಲೋಹಿಯಾಗೆ ಸುದ್ದಿ ತಿಳಿಯಿತಾದರೂ, ಪರೋಲ್ ಮೇಲೆ ಬಿಡುಗಡೆಯಾಗಲು ನಿರಾಕರಿಸಿದರು. ಸೆರೆಮನೆಯಿಂದಲೇ ಅಗಲಿದ ತಂದೆಗೆ ಅಶ್ರುತರ್ಪಣ ಅರ್ಪಿಸಿದರು.

ಮಹಾಯುದ್ಧದ ಅಂತ್ಯ - ಲೋಹಿಯಾ ಬಿಡುಗಡೆ

ಅಂತೂ ೧೯೪೫ರ ಹೊತ್ತಿಗೆ ಎರಡನೇ ಮಹಾಯುದ್ಧ, ಬ್ರಿಟನ್ ಸೇರಿದ್ದ ಮಿತ್ರರಾಷ್ಟ್ರಗಳ ಒಕ್ಕೂಟದ ವಿಜಯದಲ್ಲಿ ಕೊನೆಗೊಂಡಿತು. ಇಂಗ್ಲೆಂಡ್‌ನ ಸಂಸತ್ತಿಗೆ ನಡೆದ ಚುನಾವಣೆಗಳಲ್ಲಿ ಚರ್ಚಿಲ್ಲರ ಕನ್ಸರ್ವೇಟೀವ್ ಪಕ್ಷ ಸೋತು, ಭಾರತದ ಸ್ವಾತಂತ್ರ್ಯ ಹೋರಾಟದ ಬಗ್ಗೆ ಉದಾರವಾದಿ ನಿಲುವು ತಳೆದಿದ್ದ ಸಮಾಜವಾದೀ ಲೇಬರ್ ಪಕ್ಷ ಜಯಗಳಿಸಿತ್ತು. ಭಾರತದಲ್ಲಿನ ಅಶಾಂತಿ ಹಾಗೂ ಜಾಗತಿಕ ನಾಯಕರ ಒತ್ತಡಕ್ಕೆ ಮಣಿದು ಹೊಸ ಬ್ರಿಟಿಷ್ ಸರ್ಕಾರದ ಪ್ರಧಾನಮಂತ್ರಿ ಅಟ್ಲಿ, ಭಾರತಕ್ಕೆ ಅಧಿಕಾರ ಹಸ್ತಾಂತರಿಸುವ ಪ್ರಕ್ರಿಯೆ ಆರಂಭಿಸಿದ್ದರು. ಈ ಸಂಬಂಧ ಕ್ರಿಪ್ಸ್ ನೇತೃತ್ವದ ಕ್ಯಾಬಿನೆಟ್ ನಿಯೋಗವೊಂದನ್ನು ಭಾರತಕ್ಕೆ ಕಳಿಸಿದ್ದರು. ಆ ವೇಳೆಗಾಗಲೇ ಕಾಂಗ್ರೆಸ್‌ನ ಇತರ ಹಿರಿಯ ನಾಯಕರೊಂದಿಗೆ ಗಾಂಧೀಜಿ ಬಂಧನದಿಂದ ಬಿಡುಗಡೆ ಹೊಂದಿದ್ದರು. ಅವರು ಜೆ.ಪಿ. ಮತ್ತು ಲೋಹಿಯಾರಂತಹ ಯುವ ಸ್ವಾತಂತ್ರ್ಯ ಸೇನಾನಿಗಳು ಸೆರೆಮನೆಯಲ್ಲಿರುವಾಗ ಅಧಿಕಾರ ಹಸ್ತಾಂತರದ ಪ್ರಕ್ರಿಯೆ ನಡೆಯುವುದು ಸರಿಕಾಣದೆಂದು ಬ್ರಿಟಿಷ್ ಸರ್ಕಾರಕ್ಕೆ ಮನದಟ್ಟು ಮಾಡಿದರು. ಇದರ ಪರಿಣಾಮವಾಗಿ ಲೋಹಿಯಾ

ಮತ್ತು ಜೆ.ಪಿ., ೧೯೪೬ರ ಏಪ್ರಿಲ್ ೧೧ರಂದು ಬಿಡುಗಡೆ ಹೊಂದಿದರು. ಆಗಸ್ಟ್ ಕ್ರಾಂತಿಯ ಕಿಚ್ಚು ಹೊತ್ತಿಸಿದ್ದ ಈ ಇಬ್ಬರು ಯುವ ನಾಯಕರ ಬಿಡುಗಡೆಯನ್ನು ರಾಷ್ಟ್ರಾದ್ಯಂತ ಹಬ್ಬದಂತೆ ಆಚರಿಸಲಾಯಿತು. ಇವರಿಗಾಗಿ ಅಭಿನಂದನಾ ಹಾಗೂ ನಿಧಿ ಸಮರ್ಪಣಾ ಸಮಾರಂಭಗಳು ಏರ್ಪಾಡಾದವು. ಲೋಹಿಯಾ ಎಲ್ಲ ದೇಶಪ್ರೇಮಿಗಳ ಮನೆ ಮಾತಾದರು. ಆದರೆ ಸೆರೆಮನೆಯ ಚಿತ್ರ ಹಿಂಸೆಯಿಂದ ಲೋಹಿಯಾ ಆರೋಗ್ಯ ಸಾಕಷ್ಟು ಕೆಟ್ಟಿತ್ತು. ವಿಶ್ರಾಂತಿಗಾಗಿ ಬರುವಂತೆ ಸಮಾಜವಾದಿ ಗೆಳೆಯ ಜೂಲಿಯೋ ಮೆನ್ಜಿಸ್ ಲೋಹಿಯಾರನ್ನು ಗೋವಾಕ್ಕೆ ಆಹ್ವಾನಿಸಿದರು.

ಗೋವಾ ಹೋರಾಟ - ಗಾಂಧೀಜಿ ಮೆಚ್ಚುಗೆ

೧೯೪೬ರ ಜೂನ್‌ನಲ್ಲಿ ಗೋವಾಕ್ಕೆ ತೆರಳಿದ ಲೋಹಿಯಾಗೆ ವಿಶ್ರಾಂತಿಯೆಂಬುದೇ ಇಲ್ಲವಾಯಿತು. ಅಲ್ಲಿನ ಪೋರ್ಚುಗೀಸ್ ಸರ್ಕಾರ, ಜನತೆಗೆ ಕನಿಷ್ಟ ನಾಗರಿಕ ಸ್ವಾತಂತ್ರ್ಯಗಳನ್ನೂ ನೀಡದೆ ದಬ್ಬಾಳಿಕೆ ನಡೆಸಿತ್ತು. ಲಗ್ನಪತ್ರಿಕೆ ಮುದ್ರಿಸಲೂ ಸರ್ಕಾರದ ಅನುಮತಿ ಕೇಳುವಂತಹ ಪರಿಸ್ಥಿತಿ ಇತ್ತು. ಇದನ್ನು ತಿಳಿದ ಲೋಹಿಯಾ, ಕೂಡಲೇ ಜನಸಂಘಟನೆಗೆ ತೊಡಗಿದರು. ಲೋಹಿಯಾ ಬಗ್ಗೆ ಈಗಾಗಲೇ ತಿಳಿದಿದ್ದ ಜನತೆ, ಉತ್ಸಾಹದಿಂದ ಜೂನ್ ೧೮ ರಂದು ಒಂದು ಬೃಹತ್ ಸಭೆಯನ್ನು ಏರ್ಪಡಿಸಿ ಲೋಹಿಯಾರನ್ನು ವಿಮೋಚನಾ ಹೋರಾಟದ ನೇತೃತ್ವ ವಹಿಸಲು ಆಹ್ವಾನಿಸಿತು. ಪೋರ್ಚುಗೀಸ್ ಸರ್ಕಾರ ಲೋಹಿಯಾರನ್ನು ಸಭೆಯಲ್ಲೇ ಬಂಧಿಸಿತು. ಗೋವಾದ್ಯಂತ ಲೋಹಿಯಾ ಬಿಡುಗಡೆಗಾಗಿ ಮೆರವಣಿಗೆಗಳು ನಡೆದವು. ಪರಿಸ್ಥಿತಿ ವಿಕೋಪಕ್ಕೆ ಹೋಗದಂತೆ ತಡೆಯುವ ಉಪಾಯವಾಗಿ ಸರ್ಕಾರ ಲೋಹಿಯಾರನ್ನು ಮಾರನೇ ದಿನವೇ ಬಿಡುಗಡೆ ಮಾಡಿತು. ಎರಡು ದಿನಗಳ ನಂತರ ಲೋಹಿಯಾ ಪಣಜಿಯ ಮುಖ್ಯ ವೃತ್ತದಲ್ಲಿ ಸ್ವಾತಂತ್ರ್ಯ ಧ್ವಜ ಹಾರಿಸಿದರು. ಬ್ರಿಟಿಷ್ ಸರ್ಕಾರದ ಅಂತ್ಯದೊಂದಿಗೆ ಪೋರ್ಚುಗೀಸ್ ಸರ್ಕಾರವೂ ಅಂತ್ಯಗೊಳ್ಳಬೇಕು; ಅದಕ್ಕಾಗಿ ಜನತೆ ಹೋರಾಟಕ್ಕೆ ಸಿದ್ಧರಾಗಬೇಕೆಂದು ಕರೆಕೊಟ್ಟರು. ಪೋರ್ಚುಗೀಸ್ ಸರ್ಕಾರ ಅವರನ್ನು ಕೂಡಲೇ ಗಡೀಪಾರು ಮಾಡಿತು. ಜನತೆಗೆ ನಾಗರಿಕ ಹಕ್ಕುಗಳನ್ನು ನೀಡಲು ಗೋವಾ ಸರ್ಕಾರಕ್ಕೆ ಮೂರು ತಿಂಗಳುಗಳ ಗಡುವು ನೀಡಿದ ಲೋಹಿಯಾ ಮತ್ತೆ ಬರುವುದಾಗಿ ಹೇಳಿ, ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಗೆ ಆಹ್ವಾನಿತರಾಗಿದ್ದ ಕಾರಣ ಮುಂಬೈಗೆ ತೆರಳಿದರು. ಗಾಂಧೀಜಿ ಲೋಹಿಯಾರ ಗೋವಾ ಹೋರಾಟದ ಆರಂಭವನ್ನು ಮೆಚ್ಚಿ 'ಹರಿಜನ'ದಲ್ಲಿ ಲೇಖನ ಬರೆದರು.

ಆದರೆ ನೆಹರೂ ಪಟೇಲರಾದಿಯಾಗಿ, ಜಯಪ್ರಕಾಶರೂ ಸೇರಿದಂತೆ ರಾಷ್ಟ್ರೀಯ ನಾಯಕರಾರೂ ಲೋಹಿಯಾರ ಗೋವಾ ಹೋರಾಟಕ್ಕೆ ಬೆಂಬಲ ನೀಡಲಿಲ್ಲ.

ಲೋಹಿಯಾ ಏಕಾಂಗಿಯಾಗಿಯೇ ತಮ್ಮ ಮಾತಿನಂತೆ ಮೂರು ತಿಂಗಳ ನಂತರ ಮತ್ತೆ ಗೋವಾ ಪ್ರವೇಶಿಸಿ ಅಸಹಕಾರ ಚಳುವಳಿಗೆ ಕರೆಕೊಟ್ಟರು. ಗೋವಾ ಸರ್ಕಾರ ಲೋಹಿಯಾರನ್ನು ಬಂಧಿಸಿ, ಈ ಬಾರಿ ಚಿತ್ರಹಿಂಸೆಗೆ ಒಳಪಡಿಸಿತು. ಗೋವಾ ಪ್ರಕ್ಷುಬ್ಧವಾಯಿತು. ಲೋಹಿಯಾ ಸೆರೆಮನೆಯಲ್ಲಿದ್ದ ಹತ್ತು ದಿನಗಳ ಕಾಲ ಜನತೆ ಮುಷ್ಕರ, ಮೆರವಣಿಗೆ ನಡೆಸಿ ಪೋಲೀಸರ ಲಾಠಿ ಬಂದೂಕುಗಳಿಗೆ ಎದೆಯೊಡ್ಡಿದರು. ಸ್ವತಃ ಗಾಂಧೀಜಿ, ಗೋವಾ ಸರ್ಕಾರ ಹಾಗೂ ಭಾರತದ ವೈಸರಾಯ್‌ರೊಂದಿಗೆ ಪತ್ರವ್ಯವಹಾರ ನಡೆಸಿ ಲೋಹಿಯಾರ ಬಿಡುಗಡೆಗೆ ಪ್ರಯತ್ನಿಸಿದರು. ಅಲ್ಲದೆ, 'ಹರಿಜನ' ಪತ್ರಿಕೆಯಲ್ಲಿ ಗೋವಾ ಹೋರಾಟವನ್ನು ಸಮರ್ಥಿಸುತ್ತಾ ಲೋಹಿಯಾರ ಧೀಮಂತಿಕೆಯನ್ನು ಪ್ರಶಂಸಿಸಿ ಪತ್ರ-ಲೇಖನ ಬರೆದರು. ಅಂತೂ ಲೋಹಿಯಾರ ಬಿಡುಗಡೆಯಾಯಿತು. ಗೋವಾದ ಕೊಂಕಣಿ ಕವಿಗಳು ಲೋಹಿಯಾ ಉಂಟುಮಾಡಿದ ಜನಜಾಗೃತಿ ಬಗ್ಗೆ ಕವನ ಕಟ್ಟಿ ಹಾಡಿದರು. ಚಳುವಳಿಯನ್ನು ಮುಂದುವರೆಸಿ, ಭಾರತಕ್ಕೆ ಸಾಮ್ರಾಜ್ಯಶಾಹಿಯ ಬಾಗಿಲು ತೆರೆದ ಗೋವಾದಲ್ಲೇ ಆ ಸಾಮ್ರಾಜ್ಯಶಾಹಿಯನ್ನು ಅಂತ್ಯಗೊಳಿಸಲು ಜನತೆಗೆ ಲೋಹಿಯಾ ಕರೆಕೊಟ್ಟರು. ಅದಕ್ಕಾಗಿ ಅವರು ಹಣ-ಸಂಘಟನೆ ಎರಡನ್ನೂ ವ್ಯವಸ್ಥೆ ಮಾಡಿ, ಗಾಂಧೀಜಿ ಕರೆ ಮೇರೆಗೆ ನೌಖಾಲಿಗೆ ತೆರಳಿದರು.

ದೇಶ ವಿಭಜನೆಯ ಹುನ್ನಾರ - ಭುಗಿಲೆದ್ದ ಕೋಮುಹಿಂಸೆ

ನೌಖಾಲಿ ಹಿಂದು-ಮುಸ್ಲಿಂ ದಂಗೆಯಿಂದಾಗಿ ಹೊತ್ತಿ ಉರಿಯುತ್ತಿತ್ತು. ಬ್ರಿಟಿಷ್ ಸರ್ಕಾರದ ಅಧಿಕಾರ ಹಸ್ತಾಂತರದ ಪ್ರಕ್ರಿಯೆ ಹಳಿ ತಪ್ಪಿತ್ತು. ಸಂಪೂರ್ಣ ಅಧಿಕಾರ ಹಸ್ತಾಂತರದವರೆಗೆ ಮಧ್ಯಂತರ ಸರ್ಕಾರದಲ್ಲಿ ಭಾಗವಹಿಸುವ ಬಗ್ಗೆ ಹಾಗೂ ಸಂವಿಧಾನ ಸಭೆಯ ರಚನೆ ಕುರಿತಂತೆ ಸಮಾಜವಾದಿಗಳು ಕಾಂಗ್ರೆಸ್‌ನೊಂದಿಗೆ ತೀವ್ರ ಭಿನ್ನಾಭಿಪ್ರಾಯ ಹೊಂದಿದ್ದರು. ಕಾಂಗ್ರೆಸ್‌ನ ಪದಾಧಿಕಾರಿಗಳ್ಯಾರೂ ಮಧ್ಯಂತರ ಸರ್ಕಾರದಲ್ಲಿ ಅಧಿಕಾರ ಸ್ಥಾನ ಹೊಂದಬಾರದು ಎಂಬ ಲೋಹಿಯಾ ಷರತ್ತನ್ನು ನೆಹರೂ ಒಪ್ಪಿರಲಿಲ್ಲ ಈ ಕಾರಣದಿಂದಾಗಿ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿಯಾಗುವಂತೆ ನೆಹರೂ ನೀಡಿದ್ದ ಆಹ್ವಾನವನ್ನು ಲೋಹಿಯಾ ತಿರಸ್ಕರಿಸಿದ್ದರು. ಸೀಮಿತ ಮತದಾರ ಕ್ಷೇತ್ರದಿಂದ ಆಯ್ಕೆಯಾಗುವ ಸಂವಿಧಾನ ರಚನಾಸಭೆ, ನಿಜವಾಗಿ ಜನತಾಶಕ್ತಿಯ ಪ್ರತಿನಿಧಿಯಾಗಲಾರದು; ಹಾಗಾಗಿ ಜನತೆಯ ನಿಜವಾದ ಆಶೋತ್ತರಗಳನ್ನು ಪ್ರತಿಬಿಂಬಿಸುವ ಸಂವಿಧಾನವನ್ನು ಅದು ರೂಪಿಸಲಾರದೆಂದೂ ಸಮಾಜವಾದಿಗಳು ವಾದಿಸಿ, ಅದನ್ನೂ ತಿರಸ್ಕರಿಸಿದ್ದರು. ಬ್ರಿಟಿಷ್ ಸರ್ಕಾರ ಮೊದಲು ಸ್ವಾತಂತ್ರ್ಯ ಘೋಷಣೆ ಮಾಡಲಿ; ನಂತರದ ಕೆಲಸಗಳನ್ನು ನಾವೇ ಸ್ವತಂತ್ರವಾಗಿ ಮಾಡಿಕೊಳ್ಳೋಣ ಎಂಬುದು ಅವರ ಅಭಿಮತವಾಗಿತ್ತು.

ಇದನ್ನೊಪ್ಪದ ಗಾಂಧೀಜಿ, ನೆಹರೂ ಮೂಲಕ ಅಧಿಕಾರ ಹಸ್ತಾಂತರದ ಪ್ರಕ್ರಿಯೆಯನ್ನು ಮುಂದುವರೆಸಿದರು. ಆದರೆ ಮುಸ್ಲಿಮರಿಗೆ ಪ್ರತ್ಯೇಕ ರಾಷ್ಟ್ರದ ಬೇಡಿಕೆ ಮುಂದಿಟ್ಟಿದ್ದ ಮುಸ್ಲಿಂಲೀಗ್‌ನ ಮಹಮ್ಮದಾಲಿ ಜಿನ್ನಾ, ಈ ಪ್ರಕ್ರಿಯೆಯಲ್ಲಿ ತೊಡಕನ್ನುಂಟುಮಾಡಿದರು. ಮುಸ್ಲಿಂಲೀಗ್‌ನ ಹತೋಟಿಯಲ್ಲಿದ್ದ ಬಂಗಾಳ ಸರ್ಕಾರದ ಮುಖ್ಯಮಂತ್ರಿ ಪಾಕಿಸ್ತಾನದ ಬೇಡಿಕೆಯನ್ನು ಆಗ್ರಹಿಸಿ ೧೯೪೬ರ ಆಗಸ್ಟ್ ೧೬ರಂದು ನೇರ ಕಾರ್ಯಾಚರಣೆಗೆ ಕರೆಕೊಟ್ಟರು. ಇದರ ಪರಿಣಾಮ ಹಿಂದೂ-ಮುಸ್ಲಿಮರ ದಂಗೆ. ಕಲ್ಕತ್ತಾದಲ್ಲಿ ಆರಂಭವಾದ ಈ ದಂಗೆ ಬಿಹಾರ, ದೆಹಲಿ, ಪಂಜಾಬ್‌ವರೆಗೂ ಹರಡಿ ಒಂದು ವರ್ಷದಷ್ಟು ದೀರ್ಘಕಾಲ ಕಾಲ ದೇಶವನ್ನು ದಹಿಸಿತು. ಅಂತಿಮವಾಗಿ ಆರು ಲಕ್ಷ ಜನರನ್ನು ಬಲಿತೆಗೆದುಕೊಂಡು ಒಂದೂವರೆ ಕೋಟಿ ಜನರನ್ನು ನಿರ್ವಸಿತರನ್ನಾಗಿ ಮಾಡಿತು. ಈ ವ್ಯಾಪಕ ಹಾಗೂ ಅಮಾನುಷ ಮತೀಯ ಗಲಭೆ, ಗಾಂಧೀಜಿಯನ್ನು ಕಂಗೆಡಿಸಿತು. ಜನರನ್ನು ಸಾಂತ್ವನಗೊಳಿಸಲು, ಅವರಲ್ಲಿ ವಿವೇಕ ತುಂಬಲು ಅವರು ಹತ್ಯಾಕಾಂಡದ ಕೇಂದ್ರವೆನಿಸಿದ್ದ ಬಂಗಾಳದ ನೌಖಾಲಿಗೆ ಯಾತ್ರೆ ಕೈಗೊಂಡರು. ಆಗ ಲೋಹಿಯಾ ಗಾಂಧೀಜಿ ನೆರವಿಗೆ ಧಾವಿಸಿದರು. ರಕ್ತಪಿಪಾಸುಗಳಾಗಿದ್ದ ಜನರ ಗುಂಪಿನ ನಡುವೆ ಪ್ರಾಣವನ್ನೂ ಪಣಕ್ಕೊಡ್ಡಿ ಕೆಲಸ ಲೋಹಿಯಾ ಮಾಡಿದರು. ಗಾಂಧೀಜಿ ಮಾರ್ಗದರ್ಶನದಲ್ಲಿ ಗಲಭೆಯನ್ನು ತಹಬಂದಿಗೆ ತಂದು ಶಾಂತಿ ಸ್ಥಾಪಿಸುವಲ್ಲಿ ಅವರು ತಮ್ಮ ಧೈರ್ಯ-ಸಾಹಸ-ವಿವೇಕಗಳನ್ನು ಧಾರೆಯೆರೆದರು.

ಗಾಂಧೀಜಿ ಬಳಿಗೆ ನಿಯೋಗ – ದೇಶವಿಭಜನೆಗೆ ವಿರೋಧ

ಈ ಮಧ್ಯೆ ೧೯೪೭ರ ಫೆಬ್ರವರಿಯಲ್ಲಿ ಲೋಹಿಯಾ ಅಧ್ಯಕ್ಷತೆಯಲ್ಲಿ ಕಾನ್‌ಪುರದಲ್ಲಿ ಸಮಾಜವಾದಿಗಳು ಸಮಾವೇಶಗೊಂಡರು. ದೇಶವಿಭಜನೆಯ ಕಳಂಕದಿಂದ ತಮ್ಮನ್ನು ಮುಕ್ತಗೊಳಿಸಿಕೊಳ್ಳಲೋ ಎಂಬಂತೆ ಅವರು ತಮ್ಮ ಪಕ್ಷದ ಹೆಸರಿನಿಂದ ಕಾಂಗ್ರೆಸ್ ಶಬ್ದವನ್ನು ಕೈಬಿಡಲು ನಿರ್ಧರಿಸಿದರು. ಈ ಸಮಾವೇಶದಲ್ಲಿ ಲೋಹಿಯಾ ಮಾತನಾಡಿ, ಉಚ್ಚ-ನೀಚ, ಬಡವ-ಬಲ್ಲಿದ, ಸ್ಪೃಶ್ಯ-ಅಸ್ಪೃಶ್ಯ ಎಂಬ ಬೇಧಭಾವಗಳನ್ನಳಿಸುವ ಜಾತಿ ಮತ್ತು ವರ್ಗ ವಿನಾಶದ ಚಳುವಳಿ ಮೂಲಕ ಮಾತ್ರ ದೇಶದ ಕೋಮು ಏಕತೆಯೂ ಸೇರಿದಂತೆ ಎಲ್ಲ ರೀತಿಯ ಏಕತೆ ಸಾಧಿಸಲು ಸಾಧ್ಯ ಎಂದು ಪ್ರತಿಪಾದಿಸಿದರು. ಜೊತೆಗೆ ಗಾಂಧೀಜಿ ಇರುವವರೆಗೂ ಕಾಂಗ್ರೆಸ್‌ನೊಡನೆ ಸಮಾಜವಾದಿಗಳು ಸಂಪರ್ಕ ಕಳೆದುಕೊಳ್ಳಬಾರದೆಂದು ಮನವಿ ಮಾಡಿದರು. ನಂತರ ಕೆಲವೇ ದಿನಗಳಲ್ಲಿ ಅಶೋಕ ಮೆಹ್ತಾ, ಅರುಣಾ ಅಸಿಫ್ ಅಲಿ ಅವರನ್ನೊಳಗೊಂಡ ಸಮಾಜವಾದಿ ಪಕ್ಷದ ನಿಯೋಗವೊಂದು ಗಾಂಧೀಜಿಯನ್ನು ಭೇಟಿ ಮಾಡಿತು. ದೇಶವಿಭಜನೆಯ ವಿಚ್ಛಿದ್ರಕಾರಿ ರಾಜಕಾರಣದ ಹಿನ್ನೆಲೆಯಲ್ಲಿ ಸಮಾಜವಾದಿಗಳ ನಾಯಕತ್ವ ವಹಿಸಿಕೊಳ್ಳುವಂತೆ

ಕೇಳಿಕೊಂಡಿತು. ತನ್ನನ್ನು ಜಾತಿರಹಿತ ವರ್ಗರಹಿತ ಸಮಾಜ ನಿರ್ಮಾಣಕ್ಕೆ ಬದ್ಧವಾದ ಹುಟ್ಟು ಸಮಾಜವಾದಿ ಎಂದು ಕರೆದುಕೊಂಡ ಗಾಂಧೀಜಿ; ಸಮಾಜವಾದಿಗಳು ಮುಷ್ಕರ-ಪ್ರತಿಭಟನೆಗಳನ್ನು ಕೈಬಿಟ್ಟು, ಅಹಿಂಸೆಯನ್ನು ಒಪ್ಪಿಕೊಂಡು, ದೇವರಲ್ಲಿ ನಂಬಿಕೆಯಿಟ್ಟು, ಗ್ರಾಮಗಳಲ್ಲಿ ವಾಸಿಸುತ್ತಾ ದೀನದಲಿತರ ಹಾಗೂ ಮಹಿಳೆಯರ ಉನ್ನತಿಗಾಗಿ ಶ್ರಮಿಸುವುದಾದರೆ ಅವರ ಪಕ್ಷದ ಅಧ್ಯಕ್ಷರಾಗಲೂ ಸಿದ್ಧವೆಂದು ಹೇಳಿ ನಿಯೋಗವನ್ನು ನಿರಾಶೆಗೊಳಿಸಿದರು. ಜೊತೆಗೆ ೧೯೪೨ರಲ್ಲಿ ಭೂಗತ ಚಟುವಟಿಕೆಗಳ ಮೂಲಕ ಸಮಾಜವಾದಿಗಳು ಹಿಂಸೆಗೆ ಮಾನ್ಯತೆ ನೀಡಿದ್ದೇ ಇಂದಿನ ಕೋಮು ಹಿಂಸೆಗೂ ಕಾರಣವಾಗಿದೆ ಎಂದು ವಿಶ್ಲೇಷಿಸಿ, ನಿಯೋಗವನ್ನು ದಂಗುಬಡಿಸಿದರು.

ಈ ಮಧ್ಯೆ ಭಾರತದಲ್ಲಿನ ಅನಿಶ್ಚಿತತೆ-ಅಶಾಂತಿಗಳನ್ನು ಗಮನಿಸಿದ ಬ್ರಿಟಿಷ್ ಸರ್ಕಾರ, ಅಧಿಕಾರ ಹಸ್ತಾಂತರವನ್ನು ಕ್ಷಿಪ್ರಗೊಳಿಸುವ ಉದ್ದೇಶದಿಂದ ಲಾರ್ಡ್ ಮೌಂಟ್‌ಬೇಟನ್‌ರನ್ನು ವೈಸರಾಯ್ ಆಗಿ ಕಳಿಸಿತು. ಮೌಂಟ್‌ಬೇಟನ್ನರು ಸರ್ವ ಪಕ್ಷಗಳೊಂದಿಗೂ ಮಾತುಕತೆ ನಡೆಸಿ, ದೇಶ ವಿಭಜನೆಯ ಅನಿವಾರ್ಯತೆಯನ್ನು ಕಾಂಗ್ರೆಸ್ಸಿಗೆ ಮನದಟ್ಟು ಮಾಡಿದರು. ನೆಹರೂ-ಪಟೇಲ್ ದೇಶ ವಿಭಜನೆಯನ್ನು ತಾತ್ವಿಕವಾಗಿ ಒಪ್ಪಿಕೊಂಡಿದ್ದರು. ಗಾಂಧೀಜಿ ಆಘಾತಗೊಂಡಿದ್ದರು. ಅಧಿಕಾರ ಹಸ್ತಾಂತರ ಪ್ರಕ್ರಿಯೆಯಲ್ಲಿ ಭಾಗವಹಿಸಲು ನಿರಾಕರಿಸಿದ್ದ ಸಮಾಜವಾದಿಗಳು ಅಸಹಾಯಕರಾಗಿದ್ದರು. ಅಧಿಕಾರಕ್ಕಾಗಿ ಅವಸರಪಟ್ಟ ಕಾಂಗ್ರೆಸ್ ನಾಯಕರ ದೌರ್ಬಲ್ಯದಿಂದಾಗಿಯೇ ದೇಶ ವಿಭಜನೆಯ ಮುಸ್ಲಿಂ ಲೀಗ್ ಹಾಗೂ ಬ್ರಿಟಿಷ್ ಸರ್ಕಾರದ ಹುನ್ನಾರವನ್ನು ಸಮರ್ಥವಾಗಿ ಎದುರಿಸಲಾಗಲಿಲ್ಲವೆಂಬುದು ಅವರ ಅಭಿಪ್ರಾಯವಾಗಿತ್ತು. ೧೯೪೭ರ ಜೂನ್‌ನಲ್ಲಿ ಮೌಂಟ್ ಬೇಟನ್ ಸಿದ್ಧಪಡಿಸಿದ್ದ ಅಧಿಕಾರ ಹಸ್ತಾಂತರ ಯೋಜನೆ ಬಗ್ಗೆ ಚರ್ಚಿಸಲು ಸಭೆ ಸೇರಿದ್ದ ಕಾಂಗ್ರೆಸ್ ಕಾರ್ಯಕಾರಿಣಿಯಲ್ಲಿ, ಹೇಗಾದರೂ ಮಾಡಿ ದೇಶ ವಿಭಜನೆಯನ್ನು ತಡೆಯುವ ಗಾಂಧೀಜಿ ಹಂಬಲಕ್ಕೆ ನಿಜವಾಗಿ ಧ್ವನಿಕೊಟ್ಟವರು ಲೋಹಿಯಾ ಒಬ್ಬರೇ. ಅವರು ವಿಭಜನೆಯ ಪರ ವಾದ ಮಂಡಿಸಿದ ನೆಹರೂ-ಪಟೇಲರಿಬ್ಬರನ್ನೂ, ಅವರ ಅಲ್ಪದೃಷ್ಟಿಯ ರಾಜಕಾರಣಕ್ಕಾಗಿ ಖಂಡಿಸಿದರು. ಆದರೆ ಗಾಂಧೀಜಿ ಹಂಬಲ ಈಡೇರದೆ, ಕಾರ್ಯಕಾರಿಣಿ ದೇಶವಿಭಜನೆಯನ್ನು ಒಪ್ಪಿಕೊಂಡಿತು.

ಸ್ವಾತಂತ್ರ್ಯ ಘೋಷಣೆ - ಗಾಂಧೀಜಿ ಹತ್ಯೆ

ದೇಶ ಸ್ವತಂತ್ರವಾದ ಸಂಭ್ರಮದ ದಿನ ಗಾಂಧೀಜಿ, ಲೋಹಿಯಾ ಇಬ್ಬರೂ ಕಲ್ಕತ್ತಾದಲ್ಲಿ ಭುಗಿಲೆದ್ದಿದ್ದ ಮತೀಯ ಗಲಭೆಯನ್ನು ನಿಯಂತ್ರಿಸುವುದರಲ್ಲಿ ತೊಡಗಿದ್ದರು. ಲೋಹಿಯಾ ಹಿಂದೂ-ಮುಸ್ಲಿಂ ಬಾಂಧವರಿಬ್ಬರ ಜೊತೆಗೂ ಬೆರೆತು ಸ್ವಾತಂತ್ರ್ಯ

ಘೋಷಣೆಯ ಸಂತೋಷವನ್ನು ಹಂಚಿಕೊಂಡರಾದರೂ, ಆ ಸಂತೋಷ ಬಹಳ ದಿನಗಳ ಕಾಲ ಉಳಿಯಲಿಲ್ಲ. ಕಲ್ಕತ್ತಾದಲ್ಲಿ, ದೆಹಲಿಯಲ್ಲಿ ಮತ್ತೆ ಮತ್ತೆ ಮತೀಯ ಗಲಭೆಗಳು ತಲೆದೋರ ತೊಡಗಿದವು. ಶಾಂತಿ ಪ್ರಕ್ರಿಯೆ ಹಾಗೂ ಸಂತ್ರಸ್ತರ ಪುನರ್ವಸತಿ ಕೆಲಸಗಳಲ್ಲಿ ಲೋಹಿಯಾ ಗಾಂಧೀಜಿ ನೆರವಿಗೆ ನಿಂತರು. ಇದೆಲ್ಲದರ ಹಿನ್ನೆಲೆಯಲ್ಲಿ, ಗಾಂಧೀಜಿ ಮುಸ್ಲಿಮರಿಗೆ ಸಲ್ಲದ ಸಹಾನುಭೂತಿ ತೋರಿಸುತ್ತಿದ್ದಾರೆಂದು ಕ್ರುದ್ಧಗೊಂಡ ಕೆಲವು ಹಿಂದೂ ಕೋಮುವಾದಿಗಳು ಅವರ ಹತ್ಯೆಯ ಸಂಚು ರೂಪಿಸತೊಡಗಿದ್ದರು.

ಗಾಂಧೀಜಿಯ ಕೊನೆಯ ದಿನಗಳವು. ದೆಹಲಿಯಲ್ಲಿದ್ದ ಗಾಂಧೀಜಿ, ಲೋಹಿಯಾರನ್ನು ತಮ್ಮೊಡನೆಯೇ ಇರಿಸಿಕೊಂಡರು. ನೆಹರೂ-ಪಟೇಲರ ಆಡಳಿತ ವೈಖರಿ ಕುರಿತು ಲೋಹಿಯಾ ಮಾಡುತ್ತಿದ್ದ ಟೀಕೆಗೆ ಸಮಾಧಾನ ಹೇಳುತ್ತಿದ್ದ ಗಾಂಧೀಜಿ, ಸಮಾಜವಾದಿಗಳು ಇನ್ನೂ ಹೆಚ್ಚಿನ ಸಂಯಮ ಮತ್ತು ಜವಾಬ್ದಾರಿಯಿಂದ ನಡೆದುಕೊಳ್ಳುವುದಾದರೆ ಮಾತ್ರ ತಾವು ಅವರಲ್ಲಿ ಹೆಚ್ಚಿನ ನಂಬಿಕೆ ಇಡಲು ಸಾಧ್ಯವೆಂದು ಸೂಚಿಸಿದರು. ಕಾಂಗ್ರೆಸ್ಸನ್ನು ವಿಸರ್ಜಿಸಿ ಅದನ್ನು ರಚನಾತ್ಮಕ ಚಟುವಟಿಕೆಗಳ ಲೋಕಸೇವಾ ಸಂಘವನ್ನಾಗಿ ಪರಿವರ್ತಿಸುವ ತಮ್ಮ ಇಂಗಿತವನ್ನು ವ್ಯಕ್ತಪಡಿಸಿದರು. ಒಂದು ಸಂಜೆ ಪ್ರಾರ್ಥನೆಯ ನಂತರ ಲೋಹಿಯಾರ ಹೆಗಲ ಮೇಲೆ ಕೈಹಾಕಿ ವಾಯು ವಿಹಾರಕ್ಕೆ ಹೊರಟ ಗಾಂಧೀಜಿ, ಸಮಾಜವಾದಿಗಳು ಎನಿಸಿಕೊಂಡವರು ಸಮಾಜದ ಸಾಮಾನ್ಯ ಮನುಷ್ಯನೊಡನೆ ಗುರುತಿಸಿಕೊಳ್ಳುವ ರೀತಿಯಲ್ಲಿ ಜೀವನ ಶೈಲಿಯನ್ನು ಬದಲಾಯಿಸಿಕೊಳ್ಳಬೇಕಾದ ಅಗತ್ಯವನ್ನು ಒತ್ತಿ ಹೇಳಿದರು. ಸಿಗರೇಟ್, ಕಾಫಿ, ಚಹಾಗಳ ಚಟವನ್ನು ಬಿಡಲು ಲೋಹಿಯಾಗೆ ಸೂಚಿಸಿದರು. ಈ ದಿನಗಳಲ್ಲಿ ಲೋಹಿಯಾಗೆ ಮಹತ್ವದ ಜವಾಬ್ದಾರಿಯೊಂದನ್ನು ವಹಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಂತೆ ಗಾಂಧೀಜಿ ಕಂಡರು. ೧೯೪೮ರ ಜನವರಿ ೨೯ರಂದು ಅವರು ಲೋಹಿಯಾ ನಿಮ್ಮೊಂದಿಗೆ 'ಮನಬಿಚ್ಚಿ ಮಾತಾಡಬೇಕಾದ ಕೆಲವು ಮುಖ್ಯ ಸಂಗತಿಗಳಿವೆ, ನಾಳೆ ಭೇಟಿ ಮಾಡೋಣ' ಎಂದು ತಿಳಿಸಿದರು. ಆದರೆ ಆ ಮಹತ್ವದ ನಾಳೆಗಾಗಿ ಕಾಯ್ದ ಲೋಹಿಯಾಗೆ ಸಿಕ್ಕಿದ್ದು ಗಾಂಧೀಜಿ ಹತ್ಯೆಯ ಆಘಾತಕಾರಿ ಸುದ್ದಿ...

ಸಮಾಜವಾದಿಗಳ ಆರೋಪ - ಕಾಂಗ್ರೆಸ್‌ನಿಂದ ಬೇರ್ಪಟ್ಟ ಪಕ್ಷ

ಗಾಂಧಿ ಹತ್ಯೆಯ ಸಂಚಿನ ವಾಸನೆ ಮುಂಚೆಯೇ ಎಲ್ಲರ ಮೂಗಿಗೂ ಬಡಿದಿತ್ತು. ಈ ಬಗ್ಗೆ ಲೋಹಿಯಾ ಸೇರಿದಂತೆ ಅನೇಕರು ಹೆಚ್ಚಿನ ಭದ್ರತೆಗಾಗಿ ನೆಹರೂ ಪಟೇಲರನ್ನು ಆಗ್ರಹಿಸಿದ್ದರು. ಆದರೂ ಹತ್ಯೆ ನಡೆದು ಹೋಗಿತ್ತು. ರಾಷ್ಟ್ರ ಕಂಗೆಟ್ಟಿತ್ತು. ಕಾಂಗ್ರೆಸ್ಸಿಗರಿಗೆ ಗರ ಬಡಿದಂತಾಗಿತ್ತು. ಸಮಾಜವಾದಿಗಳು ತಂದೆಯನ್ನು ಕಳೆದುಕೊಂಡ ತಬ್ಬಲಿಗಳಾದಂತಿದ್ದರು. ಗಾಂಧೀಜಿಯ ಶವಯಾತ್ರೆಯನ್ನೂ ನೆಹ್ರೂ-ಪಟೇಲ್ ತಮ್ಮ ಪರ ಸಹಾನುಭೂತಿಗಾಗಿ

ಆಯೋಜಿಸಿಕೊಂಡಂತೆ ಲೋಹಿಯಾಗೆ ಕಂಡಿತು. ಅವರು ಖಿನ್ನರಾದರು. ಕೆಲವೇ ದಿನಗಳಲ್ಲಿ ಸಮಾಜವಾದಿ ಪಕ್ಷ ಒಂದು ಗೊತ್ತುವಳಿಯನ್ನು ಅಂಗೀಕರಿಸಿ, ಗಾಂಧೀಜಿ ಕೊಲೆಗೆ ಪ್ರಧಾನಿ ನೆಹರೂ, ಗೃಹಮಂತ್ರಿ ಪಟೇಲರ ಬೇಜವಾಬ್ದಾರಿತನ-ನಿರ್ಲಕ್ಷ್ಯಗಳೇ ಕಾರಣ ಎಂದು ಆರೋಪಿಸಿತು.

ಇದಕ್ಕೆ ಪ್ರತಿಕ್ರಿಯೆ ಎಂಬಂತೆ ಪಟೇಲರು ಒಂದೇ ತಿಂಗಳಲ್ಲಿ ಕಾಂಗ್ರೆಸ್ ಅಂಗರಚನೆಗೆ, ಪ್ರತ್ಯೇಕ ಸದಸ್ಯತ್ವ, ಸಂವಿಧಾನ ಹಾಗೂ ಕಾರ್ಯಕ್ರಮವಿರುವ ಬೇರಾವುದೇ ಪಕ್ಷದ ಸದಸ್ಯರಾಗಿರುವವರು ತಂತಾನೇ ಕಾಂಗ್ರೆಸ್ ಪಕ್ಷದ ಸದಸ್ಯತ್ವ ಕಳೆದುಕೊಳ್ಳುವರು ಎಂಬ ತಿದ್ದುಪಡಿ ಸೂಚಿಸಿ, ಅಂಗೀಕಾರ ಪಡೆದರು. ಈಗ ಕಾಂಗ್ರೆಸ್‌ನಲ್ಲಿ ಸಮಾಜವಾದಿಗಳು ಉಳಿಯಲು ಪಕ್ಷವನ್ನೇ ವಿಸರ್ಜಿಸಬೇಕಾದ ಅಪಾಯಕ್ಕೆ ಸಿಲುಕಿದರು. ಅವರು ೧೯೪೮ರ ಮಾರ್ಚ್‌ನಲ್ಲಿ ನಾಸಿಕ್‌ನಲ್ಲಿ ಸಮಾವೇಶ ನಡೆಸಿ, ಕಾಂಗ್ರೆಸ್‌ನೊಡನೆ ಸಾಂಸ್ಥಿಕ ಸಂಬಂಧ ಕಳೆದುಕೊಂಡು ತಮ್ಮ ಪಕ್ಷದ ಪ್ರತ್ಯೇಕ ಅಸ್ತಿತ್ವವನ್ನು ಘೋಷಿಸಿಕೊಂಡರು. ಈ ಸಂದರ್ಭದಲ್ಲಿ ಲೋಹಿಯಾ ಮಾತನಾಡಿ "ಸಮಾಜವಾದಿಗಳು ಕಾಂಗ್ರೆಸ್ಸನ್ನು ತೊರೆಯುತ್ತಿಲ್ಲ. ನಾವೆಲ್ಲ ಸೇರಿ ಕಟ್ಟಿದ ಪಕ್ಷವದು. ಆದರೆ ಕಾಂಗ್ರೆಸ್, ಸಮಾಜವಾದಿ ಆಶೋತ್ತರಗಳನ್ನೂ ಪ್ರಜಾಸತ್ತಾತ್ಮಕ ಕಾರ್ಯಶೈಲಿಯನ್ನೂ ಕೈಬಿಡುತ್ತಿರುವುದರಿಂದಾಗಿ, ಆ ಪಕ್ಷದಲ್ಲಿನ ನಮ್ಮ ಪಾಲನ್ನು ತ್ಯಾಗ ಮಾಡಿ ನಾವು ಪ್ರಜಾಸತ್ತೆಯ ಯಶಸ್ಸಿಗೆ ಅಗತ್ಯವಿರುವ ವಿರೋಧಪಕ್ಷವಾಗಿ ಜನತಾಂತ್ರಿಕ ಸಮಾಜವಾದದ ಹಾದಿಯಲ್ಲಿ ಕಾರ್ಯ ನಿರ್ವಹಿಸಲು ಈಗ ಬದ್ಧರಾಗಿದ್ದೇವೆ" ಎಂದು ಘೋಷಿಸಿದರು.

೪. ಸಮಾಜವಾದಿ ರಾಜಕಾರಣ: ಲೋಹಿಯಾ ತತ್ವಚಿಂತನೆ

ಸಮಾಜವಾದಿ ಆಂದೋಲನದ ಇತಿಹಾಸವನ್ನು ಬರೆಯುತ್ತಾ ಲೋಹಿಯಾ ೧೯೩೪ ರಿಂದ ೪೮ರವರೆಗಿನ ಅವಧಿಯನ್ನು 'ಮಸಾಲಾ ಗುಂಪಿನ ಅವಧಿ'ಯೆಂದೂ, ೪೮ ರಿಂದ ೧೯೫೭ರ ಅವಧಿಯನ್ನು 'ಭಾರಿ ಗದ್ದಲದ ಅವಧಿ'ಯೆಂದೂ ಕರೆದಿದ್ದಾರೆ. ಇದರರ್ಥ, ಮೊದಲ ಅವಧಿ ಪ್ರೇರಣೆ ಹಾಗೂ ಹೋರಾಟಗಳ ಅವಧಿಯಾದರೆ; ಎರಡನೇ ಅವಧಿ ಪಕ್ಷವು ತನ್ನ ಸ್ವಂತ ಅಸ್ತಿತ್ವ ಸ್ಥಾಪಿಸಿಕೊಳ್ಳಲು ನಡೆಸಿದ ಪ್ರಯತ್ನಗಳ ಅವಧಿ ಎಂದು ಹೇಳಬಹುದು. ಈ ಎರಡನೇ ಅವಧಿಯಲ್ಲಿ, ಪಕ್ಷ ಸಂಘಟನೆಯ ಗದ್ದಲದ ಜೊತೆಗೇ ಹೊಸ ತಾತ್ವಿಕ ಅನ್ವೇಷಣೆಯ ಚಿಂತನವೂ ನಡೆದಿತ್ತು. ಕಾಂಗ್ರೆಸ್‌ನಿಂದ ಸಮಾಜವಾದಿಗಳು ಬೇರ್ಪಟ್ಟ ನಾಸಿಕ್ ಸಮ್ಮೇಳನದಲ್ಲಿಯೇ ಲೋಹಿಯಾ, ಸಮಾಜವಾದಿಗಳು ಅನುಸರಿಸಬೇಕಾದ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ನೀತಿಗಳ ಪ್ರಸ್ತಾಪ ಮಾಡಿದ್ದರು. ಭಾರತದ ಎಲ್ಲ ೬೫೦ ರಾಜ ಸಂಸ್ಥಾನಗಳು ಭಾರತದ ಒಕ್ಕೂಟದಲ್ಲಿ ವಿಲೀನಗೊಂಡು, ಇಡೀ ದೇಶ ಒಂದು ಅಖಂಡ ಪ್ರಜಾಸತ್ತಾತ್ಮಕ ಗಣರಾಜ್ಯವಾಗಲು ಕ್ರಮ ಕೈಗೊಳ್ಳಬೇಕೆಂಬ ನಿರ್ಣಯವೊಂದನ್ನು ಅವರು ಮಂಡಿಸಿದರು. ಈ ಸಂಬಂಧ ಸ್ವತಃ ತಾವೇ ಭೋಪಾಲ ಪ್ರಾಂತ್ಯದ ರೀಂವಾದಲ್ಲಿ ಹೋರಾಟ ಆರಂಭಿಸಿದರು. ಕೋಮುಹಿಂಸೆ ಪ್ರಚೋದಿಸಿದ ಹೈದರಾಬಾದ್ ನಿಜಾಮನಿಗೆ, ಅದರ ದುಷ್ಪರಿಣಾಮಗಳ ಬಗ್ಗೆ ಕಟು ಎಚ್ಚರಿಕೆ ನೀಡಿದರು. ಇನ್ನೊಂದು ನಿರ್ಣಯದಲ್ಲಿ, ಅಮೇರಿಕಾ ಮತ್ತು ರಷ್ಯಾ ಒಕ್ಕೂಟಗಳು ಜಗತ್ತನ್ನು ಎರಡು ಪರಸ್ಪರ ವಿರುದ್ಧವಾದ ಚಿಂತನ ಕ್ರಮಗಳಿಂದ ಒಡೆಯುವ ಮೂಲಕ ಮೂರನೇ ವಿಶ್ವಯುದ್ಧವನ್ನು ಆಹ್ವಾನಿಸುತ್ತಿವೆ; ಹೀಗಾಗಿ ಇವುಗಳಿಗಿಂತ ಭಿನ್ನವಾದ ಹಾಗೂ ಜಾಗತಿಕ ಏಕತೆಗಾಗಿ ಒಂದು ಸೃಜನಶೀಲ ಸಂಸ್ಕೃತಿ ಕಟ್ಟುವ ಮೂರನೇ ವಿಶ್ವ ಒಕ್ಕೂಟದ ಅಗತ್ಯದ ಪ್ರಸ್ತಾಪ ಮಾಡಿದರು. ಕಾಶ್ಮೀರದ ಪ್ರಶ್ನೆಯನ್ನು ವಿಶ್ವಸಂಸ್ಥೆ ಮೂಲಕ ಅಂತಾರಾಷ್ಟ್ರೀಯಗೊಳಿಸುವುದನ್ನು ಅವರು ವಿರೋಧಿಸಿದರು.

ಹೊಸ ಪಕ್ಷದ ನೀತಿ ನಿರೂಪಣೆ - ನೇಪಾಳ ಹೋರಾಟ

೧೯೪೯ರ ಪಟ್ನಾ ಸಮ್ಮೇಳನದಲ್ಲಿ, ಪಕ್ಷವನ್ನು ದೀಕ್ಷಾ ಸದಸ್ಯತ್ವದಿಂದ

ಬಿಡುಗಡೆಗೊಳಿಸಿ ಸಮೂಹ ಸದಸ್ಯತ್ವಕ್ಕೆ ತೆರೆದಿಡುವ ತೀರ್ಮಾನ ತೆಗೆದುಕೊಳ್ಳಲಾಯಿತು. ಇದರಿಂದಾಗಿ ಪಕ್ಷದಲ್ಲಿದ್ದ ಮಾರ್ಕ್ಸ್‌ವಾದಿಗಳಿಗೆ ಮುಜುಗರವಾಯಿತಾದರೂ, ಈ ಬಗ್ಗೆ ನರೇಂದ್ರ ದೇವ ಅವರು ಮಂಡಿಸಿದ ಗೊತ್ತುವಳಿ ಬಹುಮತದಿಂದ ಅನುಮೋದನೆ ಗೊಂಡಿತು. ಇದಕ್ಕೆ ಪೂರಕವಾಗಿ ಲೋಹಿಯಾ ಮಂಡಿಸಿದ 'ಮುನ್ನಡೆ' ಎಂಬ ಶೀರ್ಷಿಕೆಯ ಗೊತ್ತುವಳಿ, ಭೂರಹಿತ ಕೂಲಿಕಾರರನ್ನೊಳಗೊಂಡ ಸಾಮೂಹಿಕ ಕೃಷಿಗಾಗಿ ಭೂಮಿಸೇನೆ, ಬಂಡವಾಳವಾದಕ್ಕೆ ಕುಮ್ಮಕ್ಕು ಕೊಡದೆ ಮಾನವ ಕೌಶಲ್ಯಕ್ಕೂ ಆಸ್ಪದವಿರುವ ಸಣ್ಣ ಘಟಕಯಂತ್ರಗಳ ತಂತ್ರಜ್ಞಾನಕ್ಕೆ ಪ್ರೋತ್ಸಾಹ, ಸಾರ್ವಜನಿಕ ಸ್ವತ್ತುಗಳ ರಾಷ್ಟ್ರೀಕರಣ ಹಾಗೂ ಅನ್ಯಾಯದ ವಿರುದ್ಧ ಸಾಮೂಹಿಕ ಹೋರಾಟಕ್ಕಾಗಿ ನಾಗರಿಕ ಅಸಹಕಾರ ಸತ್ಯಾಗ್ರಹದ ಸಂಘಟನೆ ಮುಂತಾದ ಹೊಸ ಸಮಾಜವಾದಿ ಕಾರ್ಯಕ್ರಮಗಳಿಗಾಗಿ ಕರೆಕೊಟ್ಟಿತು. ಅದೇ ವರ್ಷ ನಾಗಪುರದಲ್ಲಿ ನಡೆದ ಪಕ್ಷದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಲೋಹಿಯಾ ಟಿಬೆಟ್ ಮೇಲಿನ ಚೀನಾ ಆಕ್ರಮಣವನ್ನು ಖಂಡಿಸಿದರು. ಈ ಅನಾಹುತದ ಮುಂದಿನ ಪರಿಣಾಮಗಳನ್ನು ಸಮರ್ಥವಾಗಿ ಎದುರಿಸಲು, ಭಾರತ 'ಹಿಮಾಲಯ ನೀತಿ'ಯೊಂದನ್ನು ರೂಪಿಸಿಕೊಂಡು ಅದರ ಆಧಾರದ ಮೇಲೆ ಭಾರತ-ಚೀನಾ ಸಂಬಂಧವನ್ನು ಬೆಳೆಸಬೇಕೆಂದು ಅವರು ಕರೆಕೊಟ್ಟರು. ಈ ಸೂಚನೆಗೆ ಕಿವಿಗೊಡದ ನೆಹ್ರೂ ಸರ್ಕಾರ ೧೯೬೨ರ ಹೊತ್ತಿಗೆ ಚೀನಾ ಆಕ್ರಮಣವನ್ನು ಎದುರಿಸಲಾರದೆ ಸೋತು ಹೋದುದನ್ನೂ, ಆಗ ಲೋಹಿಯಾ 'ಹಿಮಾಲಯಾ ಬಚಾವೊ' ಆಂದೋಲನವನ್ನು ಆರಂಭಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಹಿಮಾಲಯದ ಗಡಿ ದೇಶಗಳ ಪ್ರಜಾಪ್ರಭುತ್ವೀಕರಣವೇ ಲೋಹಿಯಾ ಪ್ರತಿಪಾದಿಸಿದ 'ಹಿಮಾಲಯ ನೀತಿ'ಯ ತಿರುಳಾಗಿತ್ತು. ಇದರ ಅಂಗವಾಗಿಯೇ ಅವರು ನೇಪಾಳವನ್ನು ಆಳುತ್ತಿದ್ದ ಸಾಮಂತಶಾಹಿ ರಾಣಾ ಕುಟುಂಬದ ವಿರುದ್ಧ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಸಂಘಟಿಸಲು ಅವರು ಪ್ರಯತ್ನ ನಡೆಸಿದರು. ಗೋವಾ ಹೋರಾಟದಲ್ಲಿ ಲೋಹಿಯಾ ವಹಿಸಿದ್ದ ಪಾತ್ರದಿಂದ ಪ್ರಭಾವಿತರಾಗಿದ್ದ ಕೆಲವು ನೇಪಾಳಿಗಳು ೧೯೪೭ರಲ್ಲೇ ಲೋಹಿಯಾರನ್ನು ಕಲ್ಕತ್ತಾದಲ್ಲಿ ಭೇಟಿಯಾಗಿ ಮಾರ್ಗದರ್ಶನ ಕೋರಿದ್ದರು. ಅವರ ಪ್ರೇರಣೆ ಮೇರೆಗೇ ವಿಶ್ವೇಶ್ವರ ಪ್ರಸಾದ್ ಕೊಯಿರಾಲಾ ನೇತೃತ್ವದಲ್ಲಿ ನೇಪಾಳಿ ಕಾಂಗ್ರೆಸ್ ಸ್ಥಾಪನೆಯಾಗಿತ್ತು. ಆ ವರ್ಷದ ಏಪ್ರಿಲ್‌ನಲ್ಲಿ ಲೋಹಿಯಾ ಡಾರ್ಜಿಲಿಂಗ್‌ನಿಂದ 'ನೇಪಾಳ್ ಚಲೋ' ಕಾರ್ಯಕ್ರಮ ಹಮ್ಮಿಕೊಂಡು, ನೇಪಾಳದ ಗಡಿ ದಾಟಲು ಪ್ರಯತ್ನಿಸಿ ಬಂಧಿತರಾಗಿದ್ದರು. ಈಗ ೧೯೪೯ರಲ್ಲಿ ಆ 'ಹಿಮಾಲಯಾ ನೀತಿ'ಯ ಅಂಗವಾಗಿಯೇ, ರಾಣಾಶಾಹಿಯ ವಿರುದ್ಧ ನೇಪಾಳಿ ಕಾಂಗ್ರೆಸ್ ನಡೆಸುತ್ತಿದ್ದ ಪ್ರಜಾಸತ್ತಾತ್ಮಕ ಹೋರಾಟಕ್ಕೆ ಸಮಾಜವಾದಿ ಪಕ್ಷದ ಪರವಾಗಿ ಬೆಂಬಲ ವ್ಯಕ್ತಪಡಿಸಲು ದೆಹಲಿಯಲ್ಲಿ ಅವರು

ನೇಪಾಳ ರಾಯಭಾರ ಕಛೇರಿಯ ಮುಂದೆ ಪ್ರದರ್ಶನಕ್ಕಾಗಿ ಮೆರವಣಿಗೆ ಹೊರಟರು. ಈ ಮೆರವಣಿಗೆ ಮೇಲೆ ಅಶ್ರುವಾಯು ಪ್ರಯೋಗಿಸಿ ಲಾಠಿಪ್ರಹಾರ ಮಾಡಲಾಯಿತು. ಲೋಹಿಯಾ ಸೇರಿದಂತೆ ಅನೇಕ ಜನ ಗಾಯಗೊಂಡರು. ಕೈಗೆ ಸಿಕ್ಕ ಜನರನ್ನು ಬಂಧಿಸಿ ಸೆರೆಮನೆಗೆ ತಳ್ಳಲಾಯಿತು.

ಇದು ಲೋಹಿಯಾ ಸ್ವತಂತ್ರ ಭಾರತದಲ್ಲಿ ಎದುರಿಸಿದ ಮೊದಲ ಪೋಲೀಸ್ ಅತ್ಯಾಚಾರ ಹಾಗೂ ಸೆರೆಮನೆ ವಾಸ. ತಾವು ಮತ್ತು ತಮ್ಮ ಗೆಳೆಯರು ಪ್ರಾಣ ಪಣವಿಟ್ಟು ಹೋರಾಡಿದ್ದು ಇಂತಹ ಸ್ವತಂತ್ರ ಭಾರತಕ್ಕಾಗಿಯೇ? ಬ್ರಿಟಿಷ್ ಸರ್ಕಾರ ಕೂಡಾ ತಮ್ಮ ಮೇಲೆ ಇಂತಹ ಅತ್ಯಾಚಾರ ಎಸಗಿರಲಿಲ್ಲ ಎಂದು ಲೋಹಿಯಾ ಕ್ರುದ್ಧರಾದರು. ನೆಹರೂ ಬಗ್ಗೆ ಅವರಿಗಿದ್ದ ವಿಶ್ವಾಸದ ಕೊನೆಯ ಎಳೆಯೂ ಕತ್ತರಿಸಲ್ಪಟ್ಟಿತು. ಮನಸ್ಸು ಕಹಿಯಾಯಿತು. ಇಂದಿರಾಗಾಂಧಿಯವರ ಮೂಲಕ ಕಳಿಸಲ್ಪಟ್ಟ ಮಾವಿನ ಹಣ್ಣಿನ ಬುಟ್ಟಿಯನ್ನು, ಸೆರೆಮನೆಯಲ್ಲಿದ್ದ ಲೋಹಿಯಾ ಹಿಂದಕ್ಕೆ ಕಳಿಸಿದರು. ನೆಹರೂ-ಪಟೇಲ್ ಜೋಡಿ, ಸ್ವತಂತ್ರಭಾರತದಲ್ಲಿ ಲೋಹಿಯಾ ಹಾಗೂ ಅವರ ಸಮಾಜವಾದಿ ಗೆಳೆಯರ ಆಟ ನಡೆಯದಂತೆ ನೋಡಿಕೊಳ್ಳಲು ಎಲ್ಲ ವ್ಯವಸ್ಥೆ ಮಾಡಲು ನಿರ್ಧರಿಸಿದಂತಿತ್ತು. ಲೋಹಿಯಾಗೆ ಎರಡು ತಿಂಗಳ ಶಿಕ್ಷೆ ವಿಧಿಸಲಾಯಿತು. ನೆಹರೂ, ನೇಪಾಳಿ ಕಾಂಗ್ರೆಸ್ ನಾಯಕರು ಹಾಗೂ ದೊರೆ ತ್ರಿಭುವನರೊಂದಿಗೆ ಸಂಧಾನ ನಡೆಸಿ, ನೇಪಾಳದ ಜನತಾ ಹೋರಾಟವನ್ನು ಸ್ಥಗಿತಗೊಳಿಸಿದರು. ಲೋಹಿಯಾಗೆ ನಿರಾಶೆಯಾಯಿತು.

ರೈತ ಸಂಘಟನೆ- ಕಾಗೋಡು ಸತ್ಯಾಗ್ರಹ

ಸ್ವತಂತ್ರ ಭಾರತದ ಮೊದಲ ಸಾರ್ವತ್ರಿಕ ಚುನಾವಣೆ ಸಮೀಪಿಸುತ್ತಿತ್ತು. ಸಮಾಜವಾದಿ ಪಕ್ಷ ತನ್ನ ಪ್ರಭಾವವನ್ನು ವಿಸ್ತರಿಸಿಕೊಳ್ಳುವ ಕೆಲಸದ ಅಂಗವಾಗಿ ಕಾರ್ಮಿಕ ಹಾಗೂ ರೈತ ಸಂಘಟನೆಯ ಕಡೆ ವಿಶೇಷ ಗಮನ ಹರಿಸತೊಡಗಿತು. ಅಶೋಕ ಮೆಹ್ತಾ ಕೈಗಾರಿಕಾ ಕಾರ್ಮಿಕರ ಸಂಘಟನೆಯಲ್ಲಿ ತೊಡಗಿದರು. ಜೆ.ಪಿ.ಯವರು ಅಂಚೆ-ತಂತಿ, ರೈಲ್ವೇ, ರಕ್ಷಣಾ ವಿಭಾಗ ಮುಂತಾದ ಸರ್ಕಾರಿ ನೌಕರರ ಸಂಘಟನೆಯಲ್ಲಿ ತೊಡಗಿಕೊಂಡರು. ಲೋಹಿಯಾ ರೈತ ಸಂಘಟನೆ ಕಡೆ ಗಮನ ಹರಿಸಿದರು. ಹಿಂದ್ ಮಜದೂರ್ ಸಭಾ ಹಾಗೂ ಹಿಂದ್ ಕಿಸಾನ್ ಪಂಚಾಯ್ತ್‌ಗಳು ಸ್ಥಾಪನೆಗೊಂಡವು. ರೀಂವಾ, ಲಕ್ನೋ, ದೆಹಲಿಗಳಲ್ಲಿ ಲಕ್ಷಾಂತರ ರೈತರ ಮತಪ್ರದರ್ಶನಗಳು ನಡೆದವು. ಗುದ್ದಲಿ, ಸಮಾಜವಾದಿ ರಾಷ್ಟ್ರ ನಿರ್ಮಾಣ ಕಾರ್ಯಕ್ರಮದ ಸಂಕೇತವೆಂದು ಲೋಹಿಯಾ ಘೋಷಿಸಿದರು. ದಿನಕ್ಕೊಂದು ತಾಸು ಶ್ರಮದಾನ ಯುವ ಸಮಾಜವಾದಿಗಳ ಜೀವನಶೈಲಿಯ ಭಾಗವಾಗಬೇಕೆಂದು ಅವರು ಕರೆಕೊಟ್ಟರು. ಲೋಹಿಯಾ ಸ್ಫೂರ್ತಿಯಿಂದ ರೈತರು ಬುಲಂದ್‌ಷಹರ್ ಬಳಿ ನೂರು ಎಕರೆ ಭೂಮಿಗೆ ನೀರುಣಿಸುವ ಕಾಲುವೆ ನಿರ್ಮಿಸಿದರು.

ಪತ್ರೇಡಿ ಗ್ರಾಮದ ರೈತರು ತಮ್ಮ ಹಳ್ಳಿಯ ಪಕ್ಕದ ತೊರೆಯೊಂದಕ್ಕೆ ಅಡ್ಡಗಟ್ಟೆ ನಿರ್ಮಿಸಿ ಜಲಾಶಯವೊಂದನ್ನು ನಿರ್ಮಿಸಿದರು. ಅದಕ್ಕೆ 'ಲೋಹಿಯಾ ಸಾಗರ' ಎಂದು ಹೆಸರಿಟ್ಟರು.

೧೯೫೧ರಲ್ಲಿ ಎಚ್. ಗಣಪತಿಯಪ್ಪನವರಿಂದ ಆರಂಭವಾಗಿ ಸಮಾಜವಾದಿ ಪಕ್ಷದ ನಾಯಕ ಶಾಂತವೇರಿ ಗೋಪಾಲಗೌಡರ ನೇತೃತ್ವದಲ್ಲಿ ನಡೆದ ಕಾಗೋಡು ಭೂಸತ್ಯಾಗ್ರಹ ನಡೆಯಿತು. ಅದರಲ್ಲಿ ಭಾಗವಹಿಸುವ ಮೂಲಕ ಲೋಹಿಯಾ ಕರ್ನಾಟಕದ ಜನತೆಯ ಗಮನ ಸೆಳೆದರು. ಈ ಸಂಬಂಧ ಲೋಹಿಯಾ ಬಂಧನವಾಗಿ ಅವರ ವಿದೇಶ ಪ್ರವಾಸ ಕಾರ್ಯಕ್ರಮದಲ್ಲಿ ವ್ಯತ್ಯಯ ಉಂಟಾಯಿತು. 'ವಿಶ್ವಸರ್ಕಾರ' ಕುರಿತಂತೆ ಸ್ಟಾಕ್‌ಹೋಂನಲ್ಲಿ ಏರ್ಪಾಡಾಗಿದ್ದ ಸಮ್ಮೇಳನಕ್ಕೆ ಆಹ್ವಾನಿತರಾಗಿದ್ದ ಲೋಹಿಯಾ ಅಲ್ಲಿಗೆ ಹೋಗದಂತೆ ತಡೆಯುವ ಹುನ್ನಾರ ಸರ್ಕಾರಕ್ಕಿದ್ದಂತೆ ತೋರಿತು. ಏಕೆಂದರೆ, ಬೆಂಗಳೂರು ಸೆರೆಮನೆಯಲ್ಲಿದ್ದ ಲೋಹಿಯಾ ಬಿಡುಗಡೆಗೊಂಡು ದೆಹಲಿಗೆ ಹೋಗಿ 'ನೇಪಾಳ ದಿನ'ದ ಕಾರ್ಯಕ್ರಮದಲ್ಲಿ ಪಾಲ್ಗೊಂಡಾಗ ಮತ್ತೆ ಅವರನ್ನು ಬಂಧಿಸಿ ಸೆರೆಮನೆಗೆ ದೂಡಲಾಯಿತು. ಈ ಬಗ್ಗೆ ಪಶ್ಚಿಮದ ದೇಶಗಳಲ್ಲಿ ಪ್ರತಿಭಟನೆ-ಖಂಡನೆ ವ್ಯಕ್ತವಾದಾಗ ಭಾರತ ಸರ್ಕಾರ ಲೋಹಿಯಾರನ್ನು ಬಂಧನದಿಂದ ಬಿಡುಗಡೆಮಾಡಿತು.

ಮೊದಲ ಸಾರ್ವತ್ರಿಕ ಚುನಾವಣೆ - ಸಮಾಜವಾದಿಗಳ ಭಾರಿ ಸೋಲು

೧೯೫೨ರ ಚುನಾವಣೆಯಲ್ಲಿ ಸಮಾಜವಾದಿ ಪಕ್ಷ ಅತ್ಯುತ್ಸಾಹದಿಂದ ಭಾಗವಹಿಸಿತು. 'ಸಮಾಜವಾದ ಕಟ್ಟುವೆವು ನಾವು' ಎಂಬ ಪ್ರಣಾಳಿಕೆಯೊಂದಿಗೆ ಕಾಂಗ್ರೆಸ್ ಪಕ್ಷಕ್ಕೆ ಪರ್ಯಾಯವಾಗಿ ಒಡಮೂಡುವ ವಿಶ್ವಾಸದಿಂದ ಅದು ಪ್ರಚಾರ ಕೈಗೊಂಡಿತು. ಆದರೆ ಫಲಿತಾಂಶ ಸಮಾಜವಾದಿಗಳನ್ನು ಸುಸ್ತು ಮಾಡಿಟ್ಟಿತು. ೨೯೬ ಲೋಕಸಭಾ ಸ್ಥಾನಗಳಿಗೂ ೧೭೯೬ ವಿಧಾನಸಭಾ ಸ್ಥಾನಗಳಿಗೂ ಸ್ಪರ್ಧಿಸಿದ್ದ ಸಮಾಜವಾದಿ ಪಕ್ಷ ಕ್ರಮವಾಗಿ ೧೨ ಹಾಗೂ ೧೨೬ ಸ್ಥಾನಗಳನ್ನು ಮಾತ್ರ ಗೆದ್ದಿತ್ತು. ಬಿದ್ದ ಒಟ್ಟು ಮತಗಳಲ್ಲಿ ಅದು ದೇಶದಲ್ಲಿ ಎರಡನೇ ಸ್ಥಾನದಲ್ಲಿತ್ತಾದರೂ, ಗೆದ್ದ ಒಟ್ಟು ಸ್ಥಾನಗಳಲ್ಲಿ ಅದು ಕಮ್ಯೂನಿಸ್ಟ್ ಪಕ್ಷಕ್ಕಿಂತ ಹಿಂದೆ ಬಿದ್ದಿತ್ತು. ಗಾಂಧೀಜಿ ಗಳಿಸಿದ್ದ ಅಪೂರ್ವ ಜನಮನ್ನಣೆ ಸಂಪೂರ್ಣವಾಗಿ ಕಾಂಗ್ರೆಸ್ ಪಾಲಿಗೆ ಸಂದಿತ್ತು. ಕಾಂಗ್ರೆಸ್‌ನಿಂದ ಬೇರ್ಪಟ್ಟ ನಾಲ್ಕು ವರ್ಷಗಳ ಸಣ್ಣ ಅವಧಿಯಲ್ಲಿ ಸಮಾಜವಾದಿ ಪಕ್ಷ, ತನ್ನ ವಿಶಿಷ್ಟತೆಯನ್ನು ರಾಷ್ಟ್ರಾದ್ಯಂತ ಸಾರುವಲ್ಲಿ ಸಂಘಟನಾತ್ಮಕವಾಗಿ ವಿಫಲಗೊಂಡಿತ್ತು. ಈ ಅನಿರೀಕ್ಷಿತ ಭಾರೀ ಸೋಲಿನಿಂದ ಕಂಗೆಟ್ಟಿದ್ದ ನಾಯಕರ ನಡುವೆ ಪರಸ್ಪರ ದೋಷಾರೋಪಣೆಗಳೂ ನಡೆದವು. ಆಚಾರ್ಯ ನರೇಂದ್ರದೇವ ದಿಙ್ಮೂಢರಾಗಿದ್ದರು. ಅಶೋಕ ಮೆಹ್ತಾ ಹತಾಶರಾಗಿದ್ದರು. ಜೆ.ಪಿ. ಖಿನ್ನರಾಗಿದ್ದರು. ಲೋಹಿಯಾ ಮಾತುಗಳಲ್ಲೇ ಹೇಳುವುದಾದರೆ, 'ಸಮಾಜವಾದಿಗಳು ಇಸ್ತ್ರಿ ಇಲ್ಲದ ಬಟ್ಟೆಯಾದಂತಾಗಿದ್ದರು'.

ಚುನಾವಣೆಯ ಆಘಾತದಿಂದ ಚೇತರಿಸಿಕೊಂಡ ಸಮಾಜವಾದಿಗಳು, ಆತ್ಮಾವಲೋಕನ ಹಾಗೂ ಮುಂದಿನ ದಾರಿ ನಿರ್ಧರಿಸಿಕೊಳ್ಳಲು ೧೯೫೨ರ ಮೇನಲ್ಲಿ ಮಧ್ಯಪ್ರದೇಶದ ಪಂಚಮಢಿಯಲ್ಲಿ ವಿಶೇಷ ಅಧಿವೇಶನವೊಂದರಲ್ಲಿ ಒಟ್ಟುಗೂಡಿದರು. ಆಚಾರ್ಯ ನರೇಂದ್ರ ದೇವ ಚೀನಾ ಪ್ರವಾಸದಲ್ಲಿದ್ದುದರಿಂದ, ಲೋಹಿಯಾ ಸಮಾವೇಶದ ಅಧ್ಯಕ್ಷತೆ ವಹಿಸಬೇಕಾಯಿತು. ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದ ಜಯಪ್ರಕಾಶರು ಪಕ್ಷದ ರೀತಿ-ನೀತಿಗಳ ಹಿನ್ನೋಟ ಮತ್ತು ಮುನ್ನೋಟಗಳನ್ನೊಳಗೊಂಡ ವರದಿಯೊಂದನ್ನು ಮಂಡಿಸಿದರು. ಲೋಹಿಯಾ, ಆವರೆಗೆ ತಾವು ಮಾಡಿದ್ದ ಅಧ್ಯಯನ – ಚಿಂತನಗಳನ್ನಾಧರಿಸಿ ಸಮಾಜವಾದದ ಹೊಸ ಪರಿಕಲ್ಪನೆಯೊಂದನ್ನು ತಮ್ಮ ಅಧ್ಯಕ್ಷ ಭಾಷಣದಲ್ಲಿ ಮಂಡಿಸಿದರು. 'ಸಮಾಜವಾದದ ತಾತ್ವಿಕ ಅಡಿಗಲ್ಲು' ಎಂದೇ ಪ್ರಸಿದ್ಧವಾಗಿರುವ ಈ ಭಾಷಣವು ಬಂಡವಾಳವಾದ, ಮಾರ್ಕ್ಸ್‌ವಾದ ಹಾಗೂ ಐರೋಪ್ಯ ಸಮಾಜವಾದಗಳನ್ನು ಎರಡನೇ ಮಹಾಯುದ್ಧಾನಂತರದ ಹೊಸ ಸಂದರ್ಭದಲ್ಲಿಟ್ಟು ನೋಡಿತು. ಹಾಗೂ ಈ ಮೂರೂ ಹೇಗೆ ಮಾನವ ಜನಾಂಗದ ಲೌಕಿಕ ಮತ್ತು ಆಧ್ಯಾತ್ಮಿಕ ಸಮಾನತೆ ಮತ್ತು ಏಕತೆಗಳನ್ನು ಸಾಧಿಸುವಲ್ಲಿ ಸೋಲುತ್ತಿವೆ ಎಂಬುದನ್ನು ಸವಿವರವಾಗಿ ವಿಶ್ಲೇಷಿಸಿತು. ಅಲ್ಲದೆ, ಅದು ಸಮಾಜವಾದ ರೂಢಿಸಿಕೊಳ್ಳಬೇಕಾದ ಹೊಸ ತಾತ್ವಿಕ ಹಾಗೂ ಸಾಂಸ್ಥಿಕ ಪರಿಕರಗಳ ಪರಿಚಯ ಮಾಡಿಕೊಟ್ಟಿತು.

ಮಾರ್ಕ್ಸ್‌ವಾದದ ವಿಮರ್ಶೆ - ಹೊಸ ಜಗತ್ತಿನ ಆಶಯ

ಬಂಡವಾಳವಾದದ ಮಾರ್ಕ್ಸ್‌ವಾದಿ ವಿಶ್ಲೇಷಣೆಯು, ಐರೋಪ್ಯ ಪರಿಪ್ರೇಕ್ಷ್ಯವನ್ನಷ್ಟೇ ಗಮನದಲ್ಲಿಟ್ಟುಕೊಂಡು ವರ್ಗ ಹೋರಾಟದ ಕಲ್ಪನೆಯನ್ನು ರೂಪಿಸಿದೆ. ಬಂಡವಾಳವಾದವು ಸಾಮ್ರಾಜ್ಯವಾದದ ಆಧಾರದ ಮೇಲೆ ವಿಕಾಸಗೊಂಡಿದೆ. ಅಂದರೆ ಸಾಮ್ರಾಜ್ಯವಾದಕ್ಕೆ ತುತ್ತಾದ ತೃತೀಯ ಜಗತ್ತಿನ ದೇಶಗಳ ಶೋಷಣೆಯಲ್ಲಿ ಕ್ರೋಢೀಕರಣಗೊಂಡ ಬಂಡವಾಳವು ಸಾಮ್ರಾಜ್ಯಶಾಹಿ ದೇಶಗಳಲ್ಲಿ ಬಂಡವಾಳವಾದದ ಸ್ಫೋಟಕ್ಕೆ ಕಾರಣವಾಗಿದೆ. ಹಾಗಾಗಿ ಬಂಡವಾಳವಾದದ ಬಿಕ್ಕಟ್ಟನ್ನು ಸೃಷ್ಟಿಸಿರುವವರು, ಕೇವಲ ಬಂಡವಾಳವಾದಿ ರಾಷ್ಟ್ರಗಳ ವರ್ಗಗಳಲ್ಲ; ತೃತೀಯ ಜಗತ್ತಿನ ಶ್ರಮಿಕ ವರ್ಗದ ದೊಡ್ಡ ಪಾಲೂ ಅದರಲ್ಲಿದೆ. ಆದುದರಿಂದ ಬಂಡವಾಳವಾದದ ಬಿಕ್ಕಟ್ಟು ಬಂಡವಾಳಶಾಹಿ ದೇಶಗಳಲ್ಲಿ ವರ್ಗ ಹೋರಾಟವನ್ನು ಸೃಷ್ಟಿಸಿ ಸಮಾಜವಾದಕ್ಕೆ ದಾರಿಮಾಡಿಕೊಡುತ್ತದೆ ಎಂಬ ಮಾರ್ಕ್ಸ್‌ವಾದಿ ವಿಶ್ಲೇಷಣೆಯೇ ಅಸಂಬದ್ಧ ಎಂದು ಲೋಹಿಯಾ ಪ್ರತಿಪಾದಿಸಿದರು. ಅವರು ಬಂಡವಾಳವಾದವನ್ನು ಮಾರ್ಕ್ಸ್ ಗುರುತಿಸಿದಂತೆ ಒಂದು ಕಾಲದಲ್ಲಿ ಪ್ರಗತಿಪರವಾಗಿತ್ತು ಎಂದು ಗುರುತಿಸದೆ, ಅದು ಜಗತ್ತಿನ ಒಂದು ಭಾಗದಲ್ಲಿ ದಾರಿದ್ರ್ಯವನ್ನೂ ಮತ್ತೊಂದು ಭಾಗದಲ್ಲಿ ಸಮೃದ್ಧಿಯನ್ನೂ ಉಂಟುಮಾಡಿದ ಅಸಮಾನತಾವಾದದ ಹರಿಕಾರ ಎಂದೇ ಗುರುತಿಸಬೇಕಾಗುತ್ತದೆ ಎಂದರು.

ಹೀಗಾಗಿ ಬಂಡವಾಳದ ಗರ್ಭ ಸೀಳಿಕೊಂಡು ಹುಟ್ಟುವುದೆಂದು ಹೇಳಲಾದ ಕಮ್ಯೂನಿಸಂ ಕೂಡಾ ಜಾಗತಿಕ ಅಸಮಾನತೆಗೇ ಕಾರಣವಾಗುತ್ತದೆ. ಏಕೆಂದರೆ ಅದು ನಂಬಿರುವುದೂ, ಮೂರನೇ ಜಗತ್ತಿನ ಶೋಷಣೆಯಿಂದ ಕ್ರೋಢೀಕೃತವಾದ ಬಂಡವಾಳ ಸೃಷ್ಟಿಸಿದ ಬೃಹತ್ ಯಂತ್ರ ಕೇಂದ್ರಿತ ತಂತ್ರಜ್ಞಾನವನ್ನು ಆಧರಿಸಿದ ಉತ್ಪಾದನಾ ವಿಧಾನಗಳನ್ನೇ. ಅಂದರೆ ನೀತಿ, ಧರ್ಮ, ರಾಜ್ಯವ್ಯವಸ್ಥೆ ಎಲ್ಲವೂ ಬಂಡವಾಳಶಾಹಿ ವರ್ಗಸಮಾಜದ ಉತ್ಪನ್ನಗಳೇ ಎಂದು ನಿರೂಪಿಸಿದ ಮಾರ್ಕ್ಸ್‌ಗೆ, ತಂತ್ರಜ್ಞಾನವೂ ಆ ವರ್ಗಸಮಾಜದ ವಿಷಮ ಉತ್ಪನ್ನವಾಗಿ ಕಾಣದೇ ಹೋಗಿದೆ! ಅಲ್ಲದೆ, ಬಂಡವಾಳವಾದ ಕಮ್ಯೂನಿಸಂನ ಅನಾವರಣದಿಂದಾಗಿ ವಿಸರ್ಜನೆಗೊಳ್ಳುವುದಿರಲಿ, ಅದರೊಡನೆ ತೀವ್ರ ಸ್ಪರ್ಧೆಗಿಳಿದು ಬೆಳೆಯುತ್ತಿದೆ! ಹಾಗೆ ನೋಡಿದರೆ, ಇವೆರಡೂ ಒಂದೇ ಮನಸ್ಸಿನ ಎರಡು ಕವಲುಗಳಂತೆ ತೋರುತ್ತಿವೆ. ಹೀಗಾಗಿ ವರ್ಗ ಹೋರಾಟವನ್ನು ಪ್ರತಿಪಾದಿಸುವ ಇತಿಹಾಸದ ಭೌತವಾದಿ ನಿರೂಪಣೆಯು, ತೃತೀಯ ಜಗತ್ತಿನ ದರಿದ್ರೀಕರಣದ ಮುಂದುವರಿಕೆಯೊಂದಿಗೆ ಯುರೋಪ್‌ನ ಲೌಕಿಕ ಶ್ರೀಮಂತಿಕೆಯನ್ನು ಮುಂದುವರಿಸಿ ಕೊಂಡು ಹೋಗಲು ಅಲ್ಲಿನ ಮನಸ್ಸು ರೂಪಿಸಿಕೊಂಡಿರುವ ಸುಪ್ತ ಉಪಾಯವಾಗಿದೆ ಎಂದೇ ಹೇಳಬೇಕಾಗುತ್ತದೆ. ಇದು ಲೋಹಿಯಾ ಅವರ ಮಾರ್ಕ್ಸ್‌ವಾದದ ಮೂಲ ವಿಶ್ಲೇಷಣೆ.

ಬಂಡವಾಳವಾದ ಮತ್ತು ಕಮ್ಯೂನಿಸಂ, ಯುರೋಪ್ ಕೇಂದ್ರಿತವಾದ ಆಧುನಿಕ ನಾಗರೀಕತೆಯ ಎರಡು ಮುಖಗಳಷ್ಟೇ. ಏಕೆಂದರೆ ಈ ಎರಡೂ, ಈ ನಾಗರೀಕತೆಯ ಮೂರು ಸಂಚಾಲನಾಶಕ್ತಿಗಳಾದ ಆರ್ಥಿಕತೆಗೆ ವಿಜ್ಞಾನದ ನಿರಂತರ ಅನ್ವಯವನ್ನು ಆಧರಿಸಿದ ಕ್ರಾಂತಿಕಾರಿ ತಂತ್ರಜ್ಞಾನ, ಜೀವನ ಮಟ್ಟದ ನಿರಂತರ ಏರಿಕೆಯ ಅಭೀಪ್ಸೆ ಹಾಗೂ ಸಾಮಾಜಿಕ ಸಮಾನತೆಯ ಹೆಚ್ಚಳದ ಆದರ್ಶಗಳನ್ನೇ ಆಧರಿಸಿವೆ. ಜಗತ್ತನ್ನು ಅಸಮವಾಗಿ ಒಡೆದಿಟ್ಟಿರುವ ಈ ನಾಗರೀಕತೆ ಎರಡು ಮಹಾಯುದ್ಧಗಳನ್ನು ಸೃಷ್ಟಿಸಿ ತನ್ನ ಸೃಜನಶೀಲತೆ ಬರಿದಾಗಿರುವುದನ್ನು ಒಪ್ಪಿಕೊಂಡಿದೆ. ಅಲ್ಲದೆ ಮನುಷ್ಯನಲ್ಲಿ ಸುಖದ ನಿರಂತರ ದಾಹದ ಪ್ರಚೋದನೆಯನ್ನು ಆಧರಿಸಿದ ಈ ಸಾಮಾಜಿಕ ಸಮಾನತೆಯ ತುಡಿತ, ಆಧುನಿಕ ನಾಗರೀಕತೆಯನ್ನು ಅಶ್ಲೀಲಗೊಳಿಸಿದೆ ಹಾಗೂ ಮನುಷ್ಯನನ್ನು ಅವನ ಪ್ರಪಂಚದಿಂದಲೇ ಹೊರಹಾಕಿದೆ. ಇದರಿಂದಾಗಿ ಆಧುನಿಕ ಮನುಷ್ಯ ಪದಾರ್ಥ ಪ್ರಪಂಚದ ಪಿಶಾಚಿಯಾಗಿ ಜಗತ್ತನ್ನು ಸಮೃದ್ಧಿ ಮತ್ತು ಬಡತನಗಳೆಂಬ ಎರಡು ಪ್ರತ್ಯೇಕಿತ ನರಕಗಳಿಗೆ ಬಲಿಕೊಟ್ಟಿದ್ದಾನೆ. ಒಂದು ನರಕ ಅಣುಬಾಂಬನ್ನು ಸೃಷ್ಟಿಸಿದರೆ, ಮತ್ತೊಂದು ನರಕ ಅದಕ್ಕೆ ಪ್ರತಿಯಾಗಿ ಮಹಾತ್ಮಗಾಂಧಿಯನ್ನು ಸೃಷ್ಟಿಸಿದೆ. ಜಗತ್ತು ಒಂದು ಕ್ಷಣ ನಿಂತು ಆಲೋಚಿಸಿ ಇವುಗಳಲ್ಲೊಂದನ್ನು ಆಯ್ಕೆ ಮಾಡಿಕೊಂಡು ಮುಂದುವರಿಯಬೇಕಾದ ಈ ಸಂಧಿಕಾಲದಲ್ಲಿ ತಮ್ಮ ಆಯ್ಕೆ ಸಹಜವಾಗಿಯೇ ಎರಡನೆಯದು ಎಂದು

ಲೋಹಿಯಾ ಪ್ರತಿಪಾದಿಸಿದರು. ಈ ಆಯ್ಕೆಯೇ ಜಗತ್ತಿನ ಸಮಸ್ತ ಜನತೆಯ ಲೌಕಿಕ ಹಾಗೂ ಅಧ್ಯಾತ್ಮಿಕ ಅಭ್ಯುದಯಗಳೆರಡನ್ನೂ ಆಧರಿಸಿದ ಸಮಾನತೆಯ ತತ್ವದ ಮೂಲಕ ಹೊಸ ಜಗತ್ತನ್ನು ಸೃಷ್ಟಿಸಬಲ್ಲುದು ಎಂದು ಅವರು ವಿವರಿಸಿದರು.

ಸಮಾನತೆಯ ಅರ್ಥ ಹೊಸ ತಂತ್ರಜ್ಞಾನಕ್ಕೆ ಕರೆ

ಈ ಹಿನ್ನೆಲೆಯಲ್ಲಿ ಲೋಹಿಯ ಸಮಾನತೆಯನ್ನು ನಾಲ್ಕು ಆಯಾಮಗಳಲ್ಲಿ ನಿರ್ವಚಿಸಿದರು. ಅವರ ಪ್ರಕಾರ ಸಮಾನತೆ ಎಂದರೆ, ದೇಶವೊಂದರ ಜನತೆಯ ನಡುವೆ ಮತ್ತು ದೇಶ ದೇಶಗಳ ನಡುವೆ ಇರಬೇಕಾದ ಲೌಕಿಕ ಸಮಾನತೆಯ ಜೊತೆಗೇ ವೈಯುಕ್ತಿಕ ನೆಲೆಯಲ್ಲಿ ಇರಬೇಕಾದ ಬಾಹ್ಯ ಬಂಧುತ್ವ ಮತ್ತು ಆಂತರಿಕ ಸಮತ್ವ. ಅದು ಜಗತ್ತಿನ ಎಲ್ಲದರೊಂದಿಗೆ ಸಮಾನವಾಗಿರುತ್ತ, ಅದರೊಳಗೆ ಒಂದಾಗಿ ಇರುವ ಆನಂದವೂ ಹೌದು. ಇದನ್ನು ಸಾಧ್ಯ ಮಾಡಿಕೊಳ್ಳಲು ಮನುಷ್ಯ ಸದಾ ಏರುತ್ತಾ ಹೋಗುವ ಜೀವನ ಮಟ್ಟದ ಆದರ್ಶಕ್ಕೆ ಪ್ರತಿಯಾಗಿ, ತನ್ನ ಸಾಮಾಜಿಕ ಸನ್ನಿವೇಶಕ್ಕೆ ಅನುಸಾರವಾದ ಮಿತಿಗಳುಳ್ಳ ಬದುಕಿನ ಶಿಸ್ತಿಗೆ ಒಳಪಡಬೇಕು. ಅದಕ್ಕಾಗಿ ಅಭಿವೃದ್ಧಿಯಲ್ಲಿ ಸಮಾನ ಪಾಲ್ಗೊಳ್ಳುವಿಕೆ ಮತ್ತು ಹಂಚಿಕೆ ಸಾಧ್ಯವಾಗುವಂತಹ ಸಣ್ಣ ಪ್ರಮಾಣದ ಯಂತ್ರಗಳನ್ನು ಆಧರಿಸಿದ ಕೈಗಾರಿಕಾ ತಂತ್ರಜ್ಞಾನಕ್ಕಾಗಿ ಅವರು ಕರೆಕೊಟ್ಟರು. ಇದು ಗಾಂಧೀಜಿಯ ಖಾದಿ–ಗ್ರಾಮೋದ್ಯೋಗ ತಂತ್ರ ಜ್ಞಾನವಲ್ಲ. ಬದಲಿಗೆ ತೈಲ ಅಥವಾ ಹಬೆ ಮೇಲೆ ನಡೆಯಬಲ್ಲ ಸರಳ ಯಂತ್ರಗಳ ಮಧ್ಯಮ ತಂತ್ರಜ್ಞಾನ. ಭಾರತದ ಸಂಶೋಧಕರಿಗೆ ಇಂತಹ ತಂತ್ರಜ್ಞಾನದ ಅನ್ವೇಷಣೆಯಲ್ಲಿ ಮಾತ್ರ ನಿಜವಾದ ಯಶಸ್ಸು ಸಿಗಬಹುದು ಎಂದೂ ಲೋಹಿಯಾ ಹೇಳಿದ್ದರು.

ಹೊಸ ಸಮಾಜವಾದದ ಅನಾವರಣ - ಮುಂಚೂಣಿ ನಾಯಕತ್ವ

ಆದರೆ ಇದು ಗಾಂಧಿವಾದಿ ಸಮಾಜವಾದವಲ್ಲ. ಏಕೆಂದರೆ ಲೋಹಿಯಾ ಗಾಂಧೀಜಿಯ ಮೂಲತಃ ಬಂಡವಾಳವಾದಿಯಾದ ಅರ್ಥಶಾಸ್ತ್ರೀಯ ಕಲ್ಪನೆಗಳನ್ನಾಗಲೀ, ಧಾರ್ಮಿಕ ನೈತಿಕತೆಯನ್ನಾಧರಿಸಿದ ಸಾಮಾಜಿಕ ಪರಿಹಾರಗಳನ್ನಾಗಲೀ ಒಪ್ಪದವರು. ಹಾಗಾಗಿ ಲೋಹಿಯಾ ಪ್ರತಿಪಾದಿಸಿದ ಈ ಸಮಾಜವಾದ, ಆಧುನಿಕ ನಾಗರೀಕತೆಯನ್ನು ಕುರಿತ ಗಾಂಧೀಜಿ ವಿಮರ್ಶೆಯಿಂದ ಸ್ಫೂರ್ತಿಯನ್ನಷ್ಟೇ ಪಡೆದ ಹೊಸಜಗತ್ತಿನ ಸಮಾಜವಾದವಾಗಿತ್ತು. ಮನುಷ್ಯನನ್ನು ದುರಾಸೆಯ ಸ್ಪರ್ಧಾ ಕುದುರೆಯೇರಿಸಿಬಿಟ್ಟು ಬಿಡುವ ಬಂಡವಾಳವಾದ ಹಾಗೂ ಕಲ್ಪಿತ ಸಮಾನತೆಯ ಆಕರ್ಷಣೆ ಹುಟ್ಟಿಸಿ ಮನುಷ್ಯನನ್ನು ಸುಳ್ಳು, ಮೋಸ, ದಮನಗಳ ಮೂಲಕ ಸರ್ವಾಧಿಕಾರಕ್ಕೆ ಬಲಿಕೊಡುವ ಕಮ್ಯೂನಿಸಂ - ಈ ಎರಡನ್ನೂ, ಹೊಸ ಮನುಷ್ಯನನ್ನು ಸೃಷ್ಟಿಸಬೇಕಾದ ನವನಾಗರೀಕತೆಯ

ದೃಷ್ಟಿಯಿಂದ ಸಮಾನ ಅಪ್ರಸ್ತುತ ಸಿದ್ಧಾಂತಗಳೆಂದು ಲೋಹಿಯಾ ತಿರಸ್ಕರಿಸುತ್ತಾರೆ. ತಮ್ಮ ಹೊಸ ಸಮಾಜವಾದದ ತಾತ್ವಿಕ ಪರಿಕರಗಳನ್ನು ಹೀಗೆ ಮಂಡಿಸುತ್ತಾರೆ-

೧) ಬಂಡವಾಳವಾದಕ್ಕೆ ಕಾರಣವಾಗುವ ರೀತಿಯಲ್ಲಿ ಹೆಚ್ಚು ಬಂಡವಾಳ ಬೇಡದೆ ಮತ್ತು ಮಾನವ ಶ್ರಮ-ಕೌಶಲ್ಯಗಳನ್ನು ತಿರಸ್ಕರಿಸದೆ, ಉತ್ಪಾದನೆಯಲ್ಲಿ ಅವನನ್ನು ಕಳೆದುಹೋಗಲು ಬಿಡದೆ ಸೃಜನಶೀಲವಾಗಿ ತೊಡಗಿಸಿಕೊಳ್ಳುವಂತೆ ಮಾಡುವ, ಸಣ್ಣಯಂತ್ರ ಘಟಕಗಳ ತಂತ್ರಜ್ಞಾನ ಆಧಾರಿತವಾದ ಒಂದು ಸಭ್ಯ-ಸಾಧಾರಣ ಜೀವನಶೈಲಿ.

೨) ಸಾಮಾಜಿಕ ಅನ್ಯಾಯ ನಿವಾರಣೆಗೆ, ಸುಳ್ಳು ಕಪಟ ಹಿಂಸಾಚಾರಗಳನ್ನು ಕ್ಷಮಾರ್ಹಗೊಳಿಸಿರುವ ವರ್ಗ ಹೋರಾಟದ ಮಾದರಿಗೆ ಬದಲಾಗಿ, ಎರಡೂ ಪಕ್ಷಗಳಲ್ಲಿ ನೈತಿಕ ಒತ್ತಡ ಉಂಟುಮಾಡಿ ಅನುಸಂಧಾನ ಸಾಧ್ಯಮಾಡುವ ನಾಗರಿಕ ಅಸಹಕಾರ ಸತ್ಯಾಗ್ರಹದ ಮಾದರಿಯ ಹೋರಾಟ.

೩) ಗರಿಷ್ಠ ಸಾಧ್ಯವಾದ ಸಮಾನತೆ ಸಾಧಿಸುವ ದಿಸೆಯಲ್ಲಿ, ಅಗತ್ಯಬಿದ್ದರೆ ಆರ್ಥಿಕ ಚಟುವಟಿಕೆಗಳ ರಾಷ್ಟ್ರೀಕರಣ.

೪) ಮನುಷ್ಯನ ಮೂಲಭೂತ ನಾಗರಿಕ ಹಕ್ಕು-ಸ್ವಾತಂತ್ರ್ಯಗಳಿಗೆ ಭಂಗ ತರಬಹುದಾದ ಅಧಿಕಾರ ಕೇಂದ್ರೀಕರಣವನ್ನು ತಡೆಯುವ, ವಿಕೇಂದ್ರೀಕೃತ ಪ್ರಜಾಸತ್ತಾತ್ಮಕ ರಾಷ್ಟ್ರಾಡಳಿತ.

೫) ರಾಷ್ಟ್ರೀಯ ಸ್ವಾತಂತ್ರ್ಯಕ್ಕೆ ಭಂಗ ಬರದಂತೆ ಅಂತಾರಾಷ್ಟ್ರೀಯ ಕೊಡು-ಕೊಳುವಿಕೆ ಮೂಲಕ ರಾಷ್ಟ್ರ-ರಾಷ್ಟ್ರಗಳ ನಡುವಣ ಸಮಾನತೆಗೆ ಅನುವು ಮಾಡಿಕೊಡುವಂತಹ ಜಾಗತಿಕ ದೃಷ್ಟಿಕೋನವನ್ನು ವಿಕಾಸಗೊಳಿಸುವ ಪ್ರಾತಿನಿಧಿಕ ವಿಶ್ವ ಸರ್ಕಾರ.

ಸಮಾಜವಾದಿಗಳು, ತಾವು ನಂಬಿ ನಡೆಯುವ ಸಮಾಜವಾದ ಕುರಿತಂತೆ ತಾತ್ವಿಕ ಸ್ಪಷ್ಟತೆ ರೂಢಿಸಿಕೊಳ್ಳದೇ ಹೋದಲ್ಲಿ ಅವರು ಕಾಂಗ್ರೆಸ್ ಮತ್ತು ಕಮ್ಯೂನಿಸ್ಟ್ ಪಕ್ಷಗಳ ನಡುವೆ ಹರಿದು ಹಂಚಿಹೋಗುವ ಅಪಾಯದ ಬಗ್ಗೆ ತಮ್ಮ ಭಾಷಣದಲ್ಲಿ ಲೋಹಿಯಾ ಎಚ್ಚರಿಸಿದರು. ಈ ಸ್ಪಷ್ಟತೆಯನ್ನು ರೂಢಿಸಿಕೊಳ್ಳಲು ಸದಸ್ಯರಲ್ಲಿ ಶಿಸ್ತು ಮತ್ತು ಅಧ್ಯಯನಶೀಲತೆಯನ್ನು ಪ್ರೋತ್ಸಾಹಿಸುವ ರೀತಿಯಲ್ಲಿ ಪಕ್ಷವನ್ನು ಕಟ್ಟಬೇಕಾಗಿದೆ ಎಂದು ಅವರು ಕರೆಕೊಟ್ಟರು. ಇದಕ್ಕಾಗಿ ಸಮಾಜವಾದಿ ಅಧ್ಯಯನ ಹಾಗೂ ಚಟುವಟಿಕೆಗಳಿಗಾಗಿ ಸಮಾಜವಾದಿ ಆಶ್ರಮಗಳ ಸ್ಥಾಪನೆಯ ಸಲಹೆ ಮಾಡಿದರು.

ಲೋಹಿಯಾ ಅವರ ಭಾಷಣ ಸಮಾವೇಶದಲ್ಲಿ ಮಾರ್ಕ್ಸ್‌ವಾದಿ ಒಲವಿನ ಸಮಾಜವಾದಿಗಳನ್ನು ಸಿಟ್ಟಿಗೆಬ್ಬಿಸಿತು. ಇದು ಮಾರ್ಕ್ಸ್‌ವಾದಕ್ಕೆ ನೀಡಿರುವ ತಿಲಾಂಜಲಿ ಎಂದು ಅವರು ಕೋಲಾಹಲವೆಬ್ಬಿಸಿದರು. ಆದರೆ ಈ ಮಾರ್ಕ್ಸ್‌ವಾದಿಗಳ ಯುವ ನಾಯಕರೆನಿಸಿದ್ದ ಜಯಪ್ರಕಾಶರೇ, ಲೋಹಿಯಾ ಮಂಡಿಸಿದ ಪ್ರಮೇಯವನ್ನು ಸಮರ್ಥಿಸಿ

ಮಾತನಾಡಿದಾಗ ಕೋಲಾಹಲ ಸ್ವಲ್ಪ ತಣ್ಣಗಾಯಿತು. ನಂತರ ಅದೇ ವರ್ಷ ಹರ್ದೋಯಿಯಲ್ಲಿ ನಡೆದ ಪಕ್ಷದ ವಾರ್ಷಿಕ ಸಮಾವೇಶದಲ್ಲಿ ಮಾರ್ಕ್ಸ್‌ವಾದಿಗಳ ಹಿರಿಯ ನಾಯಕರೆನಿಸಿದ್ದ ಆಚಾರ್ಯ ನರೇಂದ್ರ ದೇವರ ಉಪಸ್ಥಿತಿಯಲ್ಲಿ ಲೋಹಿಯಾ ತಮ್ಮ ಈ ಹೊಸ ವಿಚಾರಗಳನ್ನು ಮಂಡಿಸಿ ಒಪ್ಪಿಗೆ ಪಡೆದಾಗ, ಕೋಲಾಹಲ ಪೂರ್ಣ ತಣ್ಣಗಾಯಿತು. ಆ ಮೂಲಕ ಲೋಹಿಯಾ ಸಮಾಜವಾದಿ ಪಕ್ಷದ ಮುಂಚೂಣಿ ನಾಯಕರೆನಿಸಿಕೊಂಡರು.

ಇತಿಹಾಸ ಚಕ್ರ - ಹೊಸ ವಿಶ್ವ ನಾಗರೀಕತೆಯ ಕಾಣ್ಕೆ

ಮುಂದಿನ ದಿನಗಳಲ್ಲಿ ಲೋಹಿಯಾ, ಗುಜರಾತ್ ಮತ್ತು ಆಂಧ್ರದ ಸಮಾಜವಾದಿ ಪಕ್ಷದ ಶಾಖೆಗಳು ಏರ್ಪಡಿಸಿದ್ದ ಅಧ್ಯಯನ ಶಿಬಿರಗಳಲ್ಲಿ ತಮ್ಮ ಹೊಸ ಸಮಾಜವಾದಿ ಸಿದ್ಧಾಂತಕ್ಕೆ ಪೂರಕವಾಗಿ ಅನೇಕ ಹೊಸ ತಾತ್ವಿಕ ಪರಿಕಲ್ಪನೆಗಳನ್ನು ಮಂಡಿಸಿದರು. ಮಾರ್ಕ್ಸ್‌ನ ಭೌತವಾದಿ ಇತಿಹಾಸ ವ್ಯಾಖ್ಯಾನವನ್ನು ಪ್ರಶ್ನಿಸಿದ ಅವರು, ವರ್ಗ ಹೋರಾಟವೇ ಇತಿಹಾಸದ ಚಾಲನಶಕ್ತಿ ಎಂಬುದನ್ನು ಅಲ್ಲಗೆಳೆದರು. ಜಗತ್ತಿನಲ್ಲಿ ವರ್ಗಗಳ ನಡುವಣ ಒಳಗಿನ ಹೋರಾಟದ ಜೊತೆಗೇ ದೇಶಗಳ ನಡುವಣ ಹೊರಗಿನ ಹೋರಾಟವೂ ನಡೆದಿದೆ; ಇವೆರಡರ ಪರಸ್ಪರ ಪರಿಣಾಮದಲ್ಲಿ ಇತಿಹಾಸ ರೂಪುಗೊಂಡಿದೆ ಎಂದು ಹೇಳುವ ಲೋಹಿಯಾ, ಇತಿಹಾಸದ ಚಲನೆಯನ್ನು ಗ್ರಹಿಸಿರುವುದು ಹೀಗೆ: ಒಂದು ದೇಶದ ಹೊರಗಣ ಹೋರಾಟ ತೀವ್ರವಾದಾಗ ಒಳಗಿನ ಹೋರಾಟ ತಣ್ಣಗಾಗತೊಡಗುತ್ತದೆ. ಆಗ ಅಲ್ಲಿನ ಚೈತನ್ಯಶೀಲವಾಗಿದ್ದ ವರ್ಗಗಳು ಸ್ಥಿರಗೊಂಡು ಜಾತಿಗಳಾಗುತ್ತವೆ. ಹಾಗೇ ಒಳಗಿನ ಹೋರಾಟ ತೀವ್ರವಾದಾಗ ಹೊರಗಿನ ಹೋರಾಟ ತಣ್ಣಗಾಗಿ, ಆ ನಾಗರೀಕತೆ ಸ್ಥಗಿತಗೊಳ್ಳುತ್ತದೆ. ಈ ಸ್ಥಗಿತತೆಗೆ ಕಾರಣವಾದ ಉಂಟುಮಾಡುವ ಹೊರಗಿನ ನಾಗರೀಕತೆಯ ಒತ್ತಡವನ್ನು ಎದುರಿಸಲು ಮತ್ತು ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳಲು, ಆ ದೇಶ ಹೊಸದೊಂದು ದಕ್ಷತೆಯನ್ನು ರೂಢಿಸಿಕೊಳ್ಳತೊಡಗುತ್ತದೆ. ಈ ದಕ್ಷತೆಯ ಗರಿಷ್ಟೀಕರಣದ ಕಾವಿನಲ್ಲಿ ಜಾತಿಗಳು ಚೈತನ್ಯಶೀಲವಾಗಿ ವರ್ಗಗಳಾಗಿ ಬಿಡುಗಡೆಗೊಳ್ಳುತ್ತವೆ. ಹೀಗೆ ಜಾತಿ ಎಂದರೆ ಚೈತನ್ಯ –ಚಲನೆ–ಕಳೆದುಕೊಂಡ ವರ್ಗ; ವರ್ಗವೆಂದರೆ ಚೈತನ್ಯ –ಚಲನೆ –, ಗಳಿಸಿಕೊಂಡ ಜಾತಿ. ಹೀಗಾಗಿ ಮಾನವ ಇತಿಹಾಸವೆಂದರೆ ವರ್ಗ ಮತ್ತು ಜಾತಿಗಳ ನಡುವಣ ಆಂತರಿಕ ತುಯ್ದಾಟ ಮತ್ತು ವಿವಿಧ ದಕ್ಷತೆಗಳ ಗರಿಷ್ಠತೆಗಳನ್ನು ಪ್ರತಿನಿಧಿಸುವ ನಾಗರೀಕತೆಗಳ ನಡುವಣ ಬಾಹ್ಯ ಹೊಯ್ದಾಟ ಎಂಬುದು ಲೋಹಿಯಾ ವ್ಯಾಖ್ಯಾನ. ಈ ತುಯ್ದಾಟ ಹಾಗೂ ಹೊಯ್ದಾಟಗಳ ಪರಿಣಾಮವಾಗಿ ಒಮ್ಮೆ ಒಂದು ದೇಶ ಉನ್ನತ ಸ್ಥಿತಿಗೇರಿ ಸ್ಥಗಿತಗೊಂಡು ಪಾತಾಳಕ್ಕೆ ಬಿದ್ದು ಮತ್ತೆ ಹೊಸ ದಕ್ಷತೆ ರೂಢಿಸಿಕೊಂಡು,

ಆದರ ಗರಿಷ್ಠೀಕರಣದೊಂದಿಗೆ ಮೇಲೇರುವ ವಿದ್ಯಮಾನ ಇತಿಹಾಸದಲ್ಲಿ ಕಂಡು ಬಂದಿದೆ. ಆ ಕಾರಣ ಇತಿಹಾಸವು ಚಕ್ರದಂತೆ ಚಲಿಸುತ್ತಿದೆಯೇ ಹೊರತು ವರ್ಗ ಹೋರಾಟದ ಪರಿಕಲ್ಪನೆ ಪ್ರತಿಪಾದಿಸುವ ಆರ್ಥಿಕ ದಕ್ಷತೆಯ ಗರಿಷ್ಠೀಕರಣವನ್ನೇ ನಂಬಿ ಏಕಮುಖವಾಗಿ ಚಲಿಸಲಾರದು. ಸದ್ಯದ ಈರೋಪ್, ವಿಜ್ಞಾನ ನಾಗರೀಕತೆಯ ಗರಿಷ್ಠ ದಕ್ಷತೆಯನ್ನು ಸಾಧಿಸುತ್ತಾ ಇತಿಹಾಸ ಚಕ್ರದ ಮೇಲ್ಭಾಗದಲ್ಲಿದೆ ಎಂದು ಲೋಹಿಯಾ ವಿಶ್ಲೇಷಿಸಿದರು.

ಜಾತಿ-ವರ್ಗಗಳು ಸೃಷ್ಟಿಸುವ ಅಸಮಾನತೆ ಮತ್ತು ನಾಗರೀಕತೆಗಳ ಏಳುಬೀಳುಗಳು ಸೃಷ್ಟಿಸುವ ಯುದ್ಧಗಳಿಂದ ಮಾನವ ಜನಾಂಗವು ಪಾರಾಗಬೇಕಾದರೆ, ಈವರೆಗೆ ಪ್ರತಿಯೊಂದು ನಾಗರೀಕತೆಯೂ ತನ್ನ ಉಳಿವು ಮತ್ತು ಉನ್ನತಿಗಾಗಿ ರೂಢಿಸಿಕೊಳ್ಳುತ್ತಿದ್ದ ಗರಿಷ್ಠ ದಕ್ಷತೆಗೆ ಬದಲಾಗಿ ಇಡೀ ಮಾನವ ಜನಾಂಗ, ತನ್ನ ಸರ್ವತೋಮುಖ ಉನ್ನತಿಗಾಗಿ ಒಂದು ಸಮಗ್ರ ದಕ್ಷತೆಯನ್ನು ರೂಪಿಸಿಕೊಂಡು ವಿಶ್ವನಾಗರೀಕತೆಯನ್ನು ಕಟ್ಟಬೇಕಾಗಿದೆ ಎಂದು ಲೋಹಿಯಾ ಸೂಚಿಸುತ್ತಾರೆ. ವಿಶ್ವ ಪ್ರಜೆತನವನ್ನು ರೂಪಿಸುವ ಮಹಾತ್ವಾಕಾಂಕ್ಷೆಯ ಹೊಸ ಸಮಾಜವಾದ ಮಾತ್ರ, ವಿವಿಧ ಜನಾಂಗಗಳ ದೈಹಿಕ ಹಾಗೂ ಸಾಂಸ್ಕೃತಿಕ ಸಮೀಪೀಕರಣದ ಮೂಲಕ ಮಾನವ ಜನಾಂಗದ ಏಕೀಕರಣ ಸಾಧಿಸಬಲ್ಲುದು. ಮತ್ತು ಇಂತಹ ಸಮಾಜವಾದಿ ಸಂಸ್ಕೃತಿಯ ಹೊಸ ಮನುಷ್ಯನು ವಿವಿಧ ಜನಾಂಗಗಳ ಮಿಶ್ರ ತಳಿಯಾಗಿ ಸಮಗ್ರ ದಕ್ಷತೆಯನ್ನು ರೂಢಿಸಿಕೊಂಡ ಪರಿಪೂರ್ಣ ವ್ಯಕ್ತಿಯಾಗಿರುತ್ತಾನೆ ಎಂಬುದು ಲೋಹಿಯಾರ ಕಾಣ್ಕೆಯಾಗಿತ್ತು. ಲೋಹಿಯಾ ಪ್ರಕಾರ ಇಂತಹ ಹೊಸ ಜಗತ್ತು ಮಿಶ್ರಜಾತಿ ಜನಾಂಗಗಳ ಜನರಿಂದ ಕೂಡಿರುತ್ತದೆ.

ಪಂಚಸ್ತಂಭ ವಿಶ್ವಸರ್ಕಾರ - ಏಷ್ಯಾ ಸಮಾಜವಾದಿ ಒಕ್ಕೂಟ

ಈ ಹೊಸ ಜಗತ್ತಿನ ಕನಸನ್ನು ನನಸು ಮಾಡಲು ಲೋಹಿಯಾ ವಿಶ್ವಸರ್ಕಾರ ಕುರಿತ ಸಮ್ಮೇಳನ ಹಾಗೂ ಅಂತಾರಾಷ್ಟ್ರೀಯ ಸಮಾಜವಾದಿಗಳ ಸಮ್ಮೇಳನಗಳಿಗೆ ಹೋಗಿಬಂದರು. ಏಷ್ಯಾ ಸಮಾಜವಾದಿಗಳ ಒಕ್ಕೂಟ ರಚನೆಗಾಗಿ ದುಡಿದರು. ೧೯೫೧ರಲ್ಲಿ ಸ್ವೀಡನ್‌ನ ಸ್ಟಾಕ್‌ಹೋಂನಲ್ಲಿ ನಡೆದ ಜಾಗತಿಕ ಸರ್ಕಾರ ಸಮ್ಮೇಳನದಲ್ಲಿ ಲೋಹಿಯಾ, ವಿಶ್ವಸಂಸ್ಥೆ ಹೇಗೆ ಉಳ್ಳವರ ಸ್ವತ್ತಾಗಿ ಪರಿಣಮಿಸಿ ಅಂತಾರಾಷ್ಟ್ರೀಯ ಘರ್ಷಣೆಗಳನ್ನು ತಡೆಯುವಲ್ಲಿ ವಿಫಲವಾಗಿದೆ ಎಂಬುದನ್ನು ವಿವರಿಸಿದರು. ಇದಕ್ಕೆ ಪರ್ಯಾಯವಾಗಿ ಪ್ರತಿ ರಾಷ್ಟ್ರವೂ ಗ್ರಾಮ, ಜಿಲ್ಲೆ, ರಾಜ್ಯ ಹಾಗೂ ರಾಷ್ಟ್ರ ಮಟ್ಟದ ನಾಲ್ಕು ಸ್ತಂಭಗಳ ಆಡಳಿತದೊಂದಿಗೆ ವಿಶ್ವ ಸಂಸತ್ತಿನ ರಚನೆಯ ಮೂಲಕ ಪಂಚಸ್ತಂಭ ಸರ್ಕಾರದಲ್ಲಿ ಭಾಗಿಯಾಗಬೇಕು ಎಂದು ಅವರು ಕರೆಕೊಟ್ಟರು. ನಿಶಸ್ತ್ರೀಕರಣ, ಜಾಗತಿಕ ಶಾಂತಿ-ಸೌಹಾರ್ದ-ಭದ್ರತೆಗಳನ್ನು ಸಾಧಿಸುವ ದಿಸೆಯಲ್ಲಿ ಹೊಸ ವಿಶ್ವನಾಗರೀಕತೆಯೊಂದನ್ನು

ರೂಪಿಸುವ ಜವಾಬ್ದಾರಿಯನ್ನು ಈ ಸರ್ಕಾರ ಹೊರಬೇಕೆಂದು ಅವರು ಸೂಚಿಸಿದರು. ಅದೇ ವರ್ಷ ಜರ್ಮನಿಯಲ್ಲಿ ಫ್ರಾಂಕ್‌ಫರ್ಟ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಸಮಾಜವಾದಿ ಸಮ್ಮೇಳನದಲ್ಲಿ ಐರೋಪ್ಯ ಸಮಾಜವಾದವನ್ನು ಬಂಡವಾಳವಾದದ ಸುಧಾರಿತ ರೂಪ ಮಾತ್ರವೆಂದು ಲೋಹಿಯಾ ಟೀಕಿಸಿದರು. ಅದು ಮಹಾಯುದ್ಧ ರೂಪಿಸಿದ ವಿಶ್ವದ ಎರಡು ಬಣಗಳ ರಾಜಕೀಯ ಜಾಲಕ್ಕೆ ಬೀಳದೆ, ತನ್ನದೇ ವಿಶ್ವದೃಷ್ಟಿಯನ್ನು ರೂಪಿಸಿಕೊಳ್ಳಬೇಕಾದ ಅಗತ್ಯವನ್ನು ಅವರು ಸೂಚಿಸಿದರು.

೧೯೫೨ರಲ್ಲಿ ರಂಗೂನ್‌ನಲ್ಲಿ ನಡೆದ ಏಷ್ಯಾ ಸಮಾಜವಾದಿ ಒಕ್ಕೂಟದ ಸ್ಥಾಪನಾ ಸಭೆಗೆ ಲೋಹಿಯಾ ಪಾಸ್‌ಪೋರ್ಟ್ ಇಲ್ಲದೆ ಪ್ರಯಾಣ ಮಾಡಿ ತಮ್ಮ ಕನಸಿನ ಸಮಾಜವಾದಿ ವಿಶ್ವದ ಕಲ್ಪನೆಗೆ ಸಾಂಕೇತಿಕ ಸಮರ್ಥನೆ ಒದಗಿಸಿದರು. ಏಷ್ಯಾದ ಸಮಾಜವಾದಿಗಳು ನೆಹ್ರೂ-ಮಾವೋ-ಸುಕರ್ನೋ ಮಾದರಿಯ ಹುಸಿ ಮತ್ತು ಕಪಟ ಸಮಾಜವಾದದ ಬಗ್ಗೆ ಎಚ್ಚರಿಕೆಯಿಂದಿದ್ದು, ಅನ್ಯಾಯಕ್ಕೊಳಗಾಗಿರುವ ಏಷ್ಯಾದ ಜನತೆಗೆ ನ್ಯಾಯ ಒದಗಿಸುವ ರೀತಿಯಲ್ಲಿ ಜಗತ್ತಿನ ಪುನರ್‌ನಿರ್ಮಾಣದ ಕಾಳಜಿ ವಹಿಸಬೇಕೆಂದು ಅಲ್ಲಿ ಕರೆಕೊಟ್ಟರು. ಆದರೆ ದುಃಖದ ಸಂಗತಿಯೆಂದರೆ, ಲೋಹಿಯಾರ ಸಮಾಜವಾದಿ ಮಿತ್ರರೇ ಅವರ ಈ ಅಂತಾರಾಷ್ಟ್ರೀಯ ಪ್ರಯತ್ನಗಳಲ್ಲಿ ಸಹಕರಿಸದೆ, ಔದಾಸೀನ್ಯ ತೋರಿದರು. ೧೯೫೩ರಲ್ಲಿ ರಂಗೂನ್‌ನಲ್ಲೇ ಏರ್ಪಾಡಾದ ಪ್ರಥಮ ಏಷ್ಯಾ ಸಮಾಜವಾದಿ ಸಮ್ಮೇಳನಕ್ಕೆ ಲೋಹಿಯಾ ಹೋಗಲಾಗದಂತೆ ನೋಡಿಕೊಳ್ಳಲಾಯಿತು. ಅಲ್ಲಿಗೆ ಪ್ರತಿನಿಧಿಯಾಗಿ ಹೋದ ಜಯಪ್ರಕಾಶ ನಾರಾಯಣರು, ಸ್ಥಾಪನಾ ಸಮ್ಮೇಳನದಲ್ಲಿ ಲೋಹಿಯಾ ಮಾಡಿದ್ದ ಭಾಷಣಕ್ಕೆ ತದ್ವಿರುದ್ಧವಾಗಿ ನೆಹರೂರನ್ನು ವಿಶ್ವನಾಯಕರೆಂದು ಹಾಡಿ ಹೊಗಳಿ ಬಂದರು.

ಪ್ರಜಾಸಮಾಜವಾದಿ ಪಕ್ಷದ ಉದಯ – ಸಹಕಾರಕ್ಕೆ ನೆಹ್ರೂ ಆಹ್ವಾನ

ಲೋಹಿಯಾ ೧೯೫೧ ರಿಂದ ೫೫ರ ಅವಧಿಯನ್ನು ಸಮಾಜವಾದಿ ಆಂದೋಲನ ಇತಿಹಾಸದ 'ಅಪೂರ್ವ ಅನಿಶ್ಚಿತತೆ'ಯ ಅವಧಿ ಎಂದು ಕರೆದಿದ್ದಾರೆ. ಆದರೆ ಈ ಅವಧಿಯ ಮೊದಲ ಎರಡು-ಮೂರು ವರ್ಷಗಳಲ್ಲೇ ಲೋಹಿಯಾ, ಸಮಾಜವಾದಿ ಆಂದೋಲನಕ್ಕೊಂದು ನಿಶ್ಚಿತ ತಾತ್ವಿಕ ದಿಕ್ಕು ದೆಸೆ ನಿರೂಪಿಸಿದ್ದು. ಆದರೆ ವಿಪರ್ಯಾಸವೆಂದರೆ, ಇದುವೇ ಪಕ್ಷದಲ್ಲಿ ಅಸೂಯೆ-ಗೊಂದಲ-ಅನಿಶ್ಚಿತತೆಗಳನ್ನು ಉಂಟುಮಾಡಿತು. ೧೯೪೮ರಲ್ಲಿ ಸಮಾಜವಾದಿ ಪಕ್ಷ ಕಾಂಗ್ರೆಸ್‌ನಿಂದ ಬೇರ್ಪಡುವ ಸಂದರ್ಭದಲ್ಲಿ, ಕಾಂಗ್ರೆಸ್‌ನೊಂದಿಗೆ ಸಂಪರ್ಕ ಕಡಿದುಕೊಳ್ಳಬಾರದೆಂದು ವಾದಿಸಿದವರು ಲೋಹಿಯಾ. ಆದರೆ ಅವರು ಹೊಸ ಪಕ್ಷ ಸ್ಥಾಪಿತವಾದ ಮೇಲೆ, ಅದನ್ನು ಕಾಂಗ್ರೆಸ್ ಮತ್ತು ಕಮ್ಯೂನಿಸ್ಟ್ ಪಕ್ಷಗಳಿಂದ ಸಮಾನ ದೂರದಲ್ಲಿ ಸ್ವತಂತ್ರವಾಗಿ ಕಟ್ಟುವ

ಉತ್ಸಾಹ-ಛಲ ತೋರತೊಡಗಿದರು. ಇದರಿಂದಾಗಿ, ಅವರ ಸಮಾಜವಾದಿ ಮಿತ್ರರನೇಕರು ತಮ್ಮ ಮಾರ್ಕ್ಸ್‌ವಾದಿ ತತ್ವ ಬದ್ಧತೆ ಅಥವಾ ನೆಹರೂ ಸ್ನೇಹಕ್ಕೆ ಭಂಗ ಬಂದೀತೆನ್ನುವ ಆತಂಕದಲ್ಲಿ ಅಸಮಾಧಾನಗೊಳ್ಳತೊಡಗಿದರು. ಲೋಹಿಯಾ ನೇತೃತ್ವದ ನೇಪಾಳ ಹೋರಾಟ, ರೈತ ಚಳುವಳಿ-ಸಂಘಟನೆಗಳಲ್ಲಿ ಜಯಪ್ರಕಾಶರೂ ಸೇರಿದಂತೆ ಅನೇಕ ಸಮಾಜವಾದಿ ನಾಯಕರು ಆಸಕ್ತಿ ತೋರಲಿಲ್ಲ.

ಈ ಮಧ್ಯೆ ಚುನಾವಣೆ ಸೋಲಿನ ಹಿನ್ನೆಲೆಯಲ್ಲಿ ಸಮಾಜವಾದಿಗಳು ಪಕ್ಷ ಬಲಪಡಿಸುವ ಉತ್ಸಾಹದಲ್ಲಿ ಆಚಾರ್ಯ ಕೃಪಲಾನಿ ಅವರ ನೇತೃತ್ವದ ಕಿಸಾನ್ ಮಜದೂರ್ ಪ್ರಜಾ ಪಾರ್ಟಿಯೊಂದಿಗೆ ಮಾತುಕತೆ ನಡೆಸಿದರು. ಅವರು ತಮ್ಮ ಪಕ್ಷ ಹಾಗೂ ಆ ಪಕ್ಷವನ್ನು ವಿಲೀನಗೊಳಿಸಿ ಕೃಪಲಾನಿ ಅವರ ಅಧ್ಯಕ್ಷತೆಯಲ್ಲಿ ಪ್ರಜಾ ಸಮಾಜವಾದಿ ಪಕ್ಷ (ಪಿ.ಎಸ್.ಪಿ.)ವನ್ನು ರಚಿಸಿಕೊಂಡರಾದರೂ, ಆ ಹೊಸ ಪಕ್ಷ ಅನತಿ ಕಾಲದಲ್ಲೇ ತಾತ್ವಿಕ ಭಿನ್ನಾಭಿಪ್ರಾಯಗಳ ಗೂಡಾಯಿತು. ಕಮಲಾದೇವಿ ಚಟ್ಟೋಪಾಧ್ಯಾಯ ಹಾಗೂ ಅಚ್ಯುತ ಪಟವರ್ಧನ್ ಸಕ್ರಿಯ ರಾಜಕಾರಣ ತೊರೆದರು. ಯೂಸುಫ್ ಮೆಹ್ರೋಲಿ ಕಾಲವಶವಾದರು. ಅರುಣಾ ಅಸೀಫ್ ಅಲಿ ಕಮ್ಯೂನಿಸ್ಟ್ ಪಕ್ಷ ಸೇರಿಕೊಂಡರು. ಜಯಪ್ರಕಾಶ್ ನಾರಾಯಣರು ಆತ್ಮಶುದ್ಧೀಕರಣಕ್ಕಾಗಿ ಉಪವಾಸ ಕೈಗೊಂಡು, ಪಕ್ಷ ರಾಜಕಾರಣದ ಬಗ್ಗೆಯೇ ಪುನರಾಲೋಚನೆಗೆ ತೊಡಗಿದರು.

ಈ ಸಂದರ್ಭದಲ್ಲಿ ಪ್ರಧಾನಿ ನೆಹರೂ, ಕಾಂಗ್ರೆಸ್ ಮತ್ತು ಸಮಾಜವಾದಿಗಳ ನಡುವೆ ಆರ್ಥಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಅಂತಹ ಭಿನ್ನಾಭಿಪ್ರಾಯಗಳೇನೂ ಇಲ್ಲವಾದ್ದರಿಂದ, ಸಮಾಜವಾದಿಗಳು ಸಂಘರ್ಷಾತ್ಮಕ ರಾಜಕಾರಣದಲ್ಲಿ ಸುಮ್ಮನೆ ಶಕ್ತಿ ವ್ಯರ್ಥ ಮಾಡಿಕೊಳ್ಳದೆ; ಕಾಂಗ್ರೆಸ್‌ನೊಂದಿಗೆ ಸಹಕರಿಸಿ ಸಮಾಜವಾದಿ ಸಮಾಜ ಕಟ್ಟಲು ನೆರವಾಗಬೇಕೆಂದು ಕರೆಕೊಟ್ಟರು. ಇದರಲ್ಲಿ ಸಮಾಜವಾದಿಗಳು ಸಚಿವ ಸಂಪುಟ ಸೇರುವ ಪ್ರಸ್ತಾಪವೂ ಇತ್ತು. ಲೋಹಿಯಾ ವಿರೋಧದ ನಡುವೆಯೂ, ಜೆ.ಪಿ. ಮತ್ತಿತರ ನಾಯಕರು ನೆಹ್ರೂರೊಂದಿಗೆ ಮಾತುಕತೆ ನಡೆಸಿದರು. ಈ ಮಾತುಕತೆ ಪ್ರಜಾಸಮಾಜವಾದಿ ಪಕ್ಷದ ಅಸ್ತಿತ್ವವನ್ನೇ ಅನುಮಾನಾಸ್ಪದಗೊಳಿಸುತ್ತದೆ ಎಂದು ಲೋಹಿಯಾ ವಾದಿಸಿದರು. ಕ್ಷಾಮ ಢಾಮರ ನಿರುದ್ಯೋಗ ಹಾಗೂ ನಿರ್ವಸತೀಕರಣ, ಪೋಲೀಸ್ ದೌರ್ಜನ್ಯಗಳಿಂದ ತತ್ತರಿಸಿ ದೇಶದ ಬಹುಭಾಗ ಒಂದು ಹೊತ್ತಿನ ಊಟದ ಮೇಲಷ್ಟೇ ಬದುಕುತ್ತಿರುವಾಗ, ಇದು ಜನತೆಯ ಪರ ಹೋರಾಟ ಮಾಡಬೇಕಾದ ಕರ್ತವ್ಯದಿಂದ ವಿಮುಖಗೊಳಿಸುವ ಜನದ್ರೋಹಿ ಕೆಲಸವಾಗಿದೆ ಎಂದು ಟೀಕಿಸಿದರು ಅಲ್ಲದೆ ಅವರು, ಮಾತುಕತೆಯ ಒಪ್ಪಂದದ ಕರಡು ಸಿದ್ಧಪಡಿಸಲು ಕರೆಯಲಾದ ಪಕ್ಷದ ಸಭೆಗೆ ಹಾಜರಾಗಲು ನಿರಾಕರಿಸಿದರು. ಕೊನೆಗೆ ಕಾಂಗ್ರೆಸ್, ಸಮಾಜವಾದಿಗಳು ಸಿದ್ಧಪಡಿಸಿದ್ದ ಒಪ್ಪಂದ ಪತ್ರದಲ್ಲಿನ ಬಹುತೇಕ ಷರತ್ತುಗಳನ್ನು ಒಪ್ಪಿಕೊಳ್ಳಲು ಸಾಧ್ಯವಾಗದಿದ್ದುದರಿಂದ ಮಾತುಕತೆ

ಮುರಿದುಬಿದ್ದಿತು. ಆದರೆ ಈ ಪ್ರಯತ್ನ ಪಕ್ಷದಲ್ಲಿ ಉಂಟುಮಾಡಿದ ಭಿನ್ನಾಭಿಪ್ರಾಯ, ಟೀಕೆ ಟಿಪ್ಪಣಿಗಳು ಹಲವರ ಮನಸ್ಸನ್ನು ಕಹಿಗೊಳಿಸಿತು. ಇದೇ ಸಂದರ್ಭ ಬಳಸಿಕೊಂಡು ಆಂಧ್ರದ ಟಿ. ಪ್ರಕಾಶಂ, ಮುಖ್ಯಮಂತ್ರಿ ಹುದ್ದೆಯ ಆಕರ್ಷಣೆಯಿಂದ ಪಕ್ಷ ತೊರೆದರು. ಅಶೋಕ ಮೆಹ್ತಾ 'ಹಿಂದುಳಿದ ಆರ್ಥಿಕತೆಗಳ ಒತ್ತಾಯಗಳು' ಎಂಬ ವಾದ ಆರಂಭಿಸಿ, ಸಮಾಜವಾದಿಗಳು ಆಡಳಿತಕ್ಕೆ ಅಡ್ಡಿಮಾಡದೆ ರಾಷ್ಟ್ರ ನಿರ್ಮಾಣದ ಕೆಲಸದಲ್ಲಿ ಆಡಳಿತ ಪಕ್ಷದೊಂದಿಗೆ ಸಹಕರಿಸಬೇಕಾದ ಅನಿವಾರ್ಯತೆಯನ್ನು ಪ್ರತಿಪಾದಿಸತೊಡಗಿದರು.

ರೈತ ಚಳುವಳಿ – ಕೃಷಿ ನೀತಿ

ಆದರೆ ಇದಾವುದನ್ನೂ ಲೆಕ್ಕಿಸದ ಲೋಹಿಯಾ, ಉತ್ತರ ಪ್ರದೇಶವನ್ನು ತಮ್ಮ ಪ್ರಮುಖ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ರೈತರ ಸಮಸ್ಯೆಗಳನ್ನೆತ್ತಿಕೊಂಡು ಭೂಸತ್ಯಾಗ್ರಹಗಳನ್ನು ಸಂಘಟಿಸತೊಡಗಿದರು. ಲೋಹಿಯಾ ಸರ್ಕಾರವನ್ನು ಟೀಕಿಸಿದಷ್ಟೂ, ಪೋಲೀಸ್ ದೌರ್ಜನ್ಯ ಹೆಚ್ಚತೊಡಗಿತು. ಪಕ್ಷದ ಕಾರ್ಯಕರ್ತನೇಕರ ತಲೆಬುರುಡೆಗಳು ಒಡೆದವು. ಈ ಮಧ್ಯೆ ೧೯೫೩ರ ಡಿಸೆಂಬರ್‌ನಲ್ಲಿ ನಡೆದ ಪಿ.ಎಸ್.ಪಿ.ಯ ಪ್ರಥಮ ರಾಷ್ಟ್ರೀಯ ಸಮ್ಮೇಳನದಲ್ಲಿ ಲೋಹಿಯಾ, ಅನ್ಯಮನಸ್ಕತೆಗೀಡಾಗಿದ್ದ ಜೆ.ಪಿ.ಯವರ ಸ್ಥಾನದಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಇಲ್ಲಿ ಲೋಹಿಯಾ ಭಾರತದ ಕೃಷಿ ಕ್ಷೇತ್ರ ಕುರಿತು ಪಕ್ಷ ಅನುಸರಿಸಿಸಬೇಕಾದ ನೀತಿ-ಕಾರ್ಯಕ್ರಮಗಳನ್ನು ನಿರೂಪಿಸಿದರು. ರೈತ, ಸಮಾಜವಾದಿ ಸಂಸ್ಕೃತಿಯ ವಕ್ತಾರನಾಗಬೇಕೆಂದು ಬಯಸಿದ ಲೋಹಿಯಾ ಪ್ರತಿಪಾದಿಸಿದ ಕೃಷಿ ನೀತಿಯ ಮುಖ್ಯಾಂಶಗಳು ಇವು :

೧. ಜಮೀನ್ದಾರಿ ಪದ್ಧತಿ ರದ್ದತಿ-ಉಳುವವನಿಗೇ ಭೂಮಿ.

೨. ಭೂ ಪರಭಾರೆ ಮೇಲೆ ನಿಯಂತ್ರಣ.

೩. ಹಳ್ಳಿಯ ಹೆಚ್ಚುವರಿ ಭೂಮಿ ಭೂರಹಿತರಿಗೆ ಹಂಚಿಕೆ.

೪. ಐದು ಜನರುಳ್ಳ ಕುಟುಂಬವೊಂದು ಕೂಲಿ ಕಾರ್ಮಿಕರ ಅಥವಾ ಯಂತ್ರ ಸಹಾಯವಿಲ್ಲದೆ ನಿರ್ವಹಿಸಬಹುದಾದಷ್ಟು ಭೂಮಿಯ ಮೂರರಷ್ಟಕ್ಕೆ ಭೂಮಾಲೀಕತ್ವವನ್ನು ಮಿತಿಗೊಳಿಸುವುದು.

೫. ಕೈಗಾರಿಕಾ ಉತ್ಪನ್ನಗಳ ಬೆಲೆಗಳೊಂದಿಗೆ ಕೃಷಿ ಉತ್ಪನ್ನಗಳ ಬೆಲೆ ಸಮನ್ವಯ.

ಉತ್ತರ ಪ್ರದೇಶದಲ್ಲಿ ತಮ್ಮ ಭೂ ಚಳುವಳಿಯನ್ನು ಮುಂದುವರಿಸಿದ ಲೋಹಿಯಾ, ರಾಜ್ಯವು ನೀರಾವರಿ ತೆರಿಗೆಯನ್ನು ಒಮ್ಮೆಗೇ ಏಳುಪಟ್ಟು ಹೆಚ್ಚಿಸಿದಾಗ ಹದಿಮೂರು ಜಿಲ್ಲೆಗಳಲ್ಲಿ ರೈತರ ನಾಗರಿಕ ಅಸಹಕಾರ ಸತ್ಯಾಗ್ರಹಕ್ಕೆ ಕರೆಕೊಟ್ಟರು. ಮತ್ತೆ ಪೋಲೀಸ್ ದೌರ್ಜನ್ಯ ಸ್ಫೋಟಗೊಂಡಿತು. ರೈತ ಮೆರವಣಿಗೆಗಳು ರಕ್ತಸಿಕ್ತಗೊಂಡವು.

ಸಾವಿರಾರು ಜನ ರೈತರು ಜೈಲು ಸೇರಿದರು. ಲೋಹಿಯಾರನ್ನು ೧೯೫೪ರ ಜುಲೈನಲ್ಲಿ ದಸ್ತಗಿರಿ ಮಾಡಲಾಯಿತು. ಇದನ್ನು, ನಾಗರೀಕ ಅಸಹಕಾರ ಸತ್ಯಾಗ್ರಹದ ಹಕ್ಕನ್ನು ಪ್ರತಿಪಾದಿಸಿ ಪ್ರತಿಭಟಿಸಿದ ಲೋಹಿಯಾ, ರಾಜ್ಯದ ಉಚ್ಚನ್ಯಾಯಾಲಯಕ್ಕೆ ಮನವಿ ಸಲ್ಲಿಸಿದರು. ಐರೋಪ್ಯ ದೇಶಗಳ ಹಲವಾರು ಸಮಾಜವಾದಿ ನಾಯಕರು ಲೋಹಿಯಾ ಬಂಧನದ ಬಗ್ಗೆ ದಿಗ್ಭ್ರಮೆ ವ್ಯಕ್ತಪಡಿಸಿದರು. ಪ್ರಧಾನಿ ನೆಹ್ರೂ, ಜನತೆಯನ್ನು ತಮ್ಮದೇ ಸರ್ಕಾರದ ವಿರುದ್ಧ ನಾಗರಿಕ ಅಸಹಕಾರ ಸತ್ಯಾಗ್ರಹಕ್ಕೆ ಪ್ರಚೋದಿಸುವುದು ಗಾಂಧಿತತ್ವದ ದುರುಪಯೋಗ ಎಂದರು. ನ್ಯಾಯಾಲಯದಲ್ಲೂ ಸರ್ಕಾರ ಇದೇ ತರ್ಕ ಮಂಡಿಸಿ ಲೋಹಿಯಾರ ಮೇಲೆ ಹಿಂಸಾಚಾರದ ಆರೋಪ ಹೊರಿಸಿತು. ಈ ಹಿನ್ನೆಲೆಯಲ್ಲಿ ಲೋಹಿಯಾ ನಾಗರಿಕ ಅಸಹಕಾರ ಸತ್ಯಾಗ್ರಹದ ಹಿಂದಿರುವ ಪ್ರಹ್ಲಾದ-ಸಾಕ್ರಟೀಸ್-ಥೋರೋ-ಗಾಂಧೀಜಿ ತತ್ವ ಪರಂಪರೆಯನ್ನು ಉಲ್ಲೇಖಿಸಿದರು. ಸರ್ಕಾರಕ್ಕೆ ವಿರೋಧ ವ್ಯಕ್ತಪಡಿಸಲು ಐದು ವರ್ಷಕ್ಕೊಮ್ಮೆ ಮಾತ್ರ ಅವಕಾಶವಿದೆ ಎಂದು ಪಾಠ ಹೇಳುವವರು, ಜನತೆಯನ್ನು ಅನಿವಾರ್ಯವಾಗಿ ಹಿಂಸಾಚಾರಕ್ಕೆ ದೂಡುವರು ಎಂದು ಅವರು ವಾದಿಸಿದರು. ಎರಡು ತಿಂಗಳು ಕಾಲ ನಡೆದ ಮೊಕದ್ದಮೆಯ ಅವಧಿಯಲ್ಲಿ ಲೋಹಿಯಾ ದೈಹಿಕವಾಗಿ, ಮಾನಸಿಕವಾಗಿ ಜರ್ಝರಿತರಾಗಿದ್ದರು. ಪ್ರತಿಭಟನೆಯನ್ನು ಕ್ರೂರ ಮಾರ್ಗದ ಮೂಲಕ ಹೊಸಕಿ ಹಾಕುವ ಸರ್ಕಾರದ ಹಠದ ಮನೋಭಾವ ಅವರನ್ನು ದಿಗ್ಭ್ರಾಂತಗೊಳಿಸಿತ್ತು. ಆದರೆ ನ್ಯಾಯಾಲಯ ಸರ್ಕಾರದ ವಿರುದ್ಧ ಸತ್ಯಾಗ್ರಹಕ್ಕೆ ಕರೆಕೊಡುವ ಹಾಗೂ ಸತ್ಯಾಗ್ರಹ ಹೂಡುವ ಪ್ರಜೆಯ ಹಕ್ಕನ್ನು ಎತ್ತಿ ಹಿಡಿಯಿತು. ಕೊನೆಗೂ ಅವರು ಬಿಡುಗಡೆಗೊಳ್ಳುವ ಹೊತ್ತಿಗೆ ಅವರ ಪಕ್ಷ ಇನ್ನೊಂದು ಬಿಕ್ಕಟ್ಟಿಗೆ ಸಿಲುಕಿತ್ತು.

ಸಮಾಜವಾದಿ ಸರ್ಕಾರದಿಂದ ಗೋಲೀಬಾರ್-ಇಬ್ಭಾಗವಾದ ಪಕ್ಷ

ತಿರುವಾಂಕೂರು-ಕೊಚ್ಚಿನ್ ಪ್ರಾಂತ್ಯದಲ್ಲಿ ೧೯೫೪ರ ಫೆಬ್ರವರಿಯಲ್ಲಿ ನಡೆದ ಮಧ್ಯಂತರ ಚುನಾವಣೆಯ ಪರಿಣಾಮವಾಗಿ, ಹೊರಗಡೆಯಿಂದ ಕಾಂಗ್ರೆಸ್ ಬೆಂಬಲ ಪಡೆದ ರಾಷ್ಟ್ರದ ಪ್ರಪ್ರಥಮ ಸಮಾಜವಾದಿ ಸರ್ಕಾರ ಆಗ ತಾನೇ ಅಸ್ತಿತ್ವಕ್ಕೆ ಬಂದಿತ್ತು. ಆ ಪ್ರಾಂತ್ಯದ ತಮಿಳು ಪ್ರದೇಶಗಳನ್ನು ಮದ್ರಾಸ್ ಪ್ರಾಂತ್ಯಕ್ಕೆ ಸೇರಿಸಬೇಕೆಂದು ಒತ್ತಾಯಿಸಿ ಪ್ರಾಂತ್ಯ ಕಾಂಗ್ರೆಸ್ ಘಟಕ ಹೂಡಿದ ಚಳುವಳಿಯಲ್ಲಿ ಹಿಂಸಾಚಾರಕ್ಕೆ ತೊಡಗಿದ ಜನಸಮೂಹದ ಮೇಲೆ ಸರ್ಕಾರ ಗೋಲೀಬಾರ್‌ಗೆ ಆಜ್ಞಾಪಿಸಬೇಕಾಗಿ ಬಂದು, ನಾಲ್ಕು ಜನ ಸತ್ತರು. ಆ ಸಂದರ್ಭದಲ್ಲಿ ಸ್ವತಃ ಪೋಲೀಸ್ ಹಿಂಸಾಚಾರದಿಂದ ಜರ್ಝರಿತರಾಗಿ ಸೆರೆಮನೆಯಲ್ಲಿದ್ದ ಲೋಹಿಯಾ ಇದನ್ನು ಖಂಡಿಸಿ, ಆ ರಾಜ್ಯದ ಮುಖ್ಯಮಂತ್ರಿ ಪಟ್ಟಂಥಾನು ಪಿಳ್ಳೈ ಅವರಿಗೆ ರಾಜೀನಾಮೆ ನೀಡುವಂತೆ ತಂತಿ ಸಂದೇಶ

ಕಳಿಸಿದರು. ಮುಖ್ಯಮಂತ್ರಿ ರಾಜೀನಾಮೆ ನೀಡಲು ನಿರಾಕರಿಸಿದಾಗ, ಲೋಹಿಯಾ ಪಕ್ಷದ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ನೀಡಿದರು. 'ಭಾರತದಲ್ಲಿನ ಮೊದಲ ಸಮಾಜವಾದಿ ಸರ್ಕಾರ ಹೇಗೆ ನಡೆದುಕೊಳ್ಳುತ್ತದೆ ಎಂಬುದರ ಆಧಾರದ ಮೇಲೇ ಭಾರತೀಯ ಸಮಾಜವಾದದ ಭವಿಷ್ಯವೂ ನಿರ್ಧಾರವಾಗುತ್ತದೆ' ಎಂದು ಲೋಹಿಯಾ ನಂಬಿದ್ದರು. ಹಾಗಾಗಿ ಅವರು, ತನ್ನ ಜನತೆಯನ್ನೇ ಕೊಲ್ಲುವ ಸಂದರ್ಭಕ್ಕೆ ಸಿಕ್ಕ ಸರ್ಕಾರ ಪಶ್ಚಾತ್ತಾಪ ಕ್ರಮವಾಗಿ ರಾಜೀನಾಮೆ ನೀಡಿ, ಭಾರತದ ಭವಿಷ್ಯದ ರಾಜಕಾರಣಕ್ಕೊಂದು ಸತ್ಸಂಪ್ರದಾಯ ರೂಪಿಸಿಕೊಡಬೇಕೆಂದು ವಾದಿಸಿದರು. ಈ ನಿಲುವನ್ನು ಪಕ್ಷದ ರಾಷ್ಟ್ರೀಯ ಕಾರ್ಯಕಾರಣಿ, ನ್ಯಾಯಾಂಗ ವಿಚಾರಣೆಯ ನಂತರವಷ್ಟೇ ಅಂತಿಮ ತೀರ್ಮಾನ ಎಂದು ಹೇಳಿ ಒಪ್ಪಲಿಲ್ಲ. ಆಗ ಲೋಹಿಯಾ ಇದು ರಾಜಕೀಯ ನೈತಿಕತೆಯ ಪ್ರಶ್ನೆ ಎಂದು ರಾಷ್ಟ್ರೀಯ ಕಾರ್ಯಕಾರಿಣಿಗೂ ರಾಜೀನಾಮೆ ನೀಡಿದರು. ಆಚಾರ್ಯ ನರೇಂದ್ರ ನೇರ ಮಧ್ಯಸ್ಥಿಕೆಯೂ ಬಿಕ್ಕಟ್ಟನ್ನು ನಿವಾರಿಸಲು ವಿಫಲಗೊಂಡಿತು.

ಈ ಮಧ್ಯೆ ೧೯೫೫ರ ಆವಡಿ ಕಾಂಗ್ರೆಸ್ ಅಧಿವೇಶನದಲ್ಲಿ ಕಾಂಗ್ರೆಸ್ ಪಕ್ಷ ಸಮಾಜವಾದಿ ನೀತಿಯನ್ನು ತನ್ನ ಅಧಿಕೃತ ನೀತಿಯೆಂದು ಘೋಷಿಸಿದಾಗ ಅಶೋಕ ಮೆಹ್ತಾ ಅದನ್ನು ಸ್ವಾಗತಿಸಿ ಹೇಳಿಕೆ ನೀಡಿದರು. ಈ ಹೇಳಿಕೆಯನ್ನು ಕಟುವಾಗಿ ಟೀಕಿಸಿದ ಮಧುಲಿಮೆಯೆ ಲೋಹಿಯಾರ ಭಿನ್ನ ನಿಲುವನ್ನು ಎತ್ತಿಹಿಡಿದರು. ಅವರನ್ನು ಅಶಿಸ್ತಿನ ಆರೋಪದ ಮೇಲೆ ಪಕ್ಷ ಅಮಾನತ್ತಿನಲ್ಲಿಟ್ಟಿತು. ಈ ಸಂದರ್ಭದಲ್ಲಿ ಶಿಸ್ತು ಎಂದರೆ 'ವಿಚಾರ ಸ್ವಾತಂತ್ರ್ಯದ ಉದ್ದನೆಯ ಕೈ - ಘೋಷಿತ ನೀತಿ ಪಾಲಿಸುವ ಕ್ರಿಯೆಯ ಬಿಗಿಮುಷ್ಠಿ' ಎಂದು ವ್ಯಾಖ್ಯಾನಿಸಿದ ಲೋಹಿಯಾ, ತನಗನ್ನಿಸಿದನ್ನು ಹೇಳುವುದು ಅಶಿಸ್ತಾಗುವುದಿಲ್ಲ; ಪಕ್ಷ ನಂಬಿದ್ದನ್ನು ಮಾಡದಿರುವುದು ಅಶಿಸ್ತಾಗುತ್ತದೆ ಎಂದು ವಾದಿಸಿದರು. ಅವರು ಮಧುಲಿಮೆಯೆ ಅವರ ಅಮಾನತ್ತನ್ನು ಖಂಡಿಸಿದರಲ್ಲದೆ, ಪಕ್ಷದೊಳಗಿದ್ದ ಕಾಂಗ್ರೆಸ್‌ವಾದಿ ಗುಂಪನ್ನು ಪಾರ್ಶ್ವವಾಯು ಪೀಡಿತ ಸಮಾಜವಾದದ ವಕ್ತಾರರ, ಪಕ್ಷದ್ರೋಹಿ ಸಂಚುಕೋರರ ಗುಂಪೆಂದು ಹಳಿದರು. ಈ ಗುಂಪು ಲೋಹಿಯಾ ಬೆಂಬಲಿಗರನ್ನು ವ್ಯಕ್ತಿಪೂಜಕರ ಗುಂಪೆಂದು ಹಳಿಯಿತು. ಬಿಕ್ಕಟ್ಟು ಪರಾಕಾಷ್ಠೆ ಮುಟ್ಟಿದಾಗ ಜುಲೈನಲ್ಲಿ ಜೈಪುರದಲ್ಲಿ ಸಭೆ ಸೇರಿದ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿ, ಬಿಕ್ಕಟ್ಟನ್ನು ಕುರಿತು ಜೆ.ಪಿ. ಮಂಡಿಸಿದ ಗೊತ್ತುವಳಿಯನ್ನು ಅಂಗೀಕರಿಸಿ ಲೋಹಿಯಾರನ್ನು ಪಕ್ಷದಿಂದ ಅಮಾನತು ಮಾಡಿತು. ಮುಂಬೈ, ದೆಹಲಿ, ಮಧ್ಯ ಭಾರತ, ವಿಂಧ್ಯ, ಬಿಹಾರ, ಮಣಿಪುರ, ಮೈಸೂರು, ಮದ್ರಾಸ್, ಆಂಧ್ರ ಪ್ರಾಂತ್ಯಗಳ ಪಕ್ಷದ ಘಟಕಗಳು ಲೋಹಿಯಾರನ್ನು ಬೆಂಬಲಿಸಿದವು. ಇದರಿಂದಾಗಿ ಪಕ್ಷ ಉದ್ದಕ್ಕೆ ಸೀಳಲ್ಪಟ್ಟಿತು. ನೆಹರೂ-ಜಯಪ್ರಕಾಶ್‌ರ ಮಾತುಕತೆಗಳೊಂದಿಗೆ ಆರಂಭವಾಗಿದ್ದ ಪಕ್ಷದೊಳಗಿನ ಬಿರುಕು ಈಗ ಪಕ್ಷವನ್ನು ಇಬ್ಭಾಗಮಾಡಿತ್ತು.

ಹೊಸ ಸಮಾಜವಾದಿ ಪಕ್ಷ-ಗುದ್ದಲಿ, ಸೆರಮನೆ, ವೋಟು!

ಲೋಹಿಯಾ ಬೆಂಬಲಿಗರು ೧೯೫೫ರ ಡಿಸೆಂಬರ್ ೨೮ರಿಂದ ೫೬ರ ಜನವರಿ ೧ರವರೆಗೆ ಹೈದರಾಬಾದ್‌ನಲ್ಲಿ ಸಭೆ ಸೇರಿ, ತಮ್ಮದೇ ಸಮಾಜವಾದಿ ಪಕ್ಷ ರಚಿಸಿಕೊಳ್ಳಲು ನಿರ್ಧರಿಸಿದರು. ಇದನ್ನು ಸಮಾಜವಾದಿ ಪಕ್ಷ ಎಂದಷ್ಟೇ ಕರೆಯಲಾಯಿತು. ಈ ಪಕ್ಷದ ಸ್ಥಾಪನಾ ಸಭೆಯ ಅಧ್ಯಕ್ಷತೆ ವಹಿಸಿದ ಲೋಹಿಯಾ, ಮಾರ್ಕ್ಸ್ ಅಥವಾ ಗಾಂಧಿಪರ ಅಥವಾ ವಿರೋಧದ ಚರ್ಚೆಯಿಂದ ಮುಕ್ತವಾದ, ಸ್ವತಂತ್ರ ಸಮಾಜವಾದದ ದಾರಿಯಲ್ಲಿ ಹೊಸ ಪಕ್ಷ ನಡೆಯಬೇಕಾಗಿದೆ ಎಂದು ಸೂಚಿಸಿದರು. ಪಕ್ಷವು ಕೇವಲ ಪ್ರತಿಕ್ರಿಯಾತ್ಮಕವಾಗಿ ಕಾರ್ಯನಿರ್ವಹಿಸದೆ, ಪ್ರತಿಭಟನೆ-ಕ್ರಿಯಾತ್ಮಕತೆ ಹೀಗೆ ಎರಡು ಕಾಲುಗಳ ಮೇಲೆ ನಡೆಯುವುದನ್ನು ಕಲಿತರೆ, ಏಳು ವರ್ಷಗಳಲ್ಲಿ ಅಧಿಕಾರ ಹಿಡಿಯಬಹುದು ಎಂದು ವಿವರಿಸುವ 'ಅಧಿಕಾರಕ್ಕಾಗಿ ಸಂಕಲ್ಪ' ಎಂಬ ಕಾರ್ಯಕ್ರಮ ನಕ್ಷೆಯೊಂದನ್ನು ಅವರು ಹೊಸ ಪಕ್ಷದ ಮುಂದೆ ಮಂಡಿಸಿದರು. ನಂತರ ಎರಡೇ ತಿಂಗಳಲ್ಲಿ ಲಕ್ನೋದಲ್ಲಿ ನಡೆದ ಪಕ್ಷದ ಪ್ರಥಮ ಸಮ್ಮೇಳನದಲ್ಲಿ ಗುದ್ದಲಿ, ಸೆರಮನೆ, ವೋಟು ಪಕ್ಷದ ತ್ರಿಮುಖ ಕಾರ್ಯಕ್ರಮವಾಗಬೇಕೆಂದು ಲೋಹಿಯಾ ಕರೆಕೊಟ್ಟರು. ಗುದ್ದಲಿ ರಚನಾತ್ಮಕ ಕೆಲಸಗಳಿಗೆ, ಸೆರಮನೆ ಅನ್ಯಾಯದ ವಿರುದ್ಧ ಹೋರಾಟಕ್ಕೆ, ವೋಟು ಅಧಿಕಾರಕ್ಕೆ ಸಂಕೇತ ಎಂದು ಅವರು ವಿವರಿಸಿದರು.

ಈಗ ಪಕ್ಷದ ಏಕೈಕ ನಾಯಕರಾಗಿದ್ದ ಲೋಹಿಯಾ, ಮಧುಲಿಮೆಯೆ, ರಬಿರಾಯ್, ರಾಜನಾರಾಯಣ್, ಲಾಡ್ಲಿ ಮೋಹನ ನಿಗಂ, ಗೋಪಾಲಗೌಡ, ಗೋಡೆ ಮುರಹರಿ, ಬಿಪಿನ್‌ಪಾಲ್ ದಾಸ್, ಕರ್ಪೂರಿ ಠಾಕೂರ್, ಮಣಿರಾಂ ಬಾಗಡಿ, ಕಿಷನ್ ಪಟ್ನಾಯಕ್, ಕೇಶವರಾವ್ ಜಾಧವ್, ರಮಾ ಮಿತ್ರ, ಪೂರ್ಣಿಮಾ ಬ್ಯಾನರ್ಜಿ, ಮೃಣಾಲ್ ಗೋರೆ, ಇಂದುಮತಿ ಕೇಲ್ಕರ್ ಮುಂತಾದ ಯುವ ಉತ್ಸಾಹಿಗಳ ಆಪ್ತವಲಯದಲ್ಲಿ ಪಕ್ಷವನ್ನು ರಾಷ್ಟ್ರ ಪುರ್ನನಿರ್ಮಾಣದ ಕ್ರಾಂತಿಕಾರಿ ಸಾಧನವನ್ನಾಗಿ ರೂಪಿಸಲು ಸಜ್ಜಾದರು. ಪಕ್ಷದ ನೀತಿ ನಿಲುವುಗಳನ್ನು ನಿರೂಪಿಸಲು, ಚರ್ಚಿಸಲು; ಕಾರ್ಯಕ್ರಮಗಳ ಮೌಲ್ಯಮಾಪನ ಮಾಡಲು, ಸಮಾಜವಾದಿ ವಿಚಾರಗಳನ್ನು ಬೆಳೆಸಿ ಪ್ರಚಾರ ಮಾಡಲು ಪತ್ರಿಕೆಗಳನ್ನು ಆರಂಭಿಸಲು ತೀರ್ಮಾನಿಸಲಾಯಿತು. ಹಿಂದಿಯಲ್ಲಿ 'ಚೌಖಾಂಬಾ' ಎಂಬ ವಾರಪತ್ರಿಕೆಯನ್ನು, 'ಜನ್' ಎಂಬ ಮಾಸಪತ್ರಿಕೆಯನ್ನೂ; 'ಮ್ಯಾನ್‌ಕೈಂಡ್' ಎಂಬ ಇಂಗ್ಲಿಷ್ ಮಾಸಪತ್ರಿಕೆಯನ್ನೂ ಆರಂಭಿಸಲಾಯಿತು. ಸ್ವತಃ ಲೋಹಿಯಾ ಅವರೇ ಈ ಪತ್ರಿಕೆಗಳಲ್ಲಿ ವಿಶ್ವ ಹಾಗೂ ಭಾರತೀಯ ರಾಜಕಾರಣವಲ್ಲದೆ ಇತಿಹಾಸ, ಪುರಾಣ, ಭಾಷೆ, ಸಾಹಿತ್ಯ, ಸಂಸ್ಕೃತಿ, ಸೌಂದರ್ಯ, ಕ್ರೀಡೆಗಳ ಬಗ್ಗೆ ಸೃಜನಶೀಲ ಒಳನೋಟಗಳುಳ್ಳ ವಿದ್ವತ್ಪೂರ್ಣ ಲೇಖನಗಳನ್ನು ಬರೆದರು. ಮತ್ತು ವಿಶ್ವದ ಪ್ರತಿಭಾವಂತ ಲೇಖಕರು ಈ ಪತ್ರಿಕೆಗಳಿಗೆ ಬರೆಯುವಂತೆ ಮಾಡಿದರು. ಕೆಲವೇ ವರ್ಷಗಳಲ್ಲಿ 'ಮ್ಯಾನ್‌ಕೈಂಡ್' ಸಮಾಜವಾದೀ ಚರ್ಚೆಯ ವಿಶ್ವವಾಣಿಯಾಯಿತು.

ಭಾರತದ ಪ್ರಮುಖ ಲೇಖಕ-ಚಿಂತಕ-ಕಲಾವಿದರಲ್ಲನೇಕರು ಸಮಾಜವಾದಿ ಸಿದ್ಧಾಂತದೆಡೆಗೆ ಸೆಳೆಯಲ್ಪಟ್ಟರು. ಇದರಿಂದಾಗಿ ಸಮಾಜವಾದಿ ಆಂದೋಲನಕ್ಕೀಗ ಸಾಂಸ್ಕೃತಿಕ ಧಾರೆಯೂ ಸೇರಲ್ಪಟ್ಟಿತು.

ಚುನಾವಣೆಗೆ ಸಿದ್ಧತೆ-ಅಂಬೇಡ್ಕರ್‌ಗೆ ಪತ್ರ

ರಾಷ್ಟ್ರದ ಎರಡನೇ ಸಾರ್ವತ್ರಿಕ ಚುನಾವಣೆ ಹತ್ತಿರದಲ್ಲೇ ಇತ್ತು. ಪಕ್ಷವನ್ನು ರಾಷ್ಟ್ರಾದ್ಯಂತ ಹೊಸದಾಗಿ ಸಂಘಟಿಸಬೇಕಿತ್ತು. ಲೋಹಿಯಾ ಪ್ರತಿವಾರ ರಾಜ್ಯಘಟಕಗಳಿಗೆ ನೀತಿ-ಕಾರ್ಯಕ್ರಮಗಳ ಬಗ್ಗೆ ಸೂಚನೆ ನೀಡಿ, ವಾಪಸ್ ಪ್ರತಿಕ್ರಿಯೆ ಪಡೆಯುವ 'ಸಾಪ್ತಾಹಿಕ ಜಾಗೃತಿ' ಎಂಬ ಕಾರ್ಯಕ್ರಮ ಹಮ್ಮಿಕೊಂಡರು. ಇದೇ ಸಂದರ್ಭದಲ್ಲಿ ಅವರು ಡಾ॥ ಬಿ.ಆರ್. ಅಂಬೇಡ್ಕರರೊಂದಿಗೆ ಪತ್ರ ವ್ಯವಹಾರ ಮಾಡಿ, ಇಬ್ಬರೂ ಕೂಡಿ ರಾಜಕಾರಣ ಮಾಡುವ ಸಲಹೆ ಮುಂದಿಟ್ಟರು. ಅಂಬೇಡ್ಕರ್ ದಲಿತ ರಾಜಕಾರಣವನ್ನು ಮೀರಿ ನಿಂತು, ಭಾರತದ ನಾಯಕರಾಗಲು ಈಗಲಾದರೂ ಮುಂದೆ ಬರಬೇಕೆಂದು ಆಹ್ವಾನಿಸಿದರು. ಆದರೆ ಇಬ್ಬರ ನಡುವೆ ಮುಖತಃ ಮಾತುಕತೆ ಆರಂಭವಾಗುವ ಮುನ್ನವೇ ದುರದೃಷ್ಟವಶಾತ್ ಅಂಬೇಡ್ಕರ್ ಕಾಲವಶರಾದರು. ಚುನಾವಣೆಗಳಲ್ಲಿ ಸಮಾಜವಾದಿ ಪಕ್ಷ ೩೩ ಲೋಕಸಭಾ ಹಾಗೂ ೩೩೫ ವಿಧಾನಸಭಾ ಸ್ಥಾನಗಳಿಗೆ ಸ್ಪರ್ಧಿಸಿ, ೮ ಲೋಕಸಭಾ ಮತ್ತು ೫೫ ವಿಧಾನಸಭಾ ಸ್ಥಾನಗಳಲ್ಲಿ ಜಯಗಳಿಸಿತು. ಸೋಲುವ ತಮ್ಮ ಪಕ್ಷದ ಅಭ್ಯರ್ಥಿಗಳ ನೋವಿನಲ್ಲಿ ಪಾಲ್ಗೊಳ್ಳಲೆಂದೇ ತಾವು ಸ್ಪರ್ಧಿಸುತ್ತಿರುವುದಾಗಿ ಹೇಳಿ, ಉತ್ತರಪ್ರದೇಶದ ಚಕಿಯಾ ಚಂದೌಲಿ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಲೋಹಿಯಾ, ಸೋತದ್ದು ಸಹಜವೇ ಆಗಿತ್ತು.

ಆದರೆ ಈಗಾಗಲೇ ದೂರದೃಷ್ಟಿಯ ರಾಜಕಾರಣವನ್ನು ಘೋಷಿಸಿಕೊಂಡಿದ್ದ ಪಕ್ಷ, ಎದೆಗುಂದದೆ ನವೋತ್ಸಾಹದಿಂದ ಜನಮಧ್ಯದ ಅನೇಕ ಕಾರ್ಯಕ್ರಮಗಳನ್ನು ರೂಪಿಸಿತು. ಸಮಾಜವಾದಿ ಆಂದೋಲನದ ಇತಿಹಾಸದಲ್ಲಿನ ಈ ಅವಧಿಯನ್ನು 'ಕ್ರಾಂತಿಕಾರಿ ಸಮಾಜವಾದದ ಅವಧಿ' ಎಂದು ಕರೆದಿರುವ ಲೋಹಿಯಾ, ಪಕ್ಷದ ಆರ್ಥಿಕ ನೀತಿಯನ್ನು ವಿಷದೀಕರಿಸುತ್ತಾ ನೆಹರೂ ಸರ್ಕಾರದ ವಿರುದ್ಧ ತಮ್ಮ ಟೀಕಾ ಪ್ರಹಾರವನ್ನು ತೀವ್ರಗೊಳಿಸಿದರು. ಜೊತೆಗೇ ಪಕ್ಷದ ಜಾತಿ ಹಾಗೂ ಭಾಷಾ ನೀತಿಗಳನ್ನು ವಿಷದಪಡಿಸುವ 'ಜಾತಿ ವಿನಾಶ' ಹಾಗೂ 'ಅಂಗ್ರೇಜಿ ಹಟಾವೋ' ಸಮ್ಮೇಳನಗಳನ್ನು ಸಂಘಟಿಸತೊಡಗಿದರು.

ನೆಹ್ರೂ ವಿಗ್ರಹ ಭಂಜನೆ-ಆರ್ಥಿಕ ಕಾರ್ಯಕ್ರಮಗಳ ನಿರೂಪಣೆ

ದಿನಕ್ಕೆ ನಾಲ್ಕಾಣೆ ಆದಾಯವಿರುವ ಬಡವರಿಂದ ತುಂಬಿದ ಭಾರತದಲ್ಲಿ ದಿನಕ್ಕೆ ೨೫ ಸಾವಿರ ರೂಪಾಯಿ ಖರ್ಚುಮಾಡುವ ಪ್ರಧಾನಿ ನೆಹರೂ ಮತ್ತವರ ಸರ್ಕಾರ

ಪ್ರೋತ್ಸಾಹಿಸುತ್ತಿರುವ ವೈಭವೋಪೇತ ಜೀವನಶೈಲಿ ಮತ್ತು ದುಂದುವೆಚ್ಚಗಳ ಬಗ್ಗೆ ವಿವರ ಲೋಹಿಯಾ ಸಂಗ್ರಹಿಸಿದರು. ಅಲ್ಲದೆ, ಆ ಬಗ್ಗೆ ವಿಷದವಾಗಿ ಬರೆದು ಸಾರ್ವಜನಿಕರು ಚರ್ಚೆ ಆರಂಭಿಸಿದರು. ಭಾರತದಂತಹ ಬಡದೇಶದಲ್ಲಿ ಅಸಮಾನತೆಯು ೧:೧೦ರ ಪ್ರಮಾಣ ಮೀರದಂತೆ ಆರ್ಥಿಕತೆಯನ್ನು ನಿರ್ವಹಿಸಬೇಕೆಂದು ಸೂಚಿಸಿದ ಅವರು, ಈ ದಿಸೆಯಲ್ಲಿ ತೆಗೆದುಕೊಳ್ಳಬೇಕಾದ ಹಲವಾರು ಕ್ರಮಗಳನ್ನು ಸೂಚಿಸಿದರು: ವೈಯಕ್ತಿಕ ಆದಾಯದ ಮೇಲೆ—ಆಗ ತಿಂಗಳಿಗೆ ೧೫೦೦ ರೂಪಾಯಿಗಳ—ಮಿತಿ ಹೇರಬೇಕು; ಮಾಜಿ ಮಹಾರಾಜರ ರಾಜಧನ ಮತ್ತು ಇತರೆಲ್ಲ ಸವಲತ್ತುಗಳನ್ನು ರದ್ದು ಮಾಡಬೇಕು; ಬಾಲ್ಯದಿಂದಲೇ ಮಕ್ಕಳಲ್ಲಿ ಸಮಾನತೆಯ ಭಾವ ಮೂಡಿಸಲು ಎಲ್ಲ ಖಾಸಗಿ ಪ್ರತಿಷ್ಠಿತ ಶಾಲೆಗಳನ್ನು ಮುಚ್ಚಬೇಕು; ೧೫-೨೦ ವರ್ಷಗಳ ಕಾಲ, ಖಾಸಗಿ ಕಾರ್‌ಗಳ ತಯಾರಿಕೆ ನಿಲ್ಲಿಸಿ ಸಾಮುದಾಯಿಕ ಸಾರಿಗೆ ವಾಹನಗಳ ಹಾಗೂ ಟ್ರ್ಯಾಕ್ಟರ್ ಮುಂತಾದ ಕೃಷಿಯಂತ್ರಗಳ ತಯಾರಿಕೆ ಕಡೆ ಗಮನ ಹರಿಸಬೇಕು ಎಂದರು. ಹಲವಾರು ಅವಶ್ಯಕ ಉತ್ಪಾದನಾ ವಸ್ತುಗಳ ವೆಚ್ಚವನ್ನು ಲೆಕ್ಕ ಹಾಕಿ ಭಾರತೀಯ ಬಂಡವಾಳದಾರರ ಲಾಭಕೋರತನವನ್ನು ಬಹಿರಂಗಪಡಿಸಿದ ಲೋಹಿಯಾ, ಎಲ್ಲ ಅವಶ್ಯಕ ವಸ್ತುಗಳ ಬೆಲೆ ನಿಗದೀಕರಣಕ್ಕಾಗಿ ಶಾಶ್ವತ ಬೆಲೆ ಆಯೋಗ ರಚಿಸುವಂತೆ ಸಲಹೆ ನೀಡಿದರು. ಖಾಸಗಿ ಆಸ್ತಿಯ ಸಂಪೂರ್ಣ ನಿಷೇಧವನ್ನು ಒಪ್ಪದ ಲೋಹಿಯಾ, ಸಂಬಳದ ಮೇಲಿನ ಕಾರ್ಮಿಕರ ಅಗತ್ಯವಿರುವ ಕೈಗಾರಿಕೆಗಳನ್ನು ಸ್ಥಳೀಯ ಸರ್ಕಾರಗಳಿಗೆ ಅಥವಾ ಸಹಕಾರಿ ಆಂದೋಲನಕ್ಕೆ ಒಪ್ಪಿಸಿಬೇಕು ಮತ್ತು ಎಲ್ಲ ಬೃಹತ್ ಉದ್ಯಮಗಳನ್ನು ರಾಷ್ಟ್ರೀಕರಿಸಬೇಕು ಎಂದು ಕರೆಕೊಟ್ಟರು.

ನೆಹರೂ ಅವರ ಪ್ರತಿಯೊಂದು ನಡೆ-ನುಡಿಯನ್ನೂ, ಚಲನ-ವಲನವನ್ನೂ ಗಮನಿಸುತ್ತಿದ್ದ ಲೋಹಿಯಾ, ಸರ್ಕಾರ ಹೇಗೆ ಪ್ರತಿ ವಿವರದಲ್ಲಿಯೂ ಮೇಲ್ಜಾತಿ-ಮೇಲ್ವರ್ಗ ಗಳ ಹಿತ ಕಾಪಾಡುತ್ತಾ, ರಾಷ್ಟ್ರ ವಿರೋಧಿಯಾದ ಊಳಿಗಮಾನ್ಯ ಬಂಡವಾಳಶಾಹಿ ಸರ್ಕಾರವಾಗಿದೆ ಎಂದು ಸಾರ್ವಜನಿಕ ಸಭೆಗಳಲ್ಲಿ ವಿವರಿಸತೊಡಗಿದರು. ಒಮ್ಮೊಮ್ಮೆ ನೆಹರೂ ರಾಜಕಾರಣದ ಟೀಕೆ, ನೆಹರೂ ಕುರಿತ ವೈಯಕ್ತಿಕ ಟೀಕೆಯ ಮಟ್ಟಕ್ಕೂ ಇಳಿಯುತ್ತಿತ್ತು. ನೆಹರೂ ಉಡುಪಿನ ಶೈಲಿಯನ್ನು ಟೀಕಿಸುತ್ತಾ, ಅದು ಮೊಘಲ್ ದರ್ಬಾರಿನ ತಬಲಾ ವಾದಕನ ಅನುಕರಣೆ ಎಂದರು. ಇಂಗ್ಲಿಷ್ ಮಾತಾಡುವ, ಇಂಗ್ಲಿಷ್ ಪತ್ರಿಕೆಗಳನ್ನಷ್ಟೇ ಓದುವ ಬಹುತೇಕ ಮೇಲ್ಜಾತಿ-ಮೇಲ್ವರ್ಗಗಳ ಸಮುದಾಯ ನೆಹರೂ ಆರಾಧಕರಾಗಿದ್ದುದನ್ನು ಅವರು ಗಮನಿಸಿದ್ದರು. ಹಾಗಾಗಿ ಅವರ ಶ್ರೀಮಂತಿಕೆಯ ಬಿಂಕವನ್ನು ಕೆಣಕಲು, ನೆಹರೂ ಅಜ್ಜ ಬ್ರಿಟಿಷ್ ಸೇನೆಯಲ್ಲಿ ಚಪ್ರಾಸಿಯಾಗಿ ಜೀವನ ಆರಂಭಿಸಿದ್ದ ಎಂದು ಸಂಶೋಧಿಸಿ ಚುಚ್ಚಿದರು! ಈ ವೈಯಕ್ತಿಕ ಟೀಕೆಯನ್ನು ಅಗ್ಗದ ಟೀಕೆ ಎಂದು ರಾಜಕೀಯ ವಿಶ್ಲೇಷಕರು ಖಂಡಿಸಿದಾಗ, ವಿಗ್ರಹಪೂಜೆಯ ಪರಂಪರೆ

ಇರುವ ಈ ದೇಶದ ಜನತೆಯನ್ನು ಇಂತಹ ವಿಗ್ರಹ ಭಂಜನೆಯ ಮಾತುಗಳಿಂದಲೇ ಪ್ರಚೋದಿಸಲು ಸಾಧ್ಯ ಎಂದು ಲೋಹಿಯಾ ವಾದಿಸಿದರು. ಅಲ್ಲದೆ, ಸಮಕಾಲೀನ ಭಾರತವೆಂಬ ಕೆಸರಿನಲ್ಲಿ ಗಟ್ಟಿಯಾಗಿ ಕಾಲೂರಲು ಅತಿಗೆ ಹೋಗಿ ಮಾತಾಡುವುದು ಅನಿವಾರ್ಯವಾಗಿದೆ ಎಂದರು.

ಬರ್ಬರ ಹಿಂಸಾಚಾರ - ಹಠತೊಟ್ಟ ಲೋಹಿಯಾ

ಕಾಂಗ್ರೆಸ್ ಸರ್ಕಾರ ಹಾಗೂ ನೆಹರೂ ಕುರಿತು ಟೀಕೆ-ಟಿಪ್ಪಣಿಗಳು ತೀವ್ರಗೊಂಡಂತೆ, ಲೋಹಿಯಾಗೆ ಹೋದೆಡೆಯಲ್ಲೆಲ್ಲ ಕಿರುಕುಳ ಆರಂಭವಾಯಿತು. ಕ್ಷುದ್ರ ಕಾರಣಗಳ ಮೇಲೆ ಸರ್ಕಾರ ಅವರನ್ನು ಬಂಧಿಸತೊಡಗಿತು. ೧೯೫೭ರ ನವೆಂಬರ್‌ನಲ್ಲಿ ಬೆಲೆ ನಿಯಂತ್ರಣ ಚಳುವಳಿಯ ಅಂಗವಾಗಿ ಲೋಹಿಯಾ ಲಕ್ನೋದ ಮಾರಾಟ ತೆರಿಗೆ ಕಛೇರಿ ಮುಂದೆ ಪಿಕೆಟಿಂಗ್ ನಡೆಸಿದಾಗ, ಅಂಚೆಯಾಳೊಬ್ಬನನ್ನು ಕಛೇರಿ ಪ್ರವೇಶಿಸಲು ತಡೆದು ಸರ್ಕಾರದ ಕೆಲಸ ಕಾರ್ಯಗಳಿಗೆ ಅವರು ಅಡ್ಡಿ ಉಂಟುಮಾಡಿದರೆಂದು ಬಂಧಿಸಲಾಯಿತು. ಇದು ಕಾನೂನುಬಾಹಿರ ಬಂಧನ ಎಂದು ಪ್ರತಿಭಟಿಸಿದಾಗ ಲೋಹಿಯಾರನ್ನು ಕುರ್ಚಿಗೆ ಬಿಗಿದು ಕಟ್ಟಿ ಮ್ಯಾಜಿಸ್ಟ್ರೇಟ್ ಮುಂದೆ ಹಾಜರು ಪಡಿಸಿ, ಬಲವಂತವಾಗಿ ಅವರ ಹೆಬ್ಬೆಟ್ಟಿನ ಗುರುತು ಪಡೆಯಲಾಯಿತು. ಕೆಲವೇ ದಿನಗಳ ಹಿಂದೆ ಅವರು ಕೆಳ ನ್ಯಾಯಾಲಯಗಳ ನ್ಯಾಯದಾನದ ರೀತಿ ನೀತಿಗಳ ಬಗ್ಗೆ ಮಾಡಿದ್ದ ಟೀಕೆಗೆ ಪ್ರತಿಕ್ರಿಯೆಯೇನೋ ಎಂಬಂತೆ ಅವರ ಬಿಡುಗಡೆಗೆ ಅಡ್ಡಿ ಆತಂಕಗಳನ್ನು ಉಂಟು ಮಾಡಲಾಯಿತು. ಸೆರೆಮನೆಯೊಳಗೆ ಲೋಹಿಯಾ ಮತ್ತು ಅವರ ಬೆಂಬಲಿಗರ ಮೇಲೆ ಲಾಠಿ ಪ್ರಹಾರ, ಮುಷ್ಠಿ ಪ್ರಹಾರ ಸೇರಿದಂತೆ ಬರ್ಬರ ಹಿಂಸಾಚಾರ ನಡೆಸಲಾಯಿತು.

ಈ ಸಂಬಂಧ ಉತ್ತರಪ್ರದೇಶದ ಸೆರೆಮನೆ ಮಂತ್ರಿಗೆ ಲೋಹಿಯಾ ಬರೆದ ಪತ್ರ ನಂತರದ ದಿನಗಳಲ್ಲಿ 'ವಸಿಷ್ಠರು ಮತ್ತು ವಾಲ್ಮೀಕಿಯರು' ಎಂಬ ಪ್ರಸಿದ್ಧ ಲೇಖನವಾಗಿ ಪ್ರಕಟವಾಗಿದೆ. ಅದರಲ್ಲಿ, ಅಂದಿನ ಭಾರತದ ರಾಜಕಾರಣ ಅಡಿಯಿಂದ ಮುಡಿವರೆಗೆ ಹೇಗೆ ಜಾತಿಯ ವಿವಿಧ ರೂಪಗಳ ರುದ್ರನರ್ತನದಿಂದ ಬರ್ಬರವಾಗಿದೆ ಎಂದು ಅವರು ವಿವರಿಸಿತ್ತಾ, ಅದರಲ್ಲಿ ನೆಹರೂರನ್ನು ಅಂಥ ವಸಿಷ್ಠ ಪರಂಪರೆಯ ಬ್ರಾಹ್ಮಣ ಕ್ರೌರ್ಯದ ಪ್ರತೀಕವೆಂದು ಗುರುತಿಸಿದ್ದಾರೆ. ಹಾಗೆಯೇ ವಿಶ್ವೇಶ್ವರಯ್ಯರಂತಹವರು ಪ್ರತೀಕವಾಗಿರುವ ಸರ್ವರ ಒಳಿತನ್ನು ಪ್ರತಿನಿಧಿಸುವ ವಾಲ್ಮೀಕಿ ಪರಂಪರೆಯ ಬ್ರಾಹ್ಮಣರ ಪ್ರಸ್ತಾಪವನ್ನೂ ಆ ಲೇಖನದಲ್ಲಿ ಅವರು ಮಾಡುತ್ತಾರೆ.

ಲೋಹಿಯಾ ಈ ಮೊಕದ್ದಮೆಯಲ್ಲಿ ಬಿಡುಗಡೆಯಾಗಲು ಉಚ್ಚ ಹಾಗೂ ಸರ್ವೋಚ್ಚ ನ್ಯಾಯಾಲಯಗಳಿಗೆ ಮೊರೆಹೋಗ ಬೇಕಾಯಿತು. ಹತ್ತು ತಿಂಗಳ ಆ

ಬರ್ಬರ ಸೆರೆಮನೆಯ ವಾಸದಿಂದ ಬಿಡುಗಡೆಯಾದಾಗ ಅವರು ಸಂಪೂರ್ಣವಾಗಿ ಜರ್ಝರಿತರಾಗಿದ್ದರು—ಹಲ್ಲುಗಳು ಉದುರಿದ್ದವು, ಬೆರಳುಗಳು ಮುರಿದಿದ್ದವು, ಕಿವುಡು ಆರಂಭವಾಗಿತ್ತು. ರಕ್ತದೊತ್ತಡ ಏರಿ, ಹೃದಯ ದುರ್ಬಲವಾಗ ತೊಡಗಿತ್ತು. ಆದರೆ ಇದರಿಂದ ಮೃದುವಾಗುವ ಬದಲು ಕ್ರುದ್ಧರಾದ ಲೋಹಿಯಾ, ನೆಹರೂ ಆಡಳಿತವನ್ನು ಕೊನೆಗಾಣಿಸಿಯೇ ತೀರುವ ಹಠ ತೊಟ್ಟರು. ಇದು ಅವರ ಮಿತ್ರರಲ್ಲಿ ಕೆಲವರಿಗೆ ಗರ್ವ-ದುರಭಿಮಾನ ಜಗಳ ಗಂಟತನಗಳಾಗಿ ಕಂಡಿತು. ಅವರೆಲ್ಲ ಪಕ್ಷ ಬಿಟ್ಟು ಹೋದರು.

ಸ್ವತಂತ್ರ ಭಾರತದಲ್ಲಿ ಅತಿ ಹೆಚ್ಚು ಬಾರಿ-ಹದಿನೆಂಟು ಬಾರಿ-ಬಂಧನಕ್ಕೊಳಗಾದ ರಾಜಕಾರಣಿ ಎನಿಸಿರುವ ಲೋಹಿಯಾರನ್ನು ಸರ್ಕಾರ, ಪ್ರವಾಸಿ ಬಂಗಲೆಗೆ ಪೂರ್ವಾನುಮತಿ ಇಲ್ಲದೆ ಪ್ರವೇಶಿಸಿದರೆಂಬ ಕಾರಣದ ಮೇಲೂ ಬಂಧಿಸಿತ್ತು ಎಂಬ ಸಂಗತಿ, ಸ್ವಾತಂತ್ರ್ಯ ಹೋರಾಟದ ಪ್ರಮುಖ ಸೇನಾನಿಗಳಲ್ಲೊಬ್ಬರೆನಿಸಿದ್ದ ಲೋಹಿಯಾ ಎದುರಿಸಿದ ರಾಜಕಾರಣದ ಬರ್ಬರತೆಯನ್ನು ಸೂಚಿಸುತ್ತದೆ. ಆದರೆ ನೆಹರೂ ಸೇರಿದಂತೆ ಭಾರತದ ಎಲ್ಲ ಸಮಸ್ಯೆಗಳಿಗೆ ಸಮಾಜವಾದವೊಂದೇ ಮದ್ದು ಎಂದು ದೃಢವಾಗಿ ಲೋಹಿಯಾ ನಂಬಿದ್ದರು. ಹೀಗಾಗಿ ಅವರು ಧೃತಿಗೆಡದೆ, ಬರಲಿದ್ದ ಮೂರನೇ ಸಾರ್ವತ್ರಿಕ ಚುನಾವಣೆಗಳಲ್ಲಿ ನಿರ್ಣಾಯಕ ಹೋರಾಟಕ್ಕೆ ಸಜ್ಜಾದರು. ರಾಷ್ಟ್ರಾದ್ಯಂತ ಬಿರುಗಾಳಿಯಂತೆ ಸುತ್ತಿ, ನೆಹರೂ ಸರ್ಕಾರದ ನೀತಿ ಕಾರ್ಯಕ್ರಮಗಳ ವಿರುದ್ಧ ಗುಡುಗಿದರು. ತಮ್ಮ ಪಕ್ಷದ ನೀತಿ ಕಾರ್ಯಕ್ರಮಗಳನ್ನು ಪ್ರಚುರಪಡಿಸುವ ಅನೇಕ ರೀತಿಯ ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಪರಿಸ್ಥಿತಿ ಪ್ರತಿಕೂಲವಾದಷ್ಟೂ ಉಜ್ವಲವಾಗ ತೊಡಗುತ್ತಿದ್ದ ಲೋಹಿಯಾ ಪ್ರತಿಭೆ, ಈ ಅವಧಿಯಲ್ಲಿ ಅನೇಕ ಜ್ವಲಂತ ಸಮಸ್ಯೆಗಳ ಬಗ್ಗೆ ತನ್ನ ಬೆಳಕನ್ನು ಚೆಲ್ಲಿತು. ಅವರ ಸಂಘಟನಾ ಸಾಮರ್ಥ್ಯವೂ ಒರೆಗೆ ಹಚ್ಚಲ್ಪಟ್ಟಿತು.

ಜಾತಿ ನೀತಿ-ವಿಶೇಷ ಪ್ರಾಶಸ್ತ್ಯ ತತ್ವ

೧೯೫೩ರ ಹೊತ್ತಿಗೇ, ಅಸ್ಪೃಶ್ಯರಿಗೆ ಪ್ರವೇಶಾವಕಾಶವಿಲ್ಲದ ಕಾಶಿ ದೇವಾಲಯದ ಆವರಣದಲ್ಲಿ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ನೂರು ಜನ ಬ್ರಾಹ್ಮಣರ ಪಾದ ತೊಳೆದ ಘಟನೆಯನ್ನು, ಇಡೀ ರಾಷ್ಟ್ರ ಮೌನವಾಗಿದ್ದಾಗ, ರಾಷ್ಟ್ರೀಯ ಅವಮಾನ ಹಾಗೂ ಜಿಗುಪ್ಸೆಯ ಪ್ರಸಂಗ ಎಂದು ಲೋಹಿಯಾ ಕರೆದಿದ್ದರು. ಮೇಲು ಕೀಳುಗಳನ್ನು ಹೊಟ್ಟೆಯಲ್ಲಿಟ್ಟುಕೊಂಡಿರುವ ಜಾತಿಪದ್ಧತಿ, ಸಾಂಪ್ರದಾಯಿಕರು ಹೇಳುವ ಹಾಗೆ ಭಾರತೀಯ ಸಮಾಜಕ್ಕೆ ಸ್ಥಿರತೆಯನ್ನು ಒದಗಿಸಿದ್ದರ ಜೊತೆಗೇ ಹೇಗೆ ಸ್ಥಗಿತತೆಯನ್ನು ತಂದಿದೆ ಎಂದು ಅವರು ವಿವರಿಸಿದ್ದರು. ಸರ್ವರಿಗೂ ಸಮಾನಾವಕಾಶವನ್ನು ನಿರಾಕರಿಸುತ್ತಾ ಬಂದಿರುವ ಜಾತಿಪದ್ಧತಿಯನ್ನು, ಮುಕ್ಕಾಲು ಪಾಲು ಜನರ ವ್ಯಕ್ತಿ-ಸಾಮರ್ಥ್ಯಗಳು

ಪೂರ್ಣ ಅರಳದಂತೆ ತಡೆದು ದೇಶವನ್ನು ನಿರಂತರ ಗುಲಾಮಗಿರಿಗೆ ಈಡು ಮಾಡಿದ ದುಷ್ಟಪದ್ಧತಿ ಎಂದು ಕರೆದ ಲೋಹಿಯಾ, ಜಾತಿ ಹೋಗದೆ ಸಮಾಜವಾದ ಅಸಾಧ್ಯ ಎಂದರು. ಭಾರತದಲ್ಲಿ ಜಾತಿಪದ್ಧತಿಯೊಂದಿಗೆ ಮೈತ್ರಿ ಮಾಡಿಕೊಂಡೇ ಬೆಳೆದಿರುವ ಬಂಡವಾಳಶಾಹಿಯು ಬ್ರಾಹ್ಮಣ-ಬನಿಯಾ ಸಾಮ್ರಾಜ್ಯವನ್ನು ಕಟ್ಟಿದೆ. ಹಾಗಾಗಿ ಇಲ್ಲಿ ವರ್ಗ ಹೋರಾಟದ ಪರಿಭಾಷೆಯೇ ಅಪ್ರಸ್ತುತ ಎಂದ ಅಭಿಪ್ರಾಯಪಟ್ಟ ಅವರು, ಜಾತಿರಹಿತ ಸಮಾಜದ ಗುರಿಯ ಮೂಲಕವೇ ವರ್ಗರಹಿತ ಸಮಾಜ ಕಟ್ಟಲು ಸಾಧ್ಯವೆಂದು ಸೂಚಿಸಿದರು. ದೇಶದ ಪ್ರಗತಿಗೆ ಶೂದ್ರ ಬೀಜವಾದರೆ ಬ್ರಾಹ್ಮಣ ಗೊಬ್ಬರವಾಗಬೇಕೆಂದು ಹೇಳಿದ ಲೋಹಿಯಾ ಸಹಜವಾಗಿಯೇ, ದಕ್ಷಿಣ ಭಾರತದಲ್ಲಿ – ವಿಶೇಷವಾಗಿ ತಮಿಳ್ನಾಡಿನಲ್ಲಿ – ಕಂಡು ಬಂದ ಬ್ರಾಹ್ಮಣ ವಿರೋಧಿ ಚಳುವಳಿಯನ್ನು 'ವಿಕ್ಷಿಪ್ತ' ಎಂದು ಕರೆದರು. ಈ ಸಂಬಂಧ ಬಂಧನಕ್ಕೊಳಪಟ್ಟಿದ್ದ ವಿಚಾರವಾದಿ ಚಳುವಳಿಯ ನಾಯಕ ಪೆರಿಯಾರರನ್ನು ಕಂಡು ಮಾತುಕತೆ ನಡೆಸಿದರು.

ಜಾತಿವಿನಾಶ ಕಾರ್ಯಕ್ರಮಗಳನ್ನು ತಮ್ಮ ಸಮಾಜವಾದಿ ಪಕ್ಷದ ಪ್ರಣಾಳಿಕೆಯ ಅವಿಭಾಜ್ಯ ಅಂಗವಾಗಿ ರೂಪಿಸಿದ ಲೋಹಿಯಾ, 'ಜಾತಿ ಅವಕಾಶವನ್ನು ನಿರ್ಬಂಧಿಸುತ್ತದೆ; ನಿರ್ಬಂಧಿತ ಅವಕಾಶ ಸಾಮರ್ಥ್ಯವನ್ನು ಕುಗ್ಗಿಸುತ್ತದೆ. ಈ ಕುಗ್ಗಿಹೋದ ಸಾಮರ್ಥ್ಯ ಮತ್ತೆ ಅವಕಾಶವನ್ನು ನಿರ್ಬಂಧಿಸುತ್ತದೆ. ಹೀಗೆ ಜಾತಿಪದ್ಧತಿ ಇರುವೆಡೆ ಅವಕಾಶ ಮತ್ತು ಸಾಮರ್ಥ್ಯಗಳು ನಿರಂತರ ಕುಗ್ಗುತ್ತಾ ಹೋಗುವ ಜನವ್ಯಾಪ್ತಿಗೆ ಸೀಮಿತವಾಗಿ ಬಿಡುತ್ತದೆ' ಎಂದು ವಿಶ್ಲೇಷಿಸಿದರು. ಈ ವಿಶ್ಲೇಷಣೆಯ ಮುಂದುವರಿಕೆಯಾಗಿ ರಾಷ್ಟ್ರದ ಒಟ್ಟು ದಕ್ಷತೆ-ಹಿತದ ದೃಷ್ಟಿಯಿಂದ ಅವಕಾಶ ವಂಚಿತವಾಗಿರುವ ಜನಸಮೂಹಗಳಿಗೆ ವಿಶೇಷ ಪ್ರಾಶಸ್ತ್ಯದ ಆಧಾರದ ಮೇಲೆ ಅವಕಾಶ ನೀಡುವ ನೀತಿಯನ್ನು ಅವರು ನಿರೂಪಿಸಿದರು. ಸದ್ಯದ ಪರಿಸ್ಥಿತಿಯಲ್ಲಿ ಸರ್ವರಿಗೂ ಸಮಾನಾವಕಾಶವೆಂದರೆ, ಇರುವ ಅಸಮಾನತೆಯ ಮುಂದುವರಿಕೆಯಾಗುತ್ತದೆ ಎಂದು ಅವರು ಸೂಚಿಸಿದರು. ಈ ಹಿನ್ನೆಲೆಯಲ್ಲಿ ಸುಮಾರು ಶೇಕಡಾ ೯೦ರಷ್ಟು ಇರುವ ದಲಿತರು-ಆದಿವಾಸಿಗಳು, ಶೂದ್ರರು-ಮಹಿಳೆಯರು ಹಾಗೂ ನಿಮ್ನವರ್ಗಗಳ ಮುಸಲ್ಮಾನರು ಮತ್ತು ಕ್ರಿಶ್ಚಿಯನ್ನರಿಗೆ, ವಿಶೇಷ ಕೌಶಲ್ಯ-ಪರಿಣತಿ ಬೇಡುವ ಹುದ್ದೆಗಳ ಹೊರತಾಗಿ ಇನ್ನೆಲ್ಲದರಲ್ಲೂ ಶೇಕಡಾ ೬೦ರಷ್ಟು ಮೀಸಲಾತಿ ಜಾರಿಗೆ ತರಬೇಕೆಂದು ಪ್ರತಿಪಾದಿಸಿದರು. ಜೊತೆಗೆ ರಾಜಕೀಯ ಪಕ್ಷಗಳ ಪದಾಧಿಕಾರಗಳಲ್ಲೂ ಈ ಜಾತಿ-ವರ್ಗಗಳಿಗೆ ವಿಶೇಷ ಪ್ರಾಶಸ್ತ್ಯ ನೀಡಬೇಕೆಂದು ಕರೆ ನೀಡಿದರು. ಆದರೆ ಶಿಕ್ಷಣದಲ್ಲಿ ಸರ್ವರಿಗೂ ಸಮಾನಾವಕಾಶವಿರಬೇಕೆಂಬುದು ಅವರ ನಿಲುವಾಗಿತ್ತು.

ಜಾತಿವಿನಾಶ ಕೇವಲ ಕಾನೂನು ಮೂಲಕ ಸಾಧ್ಯವಿಲ್ಲವೆಂಬುದನ್ನು ತಿಳಿದಿದ್ದ ಲೋಹಿಯಾ, ಇದಕ್ಕೆ ಜಾತಿವಿರೋಧಿ ಚಳುವಳಿ ರೂಪದ ಶಿಕ್ಷಣ ಅಗತ್ಯವೆಂದು

ಭಾವಿಸಿದರು. ಇದರ ಅಂಗವಾಗಿ ತಮ್ಮ ಪಕ್ಷದ ವತಿಯಿಂದ 'ಜಾತಿವಿನಾಶ ಸಮ್ಮೇಳನ'ಗಳನ್ನು ಸಂಘಟಿಸಿದರು. ಸಹ ಭೋಜನ, ಅಂತರ್ಜಾತಿ ವಿವಾಹಗಳಿಗೆ ಪ್ರೋತ್ಸಾಹ, ಅಂತರ್ಜಾತಿ ವಿವಾಹಿತರಿಗೆ ಸರ್ಕಾರಿ ಸೇವೆಯಲ್ಲಿ ವಿಶೇಷ ಪ್ರಾಶಸ್ತ್ಯ, ಜಾತಿ ಸೂಚಕ ನಾಮಪ್ರತ್ಯಯಗಳ ನಿಷೇಧ, ಕೆಳಜಾತಿ ಭೂರಹಿತರಿಗೆ ಭೂವಿತರಣೆಗೆ ಆಗ್ರಹ ಈ ಸಮ್ಮೇಳನಗಳ ಕಾರ್ಯಸೂಚಿ ಯಾಗಿರುತ್ತಿತ್ತು.

ಲಿಂಗ ತಾರತಮ್ಯದ ಪ್ರಶ್ನೆ-ದ್ರೌಪದಿಯ ಮಾದರಿ

ಜಾತಿ ತಾರತಮ್ಯದ ಜೊತೆಗೇ ಲಿಂಗ ತಾರತಮ್ಯದ ಪ್ರಶ್ನೆಯನ್ನು ಎತ್ತಿಕೊಂಡ ಲೋಹಿಯಾ, ಈ ಎರಡೂ ತಾರತಮ್ಯಗಳ ವಿರುದ್ಧ ಪ್ರಜ್ಞಾಪೂರ್ವಕ ಹಾಗೂ ಸತತ ಹೋರಾಟ ಮಾಡದ ಹೊರತು, ಭಾರತದ ಚೇತನ ಜಾಗೃತವಾಗದು ಎಂದು ನಂಬಿದ್ದರು. ಈ ನಂಬಿಕೆಯ ಆಧಾರದ ಮೇಲೆ ಬದುಕಿನ ಪ್ರತಿಯೊಂದು ಕ್ಷೇತ್ರದಲ್ಲೂ ಮಹಿಳೆ ಪುರುಷನಿಗೆ ಸರಿಸಾಟಿಯಾಗಬೇಕೆಂದು ಬಯಸಿದರು. ಗಂಡುಹೆಣ್ಣಿನ ನಡುವಣ ಲೈಂಗಿಕ ಸಂಬಂಧ ಸಂಹಿತೆಯಲ್ಲಿ ಅತ್ಯಾಚಾರ ಮತ್ತು ಸುಳ್ಳು ಅಥವಾ ವಚನ ಭ್ರಷ್ಟತೆಗಳ ಹೊರತಾಗಿ ಇನ್ನಾವುದನ್ನೂ ಅಕ್ಷಮ್ಯ ಅಪರಾಧಗಳೆಂದು ಪರಿಗಣಿಸಬಾರದೆಂದು ಅವರು ಅಭಿಪ್ರಾಯಪಟ್ಟರು. ವಿವಾಹಪೂರ್ವ ಗರ್ಭಪಾತ ಹಾಗೂ ತಾಯ್ತನಗಳಿಗೆ ಮಾನ್ಯತೆ ನೀಡುವ ಸಾಮಾಜಿಕ ಪ್ರಬುದ್ಧತೆಯನ್ನು ಸಮಾಜ ತೋರಿಸಬೇಕೆಂದು ಸೂಚಿಸಿದರು. ಒಳ್ಳೆಯೂ ಆರೋಗ್ಯ ಮತ್ತು ಶಿಕ್ಷಣ ನೀಡುವುದಷ್ಟೇ ತಂದೆ ತಾಯಿಗಳ ಜವಾಬ್ದಾರಿಯಾಗಬೇಕೆಂದು ಹೇಳಿದ ಲೋಹಿಯಾ, ಹೆಣ್ಣುಮಕ್ಕಳಿಗೆ ತಮ್ಮ ಜೀವನ ಸಂಗಾತಿಯನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯ ನೀಡುವ ಮೂಲಕ ಭಾರತದಲ್ಲಿ ವಿಕ್ಷಿಪ್ತಗೊಂಡಿರುವ ಗಂಡು-ಹೆಣ್ಣಿನ ಸಂಬಂಧವನ್ನು ಸಮರಸಗೊಳಿಸಲು ಸಹಕರಿಸಬೇಕೆಂದು ಕರೆ ನೀಡಿದರು. ಧಾರ್ಮಿಕ ಕಟ್ಟುಪಾಡುಗಳನ್ನು ಲೆಕ್ಕಿಸದೆ ಬುರ್ಖಾ ಅಥವಾ ಪರದಾ ಮತ್ತು ಬಹುಪತ್ನಿತ್ವದಂತಹ ಮಧ್ಯಕಾಲೀನ ಪದ್ಧತಿಗಳನ್ನು ನಿಷೇಧಿಸಬೇಕೆಂದು ಅವರು ಸಲಹೆಮಾಡಿದರು. ವಸಾಹತುಶಾಹಿಯಿಂದಾಗಿ ನಮ್ಮ ಸೌಂದರ್ಯ ಪ್ರಜ್ಞೆಯೇ ವಿಕ್ಷಿಪ್ತಗೊಂಡಿದೆ ಎಂದು ಅಭಿಪ್ರಾಯಪಟ್ಟ ಲೋಹಿಯಾ, ಮೈಬಣ್ಣ ಸೌಂದರ್ಯದ ಅಳತೆಗೋಲಲ್ಲ ಎಂದು ವಿಶ್ಲೇಷಿಸುತ್ತಾ, ಭಾರತದ ಬಹುತೇಕ ದೇವಿಯರು ಕಪ್ಪು ಸುಂದರಿಯರೇ ಆಗಿದ್ದರು ಎಂಬುದನ್ನು ಉದಾಹರಣೆಗಳ ಸಹಿತ ವಿವರಿಸಿದರು. ಭಾರತ ಆಫ್ರಿಕನ್ನರಿಂದ ಆಳಲ್ಪಟ್ಟಿದ್ದರೆ ಕಪ್ಪು ಮೈಬಣ್ಣವೇ ಶ್ರೇಷ್ಠವೆನಿಸುತ್ತಿತ್ತು ಎಂದು ಅವರು ಸೂಚಿಸಿದರು. ಭಾರತದ ಮಹಿಳೆಗೆ ಪತಿ ಪರಾಯಣತೆಯ ಏಕಮುಖ ವ್ಯಕ್ತಿತ್ವದ ಸಾವಿತ್ರಿಗಿಂತ; ದಿಟ್ಟೆಯೂ, ವಿವೇಕಿಯೂ ಛಲವಂತಳೂ ಆಗಿದ್ದ ಬಹುಮುಖ ವ್ಯಕ್ತಿತ್ವದ ದ್ರೌಪದಿ ಮಾದರಿಯಾಗಬೇಕೆಂದು ಬಯಸಿದರು.

ಧರ್ಮಚಿಂತನ-ಕೋಮು ಸೌಹಾರ್ದ

ಆಸ್ತಿ, ಜಾತಿ ಹಾಗೂ ಹೆಣ್ಣನ್ನು ಕುರಿತ ತಮ್ಮ ಚಿಂತನೆಗಳನ್ನು, ಧರ್ಮ ಕುರಿತ ತಮ್ಮ ನಿರೂಪಣೆಯಲ್ಲಿ ಸಂಯೋಜಿಸುವ ಮೂಲಕ ಲೋಹಿಯಾ, ಧರ್ಮ ಮತ್ತು ರಾಜಕಾರಣಗಳ ಸಂಬಂಧವನ್ನು ವಿಶ್ಲೇಷಿಸುವ ಪ್ರಯತ್ನ ಮಾಡಿದರು. ದೇವರು ಮತ್ತು ಹೆಣ್ಣು ತಮ್ಮ ಬದುಕಿನ ಅನ್ವೇಷಣೆಯ ವಸ್ತುಗಳಾಗಿದ್ದು; ದೇವರು ಕಂಡಿಲ್ಲ, ಹೆಣ್ಣುಸಿಕ್ಕಿಲ್ಲ ಎಂದು ತಮ್ಮ ಬದುಕಿನ ಅಪೂರ್ಣತೆಯನ್ನು ನಿರೂಪಿಸುತ್ತಿದ್ದ ಲೋಹಿಯಾ, ತಮ್ಮನ್ನು ಸಾಮಾನ್ಯವಾಗಿ ನಾಸ್ತಿಕ ಎಂದು ಕರೆದುಕೊಳ್ಳುತ್ತಿದ್ದರು. ಆದರೆ ತಮಗೆ ಭೌತವಾದಿಗಳ ಮಧ್ಯೆ ಇದ್ದಾಗ ಅಧ್ಯಾತ್ಮವಾದಿಗಳೆಡೆಗೆ ಮತ್ತು ಅಧ್ಯಾತ್ಮವಾದಿಗಳ ಮಧ್ಯೆ ಇದ್ದಾಗ ಭೌತವಾದಿಗಳೆಡೆಗೆ ಹೋಗಬೇಕೆನಿಸುವುದು ಎನ್ನುತ್ತಿದ್ದರು! ಭೌತ-ಅಭೌತಗಳ ಪ್ರತ್ಯೇಕತೆಯನ್ನು ಒಪ್ಪದ ಲೋಹಿಯಾ, ಅನುಭವ ಅಖಂಡವಾಗಿದ್ದು ಅದು ಒಮ್ಮೆ ಭೌತವಾದಿಯಾಗಿಯೂ ಮತ್ತೊಮ್ಮೆ ಅಭೌತವಾಗಿಯೂ ನಿರೂಪಣೆಯಾಗುತ್ತದಷ್ಟೆ ಎಂದು ಅಭಿಪ್ರಾಯಪಟ್ಟರು. ಭೌತವಾದಿ ನಿರೂಪಣೆ ಮನುಷ್ಯನನ್ನು ಇತಿಹಾಸ, ರಾಜನೀತಿ, ಶಾಸ್ತ್ರ–ವಿಜ್ಞಾನಗಳ ಪ್ರಪಂಚಕ್ಕೆ ಕರೆದೊಯ್ದರೆ, ಅಭೌತವಾದಿ ನಿರೂಪಣೆಯು ಪುರಾಣ, ಸಾಹಿತ್ಯ, ಧರ್ಮ ಮತ್ತು ತತ್ವಜ್ಞಾನಗಳ ಪ್ರಪಂಚಕ್ಕೆ ಕೊಂಡೊಯ್ಯುತ್ತದೆ ಎಂದು ಅವರು ವಿಶ್ಲೇಷಿಸಿದರು. ಧರ್ಮ ದೀರ್ಘಕಾಲೀನ ರಾಜಕಾರಣವಾದರೆ, ರಾಜಕಾರಣ ಅಲ್ಪಕಾಲೀನ ಧರ್ಮ ಎಂದು ಲೋಹಿಯಾ ವ್ಯಾಖ್ಯಾನಿಸಿದರು. ಅವರ ಪ್ರಕಾರ, ಧರ್ಮ ಒಳಿತನ್ನು ಸಾಧಿಸುವ ಪ್ರಯತ್ನವಾದರೆ, ರಾಜಕಾರಣ ಕೆಟ್ಟದ್ದನ್ನು ತಡೆಯುವ ಪ್ರಯತ್ನ.

ಧರ್ಮ ನಿರಪೇಕ್ಷತೆ ಒಂದು ಅಪೂರ್ಣ ತತ್ವವೆಂದು ನಂಬಿದ್ದ ಲೋಹಿಯಾ, ಧರ್ಮ ವಿರೋಧಿಯಾಗದೆ ಧರ್ಮ ವಿಮರ್ಶಕರಾಗಿದ್ದರು. ಧರ್ಮದಲ್ಲಿ ನಾಲ್ಕು ಹಾಸುಗಳು ಹೊಕ್ಕಿದ್ದು; ಒಂದು, ಕರುಣೆ ಮತ್ತು ಧ್ಯಾನಗಳ ರೂಪದ ಅಗಮ್ಯದೊಡನೆ ಸಂವಾದದ ಹಾಸು; ಎರಡು, ಸದ್ವರ್ತನೆಯ ನೈತಿಕ ಹಾಗೂ ಸಾಮಾಜಿಕ ತರಬೇತಿಯ ಹಾಸು; ಮೂರು, ಜಾತಿ, ಲಿಂಗ ಮತ್ತು ಆಸ್ತಿ ಸಂಬಂಧಗಳ ಕಟ್ಟುಪಾಡುಗಳ ಹಾಸು; ನಾಲ್ಕು, ಅನ್ಯ ಪಂಥೀಯರೊಡನೆ ಅಸಹನೆ - ಸಂಘರ್ಷಗಳ ಹಾಸು. ಇವುಗಳಲ್ಲಿ ಮೊದಲೆರಡನ್ನು ಸಮಾಜವಾದಿಗಳು ಮಾನ್ಯಮಾಡಿ, ಕೊನೆಯೆರಡನ್ನು ತಿರಸ್ಕರಿಸುವ ವಿವೇಕವನ್ನೂ, ಬದ್ಧತೆಯನ್ನೂ ಪ್ರದರ್ಶಿಸಬೇಕು ಎಂದು ಅಭಿಪ್ರಾಯಪಟ್ಟ ಲೋಹಿಯಾ, ಸ್ವತಃ ತಾವೇ ಭಾರತೀಯ ಪುರಾಣಗಳ ವಿಶಿಷ್ಟ ವ್ಯಾಖ್ಯಾನ ಮಾಡಿದರು. ಮುಖ್ಯವಾಗಿ, ರಾಮ ಕೃಷ್ಣ ಶಿವ ಹೇಗೆ ತಮ್ಮ ವೈವಿಧ್ಯಮಯ ಆವೃತ್ತಿಗಳಲ್ಲಿ ಭಾರತೀಯ ಜನಜೀವನದ ಅಂತರಂಗಿಕ ಮೂರ್ತಿಗಳಾಗಿ ಕ್ರಿಯಾಶೀಲರಾಗಿದ್ದಾರೆ ಎಂಬುದನ್ನು ನಿರೂಪಿಸಿದರು. ಅಲ್ಲದೆ ಅವರು ಉತ್ತರ ಪ್ರದೇಶದ ಚಿತ್ರಕೂಟದಲ್ಲಿ 'ರಾಮಾಯಣ ಮೇಳ' ಎಂಬ ಸಾಹಿತ್ಯ-ಸಂಸ್ಕೃತಿ ಹಬ್ಬವನ್ನು ಆಚರಿಸುವ ಪರಿಪಾಠ ಬೆಳೆಸಿದರು. ರಾಮೇಶ್ವರ,

ದ್ವಾರಕಾ, ಕಾಶಿ, ಅಯೋಧ್ಯಾ, ಅಜ್ಮೇರ್ ಮುಂತಾದ ಧಾರ್ಮಿಕ ಕೇಂದ್ರಗಳನ್ನು 'ಜನತೆಯ ಅಭ್ಯುದಯದ ದೃಷ್ಟಿಯಿಂದ' ಅಭಿವೃದ್ಧಿ ಪಡಿಸಬೇಕೆಂದು ಕರೆಕೊಟ್ಟ ಲೋಹಿಯಾ, ಭಾರತೀಯ ಮನಸ್ಸಿನಷ್ಟೇ ಮಲಿನಗೊಂಡಿರುವ ಭಾರತದ ನದಿಗಳನ್ನು ಸ್ವಚ್ಛಗೊಳಿಸುವ ಅಗತ್ಯವನ್ನು ಒತ್ತಿ ಹೇಳಿದರು. ರಾಜಾರಾಮ ಮೋಹನ ರಾಯ್, ಗೋಖಲೆ, ರಾನಡೆಯವರಂತೆ; ಭಾವನೆ, ಚಿಂತನೆ, ಯಂತ್ರ, ತಂತ್ರ ಹೀಗೆ ಎಲ್ಲ ವಿಷಯಗಳಲ್ಲಿ ಪಾಶ್ಚಿಮಾತ್ಯ ಮಾದರಿಗಳ ಮೇಲೆ ಭಾರತದ ಪ್ರಗತಿಯನ್ನು ರೂಪಿಸುವುದಕ್ಕೆ ಅವರ ವಿರೋಧವಿತ್ತು, ಪಾಶ್ಚಿಮಾತ್ಯ ನಾಗರೀಕತೆ ಕುರಿತು ಗಾಂಧೀಜಿ ಮಾಡಿದ್ದ ವ್ಯಾಖ್ಯಾನದ ಮೂಲತತ್ವಗಳನ್ನು ಆಧರಿಸಿದ ಭಾರತೀಯ ಪರಂಪರೆಯ ಪುನರ್‌ನಿರೂಪಣೆಯು, ಆಧುನಿಕ ರಾಷ್ಟ್ರನಿರ್ಮಾಣದ ಅಡಿಗಲ್ಲಾಗಬೇಕೆಂದು ಲೋಹಿಯಾ ಬಯಸಿದರು.

ದೇಶ ವಿಭಜನೆಯ ಸಮಯದಲ್ಲಿ ಕೋಮುದ್ವೇಷದ ದಳ್ಳುರಿಯನ್ನು ಕಣ್ಣಾರೆ ಕಂಡಿದ್ದ ಲೋಹಿಯಾಗೆ, ೮೦೦ ವರ್ಷಗಳಷ್ಟು ದೀರ್ಘಕಾಲದ ಸಹಜೀವನ ಹಿಂದೂ-ಮುಸ್ಲಿಮರನ್ನು ಸೋದರತ್ವದ ಆಧಾರದ ಮೇಲೆ ಒಂದು ದೇಶವಾಗಿ ರೂಪಿಸದಿದ್ದುದರ ಬಗ್ಗೆ ವಿಷಾದವಿತ್ತು. ಮುಸ್ಲಿಮರ ಅಚಲ ಭಾರತ ನಿಷ್ಠೆ ಹಾಗೂ ಮುಸ್ಲಿಮರನ್ನು ಕುರಿತ ಹಿಂದೂಗಳ ಸೌಹಾರ್ದ ಮಾತ್ರ ಪ್ರತ್ಯೇಕ ರಾಷ್ಟ್ರಕಲ್ಪನೆಯ ಅಡಿಗಲ್ಲನ್ನು ಅಲುಗಾಡಿಸಬಲ್ಲವು ಎಂದು ಲೋಹಿಯಾ ನಂಬಿದ್ದರು. ೧೯೬೫ರ ಯುದ್ಧ ಸಮಯದಲ್ಲಿ ಭಾರತ-ಪಾಕಿಸ್ತಾನಗಳ ಒಕ್ಕೂಟದ ಕಲ್ಪನೆಯನ್ನು ಅವರು ಮುಂದಿಟ್ಟರು. ಘಜ್ನಿ, ಘೋರಿ, ಬಾಬರ್‌ಗಳು ಹೊರಗಿನವರು. ಆದರೆ ಅಕ್ಬರ್, ರಜಿಯಾ, ಷೇರ್‌ಷಹಾರು; ವಿಕ್ರಮಾದಿತ್ಯ, ಅಶೋಕ, ರಾಣಾಪ್ರತಾಪ್‌ರಂತೆಯೇ ನಮ್ಮವರು-ನಮ್ಮ ಪುರಾತನರು ಎಂಬುದನ್ನು ನಿರೂಪಿಸುವ ಇತಿಹಾಸ ಶಿಕ್ಷಣದ ಅಗತ್ಯವನ್ನು ಅವರು ಪ್ರತಿಪಾದಿಸಿದರು. ಅಲ್ಲದೆ, ದೇಶದ ಎಲ್ಲ ಧರ್ಮೀಯರಿಗೂ ಸಾಮಾನ್ಯವಾದ ನಾಗರಿಕ ಸಂಹಿತೆಗಾಗಿ ಒತ್ತಾಯಿಸಿದರು. ಮತಾಂತರ ನಿಷೇಧದ ಪ್ರಸ್ತಾಪವನ್ನು ಒಪ್ಪದ ಲೋಹಿಯಾ, ಬಲಾತ್ಕಾರ ಅಥವಾ ಆಮಿಷ ಪ್ರೇರಿತ ಮತಾಂತರಗಳನ್ನು ತಡೆಯಲು ಮತಾಂತರಗಳ ನೋಂದಣಿ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ಸೂಚಿಸಿದರು.

ಲೋಹಿಯಾ ಪ್ರಕಾರ, ಭಾರತೀಯ ಉಪಖಂಡದ ಹಿಂದೂ-ಮುಸ್ಲಿಂ ಸಮಸ್ಯೆಗೆ ಅಂತಿಮ ಪರಿಹಾರವೆಂದರೆ, 'ಭಾರತದ ಹಿಂದೂ ಮತ್ತು ಮುಸ್ಲಿಮರ ನಡುವೆ ದೈಹಿಕ ಹಾಗೂ ಸಾಂಸ್ಕೃತಿಕ ಸಮೀಪೀಕರಣದ ಮೂಲಕ ಅಥವಾ ಅದರ ಜೊತೆಯಲ್ಲೇ ನಡೆಯಬೇಕಾದ ಭಾರತ ಹಾಗೂ ಪಾಕಿಸ್ತಾನಗಳ ಜನತೆಯ ಸಮೀಪೀಕರಣವು ಅಂತಿಮವಾಗಿ ಹಿಂದೂಸ್ತಾನದ ಪುನರೇಕೀಕರಣವನ್ನು ಸಾಧಿಸುವುದೆಂದು ಆಶಿಸುವುದು ಮತ್ತು ಪ್ರಾರ್ಥಿಸುವುದು ಮಾತ್ರ'.

'ಅಂಗ್ರೇಜಿ ಹಟಾವೋ'- ಶಿಕ್ಷಣ ನೀತಿ

ಭಾಷೆಯ ಪ್ರಶ್ನೆಯನ್ನು ಸಮಾಜವಾದದ ಒಂದು ಬಹುಮುಖ್ಯ ಅಂಗವಾಗಿ ಪರಿಗಣಿಸಿದ ಲೋಹಿಯಾ, ಎಲ್ಲಿಯವರೆಗೆ ಇಂಗ್ಲಿಷ್ ಭಾಷೆ ಆಡಳಿತ ಹಾಗೂ ಶಿಕ್ಷಣ ಮಾಧ್ಯಮದ ಭಾಷೆಯಾಗಿ ಜಾರಿಯಲ್ಲಿರುತ್ತದೋ ಅಲ್ಲಿಯವರೆಗೆ ಈ ದೇಶದಲ್ಲಿ ಪ್ರಜಾಸತ್ತೆ ಕ್ರಿಯಾಶೀಲವಾಗಲಾರದು, ಶಿಕ್ಷಣ ಸೃಜನಶೀಲವಾಗಲಾರದು ಎಂದು ನಂಬಿದ್ದರು. ಜಾತಿ ಮತ್ತು ಆಸ್ತಿಗಳ ಜೊತೆಗೆ ಆಳುವ ವರ್ಗ, ಇಂಗ್ಲಿಷನ್ನು ಶೋಷಣೆಯ ಅಸ್ತ್ರವನ್ನಾಗಿ ಬಳಸಿಕೊಂಡು ಆಡಳಿತ ಮತ್ತು ಶಿಕ್ಷಣದ ಲಾಭಗಳು ಜನಸಮೂಹಕ್ಕೆ ದೊರಕದಂತೆ ನೋಡಿಕೊಳ್ಳುತ್ತಿದೆ ಎಂದು ಅವರು ಟೀಕಿಸಿದರು. ನಮ್ಮಲ್ಲಿ ವಿಜ್ಞಾನ-ತಂತ್ರಜ್ಞಾನ ಕ್ಷೇತ್ರಗಳಲ್ಲಿ ಮೂಲಭೂತ ಸಂಶೋಧನೆ ಸಾಧ್ಯವಾಗದಿರುವುದಕ್ಕೆ ಯಾವುದೇ ವಿಷಯದ ಬಗ್ಗೆ ಪರಿಪೂರ್ಣವಾದ ಗ್ರಹಿಕೆಯನ್ನು ಸಾಧ್ಯಮಾಡದ ಪರಭಾಷಾ ಶಿಕ್ಷಣವೇ ಕಾರಣವೆಂದು ಅವರು ವಿಶ್ಲೇಷಿಸಿದರು. ಭಾರತದ ಕೋಟ್ಯಾಂತರ ಮಕ್ಕಳು ಇಂಗ್ಲಿಷ್ ಭಾಷೆಯನ್ನು ಕರಗತ ಮಾಡಿಕೊಳ್ಳುವ ಪ್ರಯತ್ನದಲ್ಲೇ ತಮ್ಮ ಬುದ್ಧಿಮತ್ತೆಯ ಬಹುಪಾಲನ್ನು ವ್ಯಯಿಸಿ ಅದರಲ್ಲಿ ಬಹುಪಾಲು ಮಕ್ಕಳು ವಿಫಲಗೊಂಡು ಶಿಕ್ಷಣದ ಬಗ್ಗೆಯೇ ಕೀಳರಿಮೆ ಬೆಳೆಸಿಕೊಳ್ಳುವ ರಾಷ್ಟ್ರೀಯ ದುರಂತದ ಕಡೆ ಲೋಹಿಯಾ ಗಮನ ಸೆಳೆದರು. ಭಾರತೀಯ ಭಾಷೆಗಳೇ ಬದುಕಿನ ಎಲ್ಲ ಕ್ಷೇತ್ರಗಳಲ್ಲಿ ಅಗ್ರಮಾನ್ಯ ಸ್ಥಾನ ಪಡೆದಾಗ ಮಾತ್ರ ನಿಜವಾದ ಜನ ಮಧ್ಯದ ನಾಯಕತ್ವ ದೇಶದಲ್ಲಿ ಮೂಡಿಬರಲು ಸಾಧ್ಯ; ಅಲ್ಲಿಯವರೆಗೆ ಒಂದು ಗುಂಪಿನ ಪಾಳೇಗಾರಿಕೆಯೇ ಆಡಳಿತ ಎನ್ನಿಸಿಕೊಂಡಿರುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಸ್ವತಃ ಇಂಗ್ಲಿಷ್ ಭಾಷೆ-ಸಾಹಿತ್ಯ-ಸಂಸ್ಕೃತಿ ಕುರಿತು ಪರಿಣತಿ ಹೊಂದಿದ್ದ ಲೋಹಿಯಾ, ಇಂಗ್ಲಿಷನ್ನು ಒಂದು ಭಾಷೆಯಾಗಿ ವಿರೋಧಿಸದೆ, ಅದು ಶೋಷಣೆಯ ಅಸ್ತ್ರ-ರೂಪವಾಗಿರುವುದನ್ನು ಖಂಡಿಸುತ್ತಿದ್ದರು. ಇದನ್ನು ವಿಷದೀಕರಿಸಲು ಅವರು 'ಅಂಗ್ರೇಜಿ ಹಟಾವೋ' (ಇಂಗ್ಲಿಷ್ ತೊಲಗಿಸಿ) ಸಮ್ಮೇಳನಗಳನ್ನು ಸಂಘಟಿಸುವಂತೆ ತಮ್ಮ ಬೆಂಬಲಿಗರನ್ನು ಪ್ರೇರೇಪಿಸಿದರು. ಲೋಹಿಯಾ ಅವರ ಇಂಗ್ಲಿಷ್ ವಿರೋಧ ನೀತಿಯು ಹಿಂದಿ ಹೇರಿಕೆಯ ಸನ್ನಾಹವಾಗಿದೆ ಎಂಬ ಅಪಸ್ವರ ಎದ್ದಾಗ (ಇದರ ಪರಿಣಾಮವಾಗಿ ೧೯೬೧ರಲ್ಲಿ ಲೋಹಿಯಾ ತಮಿಳ್ನಾಡಿನಲ್ಲಿ ಕಲ್ಲೇಟು ತಿನ್ನಬೇಕಾಯಿತು!) ಅವರು 'ಅಂಗ್ರೇಜಿ ಹಟಾವೋ' ಸಮ್ಮೇಳನಕ್ಕೆ 'ಭಾರತೀಯ ಭಾಷಾ ಸಮ್ಮೇಳನ'ವೆಂದು ಪುರ್ನನಾಮಕರಣಮಾಡಿದರು. ಅವುಗಳ ಅಡಿಯಲ್ಲಿ ಭಾರತೀಯ ಭಾಷೆಗಳ ಶಕ್ತಿ-ಸಂಪತ್ತುಗಳ ಬಗ್ಗೆ ಜನರಿಗೆ ಮನವರಿಕೆ ಮಾಡಿಕೊಡುವ ಕಾರ್ಯಕ್ರಮಗಳನ್ನು ಆಯೋಜಿಸಿದರು. ಸ್ವತಃ ತಾವೇ ಭಾರತೀಯ ಭಾಷೆಗಳ ವೈವಿಧ್ಯಮಯ ಲಿಪಿಯನ್ನು ಅಧ್ಯಯನ ಮಾಡಿ ಅವುಗಳಲ್ಲಿನ ಬಹುಪಾಲು ಸಾಮ್ಯತೆಯನ್ನು ಗುರುತಿಸಿ, ಇಡೀ ಭಾರತಕ್ಕೊಂದು ಸಾಮಾನ್ಯ ಲಿಪಿ ಅಭಿವೃದ್ಧಿ ಸಾಧ್ಯವೆಂದು ಪ್ರತಿಪಾದಿಸಿದರು.

ತಮ್ಮ ಭಾಷಾ ಮೀಮಾಂಸೆಯನ್ನು ಶಿಕ್ಷಣ ಕ್ಷೇತ್ರಕ್ಕೂ ವಿಸ್ತರಿಸಿದ ಲೋಹಿಯಾ, ಭಾರತೀಯ ಶಿಕ್ಷಣದ ಪಠ್ಯಗಳೆಲ್ಲವೂ ಬಹುತೇಕ ಐರೋಪ್ಯ ದೃಷ್ಟಿಕೋನದಿಂದ ರಚಿತವಾಗಿದ್ದು, ನಮ್ಮ ವಿಶ್ವವಿದ್ಯಾಲಯಗಳ ಬುದ್ಧಿಜೀವಿಗಳು ಈರೋಪ್ ಕೇಂದ್ರಿತ ಚಿಂತನೆಯ ಗಾಣಕ್ಕೆ ಕಟ್ಟಲ್ಪಟ್ಟ ಎತ್ತುಗಳಂತೆ ಅಲ್ಲಿನ ಪರಿಕಲ್ಪನೆಗಳು ತತ್ವಗಳು ಮತ್ತು ಶಿಸ್ತುಗಳ ವೃತ್ತದಲ್ಲೇ ತಿರುಗುತ್ತಾ, ಸಂಶೋಧನೆಯ ಹೆಸರಿನಲ್ಲಿ ಚರ್ವಿತ - ಚರ್ವಣವನ್ನೇ ಉತ್ಪಾದಿಸುತ್ತಿದ್ದಾರೆ ಎಂದು ಟೀಕಿಸಿದರು. 'ಪ್ರಗತಿ', 'ಸಮೃದ್ಧಿ', 'ಸಾಮಂತಶಾಹಿ', 'ಬಂಡವಾಳಶಾಹಿ', 'ಸಮಾಜವಾದ' ಮುಂತಾದ ಪರಿಕಲ್ಪನೆಗಳನ್ನು ಐರೋಪ್ಯ ಸಂದರ್ಭಗಳಿಂದ ಬಿಡಿಸಿಟ್ಟು, ಅವುಗಳ ಅರ್ಥಸಾಂಗತ್ಯವನ್ನು ಭಾರತೀಯ ಪರಿಪ್ರೇಕ್ಷ್ಯದಲ್ಲಿ ಪರಿಶೀಲಿಸಿ ತಮ್ಮ ಪ್ರಮೇಯಗಳನ್ನು ಮಂಡಿಸಬೇಕೆಂದು ಸಂಶೋಧಕರಿಗೆ ಲೋಹಿಯಾ ಕರೆಕೊಟ್ಟರು. ಈ ಕೆಲಸಕ್ಕಾಗಿಯೇ 'ಖೋಜ್ ಪರಿಷದ್' ('ಅನ್ವೇಷಣಾ ಪರಿಷತ್ತು') ಎಂಬ ಭಾರತೀಯ ಬುದ್ಧಿಜೀವಿಗಳ ಸಂಸ್ಥೆಯೊಂದನ್ನು ಕಟ್ಟಲು ಅವರು ಹವಣಿಸಿದರು. ವೈಜ್ಞಾನಿಕ ಶಿಕ್ಷಣವನ್ನು ಕೃಷಿ ಹಾಗೂ ಕೈಗಾರಿಕಾ ಚಟುವಟಿಕೆಗಳೊಂದಿಗೆ ಜೋಡಿಸಿಯೇ ರೂಪಿಸುವ ಸಲಹೆ ನೀಡಿದರು. ಇದರಲ್ಲಿ ಸಣ್ಣ ಯಂತ್ರ ತಂತ್ರಜ್ಞಾನದ ಅಭಿವೃದ್ಧಿಯ ಆಶಯವೂ ಸೇರಿಕೊಂಡಿತ್ತು.

'ಹಿಮಾಲಯ ರಕ್ಷಿಸಿ'-ಮೂರನೇ ಸಾರ್ವತ್ರಿಕ ಚುನಾವಣೆಗಳು

೧೯೬೨ರ ಮೂರನೇ ಸಾರ್ವತ್ರಿಕ ಚುನಾವಣೆಗಳು ಹತ್ತಿರ ಬರುತ್ತಿದ್ದಂತೆ, ನೆಹರೂ ನಂಬಿದ್ದ ಭಾರತ-ಚೀನಾ ಸ್ನೇಹದಲ್ಲಿ ಬಿರುಕು ಕಾಣಿಸಿಕೊಳ್ಳತೊಡಗಿತ್ತು. ಈಶಾನ್ಯ ಗಡಿಯಲ್ಲಿ ಚೀನಾ ಸಮರ ಸಿದ್ಧತೆ ನಡೆಸಿತ್ತು. ಇದಕ್ಕೆ ತಕ್ಕುನಾದ ಸಿದ್ಧತೆ ಮಾಡಿಕೊಳ್ಳದ ನೆಹ್ರೂ ಸರ್ಕಾರ, ಚೀನಾದ ಸ್ನೇಹ ಅವ್ಯಾಜವಾದುದೆಂದು ನಂಬಿ ಕುಳಿತಿತ್ತು. ಬಹಳ ವರ್ಷಗಳ ಹಿಂದೆಯೇ, ಚೀನಾ ಟಿಬೆಟ್‌ನ್ನು ಆಕ್ರಮಿಸಿಕೊಂಡಾಗ, ಹಿಮಾಲಯದ ಗಡಿ ದೇಶಗಳ ರಕ್ಷಣಾ ನೀತಿಯನ್ನೊಳಗೊಂಡ 'ಹಿಮಾಲಯ ನೀತಿ'ಯನ್ನು ನಿರೂಪಿಸಿದ್ದ ಲೋಹಿಯಾ, ಈಗ ಚೀನಾದ ದುರುದ್ದೇಶವನ್ನು ಕುರಿತು ಸರ್ಕಾರವನ್ನು ಎಚ್ಚರಿಸಿದರು. ಮ್ಯಾಕ್‌ಮೋಹನ್ ರೇಖೆಯನ್ನು ಗಡಿಯೆಂದು ಒಪ್ಪಿಕೊಳ್ಳದೆ, ಕೈಲಾಸ ಶಿಖರ-ಮಾನಸ ಸರೋವರಗಳು ಪುರಾತನ ಕಾಲದಿಂದಲೂ ಭಾರತದ ಅವಿಭಾಜ್ಯ ಅಂಗಗಳಾಗಿವೆ ಎಂದು ಘೋಷಿಸಲು ಸರ್ಕಾರವನ್ನು ಒತ್ತಾಯಿಸಿದರು. 'ಹಿಮಾಲಯ ರಕ್ಷಿಸಿ' ಚಳುವಳಿಯನ್ನು ಆರಂಭಿಸಿದರು. ತಾವು 'ಊರ್ವಶೀಯಂ' ಎಂದು ಹೆಸರಿಟ್ಟಿದ್ದ ಈಶಾನ್ಯ ಗಡಿ ಪ್ರದೇಶಕ್ಕೆ ಭೇಟಿ ನೀಡಿ, ಅಲ್ಲಿ ಜನಜಾಗೃತಿ ಸಭೆಗಳನ್ನು ನಡೆಸಿ ಬಂಧನಕ್ಕೊಳಗಾದರು. ನೆಹರೂ ಸರ್ಕಾರ ಲೋಹಿಯಾರ ಎಚ್ಚರಿಕೆ-ಒತ್ತಾಯಗಳನ್ನು ಗಮನಿಸಲೇ ಇಲ್ಲ. ಅಷ್ಟರಲ್ಲಿ ಚುನಾವಣೆಗಳು ಬಾಗಿಲ ಬಳಿಯೇ ಬಂದವು.

ಆ ಹೊತ್ತಿಗೆ ಸೈನಿಕ ಕಾರ್ಯಾಚರಣೆ ಮೂಲಕ ಗೋವಾವನ್ನು ವಶಪಡಿಸಿಕೊಂಡಿದ್ದ ನೆಹರೂ ಸರ್ಕಾರ, ಆ ಸಾಧನೆಯನ್ನು ಚುನಾವಣಾ ಪ್ರಚಾರದಲ್ಲಿ ಬಳಸಿಕೊಳ್ಳಲು ಹವಣಿಸಿತು. ಬಹು ಹಿಂದೆಯೇ ಗೋವಾ ವಿಮೋಚನೆಗಾಗಿ ಏಕಾಂಗಿಯಾಗಿ ಹೋರಾಡಿದ್ದ ಲೋಹಿಯಾ, ಈ ಹಿನ್ನೆಲೆಯಲ್ಲಿ ನೆಹರೂ ವಿರುದ್ಧ ಉತ್ತರಪ್ರದೇಶದ ಫೂಲ್‌ಪುರ ಕ್ಷೇತ್ರದಲ್ಲಿ ತಾವೇ ಸ್ಪರ್ಧಿಸಲು ನಿರ್ಧರಿಸಿದರು. ಆದರೆ ಈ ಸ್ಪರ್ಧೆಗಿಂತ ಹೆಚ್ಚು ಮಹತ್ವದ ಸ್ಪರ್ಧೆ ಎಂದು ಲೋಹಿಯಾರೇ ಹೇಳಿದ ಗ್ವಾಲಿಯರ್ ಕ್ಷೇತ್ರದಲ್ಲಿ, ಮಾಜಿ ಮಹಾರಾಣಿಯ ವಿರುದ್ಧ ತಮ್ಮ ಪಕ್ಷದ ಪರವಾಗಿ ಸುಖೋರಾಣಿ ಎಂಬ ಝಾಡಮಾಲಿ ಮಹಿಳೆಯನ್ನು ನಿಲ್ಲಿಸಿದರು. ಇದು ಪ್ರಜಾಪ್ರಭುತ್ವ ಮತ್ತು ಸಮಾಜವಾದಗಳೆರಡರ ಆದರ್ಶಗಳನ್ನೂ ಎತ್ತಿ ಹಿಡಿಯುವ ಸ್ಪರ್ಧೆ ಎಂದು ಲೋಹಿಯಾ ವಿವರಿಸಿದರು. ಈ ಮೂಲಕ ಸಮಾಜವಾದಿ ಪಕ್ಷವೊಂದೇ ಕೆಳಜಾತಿ-ವರ್ಗಗಳ ಉನ್ನತಿಗೆ ಬದ್ಧವಾದ ಪಕ್ಷ ಎಂಬುದನ್ನು ಸಾರಿ ಹೇಳಿದೆ ಎಂದು ಅವರು ಸೂಚಿಸಿದರು.

ಮತ್ತೆ ಸೋಲು-ಕೊನೆಗೂ ಗೆಲುವು!

ಏಳು ವರ್ಷಗಳ ಕಾಲ ಸತತ ಪರಿಶ್ರಮದ ನೀತಿ ನಿರೂಪಣೆ-ಹೋರಾಟಗಳ ಮೂಲಕ ಅಧಿಕಾರದ ಬಾಗಿಲು ಬಡಿದಿದ್ದ ಲೋಹಿಯಾಗೆ ಚುನಾವಣಾ ಫಲಿತಾಂಶಗಳು ಆಘಾತವನ್ನುಂಟುಮಾಡಿದವು. ಫೂಲ್‌ಪುರದ ಸ್ಪರ್ಧೆ ಅಂತಾರಾಷ್ಟ್ರೀಯ ಸುದ್ದಿಯಾಯಿತೇ ಹೊರತು, ಲೋಹಿಯಾರ ಗೆಲುವಿಗೇನೂ ಸಹಾಯ ಮಾಡಲಿಲ್ಲ. ೪೬ ಮತಗಟ್ಟೆಗಳಲ್ಲಿ ಅವರು ನೆಹರೂಗಿಂತ ಹೆಚ್ಚು ಮತ ಪಡೆದಿದ್ದರೆಂಬುದೊಂದೇ ಸಮಾಧಾನದ ಸಂಗತಿಯಾಯಿತು. ೧೦೭ ಲೋಕಸಭಾ ಸ್ಥಾನಗಳಿಗೆ ಸ್ಪರ್ಧಿಸಿದ್ದ ಪಕ್ಷ ೧೧ ಸ್ಥಾನಗಳಲ್ಲಿ ಮಾತ್ರ ಜಯ ಗಳಿಸಿತ್ತು. ವಿಧಾನಸಭಾ ಚುನಾವಣೆಗಳ ಫಲಿತಾಂಶ ಇದಕ್ಕಿಂತ ಭಿನ್ನವಾಗೇನೂ ಇರಲಿಲ್ಲ. ಲೋಹಿಯಾ ನಿರಾಶೆಗೊಂಡರು, ಖಿನ್ನರಾದರು. ತಮ್ಮ ರಾಜಕೀಯದ ರಣನೀತಿಯನ್ನು ಸಮಗ್ರವಾಗಿ ಬದಲಾಯಿಸುವ ಅಗತ್ಯದ ಬಗ್ಗೆ ಆಳವಾಗಿ ಆಲೋಚಿಸತೊಡಗಿದರು.

ಚುನಾವಣೆಗಳ ಸೋಲಿನ ಆಘಾತದಿಂದ ಸುಧಾರಿಸಿಕೊಳ್ಳುವ ಪ್ರಯತ್ನದಲ್ಲಿದ್ದಾಗಲೇ ಚೀನಾ ಆಕ್ರಮಣ ಮತ್ತು ತದನಂತರದ ಭಾರತೀಯ ಸೇನೆಯ ಅವಮಾನಕರ ಸೋಲು ಲೋಹಿಯಾರನ್ನು ಇನ್ನಷ್ಟು ಆಘಾತಗೊಳಿಸಿತು. ಚೀನಾ ಆಕ್ರಮಿಸಿಕೊಂಡ ಭೂಮಿಯನ್ನು ಹುಲ್ಲು ಕೂಡಾ ಬೆಳೆಯದ ಭೂಮಿ ಎಂದು ಹೇಳಿ, ಸೋಲಿನಿಂದಾದ ಮುಖಭಂಗವನ್ನು ಮರೆಮಾಚಲೆತ್ನಿಸಿದ ಪ್ರಧಾನಿ ನೆಹರೂರ ಹೇಳಿಕೆಯು ಲೋಹಿಯಾರನ್ನು ತಲ್ಲಣಗೊಳಿಸಿತು. ಅವರು ಪಾಟ್ನಾದಲ್ಲಿ ೧೯೬೨ರ ಅಕ್ಟೋಬರ್‌ನಲ್ಲಿ 'ಹಿಮಾಲಯ ರಕ್ಷಿಸಿ' ಎಂಬ ಅಖಿಲಭಾರತ ಸಮ್ಮೇಳನವನ್ನು ಆಯೋಜಿಸಿದರು. ಇದಕ್ಕೆ ಕಾಂಗ್ರೆಸ್ ಹೊರತಾಗಿ

ರಾಷ್ಟ್ರಪತಿ ರಾಜೇಂದ್ರ ಪ್ರಸಾದ್, ಆಗ ಸರ್ವೋದಯ ಚಳುವಳಿ ಸೇರಿದ್ದ ಜಯಪ್ರಕಾಶ ನಾರಾಯಣರು ಸೇರಿದಂತೆ ಎಲ್ಲ ಹಿರಿಯ ರಾಜಕೀಯ ಮುತ್ಸದ್ದಿಗಳ, ಪಕ್ಷಗಳ ನಾಯಕರ ಬೆಂಬಲ ದೊರೆಯಿತು. ಚೀನಾ ಯುದ್ಧದ ಅವಮಾನಕರ ಸೋಲು ರಾಷ್ಟ್ರವನ್ನು ವಿಚಲಿತಗೊಳಿಸಿತ್ತು. ನೆಹರೂ ಅವರ ನಾಯಕತ್ವದ ವಿರುದ್ಧ ಮೊದಲ ಬಾರಿಗೆ ರಾಷ್ಟ್ರಮಟ್ಟದ ಸಂಘಟಿತ ಧ್ವನಿ ಮೊಳಗಿತು. 'ಹಿಮಾಲಯ ರಕ್ಷಿಸಿ' ಚಳುವಳಿಯು 'ಕಾಂಗ್ರೆಸ್‌ನಿಂದ ಭಾರತವನ್ನು ರಕ್ಷಿಸಿ ಚಳುವಳಿ'ಗೆ ನಾಂದಿ ಹಾಡಿತು.

ತಮ್ಮ ನೇತೃತ್ವದ ಸಮಾಜವಾದಿ ಪಕ್ಷ ಮಾತ್ರ ಕಾಂಗ್ರೆಸ್‌ಗೆ ಪರ್ಯಾಯವಾಗಬಲ್ಲುದು ಎಂಬ ನಂಬಿಕೆಯಿಂದ ಹೋರಾಡಿ ಸೋತಿದ್ದ ಲೋಹಿಯಾಗೆ, ಸದ್ಯದ ಪರಿಸ್ಥಿತಿಯಲ್ಲಿ ಎಲ್ಲ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಕಾಂಗ್ರೆಸ್ ವಿರುದ್ಧ ಸಂಘಟಿತ ರಾಜಕಾರಣ ಮಾಡುವುದೊಂದೇ ಮಾರ್ಗ ಎಂದು ಈಗ ಮನವರಿಕೆಯಾಗತೊಡಗಿತ್ತು. ಈ ಮಧ್ಯೆ ಎರಡೂ ಸಮಾಜವಾದಿ ಪಕ್ಷಗಳನ್ನು ಒಂದುಗೂಡಿಸುವ ಪ್ರಯತ್ನಗಳೂ ಆರಂಭವಾದವು. ಆದರೆ ಲೋಹಿಯಾ, ಇದಕ್ಕಿಂತ ಎಲ್ಲ ಕಾಂಗ್ರೆಸ್ಸೇತರ ಪಕ್ಷಗಳನ್ನು ಒಂದು ವೇದಿಕೆಗೆ ತರುವುದು ಹೆಚ್ಚು ಪರಿಣಾಮಕಾರಿ ಎಂದು ಭಾವಿಸಿ, ಆ ದಿಸೆಯಲ್ಲಿ ಪ್ರಯತ್ನಗಳನ್ನು ನಡೆಸಿದರು. ಇದರ ಫಲವಾಗಿ ೧೯೬೩ರಲ್ಲಿ ಉತ್ತರ ಪ್ರದೇಶದಲ್ಲಿನ ಮೂರು ಲೋಕಸಭಾ ಉಪಚುನಾವಣೆಗಳಿಗಾಗಿ ವಿರೋಧ ಪಕ್ಷಗಳು ಒಟ್ಟುಗೂಡಿ ಫರೂಕಾಬಾದ್‌ನಿಂದ ಲೋಹಿಯಾ, ಅಮ್ರೋಹಿಯಿಂದ ಆಚಾರ್ಯ ಕೃಪಲಾನಿ ಹಾಗೂ ಜೌನ್‌ಪುರದಿಂದ ದೀನ್‌ದಯಾಳ್ ಉಪಾಧ್ಯಾಯರನ್ನು ತಮ್ಮ ಸಾಮಾನ್ಯ ಅಭ್ಯರ್ಥಿಗಳೆಂದು ನಿಲ್ಲಿಸಿದವು. ಪಿ.ಎಸ್.ಪಿ.ಯ ವಿರೋಧದ ನಡುವೆಯೂ ಲೋಹಿಯಾ ಜಯಗಳಿಸಿ ಲೋಕಸಭೆ ಪ್ರವೇಶಿಸಿದರು.

ಲೋಕಸಭೆಯಲ್ಲಿ ಲೋಹಿಯಾ - ಅಮೆರಿಕದಲ್ಲಿ ದಸ್ತಗಿರಿ!

ಲೋಹಿಯಾ ಲೋಕಸಭೆಯನ್ನು ಪ್ರವೇಶಿಸುತ್ತಿದ್ದಂತೆ ಆ ಸದನದ ಖದರೇ ಬದಲಾವಣೆಯಾಯಿತು. ಸಾಮಾನ್ಯವಾಗಿ ಮಾತಿನ ಚಕಮಕಿಯಲ್ಲಿ ಮುಗಿಯುತ್ತಿದ್ದ ಸದನದ ಚರ್ಚೆಗಳು ಅಗತ್ಯ ಅಂಕಿ ಅಂಶಗಳ ಬೆಂಬಲ, ತೀಕ್ಷ್ಣವಾದ ತರ್ಕ ಹಾಗೂ ವಿಚಾರದ ಪ್ರಖರತೆಯಿಂದ, ಬೌದ್ಧಿಕ ಪ್ರಭೆ ಪಡೆದುಕೊಂಡವು. ಬಡತನ ಮತ್ತು ನಿರುದ್ಯೋಗದ ಬಗ್ಗೆ ನಡೆದ ಚರ್ಚೆ, ಲೋಹಿಯಾ ಮಂಡಿಸಿದ ಅಂಕಿ ಅಂಶಗಳಿಂದಾಗಿ ನೆಹರೂರನ್ನು ತಬ್ಬಿಬ್ಬು ಮಾಡಿತು. ಇದು ಭಾರತೀಯನ ದಿನವಹಿ ಸರಾಸರಿ ಆದಾಯ, ಲೋಹಿಯಾ ಹೇಳಿದಂತೆ ಮೂರಾಣೆಯೋ ಅಥವಾ ನೆಹರೂ ಹೇಳಿದಂತೆ ಹದಿಮೂರಾಣೆಯೋ ಎಂಬ ಬಗೆಗಿನ ವಿಸ್ತೃತ ಚರ್ಚೆಗೆ ದಾರಿ ಮಾಡಿತು. ಬೆಲೆ ಏರಿಕೆ, ನಿರುದ್ಯೋಗ, ಭ್ರಷ್ಟಾಚಾರ, ಸರ್ಕಾರದ ದುಂದುವೆಚ್ಚ, ಹಸಿವಿನಿಂದುಂಟಾಗುತ್ತಿದ್ದ

ಸಾವುಗಳು ಮುಂತಾದ ಅಂಶಗಳನ್ನು ಒಳಗೊಂಡ ಈ ಚರ್ಚೆ 'ಪ್ರಗತಿ' ಎಂದರೇನು ಎಂದು ವಿಶ್ಲೇಷಿಸುವ ಒಂದು ಆರ್ಥಿಕ ಮೀಮಾಂಸೆಯನ್ನೇ ಜನರ ಮುಂದೆ ಮಂಡಿಸಿತು. ಸಂಸತ್ತು ಜನತೆಯ ಸಂಕಷ್ಟಗಳನ್ನು ಪ್ರತಿಧ್ವನಿಸುವ, ಅವರ ಆಕಾಂಕ್ಷೆ-ಅಗತ್ಯಗಳನ್ನು ಪ್ರತಿಬಿಂಬಿಸುವ ಮತ್ತು ಆರ್ಥಿಕ, ಸಾಮಾಜಿಕ, ರಾಜಕೀಯ ವಲಯಗಳಲ್ಲಿ ಬದಲಾವಣೆಗಳ ಉಂಟುಮಾಡುವ ಕ್ರಾಂತಿಕಾರಿ ಸಾಧನವಾಗಬೇಕೇ ಹೊರತು, ಪ್ರಧಾನಮಂತ್ರಿಯ ಹುಸಿ ದರ್ಬಾರಾಗಬಾರದು ಎಂದು ಲೋಹಿಯಾ ನಂಬಿದ್ದರು. ಹಾಗಾಗಿ ಅವರು ಸದನದ ಕಾರ್ಯವ್ಯಾಪ್ತಿಯನ್ನು ನಡಾವಳಿ ನಿಯಮಗಳ ಪುರ್ನವ್ಯಾಖ್ಯಾನಗಳ ಮೂಲಕ ಹಿಗ್ಗಿಸಲು ಪ್ರಯತ್ನಿಸಿ, ಅನೇಕ ಬಾರಿ ಲೋಕಸಭಾಧ್ಯಕ್ಷರೊಂದಿಗೆ ಸಂಘರ್ಷಕ್ಕೆ ಇಳಿದಿದ್ದರು. ಒಮ್ಮೆ ಸದನದಿಂದ ಅಮಾನತ್‌ಗೊಂಡಿದ್ದೂ ಉಂಟು. ಆದರೆ ಎದೆಗುಂದದ ಲೋಹಿಯಾ, ರಾತ್ರಿ ರಸ್ತೆ ಪಕ್ಕ ಮಲಗಬೇಕಾದ ಅನಾಥರ, ರಿಕ್ಷಾ ಎಳೆಯುವವರ, ಬೆಳೆ ನಷ್ಟಗೊಂಡು ದರಿದ್ರಾವಸ್ಥೆ ಮಟ್ಟಿದ ರೈತರ, ಆತಂಕದಿಂದ ಬಯಲಲ್ಲಿ ಬಹಿರ್ದೆಶೆಗೆ ಕೂರಬೇಕಾದ ಗ್ರಾಮಾಂತರ ಮಹಿಳೆಯರ ಪರವಾಗಿಯೂ ಸದನದಲ್ಲಿ ಧ್ವನಿ ಎತ್ತಿದರು. ಅವರಿಗೆ ಲೋಕಸಭೆ ಎಂದರೆ ರಾಷ್ಟ್ರೀಯ-ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ಮಾತ್ರ ಎತ್ತಿ ಚರ್ಚಿಸುವ ಪ್ರತಿಷ್ಠಿತ ವೇದಿಕೆಯಾಗಿರಲಿಲ್ಲ.

ಈ ಮಧ್ಯೆ ಲೋಹಿಯಾ, ಅಮೆರಿಕಾ ಸೇರಿದಂತೆ ಪ್ರಪಂಚದ ಒಂದು ಸುತ್ತು ಪ್ರವಾಸ ಹೊರಟರು. ಅಮೆರಿಕಾದ ಸಮಾಜವಾದಿಗಳ ಆಹ್ವಾನದ ಮೇರೆಗೆ ಅವರು ಅಮೆರಿಕೆಯ ಪ್ರವಾಸದಲ್ಲಿದ್ದಾಗ ನೆಹರೂ ನಿಧನರಾದರು. ಅಲ್ಲಿಂದಲೇ ಲೋಹಿಯಾ, ಹಳೆಯ ಒಡನಾಟದ ದಿನಗಳನ್ನು ಸ್ಮರಿಸಿಕೊಂಡು ನೆಹ್ರೂಗೆ ಶ್ರದ್ಧಾಂಜಲಿ ಸಲ್ಲಿಸುವ ಸಂದೇಶವನ್ನು ಇಂದಿರಾಗಾಂಧಿಯವರಿಗೆ ಕಳಿಸಿದರು. ಆ ಸಂದೇಶದಲ್ಲಿ ನೆಹ್ರೂ ಕೈಬಿಟ್ಟ ಸಮಾಜವಾದಿ ಕ್ರಾಂತಿಯ ಕನಸನ್ನು ನನಸು ಮಾಡುವ ಪ್ರಯತ್ನ ಕೈಗೊಳ್ಳಬೇಕೆಂದು ಆಗ ಕಾಂಗ್ರೆಸ್ ಪಕ್ಷದ ಅಧ್ಯಕ್ಷರೂ ಆಗಿದ್ದ ಇಂದಿರಾಗಾಂಧಿಯವರಿಗೆ ಮನವಿ ಮಾಡಿದರು. ಅದೇ ಸಂದರ್ಭದಲ್ಲಿ ಅವರು ಜಾಕ್ಸನ್ ಎಂಬ ನಗರದಲ್ಲಿ ವರ್ಣೀಯರಿಗೆ ಪ್ರವೇಶ ನಿಷೇಧವಿದ್ದ ಹೋಟಲ್‌ನಲ್ಲಿ, ಅದರ ನೀತಿ ವಿರುದ್ಧ ನಾಗರಿಕ ಸತ್ಯಾಗ್ರಹ ನಡೆಸಿ ದಸ್ತಗಿರಿಯಾಗಿ ಅಮೆರಿಕಾದ ಜನತೆಯ ಆತ್ಮಸಾಕ್ಷಿಯನ್ನು ಕೆಣಕಿದರು. ಮುಕ್ತಸ್ವಾತಂತ್ರ್ಯ ಪ್ರತಿಪಾದಿಸುವ ಬಂಡವಾಳವಾದಿ ಅಮೆರಿಕನ್ ಸರ್ಕಾರ ಮುಜುಗರಗೊಂಡು ಲೋಹಿಯಾರ ಕ್ಷಮೆ ಕೇಳಿ ಅವರನ್ನು ಬಿಡುಗಡೆ ಮಾಡಿತು! ಲೋಹಿಯಾ ಈ ಪ್ರವಾಸ ಸಂದರ್ಭದಲ್ಲಿ ಪ್ರಸಿದ್ಧ ಕಾದಂಬರಿಗಾರ್ತಿ ಪರ್ಲ್ ಎಸ್. ಬಕ್ ಹಾಗೂ ಜಗದ್ವಿಖ್ಯಾತ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್‌ರನ್ನು ಭೇಟಿ ಮಾಡಿ ಜಗತ್ತಿನ ಭವಿಷ್ಯದ ಬಗ್ಗೆ ಚರ್ಚಿಸಿದರು. ಐನ್‌ಸ್ಟೀನರಂತೂ ಲೋಹಿಯಾರನ್ನು 'ನಿಮ್ಮ ಭೇಟಿಯಿಂದ ಬಹಳ

ಸಂತೋಷವಾಗಿದೆ. ಏಕೆಂದರೆ ಇತ್ತೀಚೆಗೆ ಮನುಷ್ಯರನ್ನು ಭೇಟಿಯಾಗುವುದೇ ಅಪರೂಪವಾಗಿದೆ. ಎಂಬ ಅರ್ಥಪೂರ್ಣ ಮಾತುಗಳೊಂದಿಗೆ ಬೀಳ್ಕೊಟ್ಟರು.

ಲೋಹಿಯಾ ಪ್ರವಾಸ ಮುಗಿಸಿ ಬರುವ ಹೊತ್ತಿಗೆ ಲಾಲ್ ಬಹಾದೂರು ಶಾಸ್ತ್ರಿ ಪ್ರಧಾನಿಯಾಗಿದ್ದರು. ಇವರ ಕಾಲದಲ್ಲಿ ಆರಂಭವಾದ ಭಾರತ-ಪಾಕಿಸ್ತಾನ ಯುದ್ಧದ ಸಂದರ್ಭದಲ್ಲಿ ಪಾಕಿಸ್ತಾನಕ್ಕೆ ಭೂಮಿ ಬಿಟ್ಟು ಕೊಡುವ ಕಚ್ಛ್ ಒಪ್ಪಂದದ ಸಂಬಂಧ ಲೋಹಿಯಾ ಸರ್ಕಾರದ ವಿರುದ್ಧ ಚಳುವಳಿ ಹೂಡಿದರು. ಅಂತಾರಾಷ್ಟ್ರೀಯ ರಾಜಕಾರಣದ ರಾಜಿಗಳ ಮಧ್ಯೆ ಭಾರತದ ಘನತೆ ಮತ್ತು ಸ್ವಾತಂತ್ರ್ಯ ಘಾಸಿಗೊಳ್ಳುತ್ತಿದುದನ್ನು ಈ ಸಂದರ್ಭದಲ್ಲಿ ರಾಷ್ಟ್ರದ ಮುಂದೆ ಮಂಡಿಸಿದಾಗ, ಕಾಂಗ್ರೆಸ್ ತತ್ತರಿಸಿತು; ಸ್ವಾತಂತ್ರ್ಯವೀರ ಲೋಹಿಯಾರನ್ನು ಭಾರತದ ರಕ್ಷಣಾ ಕಾಯಿದೆಯಡಿ ಬಂಧಿಸುವ ಲಜ್ಜೆಗೇಡಿತನ ಪ್ರದರ್ಶಿಸಿತು. ಆದರೆ ಸರ್ವೋಚ್ಚ ನ್ಯಾಯಾಲಯ ಅವರ ಬಿಡುಗಡೆಗೆ ಆಜ್ಞೆ ಮಾಡಿತು. ನಂತರದಲ್ಲೇ ಲೋಹಿಯಾ ಜರ್ಮನಿ, ರಷ್ಯಾ ಮತ್ತು ಆಫ್ಘಾನಿಸ್ತಾನಗಳ ಪ್ರವಾಸ ಕೈಗೊಳ್ಳುವ ಅವಕಾಶ ದೊರೆಯಿತು. ಈ ಪ್ರವಾಸದ ಸಂದರ್ಭದಲ್ಲಿ ಆ ದೇಶಗಳ ನಾಯಕರೊಂದಿಗೆ ಅವರು ವಿಶ್ವ ರಾಜಕಾರಣದ ಗೊತ್ತುಗುರಿಗಳ ಬಗ್ಗೆ ಚರ್ಚಿಸಿದರು. ಆಫ್ಘಾನಿಸ್ತಾನದಲ್ಲಿ ಗಡಿನಾಡ ಗಾಂಧಿ ಅಬ್ದುಲ್ ಗಫಾರ್ ಖಾನರನ್ನು ಭೇಟಿಮಾಡಿ, ಭಾರತ-ಪಾಕಿಸ್ತಾನಗಳ ಸಮೀಪೀಕರಣದ ಪ್ರಯತ್ನಗಳಿಗೆ ಅವರ ಸಹಕಾರ ಕೋರಿದರು.

ವಿಫಲಗೊಂಡ ಸಮಾಜವಾದಿ ಐಕ್ಯತೆ-ಕಾಂಗ್ರೆಸ್ಸೇತರವಾದದ ಉದಯ

ಈ ವಿದೇಶ ಪ್ರವಾಸ ಮುಗಿಸಿ ಬರುವ ಹೊತ್ತಿಗೆ ಇಂದಿರಾಗಾಂಧಿ ಪ್ರಧಾನಿಯಾಗಿದ್ದರು. ಎರಡೂ ಸಮಾಜವಾದಿ ಪಕ್ಷಗಳು ಒಂದುಗೂಡಿ ಸಂಯುಕ್ತ ಸಮಾಜವಾದಿ ಪಕ್ಷವನ್ನು ರಚಿಸಿಕೊಂಡಿದ್ದವು. ಆದರೆ ಲೋಹಿಯಾಗೆ ಈ ಒಂದುಗೂಡುವಿಕೆ ಒಮ್ಮನಸ್ಸಿನಿಂದ ಆಗಿರುವ ಬಗ್ಗೆ ವಿಶ್ವಾಸ ಇರಲಿಲ್ಲ. ಲೋಹಿಯಾ ಇತರ ಪಕ್ಷಗಳೊಂದಿಗೆ ಕಾಂಗ್ರೆಸ್ಸೇತರ ರಂಗ ರಚಿಸಲು ನಡೆಸಿದ್ದ ಪ್ರಯತ್ನ, ಪಿ.ಎಸ್.ಪಿ. ನಾಯಕರಲ್ಲಿ ಅಸಮಾಧಾನ ಉಂಟುಮಾಡಿತ್ತು. ಅವರಿಗೆ ಲೋಹಿಯಾ ಉತ್ತರ ಹೇಳಿದ್ದು ಹೀಗೆ: ಸಮಾಜವಾದಿ ಹೋರಾಟವೊಂದೇ ಕಾಂಗ್ರೆಸ್‌ಗೆ ಪರ್ಯಾಯ ರೂಪಿಸಲಾರದು ಎಂದು ಸಾಬೀತಾಗಿದೆ. ಹೀಗಾಗಿ ಸದ್ಯಕ್ಕೆ ಇಂತಹುದೇ ಹೋರಾಟ ಮುಂದುವರಿಸಿ ಪ್ರಯೋಜನವಿಲ್ಲ. ಮೊದಲು ರಾಷ್ಟ್ರೀಯ ಸ್ಥಿರತೆಯ ಹೆಸರಲ್ಲಿ ಕಾಂಗ್ರೆಸ್ ನಿರ್ಮಿಸಿರುವ ರಾಷ್ಟ್ರೀಯ ಜಡತೆಯನ್ನು ಹೋಗಲಾಡಿಸಲು, ಬರುವ ಚುನಾವಣೆಗಳಲ್ಲಿ ಕಾಂಗ್ರೆಸ್ಸನ್ನು ಅಧಿಕಾರದಿಂದ ಇಳಿಸಬೇಕಾಗಿದೆ. ನಂತರವಷ್ಟೇ ಇತರ ಪಕ್ಷಗಳೊಂದಿಗೆ 'ಕನಿಷ್ಟ ಕಾರ್ಯಕ್ರಮ' ಆಧಾರದ ಸಮಾಜವಾದಿ ರಾಜಕಾರಣ.

ಇದರಿಂದಾಗಿ ಲೋಹಿಯಾ ಹಲವು ಸಮಾಜವಾದಿ ನಾಯಕರ ಸಹಾನುಭೂತಿಯನ್ನು

ಕಳೆದುಕೊಂಡು ಲೋಕಸಭೆಯಲ್ಲಿ ಏಕಾಂಗಿಯಾದರು. ಒಮ್ಮೆ ಆಹಾರ ಪರಿಸ್ಥಿತಿ ಕುರಿತ ಚರ್ಚೆಯ ಸಂದರ್ಭದಲ್ಲಿ ಅವರು ಸಂಯುಕ್ತ ಸಮಾಜವಾದಿ ಪಕ್ಷದ ಬೆಂಬಲ ಕೋರದೆ, ಮುಸ್ಲಿಂ ಲೀಗ್ ಮತ್ತು ಇತರೆ ಸಣ್ಣಪುಟ್ಟ ಪಕ್ಷಗಳ ಬೆಂಬಲ ಕೋರುವ ಹತಾಶ ಪರಿಸ್ಥಿತಿ ಉಂಟಾಯಿತು. ತಮಗೀಗ ತಮ್ಮ ಸಮಾಜವಾದಿ ಗೆಳೆಯರಿಗಿಂತ ಕಮ್ಯೂನಿಸ್ಟ್ ಹಾಗೂ ಜನಸಂಘದ ಮಿತ್ರರೇ ಹತ್ತಿರವಾಗಿದ್ದಾರೆ ಎಂದು ಲೋಹಿಯಾ ಹೇಳಿದರು. ಈ ಮಧ್ಯೆ ಎಚ್.ವಿ. ಕಾಮತ್, ಎನ್.ಜಿ. ಗೋರೆ, ನಾಥ ಪೈ ಮುಂತಾದ ನಾಯಕರು ಸಮಾಜವಾದಿ ಪಕ್ಷಗಳ ವಿಲೀನ ರದ್ದಾಗಿದೆ ಎಂದು ಘೋಷಿಸಿ, ಪ್ರಜಾಸಮಾಜವಾದಿ ಪಕ್ಷದ ಮರುಸ್ಥಾಪನೆಯನ್ನು ಪ್ರಕಟಿಸಿದರು. ಅವರಿಗೆಲ್ಲಾ, ಕಾಂಗ್ರೆಸ್ ವಿರೋಧವೊಂದೇ ಸದ್ಯದ ಲೋಹಿಯಾರ ಸಮಾಜವಾದಿ ಕಾರ್ಯಕ್ರಮವಾಗಿ ಕಂಡಿತ್ತು. ಆದರೆ ಲೋಹಿಯಾ ಪ್ರಕಾರ, ಸದ್ಯದ ಪರಿಸ್ಥಿತಿಯಲ್ಲಿ ಸಮಾಜವಾದಿ ಆಂದೋಲನವು ಮುಖ್ಯವಾಹಿನಿ ರಾಜಕಾರಣ ಮಾಡಲಾಗದಷ್ಟು ತತ್ವ ಮರುಳಿಗೆ ಒಳಗಾಗಿ, ಸಂಕುಚಿತಗೊಂಡಿತ್ತು. ಹೀಗಾಗಿ ಅವರು ಲೋಕಸಭೆಯಲ್ಲಿ ಅನೌಪಚಾರಿಕ ಕಾಂಗ್ರೆಸ್ಸೇತರ ಒಕ್ಕೂಟದ ವಕ್ತಾರರಂತೆಯೇ ಸರ್ಕಾರದ ವಿರುದ್ಧ ದಾಳಿ ನಡೆಸಿದರು.

ಪ್ರಧಾನಿ ಇಂದಿರಾ ವಿದೇಶಿ ಅತಿಥಿಗಳಿಂದ ಪಡೆದಿದ್ದ ವಜ್ರದ ನೆಕಲೇಸ್ ಮತ್ತು ಮಿಂಕ್‌ಕೋಟ್‌ಗಳ ಪ್ರಶ್ನೆಯನ್ನೆತ್ತಿಕೊಂಡು ಲೋಹಿಯಾ ದೊಡ್ಡ ಚರ್ಚೆಯನ್ನೇ ಆರಂಭಿಸಿದರು. ದೇಶದ ನಾಯಕರು ಇಂತಹ ಶ್ರೀಮಂತ ಕೊಡುಗೆಗಳನ್ನು ತಮ್ಮ ಸರ್ಕಾರಿ ಸ್ಥಾನಗಳಿಂದಾಗಿ ಪಡೆದು, ಅವನ್ನು ವೈಯಕ್ತಿಕ ಆಸ್ತಿ ಮಾಡಿಕೊಳ್ಳುವುದರಿಂದ ಹೇಗೆ ಬಡವರ ಪರವಾದ ರಾಜಕಾರಣದ ಧ್ವನಿ ಉಡುಗಿಹೋಗುತ್ತದೆ ಎಂದು ಅವರು ಈ ಚರ್ಚೆಯ ಮೂಲಕ ವಿಶ್ಲೇಷಿಸಿದರು. ಸ್ಟಾಲಿನ್ ಪುತ್ರಿ ಸ್ವೆಟ್ಲಾನಾ ರಷ್ಯಾದಿಂದ ಗಡೀಪಾರಾಗಿ ಆಶ್ರಯ ಕೋರಿ ಭಾರತಕ್ಕೆ ಬಂದಾಗ, ಸೋವಿಯತ್ ಒಕ್ಕೂಟದ ಒತ್ತಡಕ್ಕೆ ಸಿಲುಕಿ ಆಕೆಗೆ ಆಶ್ರಯ ನೀಡಲು ಭಾರತ ಸರ್ಕಾರ ನಿರಾಕರಿಸಿತು. ಇದು ಅಂತಾರಾಷ್ಟ್ರೀಯ ರಾಜಕಾರಣದ ಅಮಾನವೀಕರಣದಲ್ಲಿ ಭಾಗಿಯಾಗುತ್ತಿರುವ ಅಪರಾಧ ಎಂದು ಲೋಹಿಯಾ ಖಂಡಿಸಿದರು. ಈ ವಿಷಯದಲ್ಲಿ ಸಂಸತ್ತಿಗೆ ತಪ್ಪು ಮಾಹಿತಿ ನೀಡಿದರೆಂದು ಅಂದಿನ ಗೌರವಾನ್ವಿತ ಕಾನೂನು ಮಂತ್ರಿ ಎಂ.ಸಿ. ಛಗಲಾರನ್ನು 'ಸುಳ್ಳ' ಎಂದು ಕರೆಯಲು ಅವರು ಹಿಂಜರಿಯಲಿಲ್ಲ. ಪುರಾತನ ಭಾರತೀಯ ಚರಿತ್ರೆಯನ್ನು, ಭಾರತ-ಪಾಕಿಸ್ತಾನಗಳ ಚರಿತ್ರೆಯೆಂದು ವಿಭಾಗಿಸಿ ಬರೆದಿದ್ದ ವಿಶ್ವಸಂಸ್ಥೆ ಪ್ರಾಯೋಜಿತ ಇತಿಹಾಸ ಬರವಣಿಗೆ ಬಗ್ಗೆ ಧ್ವನಿ ಎತ್ತದ ಭಾರತ ಸರ್ಕಾರಕ್ಕೆ ಅವರು ಛೀಮಾರಿ ಹಾಕಿದರು.

ಲೋಕಸಭಾ ಸದಸ್ಯರಾಗಿ ಲೋಹಿಯಾ ಅವರ ಕಾರ್ಯನಿರ್ವಹಣೆ ದೇಶದ ಗಮನ ಸೆಳೆದಿತ್ತು. ಸ್ವತಂತ್ರ ಭಾರತದಲ್ಲಿ ಮೊದಲಬಾರಿಗೆ ಅವರು ರಾಷ್ಟ್ರ ರಾಜಕಾರಣದ ಮುಂಚೂಣಿ ನಾಯಕರಾಗಿ ಹೊರ ಹೊಮ್ಮಿದ್ದರು. ಇದರಿಂದಾಗಿ ೧೯೬೭ರ ನಾಲ್ಕನೇ

ಸಾರ್ವತ್ರಿಕ ಚುನಾವಣೆಗಳ ಹೊತ್ತಿಗೆ ಕಾಂಗ್ರೆಸ್ ವಿರುದ್ಧ ಒಂದು ಸಂಯುಕ್ತರಂಗ ರಚಿಸುವ ಅವರ ಪ್ರಯತ್ನಕ್ಕೆ ಒಂದು ವಿಶ್ವಾಸಾರ್ಹತೆ ದೊರಕಿತ್ತು. ಲೋಹಿಯಾ ಕಾಂಗ್ರೆಸ್ಸೇತರ ಪಕ್ಷಗಳ ಮೈತ್ರಿಕೂಟವೊಂದನ್ನು ರಚಿಸಲು ಎಲ್ಲ ಪಕ್ಷಗಳೊಂದಿಗೆ ಮಾತುಕತೆ ಆರಂಭಿಸಿದರು.

ನಾಲ್ಕನೇ ಸಾರ್ವತ್ರಿಕ ಚುನಾವಣೆ - ಕಾಂಗ್ರೆಸ್‌ಗೆ ಮುಖಭಂಗ

ಪಿ.ಎಸ್.ಪಿ., ಜನಸಂಘ ಹಾಗೂ ಸ್ವತಂತ್ರ ಪಕ್ಷಗಳು ಲೋಹಿಯಾ ಪ್ರಸ್ತಾಪಿಸಿದ ಈ ಚುನಾವಣಾ ಪೂರ್ವ ಮೈತ್ರಿಕೂಟಕ್ಕೆ ಸಮ್ಮತಿಸಲಿಲ್ಲವಾದರೂ, ಸಂಯುಕ್ತ ಸಮಾಜವಾದಿ ಪಕ್ಷ, ಕಮ್ಯೂನಿಸ್ಟ್ ಪಕ್ಷ, ಡಿ.ಎಂ.ಕೆ. ಹಾಗೂ ಇತರ ಸಣ್ಣಪುಟ್ಟ ಪ್ರಾದೇಶಿಕ ಹಾಗೂ ಎಡಪಂಥೀಯ ಪಕ್ಷಗಳ ಮೈತ್ರಿಕೂಟ ರಚನೆಯಾಯಿತು. ಇವರ ಮೈತ್ರಿಗೆ ಸೇರದ ಪಕ್ಷಗಳೂ, ಚುನಾವಣೆ ಸಂದರ್ಭದಲ್ಲಿ ಸ್ಥಾನ ಹೊಂದಾಣಿಕೆಗೆ ಮುಂದಾದವು. ಇದರಿಂದಾಗಿ ಚುನಾವಣೆಗಳಲ್ಲಿ ಕಾಂಗ್ರೆಸ್ ವಿರೋಧಿ ಮತಗಳು ಚದುರಿಹೋಗದೆ, ಸ್ವತಂತ್ರ ಭಾರತದ ಇತಿಹಾಸದಲ್ಲಿ ಮೊದಲಬಾರಿಗೆ ಕಾಂಗ್ರೆಸ್, ಒಟ್ಟಿಗೆ ಒಂಭತ್ತು ರಾಜ್ಯಗಳಲ್ಲಿ ಅಧಿಕಾರ ಕಳೆದುಕೊಂಡಿತು ಹಾಗೂ ಕೇಂದ್ರದಲ್ಲಿ ಅದರ ಬಹುಮತ ತೆಳುವಾಗಿ ಹೋಯಿತು. ಕಾಂಗ್ರೆಸ್ ಕೋಟೆಗೆ ಲೋಹಿಯಾ ನೇತೃತ್ವದ ಲಗ್ಗೆ ಮೊದಲ ಬಾರಿಗೆ ಯಶಸ್ವಿಯಾಗಿತ್ತು. ಲೋಹಿಯಾ, ಕನೂಜ್ ಲೋಕಸಭಾ ಕ್ಷೇತ್ರದಿಂದ ಗೆದ್ದಿದ್ದರು.

ಲೋಹಿಯಾ ನಡೆಸಿದ ಸಂಧಾನ ಪ್ರಯತ್ನಗಳಿಂದಾಗಿ ಏಳು ರಾಜ್ಯಗಳಲ್ಲಿ, ಸಂಯುಕ್ತ ವಿಧಾಯಕ ದಳದ ಹೆಸರಿನಲ್ಲಿ ಎಡ ಮತ್ತು ಬಲಪಂಥೀಯ ಪಕ್ಷಗಳೆಲ್ಲವೂ ಸೇರಿದ್ದ ಸಮ್ಮಿಶ್ರ ಸರ್ಕಾರಗಳು ರಚಿತವಾದವು. ಮದ್ರಾಸ್ ರಾಜ್ಯದಲ್ಲಿ (ಈಗಿನ ತಮಿಳ್ನಾಡು) ಕಾಂಗ್ರೆಸ್ ಸಂಪೂರ್ಣವಾಗಿ ಸೋತು, ಡಿ.ಎಂ.ಕೆ. ಅಧಿಕಾರಕ್ಕೆ ಬಂದಿತ್ತು. ಸ್ವತಂತ್ರ ಭಾರತದ ರಾಜಕಾರಣದಲ್ಲಿ ಮೊದಲ ಬಾರಿಗೆ ಬದಲಾವಣೆ ಸಾಧ್ಯವಾಗಿತ್ತು. ಆದರೆ ಎಂತಹ ಬದಲಾವಣೆ? ಈ ಬಗ್ಗೆ ಲೋಹಿಯಾಗೆ ಸ್ಪಷ್ಟತೆ ಇತ್ತು. ಸಮ್ಮಿಶ್ರ ಸರ್ಕಾರಗಳು ಪರಸ್ಪರ ಮಾತುಕತೆಯಲ್ಲಿ ಉದಾರವಾಗಿದ್ದುಕೊಂಡು, ಕೈಗೊಳ್ಳುವ ಕೆಲಸದ ವಿಷಯದಲ್ಲಿ ಛಲವಂತಿಕೆ ತೋರಿಸಬೇಕು ಎಂದು ಅವರು ಸೂಚಿಸಿದ ಈ ಸರ್ಕಾರಗಳು ಪವಿತ್ರ ಗೋವುಗಳೇನೂ ಅಲ್ಲ; ಕೆಲಸ ಮಾಡಲಾರವು ಎಂದು ಗೊತ್ತಾದಾಗ. ಅವನ್ನು ವಿಸರ್ಜಿಸಲು ಹಿಂದು ಮುಂದು ನೋಡಬಾರದೆಂದೂ ಅವರು ಹೇಳಿದರು. ಸಂಯುಕ್ತ ಸಮಾಜವಾದಿ ಪಕ್ಷದ ನೇತೃತ್ವದ ಬಿಹಾರ ಸಮ್ಮಿಶ್ರ ಸರ್ಕಾರಕ್ಕೆ ಅವರು ಭೂಪಿತರಣೆ, ಕಂದಾಯ ರದ್ದತಿ, ಹಿಂದುಳಿದವರಿಗೆ ಮೀಸಲಾತಿ ಹಾಗೂ ಇಂಗ್ಲಿಷ್

ತೊಲಗಿಸಿ ಮುಂತಾದ ಅಂಶಗಳನ್ನೊಳಗೊಂಡ ಕಾರ್ಯ ಸೂಚಿಯನ್ನು ನೀಡಿದರು.

ಕಾಂಗ್ರೆಸ್ಸನ್ನು ಮತ್ತಷ್ಟು ಅಸ್ಥಿರಗೊಳಿಸುವ ಉಪಾಯವಾಗಿ ಲೋಹಿಯಾ, ಅದೇ ವರ್ಷ ನಡೆದ ರಾಷ್ಟ್ರಪತಿ ಚುನಾವಣೆಯಲ್ಲಿ, ಕಾಂಗ್ರೆಸ್ ಅಭ್ಯರ್ಥಿ ಝಕೀರ್ ಹುಸೇನರ ವಿರುದ್ಧ ಸರ್ವೋಚ್ಚ ನ್ಯಾಯಾಲಯದ ಮಾಜಿ ನ್ಯಾಯಾಧೀಶ ಸುಬ್ಬರಾವ್ ಅವರನ್ನು ವಿರೋಧ ಪಕ್ಷಗಳ ಸಾಮಾನ್ಯ ಅಭ್ಯರ್ಥಿಯಾಗಿ ನಿಲ್ಲಿಸಿದರು. ಆದರೆ, ನಂಬಿದ ಕೆಲವರು ಕೈಕೊಟ್ಟ ಪರಿಣಾಮ ಝಾಕೀರ್ ಹುಸೇನರೇ ಗೆದ್ದರು. ಇದೇ ಅನುಭವ ಬಿಹಾರ ರಾಜಕಾರಣದಲ್ಲೂ ಆಯಿತು. ಬಿ.ಪಿ. ಮಂಡಲ್ ಎಂಬ ಎಸ್.ಎಸ್.ಪಿ. ಲೋಕಸಭಾ ಸದಸ್ಯ, ರಾಜ್ಯದ ಮುಖ್ಯಮಂತ್ರಿಯಾಗುವ ಆಸೆಯಿಂದ ಲೋಕಸಭಾ ಸ್ಥಾನಕ್ಕೆ ರಾಜೀನಾಮೆ ನೀಡಿ ರಾಜ್ಯ ವಿಧಾನಪರಿಷತ್ತಿನ ಸದಸ್ಯನಾಗಲು ಪ್ರಯತ್ನ ಪಟ್ಟಾಗ, ಲೋಹಿಯಾ ಆತನನ್ನು ಪಕ್ಷದಿಂದ ಅಮಾನತ್ತು ಮಾಡಲು ಸೂಚಿಸಿದರು. ಆತ ಪಕ್ಷಕ್ಕೇ ತಿರುಗಿ ಬಿದ್ದು, 'ಶೋಷಿತದಳ' ಎಂಬ ಪ್ರತ್ಯೇಕ ಪಕ್ಷ ಕಟ್ಟಿದ. ಲೋಹಿಯಾ ಹಿಂದುಳಿದ ಜಾತಿಗಳ ಅಪಕ್ವ ರಾಜಕಾರಣದ ಮೊದಲ ಆಘಾತ ಅನುಭವಿಸಿದ್ದರು.

ಕೊನೆಯ ಹೋರಾಟ–ಲೋಹಿಯಾ ಅಮರ್ ರಹೇ!

ಆ ಹೊತ್ತಿಗೆ ಅವರ ಆರೋಗ್ಯ ಸಂಪೂರ್ಣ ಕೆಟ್ಟಿತ್ತು. ರಕ್ತದ ಅತಿ ಒತ್ತಡದಿಂದ ಹೃದಯ ದುರ್ಬಲವಾಗಿತ್ತು. ಪ್ರೊಸ್ಟೇಟ್‌ಗ್ರಂಥಿ ಹಿಗ್ಗಿದ್ದರಿಂದ ಅವರು ಆಸ್ಪತ್ರೆಗೆ ದಾಖಲಾಗಬೇಕಾಯಿತು ೧೯೬೭ರ ಸೆಪ್ಟೆಂಬರ್ ೩೦ರಂದು ಲೋಹಿಯಾರನ್ನು ಪ್ರೊಸ್ಟೇಟ್ ಗ್ರಂಥಿ ಶಸ್ತ್ರಚಿಕಿತ್ಸೆಗಾಗಿ ಹೊಸ ದೆಹಲಿಯ ವೆಲ್ಲಿಂಗ್‌ಡನ್ ಆಸ್ಪತ್ರೆಗೆ ಸೇರಿಸಲಾಯಿತು. ಹಲವರ ವಿರೋಧದ ನಡುವೆಯೂ ಅವರು, ಜನಸಾಮಾನ್ಯರ ಸರ್ಕಾರಿ ಆಸ್ಪತ್ರೆಯಲ್ಲೇ ತನ್ನ ಚಿಕಿತ್ಸೆಯಾಗಬೇಕೆಂದು ಹಠಮಾಡಿ ಆ ಆಸ್ಪತ್ರೆ ಸೇರಿದ್ದರು. ಶಸ್ತ್ರಚಿಕಿತ್ಸೆ ಯಶಸ್ವಿಯಾಗಿದೆ ಎಂದು ಹೇಳಲಾಯಿತಾದರೂ, ಅಕ್ಟೋಬರ್ ೨ರಂದು ಶಸ್ತ್ರಚಿಕಿತ್ಸೆಯಾದೆಡೆ ರಕ್ತಸ್ರಾವವಾಗಿ ಜ್ವರವೇರಿ ಅವರ ಪ್ರಜ್ಞೆ ತಪ್ಪಿತು. ದೆಹಲಿಯ ಬೇರೆ ಪ್ರತಿಷ್ಠಿತ ಆಸ್ಪತ್ರೆಗಳಿಂದ, ಮುಂಬೈನಿಂದ ಪರಿಣತ ವೈದ್ಯರು ಬಂದರು. ಶಸ್ತ್ರಕ್ರಿಯೆಯಾದ ಜಾಗದಲ್ಲಿ ಸೋಂಕಾಗಿದೆ ಎಂದು ಹೇಳಿ ಅದರ ಚಿಕಿತ್ಸೆ ಆರಂಭವಾಯಿತು. ಆದರೂ ಲೋಹಿಯಾಗೆ ಪ್ರಜ್ಞೆ ಮರಳಲಿಲ್ಲ.

ಇಡೀ ದೇಶ ಚಿಂತಾಕ್ರಾಂತವಾಯಿತು. ದೇಶಾದ್ಯಂತ ಇದ್ದ ಲೋಹಿಯಾ ಬಳಗ ಆತಂಕದಿಂದ ದೆಹಲಿಗೆ ಧಾವಿಸಿತು. ರೀಂವಾದ ಒಬ್ಬ ಬಡ ವ್ಯಾಪಾರಿ ತನ್ನ ಅಂಗಡಿಯನ್ನೇ ಮಾರಿ ಪತ್ನಿಯೊಂದಿಗೆ ದೆಹಲಿಗೆ ಬಂದು ಆಸ್ಪತ್ರೆಯ ಮುಂದೆ ಡೇರೆ ಹಾಕಿದ್ದ. ಲೋಹಿಯಾರ ಯೌವ್ವನದ ಆಪ್ತ ಗೆಳೆಯ ಜಯಪ್ರಕಾಶ್ ನಾರಾಯಣ್

ದೆಹಲಿಯಲ್ಲೇ ತಂಗಿದ್ದುಕೊಂಡು, ಅವರ ಚಿಕಿತ್ಸೆಗೆ ಏರ್ಪಾಡು ಮಾಡುವ ಹೊಣೆ ಹೊತ್ತರು. ಉಪ ಪ್ರಧಾನಿ ಮೊರಾರ್ಜಿ ದೇಸಾಯಿ ವೈಯಕ್ತಿಕ ಆಸಕ್ತಿ ವಹಿಸಿ ತಮಗೆ ಗೊತ್ತಿದ್ದ ಎಲ್ಲ ಪ್ರಸಿದ್ಧ ವೈದ್ಯರನ್ನು ಕರೆಸಿದರು. ಜರ್ಮನಿಯಿಂದ ಬಂದ ವೈದ್ಯರು ಲೋಹಿಯಾ ಪ್ರಾಸ್ಟೇಟ್ ಗ್ರಂಥಿಗೆ ಕ್ಯಾನ್ಸರ್ ತಗುಲಿದೆಯೆಂದು ಹೇಳಿ, ಅದರ ಚಿಕಿತ್ಸೆ ಆರಂಭಿಸಿದರು. ರಾಷ್ಟ್ರಪತಿಯಿಂದ ಹಿಡಿದು ರಿಕ್ಷಾ ಚಾಲಕನವರೆಗೆ ಎಲ್ಲರೂ ಆಸ್ಪತ್ರೆಗೆ ಧಾವಿಸಿ, ಲೋಹಿಯಾ ಆರೋಗ್ಯಕ್ಕಾಗಿ ಹಾರೈಸಿದರು.

ಪ್ರಜ್ಞೆ ಮರಳಿದಾಗಲೆಲ್ಲ ಲೋಹಿಯಾ 'ನನ್ನ ಕೆಲಸ ಅರ್ಧವಾಗಿದೆ; ಉಳಿದರ್ಧ ಯಾರು ಮಾಡುವರು? ಈ ದೇಶದ ಬಡವರ ಗೋಳನ್ನು ಯಾರು ಪರಿಹರಿಸುವರು?' ಎಂದು ವ್ಯಾಕುಲರಾಗಿ ಬಡಬಡಿಸುತ್ತಿದ್ದರು. ಒಮ್ಮೆ ವೈದ್ಯರು 'ಯೋಚಿಸಬೇಡಿ, ನೀವು ಗುಣಮುಖರಾಗುತ್ತಿದ್ದೀರಿ' ಎಂದಾಗ, 'ಈ ದೇಶದಲ್ಲಿ ರಾಜಕಾರಣಿಯಂತೆ ವೈದ್ಯರೂ ಸುಳ್ಳು ಹೇಳತೊಡಗಿದ್ದಾರೆ' ಎಂದು ಹಾಸ್ಯ ಮಾಡಿದರು. ಆದರೆ ಅದು ಹಾಸ್ಯದ ಮಾತಾಗದೆ, ನಿಜವಾಗಿ ಹೋಯಿತು. ಅಕ್ಟೋಬರ್ ೧೨ರ ರಾತ್ರಿ ಅವರ ಪ್ರಾಣಪಕ್ಷಿ ಹಾರಿಹೋಯಿತು. ಆಸ್ಪತ್ರೆಯ ಸುತ್ತ ಆ ರಾತ್ರಿಯಲ್ಲೂ ಆತಂಕದಿಂದ ಕಾಯುತ್ತಿದ್ದ ಜನಸ್ತೋಮಕ್ಕೆ ಗರ ಬಡಿದಂತಾಯಿತು. 'ಲೋಹಿಯಾ ಅಮರ್ ರಹೇಂ...' ಎಂಬ ಆರ್ತ ಘೋಷಣೆ ಮುಗಿಲು ಮುಟ್ಟಿತು.... ದೇಶದ ಜನತೆಗೆ ಬದಲಾವಣೆಯ ಹುಚ್ಚು ಹತ್ತಿಸಿದ್ದ ಬಡವರ ಬಂಧು, ಬಂಡುಕೋರ ಚಿಂತಕ, ಲೇಖಕ-ಕಲಾವಿದರ ಮಿತ್ರ ಕಣ್ಮರೆಯಾಗಿದ್ದ. ರಾಷ್ಟ್ರ ಶೋಕತಪ್ತವಾಯಿತು....

ಲೋಹಿಯಾರ ಇಚ್ಛೆಯಂತೆಯೇ, ಯಾವುದೇ ಧಾರ್ಮಿಕವಿಧಿ ಇಲ್ಲದೆ ಅವರ ಶವವನ್ನು ದೆಹಲಿಯ ನಿಗಂಬೋಧಿ ಘಾಟ್‌ನ ವಿದ್ಯುತ್ ಚಿತಾಗಾರದಲ್ಲಿ ಸುಡಲಾಯಿತು. ಈ ಸಮಾಜವಾದಿಯ ಶವಯಾತ್ರೆ-ಅಂತ್ಯ ಸಂಸ್ಕಾರಗಳಿಗಾದ ವೆಚ್ಚ, ೧೫೦ ರೂಪಾಯಿಗಳು ಮಾತ್ರ.

೫. ಲೋಹಿಯಾ ಸಮಾಜವಾದ: ಮುಂದೇನು?

ಲೋಹಿಯಾ ಜಗತ್ತಿನಲ್ಲಿ ಏಳು ರೀತಿಯ ಅನ್ಯಾಯಗಳನ್ನು ಗುರುತಿಸಿದ್ದರು. ಸಮಾಜವಾದದ ಮೂಲಕ ಇವುಗಳ ನಿವಾರಣೆಗಾಗಿ 'ಸಪ್ತಕ್ರಾಂತಿ'ಯ ಕಲ್ಪನೆಯನ್ನು ಮುಂದಿಟ್ಟಿದ್ದರು-

೧. ಗಂಡು ಮತ್ತು ಹೆಣ್ಣಿನ ನಡುವೆ ಸಮಾನತೆ.

೨. ಎಲ್ಲ ರೀತಿಯ ರಾಜಕೀಯ ಗುಲಾಮಗಿರಿ ಹಾಗೂ ಸಾಮ್ರಾಜ್ಯಶಾಹಿಯ ನಾಶ.

೩. ದೇಶದ ಜನತೆಯ ನಡುವೆ ಮತ್ತು ದೇಶಗಳ ನಡುವೆ ಆರ್ಥಿಕ ಸಮಾನತೆ.

೪. ಸಾಮೂಹಿಕತೆಯ ಅತಿಗಳ ವಿರುದ್ಧ ಮನುಷ್ಯನ ಖಾಸಗಿತನದ ರಕ್ಷಣೆ.

೫. ವಿಶೇಷ ಪ್ರಾಶಸ್ತ್ಯದ ಮೂಲಕ ಜಾತಿ ನಿರ್ಮೂಲನೆ.

೬. ನಿಶಸ್ತ್ರೀಕರಣ ಮತ್ತು ನಾಗರಿಕ ಅಸಹಕಾರ ಸತ್ಯಾಗ್ರಹದ ಬಳಕೆ.

೭. ಎಲ್ಲ ಬಣ್ಣಗಳ ಜನತೆಯ ನಡುವೆ ಸಮಾನತೆ ಮತ್ತು ಸೌಂದರ್ಯ ಮೀಮಾಂಸೆಯಲ್ಲಿ ಕ್ರಾಂತಿ.

ವಿಶ್ವ ಸರ್ಕಾರ ರಚನೆಯ ಸಾಧ್ಯತೆಗಳ ಬಗ್ಗೆ ಸ್ಟಾಕ್‌ಹೋಂನಲ್ಲಿ ನಡೆದ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಮಂಡಿಸಿದ ಈ ಸಪ್ತಕ್ರಾಂತಿಯ ಮೂಲಕ ಅವರು ಸಮಾನತೆಯ ಹೊಸ ಜಗತ್ತನ್ನು ಕಟ್ಟುವ ಕನಸು ಕಂಡಿದ್ದರು. ಲೋಹಿಯಾ ನಿಧನರಾಗಿ ೪೦ ವರ್ಷಗಳು ಸಂದಿವೆ. ಅವರು ತಮ್ಮ ಗೆಳೆಯರೊಂದಿಗೆ ಕಟ್ಟಿದ ಸಮಾಜವಾದಿ ಪಕ್ಷ, ಜೆ.ಪಿ. ಮಾರ್ಗದರ್ಶನದಲ್ಲಿ ೧೯೭೭ರಲ್ಲಿ ರಚಿತವಾದ ಜನತಾ ಪಕ್ಷದಲ್ಲಿ ವಿಸರ್ಜನೆಯಾಗಿ ಸುಮಾರು ೩೦ ವರ್ಷಗಳಾಗಿವೆ. ಆದರೆ ಭಾರತದಲ್ಲಿ ಸಮಾಜವಾದಿ ಆಂದೋಲನದ ತೊರೆ, ತೆಳುವಾಗಿಯಾದರೂ ಇನ್ನೂ ಹರಿಯುತ್ತಿದೆ. ಲೋಹಿಯಾ ಪ್ರತಿಪಾದಿಸಿದ ಸಮಾಜವಾದವನ್ನು ಬಾಯಿಮಾತಿ ನಲ್ಲಾದರೂ ಎತ್ತಿ ಹಿಡಿಯುವ ಸಣ್ಣ ಪುಟ್ಟ ಪಕ್ಷಗಳು, ಗುಂಪುಗಳು ರಾಷ್ಟ್ರರಾಜಕಾರಣದಲ್ಲಿ ಇನ್ನೂ ಕಾರ್ಯನಿರತವಾಗಿವೆ. ಪಕ್ಷೇತರ ನೆಲೆಯಲ್ಲಿ ಸಮಾಜವಾದಿ ಅಧ್ಯಯನ- ಚಟುವಟಿಕೆಗಳಲ್ಲಿ ನಿರತವಾದ ಅನೇಕ ಸಂಘ-ಸಂಸ್ಥೆಗಳಿವೆ. ಲೋಹಿಯಾ ಹೆಸರಲ್ಲಲ್ಲದಿದ್ದರೂ ಅವರು ಪ್ರತಿಪಾದಿಸಿದ

ಸಮಾಜವಾದಿ ತತ್ವಗಳ ಪ್ರಭಾವದಿಂದಲೋ, ಅಥವಾ ಸಾರ್ವತ್ರಿಕವಾಗಿ ಸಮಾಜವಾದಿ ಆಂದೋಲನ ಉಂಟುಮಾಡಿದ ವಾತಾವರಣದ ಪ್ರಭಾವದಿಂದಲೋ, ಅಲ್ಲಲ್ಲಿ ಜನಪರ ಆಂದೋಲನಗಳನ್ನು ಸಂಘಟಿಸುತ್ತಿರುವ ಸಾಹಸಿಗಳಿದ್ದಾರೆ. ನರ್ಮದಾ ಬಚಾವೋ ಆಂದೋಲನದ ಮೇಧಾ ಪಾಟ್ಕರ್, ಜಲಾನಯನ ಅಭಿವೃದ್ಧಿ ಆಂದೋಲನದ ರಾಜೇಂದ್ರ ಸಿಂಗ್, ಪಂಚಾಯತ್‌ರಾಜ್ ಆಂದೋಲನದ ಇಳಂಗೋವನ್ ಮುಂತಾದವರನ್ನು ಇಲ್ಲಿ ಹೆಸರಿಸಬಹುದು. ಇತ್ತೀಚಿನ ಪಾಳೇಕರರ ನೈಸರ್ಗಿಕ ಕೃಷಿ ಆಂದೋಲನವನ್ನೂ ಈ ಪಟ್ಟಿಗೆ ಸೇರಿಸಬಹುದು. ಲೋಹಿಯಾ ಶಿಷ್ಯ ಕಿಷನ್ ಪಟ್ನಾಯಕ್ ತಾವು ನಿಧನರಾಗುವ ಇತ್ತೀಚಿನವರೆಗೂ ಈ ಎಲ್ಲ ಅಧ್ಯಯನ-ಚಟುವಟಿಕೆ-ಆಂದೋಲನಗಳ ನಡುವೆ ಸಮನ್ವಯ ಸಾಧಿಸುವ ಕೆಲಸ ಕೈಗೊಂಡಿದ್ದರು. ಇದಕ್ಕಾಗಿ ರಾಷ್ಟ್ರಾದ್ಯಂತ ಸಂಚರಿಸಿ, ವಿವಿಧ ರಾಜ್ಯಗಳಲ್ಲಿ ಸಮಾನ ಮನಸ್ಕ ಗುಂಪುಗಳನ್ನು ಸಂಘಟಿಸುವ ಪ್ರಯತ್ನ ಮಾಡಿದ್ದರು. ಈ ಎಲ್ಲ ಪ್ರಯತ್ನಗಳ ಹಿಂದೆ ಇರುವುದು, ಲೋಹಿಯಾ ಪ್ರತಿಪಾದಿಸಿದ ಸಪ್ತಕ್ರಾಂತಿಯನ್ನಾಧರಿಸಿದ ಹೊಸ ಜಗತ್ತನ್ನು ಕಟ್ಟುವ ಬತ್ತದ ಆಕಾಂಕ್ಷೆ; ನಿಲ್ಲದ ಹಠ. ಅಂದರೆ, ಲೋಹಿಯಾ ಹಚ್ಚಿಸಿಟ್ಟ ಸಮಾನತೆಯ ಕಿಚ್ಚು ಇಷ್ಟು ವರ್ಷಗಳ ನಂತರವೂ ಇನ್ನೂ ಆರಿಲ್ಲ; ಅವರು ಪ್ರತಿಪಾದಿಸಿದ ಸಮಾಜವಾದಿ ತತ್ವ ಅಪ್ರಸ್ತುತಗೊಂಡಿಲ್ಲ ಎಂದೇ ಅರ್ಥ. ಆದರೆ ಅವರು ರೂಪಿಸಿಕೊಟ್ಟ ಕಾರ್ಯಕ್ರಮಗಳು?

ರಾಷ್ಟ್ರ ಮತ್ತು ಜಗತ್ತುಗಳೆರಡೂ ಈಗ ಲೋಹಿಯಾ ಕಾಲದಲ್ಲಿದ್ದಂತಿಲ್ಲ. ಅವರ ಸೃಜನಶೀಲ ಸಮಾಜವಾದಿ ದೃಷ್ಟಿಕೋನಕ್ಕೆ ಆಧಾರವಾಗಿದ್ದ ಎರಡು ಬಣಗಳ ಜಗತ್ತು ಈಗ ಏಕ-ಧ್ರುವ ಜಗತ್ತಾಗಿದೆ. ಬಂಡವಾಳಶಾಹಿಯು ಇಂದು ವೇಷ ಮರೆಸಿಕೊಂಡು ನಿಗಮ(ಕಾರ್ಪೊರೇಟ್)ಶಾಹಿಯಾಗಿ ತನ್ನ ಆಕರ್ಷಕ ಭಾವಭಂಗಿಗಳಲ್ಲಿ ಜನರನ್ನು ಆಕರ್ಷಿಸುತ್ತಿದೆ. ಲೋಹಿಯಾ ವಾದಿಸಿದಂತೆ ಕಮ್ಯೂನಿಸ್ಟ್ ಕ್ರಾಂತಿ ಹುಸಿ ಎಂದು ಸಾಬೀತಾಗಿದೆ. ಆದರೆ ಅದೇ ವೇಳೆ, ಅವರು ನಂಬಿದ್ದ ಸಮಾಜವಾದಿ ಕ್ರಾಂತಿಯೂ ಗುರಿ ಮುಟ್ಟದೇ ಹೋಗಿದೆ. ಆದುದರಿಂದ ಇಂದು ಸಮಾಜವಾದಿ ಆಂದೋಲನವನ್ನು ಮುನ್ನಡೆಸಬಯಸುವ ಜನ ಅನೇಕ ಮೂಲಭೂತ ಪ್ರಶ್ನೆಗಳನ್ನು ಎದುರಿಸಿಯೇ ಮುಂದೆ ಹೋಗಬೇಕಾಗಿದೆ—ಸಮಾಜವಾದದ ಗೊತ್ತು ಗುರಿಗಳ ಬಗೆಗೆ ಮತ್ತು ಸಮಾಜವಾದಿ ಆಂದೋಲನದ ಚಾಲೂ-ಚಹರೆಗಳ ಬಗೆಗೆ. ಮುಖ್ಯವಾಗಿ ಈ ಎರಡು ಪ್ರಶ್ನೆಗಳು : ಸ್ವತಃ ಲೋಹಿಯಾ ಅವರೇ ತಮ್ಮ ಬದುಕಿನ ಕೊನೆಯ ಹೊತ್ತಿಗೆ ತಾವೇ ರೂಪಿಸಿದ ಸಮಾಜವಾದಿ ಆಂದೋಲನ ಮತ್ತು ಕಾರ್ಯಕ್ರಮಗಳಿಂದ ಸುಸ್ತಾಗಿ ಹೋಗಿದ್ದರೇಕೆ? ಜನತೆ, ಲೋಹಿಯಾ ಅಥವಾ ಅವರ ಮಿತ್ರರು ಪ್ರತಿಪಾದಿಸಿದ ಸಮಾಜವಾದಿ ರಾಜಕಾರಣಕ್ಕೆ ಬೆಂಬಲ ನೀಡದೆ, ನೆಹರೂ ಮತ್ತು ಇಂದಿರಾಗಾಂಧಿಯವರ (ಅಥವಾ

ಕಾಂಗ್ರೆಸ್) ಮೂಲಕ ವ್ಯಕ್ತವಾದ ಅದರ ದುರ್ಬಲ ಅನುಕರಣೆಗೇಕೆ ಬೆಂಬಲ ವ್ಯಕ್ತಪಡಿಸಿದರು?

ಸಮಾಜವಾದಿ ಆಂದೋಲನದ ಪ್ರಾಮಾಣಿಕತೆಯನ್ನಾಗಲೀ ಸದುದ್ದೇಶವನ್ನಾಗಲೀ ಯಾರೂ ಪ್ರಶ್ನಿಸಲಾರರಾದರೂ, ಅದು ನಡೆದ ಮಾರ್ಗವೇನಾದರೂ ಜನರಲ್ಲಿ ಅಪನಂಬಿಕೆ ಹುಟ್ಟಿಸಿತೆ? ಎಂಬ ಪ್ರಶ್ನೆ ಕೇಳಿಕೊಳ್ಳಲು ಅವಕಾಶವಿದೆ. ಲೋಹಿಯಾ ತಮ್ಮ ಉಜ್ವಲ ಪ್ರತಿಭೆಗೆ ತಾವೇ ಮಾರುಹೋಗಿ, ಇದರಿಂದಾಗಿ ಆಂದೋಲನ ಏಕವ್ಯಕ್ತಿ ಪ್ರದರ್ಶನವಾಗಿ ಮಾರ್ಪಟ್ಟಿತೆ? ಇದರ ಪರಿಣಾಮವಾಗಿ ಆಂದೋಲನ ಮತ್ತು ಜನತೆಯ ನಡುವೆ ಹೊಂದಾಣಿಕೆ- ಮರುಹೊಂದಾಣಿಕೆಗಳನ್ನು ಸಾಧ್ಯಮಾಡಬಹುದಾಗಿದ್ದ ನಾಯಕತ್ವ-ವೈವಿಧ್ಯತೆ ಹಾಗೂ ಸಮಾಲೋಚನಾ ಸಂಪನ್ಮೂಲಗಳ ಕೊರತೆಯುಂಟಾಯಿತೇ? ಗಾಂಧೀಜಿ ಬ್ರಿಟಿಷ್ ಸರ್ಕಾರದ ವಿರುದ್ಧ ರೂಪಿಸಿದ ನಾಗರಿಕ ಅಸಹಕಾರ ಸತ್ಯಾಗ್ರಹವನ್ನು ಸ್ವತಂತ್ರ ಭಾರತದ ಸಮಾಜವಾದಿ ಹೋರಾಟದ ಅಸ್ತ್ರವನ್ನಾಗಿ ಮಾರ್ಪಡಿಸುವಾಗ, ಅದರಲ್ಲಿನ ಧಾರ್ಮಿಕ ಅಂಶ ಅನ್ಯಾಯಕ್ಕೊಳಗಾದವರ ಬಗ್ಗೆ ಕರುಣೆ ಬಹುತೇಕ ಮಾಯವಾಗಿ ಅನ್ಯಾಯವೆಸಗಿದವರ ಮೇಲಿನ ಕ್ರೋಧ ಮಾತ್ರ ಅಭಿವ್ಯಕ್ತಿ ಪಡೆಯಿತೇ? ಈ ಮಾರ್ಪಾಟಿನಲ್ಲಿ ರೂಪುಗೊಂಡ ಧರಣೆ, ಘೇರಾವೋ, ಬಂದ್ ಮುಂತಾದ ಪ್ರತಿಭಟನೆಯ ಅಸ್ತ್ರಗಳು ಎಷ್ಟರಮಟ್ಟಿಗೆ ಜನತೆಯ ವಿಶ್ವಾಸ ಗಳಿಸಲು ಸಾಧ್ಯವಾಯಿತು?

ಸಮಾಜವಾದವು ಮಾರ್ಕ್ಸ್‌ವಾದದ ಇಲ್ಲವೇ ಬಂಡವಾಳವಾದದ ಪರಿಷ್ಕೃತರೂಪವಾಗಿ ಕಾಣಿಸಿಕೊಂಡು, ತನ್ನದೇ ಎನ್ನಬಹುದಾದ ಸ್ಪಷ್ಟ ಚಹರೆಯನ್ನು ಪಡೆದುಕೊಳ್ಳುವಲ್ಲಿ ಸೋಲುತ್ತಿರುವ ಬಗ್ಗೆ ಲೋಹಿಯಾ ಅನೇಕಬಾರಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಎಚ್ಚರಿಸಿದ್ದರು. ಆದರೆ ಲೋಹಿಯಾ ಮೂಲಕವಾದರೂ ಅದು ಅಂತಹ ಸ್ಪಷ್ಟ ಚಹರೆಯನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಯಿತೇ? ಇಂತಹ ಚಹರೆಗೆ ಮೂಲ ಆಧಾರವಾಗಿ ಅವರು ಪ್ರತಿಪಾದಿಸಿದ ಸಣ್ಣ ಯಂತ್ರ ಘಟಕ ತಂತ್ರಜ್ಞಾನ ಮತ್ತು ದಿನಬಳಕೆ ವಸ್ತುಗಳ ಆಧುನೀಕರಣದ ಮೇಲಿನ ನಿಯಂತ್ರಣ, ಎಷ್ಟರಮಟ್ಟಿಗಿನ ವಾಸ್ತವಿಕ ಪ್ರಜ್ಞೆಯಿಂದ ಕೂಡಿದುದು? ಮನುಷ್ಯನ ಚಿತ್ತವೃತ್ತಿಯ ನಿಯಂತ್ರಣ ಮಾಡದೇ ಇದು ಸಾಧ್ಯವಾದೀತೇ? ಸಾಗರಕ್ಕೆ ಅಣೆಕಟ್ಟು ಕಟ್ಟುವಂತಹ ಈ ಪ್ರಯತ್ನಕ್ಕೆ, ಸಮಾಜವಾದಿ ಆಂದೋಲನ ಎಷ್ಟರಮಟ್ಟಿಗಿನ ಸಿದ್ಧತೆ ಕೈಗೊಂಡಿತ್ತು? ಇಂತಹ ಆಂದೋಲನಗಳನ್ನು ನಡೆಸಲು ಪಕ್ಷ ಎಷ್ಟು ಸಮರ್ಥವಾಗಿತ್ತು? ಇದಕ್ಕೆಲ್ಲ ಗಾಂಧೀಜಿ ನಿರ್ಮಿಸಿದ್ದ ವಾತಾವರಣವೇ ಸಾಕು ಎಂದು ಅದು ಮುಗ್ಧವಾಗಿ ನಂಬಿತ್ತೇ?

ಲೋಹಿಯಾ ತಾವು ಕಟ್ಟಿದ ಆಂದೋಲನ ಹೊರಲಾಗದಂತಹ ಆದರ್ಶಗಳನ್ನು ಅದರ ತಲೆಯ ಮೇಲೆ ಇಟ್ಟಿದ್ದರು. ಹಾಗಾಗಿಯೇ ಲೋಹಿಯಾ ಸಮಾಜವಾದ ಹೊರಗೆ ನಿಂತು ನೋಡಿದರೆ ಅರ್ಥಪೂರ್ಣವೂ, ಆಕರ್ಷಕವಾಗಿಯೂ ಕಾಣುತ್ತದೆ.

ಒಳಹೊಕ್ಕರೆ ತಲೆಭಾರ ಶುರುವಾದಂತೆನಿಸುತ್ತದೆ... ದೊಡ್ಡ ತಾತ್ವಿಕರಾಗಿದ್ದ ಲೋಹಿಯಾ ವಸ್ತು ಮತ್ತು ಪ್ರಜ್ಞೆ, ಕ್ರೋಧ ಮತ್ತು ಕರುಣೆ, ವ್ಯಕ್ತಿ ಮತ್ತು ಸಮಾಜ, ರಾಷ್ಟ್ರ ಮತ್ತು ವಿಶ್ವ ಮುಂತಾದ ದ್ವಂದ್ವಗಳನ್ನು ಒಪ್ಪದವರು. ಅವುಗಳನ್ನು ತಮ್ಮ ಸೂಕ್ಷ್ಮ ಚಿಂತನೆಯ ಮೂಲಕ ಏಕತ್ರಗೊಳಿಸಿ ಸಮಾಜವಾದಿ ಆಂದೋಲನದ ತಾತ್ವಿಕತೆ ಕಟ್ಟಿದವರು. ಆದರೆ ಈ ತಾತ್ವಿಕತೆಯ ಸೂಕ್ಷ್ಮತೆಯನ್ನು ಜನಸ್ತೋಮವಿರಲಿ, ಅವರ ಪಕ್ಷದ ಇತರ ನಾಯಕರು ಮತ್ತು ಕಾರ್ಯಕರ್ತರು ಅರಿಯುವ ಬಗೆ ಹೇಗೆ? ಹಾಗಾಗಿಯೇ ಅವರ ಅನೇಕ ತತ್ವ-ಕಾರ್ಯಕ್ರಮಗಳು ಸಮಾಜವಾದಿ ದೃಷ್ಟಿ-ಕೇಂದ್ರವನ್ನು ಕಳೆದುಕೊಂಡು, ಪರಿಣಾಮದಲ್ಲಿ ಚದುರಿಹೋದವು. ಅವರ ಜಾತಿ ವಿನಾಶ ಆಂದೋಲನ ಬ್ರಾಹ್ಮಣ ವಿರೋಧಿ ಆಂದೋಲನವಾಗಿ ಚದುರಿಹೋದದ್ದು ಹೀಗೇ. ಹಾಗೇ ಅವರ ವಿಶೇಷ ಪ್ರಾಶಸ್ತ್ಯ ತತ್ವ, ಹಿಂದುಳಿದ ಜಾತಿವಾದಕ್ಕೆ ದಾರಿ ಮಾಡಿಕೊಟ್ಟು ಸಮಾಜವಾದದ ರುಚಿಯನ್ನೇ ಕೆಡಿಸಿದೆ. ಆಡಳಿತ ವಿಕೇಂದ್ರೀಕರಣ, ಅಧಿಕಾರ ಹಾಗೂ ಸಂಪನ್ಮೂಲಗಳನ್ನು ಹರಿದು ತಿನ್ನುವ ವ್ಯವಸ್ಥೆಯಾಗಿ ಮಾರ್ಪಾಡಾಗಿದೆ; ಜಾಗತಿಕ ಸರ್ಕಾರದ ಪರಿಕಲ್ಪನೆ, ಜಾಗತೀಕರಣದಲ್ಲಿ ಕೊನೆಗೊಂಡಿದೆ. ಇನ್ನು ಭಾಷಾ ನೀತಿ, ಜಾಗತೀಕರಣದ ಹೊರ ಹೊಡೆತಗಳನ್ನೂ ತಾಳಲಾಗದಷ್ಟು ದುರ್ಬಲವಾಗಿಹೋಗಿದೆ: ಇಂಗ್ಲಿಷ್ ಇಲ್ಲದೆ ಭಾರತ ಬೆಳೆಯದು ಎನ್ನುವ ವಾತಾವರಣ ನಿರ್ಮಾಣವಾಗಿದೆ! ಹಾಗೇ, 'ಕಾಂಗ್ರೆಸ್ಸೇತರವಾದ' ಎಂಬ ಲೋಹಿಯಾರ ಸಮಯಪ್ರಜ್ಞೆಯ ರಾಜಕಾರಣ ನಂತರದ ವರ್ಷಗಳಲ್ಲಿ ಸಮಯಸಾಧಕ ರಾಜಕಾರಣವಾಗಿ ಅವನತಿಗೊಂಡು, ಸಮಾಜವಾದದ ಸ್ವರೂಪವನ್ನೇ ಸ್ಥೂಲಗೊಳಿಸಿದೆ.

ಹಾಗಾದರೆ ಲೋಹಿಯಾ ಸಮಾಜವಾದಕ್ಕೆ ಭವಿಷ್ಯವಿಲ್ಲವೇ? ಆ ತೀರ್ಮಾನಕ್ಕೆ ಬರುವುದಾದರೆ ಈವರೆಗಿನ ಎಲ್ಲ ಚರ್ಚೆ-ವಿವೇಚನೆಯ ಹಿಂದಿನ ಉತ್ಸಾಹವೇ ಅರ್ಥಹೀನವಾದೀತು. ಸಮಾಜವಾದಿ ಆಂದೋಲನದಿಂದ ಈವರೆಗೆ ನಾವು ಪಡೆದಿರುವುದನ್ನೆಲ್ಲ ಅಲ್ಲಗಳೆಯುವ ಅಚಾರಿತ್ರಿಕವಾದ ನಿಲುವಾದೀತು. ಈ ಆಂದೋಲನ ತಾನು ಹುಟ್ಟಿಸಿದ ನಿರೀಕ್ಷೆಗಳ ಮಟ್ಟಕ್ಕೆ ಗುಣದಲ್ಲಾಗಲೀ, ಗಾತ್ರದಲ್ಲಾಗಲೀ ಬೆಳೆಯಲಾಗಲಿಲ್ಲ ಎಂಬುದೇ ಇಲ್ಲಿನ ವಿಷಾದ. ಸಮಾನತೆ, ಮನುಷ್ಯ ನಾಗರೀಕತೆಯ ಚಿರಂತನ ತುಡಿತ. ಲೋಹಿಯಾ ತಮ್ಮ ಕಾಲಕ್ಕೆ ಪ್ರಸ್ತುತವೆನಿಸಿದ ಸಮಾನತೆಯ ತತ್ವವೊಂದನ್ನು ರೂಪಿಸಿದರು. ಆ ತತ್ವ ಇಂದೂ ನಮ್ಮ ಚರ್ಚೆಯ ಆಸಕ್ತಿ ಕೇಂದ್ರವಾಗಿದ್ದರೆ, ಅದರಲ್ಲೇನೋ ಅಮೂಲ್ಯವಾದದ್ದಿರಲೇಬೇಕು. ಆದುದರಿಂದ ಅದನ್ನು ಶೋಧಿಸಿ, ಪುನರ್‍ರೂಪಿಸುವ ಜವಾಬ್ದಾರಿ ನಮ್ಮದು. ಈ ಸಂಬಂಧ ನಾವು ಅವರು ಪ್ರತಿಪಾದಿಸಿದ ತಂತ್ರಜ್ಞಾನ, ಜಾತಿ, ಭಾಷೆ ಮತ್ತು ವಿಕೇಂದ್ರೀಕರಣ ನೀತಿಗಳನ್ನು, ಈವರೆಗಿನ ನಮ್ಮ ಅನುಭವಗಳ ಬೆಳಕಿನಲ್ಲಿ ಪುನರ್‍ರೂಪಿಸಿ ಪರಸ್ಪರ ಜೋಡಿಸುವ ಅಗತ್ಯವಿದೆ.

ಜಾಗತೀಕರಣ ಸೃಷ್ಟಿಸಿರುವ ವೈವಿಧ್ಯಮಯ ಪದಾರ್ಥ ಪ್ರಪಂಚದ ಮಧ್ಯೆ ಸಮಾಜವಾದ ಪ್ರತಿಪಾದಿಸಿದ್ದ 'ಸರಳ ಸಭ್ಯ ಜೀವನ ಮಟ್ಟ'ದ ಮಾದರಿ ತನ್ನ ಅರ್ಥ-ಆಕರ್ಷಣೆಗಳೆರಡನ್ನೂ ಕಳೆದುಕೊಂಡು, ಪ್ರಗತಿ ವಿರುದ್ಧವಾದ ಸ್ಥಗಿತತೆಯ ಮಾದರಿ ಎನ್ನಿಸಿಕೊಂಡಿದೆ. ಕಳೆದ ೨೫-೩೦ ವರ್ಷಗಳಲ್ಲಿ ಜಾಗತಿಕ ರಾಜಕಾರಣಕ್ಕೆ ಸಮರ್ಪಕವಾಗಿ ಪ್ರತಿಸ್ಪಂದಿಸದೇ ಹೋದ ಸಮಾಜವಾದಿ ರಾಜಕಾರಣದ ಜಡತೆಯೇ ಇದಕ್ಕೆ ಕಾರಣವಾಗಿದೆ. ಆದುದರಿಂದ ಸಮಾಜವಾದೀ ಆರ್ಥಿಕ ನೀತಿಯನ್ನು ಮೀರಿ ಬೆಳೆದು ನಿಂತಿರುವ ಇಂದಿನ ಜಾಗತಿಕ ಆರ್ಥಿಕ ನೀತಿಯ ಸಂದರ್ಭದಲ್ಲಿ, ಹಳೆಯ ಸರಳ-ಸಭ್ಯ ಜೀವನ ಮಟ್ಟದ ಮಾದರಿಯ ಮಂತ್ರ ಜಪಿಸುವುದು ಹಠ ಮಾತ್ರವಾಗುತ್ತದೆ. ಈ ದೃಷ್ಟಿಯಿಂದ ಸಮಾಜವಾದದ ಆರ್ಥಿಕ ನೀತಿಯನ್ನು ಸಮಕಾಲೀನಗೊಳಿಸುವ ಕಡೆ ಗಮನ ಹರಿಸಿ, ಖಾಸಗಿ ಬಂಡವಾಳ ಹಾಗೂ ತಂತ್ರಜ್ಞಾನ ಕುರಿತ ನಿಲುವನ್ನು ಪರಿಷ್ಕರಿಸಿಕೊಳ್ಳಬೇಕಿದೆ. ಕಂಪ್ಯೂಟರ್ ತಂತ್ರಜ್ಞಾನವನ್ನು ಬಳಸಿಕೊಂಡು ಸ್ಥಳೀಯ ಸಣ್ಣ ಬಂಡವಾಳದಾರರ ಒಕ್ಕೂಟವೊಂದನ್ನು ರಚಿಸಲು ಸಾಧ್ಯವೆ? ಆ ಮೂಲಕ ಸ್ಥಳೀಯ ತಂತ್ರಜ್ಞಾನವೆಂಬುದೊಂದನ್ನು ಅಭಿವೃದ್ಧಿ ಪಡಿಸಲು ಸಾಧ್ಯವೇ ಯೋಚಿಸಬೇಕು.

ಜಾತಿ ವಿನಾಶ ಪರಿಕಲ್ಪನೆ ಇಂದು ಜಾತಿ ಸಮಾನತೆಯ ಪ್ರತಿಪಾದನೆಗೆ ಬಂದು ನಿಂತಿದೆ. ಇದಕ್ಕೆ ಮತ್ತೆ ಸಮಾಜವಾದಿ ಚಳುವಳಿಯ ಜಡತೆಯೇ ಕಾರಣವಾಗಿದೆ. ಸಾಮಾಜಿಕ ಹಿಂದುಳಿದಿರುವಿಕೆಯ ಪರಿಕಲ್ಪನೆಯನ್ನು ಪರಿಷ್ಕರಿಸುವ ಮೂಲಕ ಈ ಜಡತೆಯನ್ನು ನೀಗಿ ವಿಶೇಷ ಪ್ರಾಶಸ್ತ್ಯ ತತ್ವವನ್ನು ಸಮಕಾಲೀನ ಪರಿಸ್ಥಿತಿಗನುಗುಣವಾಗಿ ಪ್ರಸ್ತುತಗೊಳಿಸಬೇಕಿದೆ. ಖಾಸಗಿ ಬಂಡವಾಳದ ನಿಗಮಗಳು ರಾಷ್ಟ್ರಾದ್ಯಂತ ಸಮಾನಾಂತರ ಸರ್ಕಾರಗಳಂತೆ ಕಾರ್ಯ ನಿರ್ವಹಿಸುತ್ತಾ ಪರೋಕ್ಷವಾಗಿ ಪ್ರಜಾಪ್ರಭುತ್ವದ ಕಲ್ಪನೆಗೇ ಸವಾಲೊಡ್ಡುತ್ತಿವೆ. ಇಂದಿನ ಈ ಸಂದರ್ಭದಲ್ಲಿ, ಸ್ವಸಹಾಯ ಗುಂಪುಗಳ ಸಂಘಟನೆಯ ಮೂಲಕ ಸಹಕಾರಿ ಆಂದೋಲನವನ್ನು ಪುನಾರಚಿಸಿ, ಸಾಮಾಜಿಕ ಒಡೆತನದ ಪರಿಕಲ್ಪನೆಗೆ ಜೀವ ತುಂಬಿ, ಸ್ಥಳೀಯ ಸರ್ಕಾರಗಳನ್ನು ಬಲಗೊಳಿಸಬೇಕಿದೆ. ಇದು ಜನಭಾಷಾ ಮಾಧ್ಯಮದ ಶಿಕ್ಷಣದ ಮೂಲಕ ಸಿದ್ಧಗೊಂಡ ಜನತಾ ಸಂಘಟನೆಯಿಂದ ಮಾತ್ರ ಸಾಧ್ಯವಾದ್ದರಿಂದ, ಇಂದಿನ ಅಗತ್ಯಗಳಿಗನುಗುಣವಾಗಿ ವ್ಯಾವಹಾರಿಕ ಇಂಗ್ಲಿಷ್ ಕಲಿಕೆಗೂ ಅವಕಾಶವಿರುವ ಏಕರೂಪದ ಶಿಕ್ಷಣ ನೀತಿಯನ್ನು ಸಮಾಜವಾದಿ ಆಂದೋಲನ ಪ್ರತಿಪಾದಿಸಬೇಕಿದೆ.

ಕಿಷನ್ ಪಟ್ನಾಯಕ್ ಹೇಳುತ್ತಿದ್ದಂತೆ, ಇದು ಸಮಾಜವಾದಿಗಳಿಗೆ ಧ್ಯಾನದ ಕಾಲ. ದೊಡ್ಡ ಹೋರಾಟವೊಂದಕ್ಕೆ ಶಕ್ತಿ ಸಂಚಯನ ಮಾಡಿಕೊಳ್ಳುವ ಕಾಲ. ಆದರೆ ಈ ಹೋರಾಟ ಈವರೆಗಿನ ಸಮಾಜವಾದಿ ಹೋರಾಟದಂತೆ ಹೊರ ಹೋರಾಟವಾಗದೆ, ಒಳ ಹೋರಾಟವಾಗಿರಬೇಕು. ಏಕೆಂದರೆ ಈ ಹೋರಾಟವಿರುವುದು ನಮ್ಮ ಮೈ-ಮನ

ಗಳೆರಡನ್ನೂ ನಾಶ ಮಾಡಹೊರಟಿರುವ ಜಾಗತೀಕರಣದ ವಿರುದ್ಧ. ಜಾಗತೀಕರಣ ಮತ್ತೇನೂ ಆಗಿರದೆ, ಲೋಹಿಯಾ ಯಾವುದನ್ನು ಸಾಮ್ರಾಜ್ಯಶಾಹಿ ಶೋಷಣೆಯ ಸಾಧನ ಎಂದು ಕರೆದರೋ ಆ ಬಂಡವಾಳವಾದದ ಅಂತಿಮ ರೂಪವಾಗಿದೆ. ಅದು, ಝುಗಝುಗಿಸುವ ಪದಾರ್ಥ ಪ್ರಪಂಚದ ಆಕರ್ಷಣೆ ಒಡ್ಡಿ, ಆತ್ಯಂತಿಕವಾಗಿ ಜಗತ್ತನ್ನೇ ಒಂದು ಷೇರು ಬಂಡವಾಳ ಉದ್ಯಮವನ್ನಾಗಿ ಪರಿವರ್ತಿಸಿದೆ. ಒಂದು ನಿರ್ದಿಷ್ಟ ದಕ್ಷತೆಯನ್ನು ರೂಢಿಸಿಕೊಳ್ಳುವಲ್ಲಿ ಯಶಸ್ವಿಯಾಗುವ ಜನ ಮಾತ್ರ ಬದುಕುವ ಹಕ್ಕುಳ್ಳವರು ಎಂಬ ತನ್ನ ತತ್ವವನ್ನು ಸತ್ಯದಂತೆ ಪ್ರತಿಪಾದಿಸುತ್ತಿದೆ. ಇಂತಹ ಜಾಗತೀಕರಣದ ವಿರುದ್ಧ ನಮ್ಮೆಲ್ಲರ ಹೋರಾಟ, ಪ್ರಾಥಮಿಕವಾಗಿ ವೈಯಕ್ತಿಕ ಎಚ್ಚರದ ಹೋರಾಟವೇ ಆಗಿರಬೇಕು. ನಮ್ಮ ಆದ್ಯತೆಗಳನ್ನು ಔಚಿತ್ಯ ಮೀರದಂತೆ ಎಚ್ಚರದಿಂದ ರೂಪಿಸಿಕೊಂಡು, ಬದುಕಿನ ಶುಚಿ ರುಚಿಗಳನ್ನು ಕಾಯ್ದುಕೊಳ್ಳುವ ಹೋರಾಟವಿದು. ಈ ಹೋರಾಟದ ಮೂಲಕ ನಾವು ಸಮಾಜವಾದದ ಹೊಸ ಹಾಗೂ ಅವಾಸ್ತವಿಕ ಎನ್ನಿಸದ ನೀತಿ ಸಂಹಿತೆಯನ್ನೂ ರೂಪಿಸಿಕೊಳ್ಳಬಹುದಾಗಿದೆ. ನಿಜ, ಲೋಹಿಯಾ ಸಮಾಜವಾದವನ್ನು ಸತ್ಯ, ಸಮತೆ ಮತ್ತು ಸಂಪದಭಿವೃದ್ಧಿ ಎಂದು ವ್ಯಾಖ್ಯಾನಿಸಿದ್ದರು. ಆದರೆ ಈ ಮೂರು ಒಂದರೊಂದಡನೆ ಸಾಧಿತವಾಗಬೇಕಾದವು ಎಂದೂ ಅವರು ಹೇಳಿದ್ದರು ಎಂಬುದನ್ನು ಅಪಾರ ಸಂಪದಭಿವೃದ್ಧಿಯನ್ನು ಕಾಣುತ್ತಿರುವ ಈ ದಿನಗಳಲ್ಲಿ ನಾವು ಮರೆಯಬಾರದು. ಸಮಾಜವಾದದ ಆಧ್ಯಾತ್ಮಿಕತೆ ಇರುವುದು ಅದು ಪ್ರತಿಪಾದಿಸಿದ ಮಿತಿಗಳುಳ್ಳ ಬದುಕಿನ ಪರಿಕಲ್ಪನೆಯಲ್ಲೇ ಎಂಬುದನ್ನೂ ನಾವು ಇಂದು ನೆನಪಿಡಬೇಕು.

ಜಗತ್ತಿನಾದ್ಯಂತ ಜಾಗತೀಕರಣದ ವಿರುದ್ಧ 'ಇನ್ನೊಂದು ಜಗತ್ತು ಸಾಧ್ಯ' ಎಂಬ ಆಂದೋಲನದ ಮೆಲುಧ್ವನಿ 'ವಿಶ್ವಸಾಮಾಜಿಕ ವೇದಿಕೆ'ಯ ಮೂಲಕ ಈಗಾಗಲೇ ಕೇಳಿಸುತ್ತಿದೆ. ಲೋಹಿಯಾ ಕಲ್ಪಿಸಿಕೊಟ್ಟ ಹೊಸ ಸಮಾಜವಾದಿ ಜಗತ್ತಿನ ಪ್ರತಿಧ್ವನಿಯಂತಿರುವ ಈ ಇನ್ನೊಂದು ಜಗತ್ತಿನ ಆದ್ಯತೆಗಳನ್ನು ನಿರ್ಧರಿಸುವ ಪ್ರಕ್ರಿಯೆಯಲ್ಲಿ ಭಾರತದ ಸಮಾಜವಾದಿಗಳು ಭಾಗವಹಿಸುವ ಮೂಲಕ ಈ ಹೋರಾಟವನ್ನು ಆರಂಭಿಸಬಹುದು. ಇದು ಸದಾ ಏರುತ್ತಲೇ ಹೋಗುವ ಜೀವನಮಟ್ಟದ ಅನಾಹುತಕಾರಿ ನಾಗರೀಕತೆ ವಿರುದ್ಧ ಲೋಹಿಯಾ ನಿರೂಪಿಸಿದ ಒಂದು ಸಭ್ಯ ಜೀವನ ಮಟ್ಟವನ್ನು ಅನ್ವೇಷಿಸಿಕೊಳ್ಳುವ ಹೊಸ ನಾಗರೀಕತೆಯ ಪ್ರಯೋಗವಾಗಿಯೂ ಪರಿವರ್ತಿತವಾಗಬಹುದು. ಆದರೆ ಇದೆಲ್ಲ ಸಾಧ್ಯವಾಗುವುದು, ಹರಡಿ ಹಂಚಿ ಹೋಗಿರುವ ಸಮಾಜವಾದಿಗಳು ತಮ್ಮ ಚಟುವಟಿಕೆಗಳಿಗಾಗಿ, ಮೊದಲ ಉಪಕ್ರಮವಾಗಿ ಒಂದು ಸಮನ್ವಯ ಸಮಿತಿಯನ್ನು ರೂಪಿಸಿಕೊಂಡಾಗ ಮಾತ್ರ. ರಾಜ್ಯಮಟ್ಟದಲ್ಲಾದರೂ ಇದು ಸಾಧ್ಯವಾಗಬೇಕು. ಇಲ್ಲದೇ ಹೋದರೆ ನಾವು ಸಮಾಜವಾದದ ಮಾತಾಡುವುದು ಆತ್ಮದ್ರೋಹದ ಕೆಲಸವಾಗುತ್ತದೆ.

ಕರ್ನಾಟಕದಲ್ಲಿ ಸಮಾಜವಾದಕ್ಕೆ ಗೋಪಾಲಗೌಡರಂತಹ ಧೀರರ ನಾಯಕತ್ವವಿತ್ತು. ಆ ಧೀರತೆಯನ್ನು ಕರ್ನಾಟಕದ ಸಮಾಜವಾದಿಗಳು ಸಾಮೂಹಿಕವಾಗಿ ಪ್ರದರ್ಶಿಸುವ ಕಾಲವೀಗ ಬಂದಿದೆ. ಹಳೆಯ ಶೈಲಿಯಲ್ಲಿ ಚಳುವಳಿ ಕಟ್ಟುವ ಅಗತ್ಯವಾಗಲೀ, ಶಕ್ತಿಯಾಗಲೀ ಸದ್ಯಕ್ಕೆ ಸಮಾಜವಾದಿಗಳಿಗೆ ಇಲ್ಲವಾದರೂ, ತತ್ವದ ನೆಲೆಯಲ್ಲಾದರೂ ನಿರ್ದಿಷ್ಟವಾಗಿ ರಾಷ್ಟ್ರಮಟ್ಟದ ಮತ್ತು ಸಾರ್ವತ್ರಿಕವಾಗಿ ಜಗತ್ತಿನ ರಾಜಕಾರಣಕ್ಕೆ ಪ್ರತಿಸ್ಪಂದಿಸುವ ಅಗತ್ಯವಂತೂ ಇದೆ. ಆ ಮೂಲಕ ನಮ್ಮ ಬದುಕಿಗೆ ಒಂದು ಅರ್ಥವನ್ನೂ, ಬೆಡಗನ್ನೂ ನೀಡಿರುವ ಈ ಚಳುವಳಿಯ ಕನಸನ್ನು ಮುಂದಿನ ಪೀಳಿಗೆಗೆ ದಾಟಿಸುವ ಜವಾಬ್ದಾರಿಯನ್ನಾದರೂ ನಿರ್ವಹಿಸಿದಂತಾಗುತ್ತದೆ. ಸಮಾಜವಾದಿ ಆಂದೋಲನವನ್ನು ಕಾಲಕಾಲಕ್ಕೆ ವಿಮರ್ಶಿಸಿ ಉಳಿಸಿ ಬೆಳೆಸುವಲ್ಲಿ ಎಚ್ಚರ ತಪ್ಪಿದ ಸಮಾಜವಾದಿಗಳು ಹೊರಲೇಬೇಕಾದ ಜವಾಬ್ದಾರಿ ಇದು.

ಅನುಬಂಧ

ಮೀಸಲಾತಿ : ಜಾತಿ ಮೀರಿದ ಪ್ರಶ್ನೆ

ಕೇಂದ್ರ ಸರ್ಕಾರದ ಸ್ವಾಮ್ಯಕ್ಕೆ ಸೇರಿದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಶೇಕಡ ೨೭ ರಷ್ಟು ಮೀಸಲಾತಿ ಪ್ರಸ್ತಾಪ ಪ್ರಕಟವಾದಾಗಿನಿಂದ ಈ ಮೀಸಲಾತಿ ವಿರುದ್ಧ ಆರಂಭವಾದ ಪ್ರತಿಭಟನೆಯ ವ್ಯಾಪಕತೆ ಹಾಗೂ ಅದು ಪಡೆದ ಪ್ರಚಾರ; ಮತ್ತು ಇದಕ್ಕೆ ಪ್ರತಿಕ್ರಿಯೆಯಾಗಿ, ನಿಧಾನವಾಗಿಯಾದರೂ ಆರಂಭವಾದ ಮೀಸಲಾತಿ ಪರವಾದ ಮತಪ್ರದರ್ಶನ ಹಾಗೂ ವಾದಗಳ ರಭಸದ ಮಧ್ಯೆ, ಈ ಯಾವುದಾದರೊಂದು ಪಕ್ಷದೊಂದಿಗೆ ಸಂಪೂರ್ಣವಾಗಿ ಗುರುತಿಸಿಕೊಳ್ಳದೆ, ಮೀಸಲಾತಿ ಬಗ್ಗೆ ಮಾತಾಡುವುದೇ ಕಷ್ಟವೆನಿಸತೊಡಗಿದೆ. ಮೀಸಲಾತಿ ಪ್ರಶ್ನೆಯು ಕೇವಲ ಜಾತಿ ಹಿತಾಸಕ್ತಿಗಳ ಆಧಾರದ ಭಾವಾವೇಶದ ವಿವಾದವಾಗಿ ಪರಿವರ್ತಿತವಾಗಿರುವುದೇ, ಇದಕ್ಕೆ ಕಾರಣವಾಗಿದೆ. ಇದು ಮೀಸಲಾತಿ ತತ್ವದ ವಿಕೃತಿಯಲ್ಲದೆ ಮತ್ತೇನಲ್ಲ. ಈ ಹಿನ್ನೆಲೆಯಲ್ಲಿ, ಮೀಸಲಾತಿಯಿಂದಾಗಿ ಪ್ರತಿಭೆಗೆ ಹಿನ್ನಡೆಯಾಗಿ ರಾಷ್ಟ್ರದ ಪ್ರಗತಿಗೆ ಧಕ್ಕೆಯಾಗುವುದೆಂಬ ಮೀಸಲಾತಿ ವಿರೋಧಿಗಳ ಸಮಾನ ಅವಕಾಶಗಳ ಬೇಡಿಕೆಯನ್ನಾಧರಿಸಿದ ಅಮಾಯಕ ವಾದವಾಗಲಿ; ಮೀಸಲಾತಿಯು ಚರಿತ್ರೆಯ ಅನ್ಯಾಯಗಳಿಗೆ ತುತ್ತಾಗುತ್ತಿರುವ ಜನವರ್ಗಗಳಿಗೆ ಒದಗಿಸಲಾಗುತ್ತಿರುವ ನ್ಯಾಯಬದ್ಧವಾದ ಪರಿಹಾರವೇ ಆಗಿದೆಯೆಂಬ ಮೀಸಲಾತಿ ಪರವಾಗಿರುವವರ ಪ್ರತಿ ವಾದವಾಗಲಿ, ಕಳೆದ ನಾಲ್ಕು ದಶಕಗಳಲ್ಲಿನ ಮೀಸಲಾತಿ ಜಾರಿ ಅನುಭವದ ಹಿನ್ನಲೆಯಲ್ಲಿ ಸಂಪೂರ್ಣ ಸತ್ಯವನ್ನು ಬಿಚ್ಚಿಡುತ್ತಿದೆ ಎನ್ನಿಸುವುದಿಲ್ಲ. ಮೀಸಲಾತಿ ವಿರೋಧಿಗಳ ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ವಿಚಾರಣೆ ಸಂಬಂಧ ಸರ್ವೋಚ್ಚ ನ್ಯಾಯಾಲಯವು ಮಧ್ಯ ಪ್ರವೇಶಿಸಿರುವುದರಿಂದಾಗಿ, ಸದ್ಯಕ್ಕೆ ಈ ಸಾಮಾಜಿಕ ಮುಖಾಮುಖಿ–ಹೋರಾಟ ಸ್ಥಗಿತಗೊಂಡಿದೆ. ಆದರೆ ಈ ಹೋರಾಟದ ಎರಡೂ ಕಡೆಯವರು ಎತ್ತಿರುವ ಅನೇಕ ಪ್ರಶ್ನೆಗಳು ನ್ಯಾಯಾಂಗ ಪರಿಹಾರದ ವ್ಯಾಪ್ತಿಯನ್ನು ಮೀರಿದ್ದು, ವ್ಯಾಪಕ ಸಾರ್ವಜನಿಕ ಚರ್ಚೆ ಹಾಗೂ ಒಮ್ಮತದ ಮೂಲಕ ಮಾತ್ರ ಪರಿಹಾರಗೊಳ್ಳಬಲ್ಲವಾಗಿವೆ. ಅಲ್ಲದೆ, ಇಂದು ಅಭಿಪ್ರಾಯಗಳು ಎರಡೂ ಕಡೆ ಭಾವಾವೇಶಕ್ಕೆ ಸಿಕ್ಕಿ ಧ್ರುವೀಕರಣಗೊಂಡು, ವಸ್ತುನಿಷ್ಠ ಚರ್ಚೆ ಸಾಧ್ಯವಾಗದಂತಾಗಿರುವುದು ದುರದೃಷ್ಟಕರ ಸಂಗತಿಯಾಗಿದೆ.

ಜಾತಿ ವ್ಯವಸ್ಥೆಯನ್ನು ಬಾಯಿ ಮಾತಿನ ಹೊರತಾಗಿ, ತಮ್ಮ ಮಿಕ್ಕೆಲ್ಲ ಚಟುವಟಿಕೆಗಳ ನೆಲೆಯಲ್ಲಿ ಒಪ್ಪಿಕೊಂಡಿರುವ (ಇದು ಎಲ್ಲಾ ಜಾತಿಗಳಿಗೂ ಅನ್ವಯಿಸುತ್ತದೆ) ಬಹು ದೊಡ್ಡ ಜನವರ್ಗವನ್ನು ಒಳಗೊಂಡಿರುವ ಭಾರತೀಯ ಸಮಾಜದಲ್ಲಿ ಅಸಮಾನತೆ

ಅಂತರ್ಗತವಾಗಿದೆ. ಮೀಸಲಾತಿ ಈ ಅಸಮಾನತೆಯನ್ನು ತೊಡೆದು ಹಾಕಿ ಸಮಾಜವನ್ನು ಜಾತಿವ್ಯವಸ್ಥೆಯ ಬಂಧನದಿಂದ ಬಿಡುಗಡೆಗೊಳಿಸುವ ಆಶಯ ಹೊಂದಿದೆ. ಹೀಗಾಗಿ ಮೀಸಾಲಾತಿಯನ್ನು ವಿರೋಧಿಸುವುದು ಎಂದರೆ ಸಮಾನತೆಯನ್ನು ವಿರೋಧಿಸುತ್ತಾ, ಜಾತಿ ವ್ಯವಸ್ಥೆಯನ್ನು ಒಪ್ಪಿಕೊಳ್ಳುವುದೇ ಆಗಿದೆ. ಇಂತಹ ಸರಳ ಸತ್ಯ 'ಕಲಿತ'ವರಿಗೆ ಅರ್ಥವಾಗುತ್ತಿಲ್ಲ ಎಂದರೆ ಆಶ್ಚರ್ಯವಾಗುತ್ತದೆ. ಆದರೆ ಇವರ ಈ ವಿರೋಧವನ್ನು ಮನುವಾದದ ಹೆಸರಿನಲ್ಲಿ ಮೇಲ್ಜಾತಿ ಮಾನಸಿಕತೆ ಎಂದು ದೂಷಿಸಿ ಕೈ ತೊಳೆದುಕೊಳ್ಳುವವರು, ಕೆಳ ಜಾತಿ ಮಾನಸಿಕತೆಯ ದೂಷಣೆಗೆ ಒಳಗಾಗಬೇಕಾಗುತ್ತದೆ. ಈಗ ಪ್ರಸ್ತಾಪಿಸಲ್ಪಟ್ಟಿರುವ ಮೀಸಲಾತಿಯು ಮಂಡಲ್ ವರದಿ ಶಿಫಾರಸುಗಳ ವಿಸ್ತರಣೆಯೇ ಆಗಿದ್ದು, ಈವರೆಗೆ ಕೇಂದ್ರ ಸರ್ಕಾರದ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ವಿಸ್ತರಿಸದಿದ್ದ ಮೀಸಲಾತಿಯನ್ನು ಈಗ ವಿಸ್ತರಿಸಲಾಗುತ್ತಿದೆಯಷ್ಟೇ. ಅದಕ್ಕೇಕೆ ಇಷ್ಟು ರಂಪ? ಈ ಪ್ರಶ್ನೆಯ ಹಿಂದೆ ಅನೇಕ ಪ್ರಶ್ನೆಗಳಿವೆ.

ಮೊದಲನೆಯದು, ಈವರೆಗೆ ಸುಮ್ಮನಿದ್ದ ಸರ್ಕಾರ ಇದ್ದಕ್ಕಿದ್ದಂತೆ ಈಗೇಕೆ ಈ ಕ್ರಮಕ್ಕೆ ಕೈ ಹಾಕಿದೆ? ವೋಟ್ ಬ್ಯಾಂಕ್ ರಾಜಕೀಯವೇ ಇದರ ಉದ್ದೇಶವೇ? ಎರಡನೆಯ ಪ್ರಶ್ನೆ, ಉನ್ನತ ಶಿಕ್ಷಣ ಹಂತದವರೆಗೆ ಮೀಸಲಾತಿ ಪಡೆದಿರುವ ವರ್ಗಗಳೇಕೆ ಮೀಸಲಾತಿ ಇಲ್ಲದೇ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯಲಾಗುತ್ತಿಲ್ಲ? ಆರ್ಥಿಕ ಅನುಕೂಲತೆಯ ಜೊತೆಗೇ ಸಾಕಷ್ಟು ಸಾಮಾಜಿಕ ಪ್ರತಿಷ್ಠೆಯನ್ನೂ ಹೊಂದಿರುವಂತಹ ಗಣನೀಯ ಜಾತಿ ಸಮೂಹವನ್ನು ಒಳಗೊಂಡಿರುವ ಹಿಂದುಳಿದ ವರ್ಗಗಳಿಗೆ ಶಿಕ್ಷಣದ ಕೊನೆಯ ಹಂತದವರೆಗೂ ಮೀಸಲಾತಿ ನೀಡುವುದು, ಆ ವರ್ಗಗಳಲ್ಲಿನ ಪ್ರಯತ್ನಶೀಲತೆಯನ್ನೇ ಕುಂಠಿತಗೊಳಿಸಬಹುದಲ್ಲವೇ? ಇದು ಮೂಲತಃ ಆ ವರ್ಗಗಳಿಗೆ ಮಾಡುವ ಅನ್ಯಾಯವಲ್ಲವೇ? ಈ ಪ್ರಶ್ನೆಗಳನ್ನು ದಾಟಿಕೊಂಡೇ ಮೀಸಲಾತಿ ವಿರೋಧಿಗಳು ಉಂಟು ಮಾಡಿರುವ ರಂಪವನ್ನು ಎದುರಿಸಬೇಕಾಗುತ್ತದೆ.

ಯಾವುದೇ ಸರ್ಕಾರ ಕೈಗೊಳ್ಳುವ ಯಾವುದೇ ಕ್ರಮಕ್ಕೆ ರಾಜಕೀಯ ಆಯಾಮ ಇದ್ದೇ ಇರುತ್ತದೆ. ತಾನು ಕೈಗೊಂಡ ಕ್ರಮಗಳ ಮೂಲಕ ಜನ ಬೆಂಬಲ ಗಳಿಸಿಕೊಳ್ಳಲೆತ್ನಿಸುವುದು ಸರ್ಕಾರದಲ್ಲಿರುವ ರಾಜಕೀಯ ಪಕ್ಷಗಳ ಸಹಜ ಹಕ್ಕು. ಆದರೆ ಆ ಕ್ರಮ ರಾಜ್ಯ-ರಾಷ್ಟ್ರದ ಒಳಿತಿಗಾಗಿಯೋ ಅಲ್ಲವೊ ಎಂಬ ಪ್ರಶ್ನೆಯಷ್ಟೇ ಇಲ್ಲಿ ಮುಖ್ಯ. ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿರುವ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ ವಿದ್ಯಾರ್ಥಿ ಸಮೂಹ ಹಾಗೂ ಶಿಕ್ಷಕ ವೃಂದದ ಜಾತಿವಾರು ಅಂಕಿ ಅಂಶಗಳನ್ನು ಗಮನಿಸಿದರೆ, ಈ ಪ್ರಶ್ನೆಗೆ ಉತ್ತರ ಸಿಗುತ್ತದೆ. ದೇಶದ ಜನಸಂಖ್ಯೆಯಲ್ಲಿ ಶೇಕಡಾ ೫೨ರಷ್ಟಿರುವ (ಇದನ್ನು ಇಂದಿನ ಸ್ಥಿತಿಯಲ್ಲಿ ಖಚಿತಪಡಿಸಿಕೊಳ್ಳಲು, ಜಾತಿ ಜನಸಂಖ್ಯಾ ಗಣತಿ ಅತ್ಯವಶ್ಯಕವಾಗಿದೆ) ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಈ ಸಂಸ್ಥೆಗಳಲ್ಲಿರುವುದು ಶೇಕಡಾ ೧೦ಕ್ಕೂ ಕಡಿಮೆ! ಅಂದರೆ ಸರ್ಕಾರವು ಸಮಾಜದ ಎಲ್ಲ ವರ್ಗಗಳಿಂದ ಪಡೆದ ಹಣವನ್ನು-ಎಳು ಸಾವಿರ ಕೋಟಿ ರೂಪಾಯಿಗಳನ್ನು-

ಒಂದು ಸೀಮಿತ ಗಾತ್ರದ ವರ್ಗಕ್ಕಷ್ಟೇ ಖರ್ಚು ಮಾಡುತ್ತಿದೆ. ಈ ಚಿಕ್ಕ ವರ್ಗದಲ್ಲಿ ಅತಿ ದೊಡ್ಡ ಪಾಲನ್ನು ಒಂದು ಜಾತಿಯಷ್ಟೇ–ಬ್ರಾಹ್ಮಣ–ಪಡೆಯುತ್ತಿದೆ. ಇದು ಹೇಗೆ ಸಾಧ್ಯವಾಯಿತು? ಹಾಗೂ ಇದು ಎಷ್ಟು ನ್ಯಾಯಬದ್ಧವಾದ ಪಾಲಾಗಿದೆ?

ತಾವು ತಮ್ಮ ಪ್ರತಿಭೆಯಿಂದ ಪಾಲು ಪಡೆದಿರುವುದಾಗಿ ಮೇಲ್ಜಾತಿ ಜನರ ವಕ್ತಾರರು ಹೇಳಿಕೊಳ್ಳುತ್ತಾರೆ. 'ಮುಕ್ತ ಸ್ಪರ್ಧೆ'ಯಲ್ಲಿ 'ಜಯಶಾಲಿ'ಗಳಾದ ಈ ಜನ ಹೀಗೆ ಹೇಳಿಕೊಳ್ಳುವುದು ಸಹಜವೂ, ಮೇಲ್ನೋಟಕ್ಕೆ ಸರಿಯೂ ಆಗಿದೆ. ಆದರೆ ಸ್ಪರ್ಧೆಯಲ್ಲಿ ಇತರರನ್ನು–ಸಮಾಜದ ಬಹು ದೊಡ್ಡ ಭಾಗವನ್ನು–ಸೋಲಿಸಬಲ್ಲ 'ಪ್ರತಿಭೆ' ಈ ಚಿಕ್ಕ ವರ್ಗಕ್ಕೆ ಎಲ್ಲಿಂದ ಬಂತು? ಹುಟ್ಟಿನಿಂದ ಬಂದದ್ದು ಅದು. ಕೆಲವೇ ಜಾತಿಗಳಿಗೆ ಹುಟ್ಟಿನಿಂದಲೇ ಈ ಪ್ರತಿಭೆ ದತ್ತವಾಗುವುದರ ಮರ್ಮವಾದರೂ ಏನು? ಪ್ರಕೃತಿ ಹಾಗೆ ಮಾಡಲಾರದು. ಹಾಗೆ ಮಾಡಿದರೆ ಅದನ್ನು ಪ್ರಕೃತಿ ಎಂದು ಕರೆಯಲಾಗದು. ಹುಟ್ಟು ಪ್ರತಿಭೆ ಎಂದರೆ ಮತ್ತೇನೂ ಆಗಿರದೆ, ತಲೆಮಾರುಗಳ ಮೂಲಕ ಜೈವಿಕವಾಗಿ ಹರಿದು ಬರುವ ಒಂದು ದಕ್ಷತೆ ಮಾತ್ರ. ಭಾರತದ ಒಂದೊಂದು ಜಾತಿಯೂ ಇಂತಹ ಒಂದೊಂದು ರೀತಿಯ ದಕ್ಷತೆಗೆ ವಾರಸುದಾರನಾಗಿದೆ. ಆದರೆ ಇಂದಿನ ಸಂದರ್ಭದಲ್ಲಿ–ಆಧುನಿಕ ನಾಗರೀಕತೆಯ ಸಂರಚನೆಗಳಲ್ಲಿ–ಅಕ್ಷರ ಜ್ಞಾನದ ವಾರಸುದಾರಿಕೆಗೇ ಪ್ರಾಮುಖ್ಯತೆ ಬಂದಿರುವುದರಿಂದ, ತಲೆ–ತಲೆಮಾರುಗಳಿಂದ ಅಕ್ಷರ ಜ್ಞಾನ ರೂಢಿಸಿಕೊಂಡು ಆ ಶಿಸ್ತಿನಲ್ಲಿ ಪರಿಣಿತವಾದ ಜಾತಿಗಳಲ್ಲಿ ಈ ದಕ್ಷತೆ ಸಹಜವಾಗಿಯೇ ಹೆಚ್ಚಾಗಿರುತ್ತದೆ. ಈ ಜಾತಿಗಳಿಗೆ ಸೇರಿದ ಈಚಿನ ತಲೆಮಾರುಗಳಿಗೆ ಇದು, ಶ್ರಮವಿಲ್ಲದೇ ದತ್ತ ಮಾಡಿಕೊಂಡ 'ಪ್ರತಿಭೆ.' ಆದರೆ ಶತ–ಶತಮಾನಗಳ ಕಾಲದ ಜಾತಿ ವ್ಯವಸ್ಥೆಯಿಂದಾಗಿ ಬಹಳಷ್ಟು ಜಾತಿಗಳು ಈ 'ಪ್ರತಿಭೆ'ಯನ್ನು ಈಗ ಶ್ರಮದಿಂದ ದತ್ತ ಮಾಡಿಕೊಳ್ಳಬೇಕಾಗಿದೆ. ಇಂತಹ ಸಂದರ್ಭದಲ್ಲಿ ತಾವು ಜಯಶಾಲಿಗಳಾಗಿರುವುದು ಮುಕ್ತ ಸ್ಪರ್ಧೆಯಲ್ಲಿ ಎಂದು ಮೇಲ್ಜಾತಿಗಳವರು ಅಥವಾ ಅವರ ವಕ್ತಾರರು ಹೇಳಿಕೊಂಡರೆ, ಅದಕ್ಕಿಂತ ಹಾಸ್ಯಾಸ್ಪದ ಸಂಗತಿ ಇನ್ನೊಂದಿರಲಾರದು.

ಜಾತಿ ವ್ಯವಸ್ಥೆಯೆಂಬುದೇ ಒಂದು ದೊಡ್ಡ ಮೀಸಲಾತಿ ವ್ಯವಸ್ಥೆ. ಒಂದು ಇನ್ನೊಂದನ್ನು ಅತಿಕ್ರಮಿಸಕೂಡದೆಂಬ ಒಪ್ಪಂದದನ್ವಯ ದಕ್ಷತೆ–ಪ್ರತಿಭೆಗಳು ಬೆಳೆಯುವ ರೀತಿಯಲ್ಲಿ ವಿನ್ಯಾಸಗೊಂಡಿದ್ದ ಜಾತಿ ವ್ಯವಸ್ಥೆಯ ಮೀಸಲಾತಿ ಲಾಭವನ್ನು ಯಾವುದೇ ಶ್ರಮವಿಲ್ಲದೆ ಕೇಲವು ಜಾತಿಗಳು ಜನ್ಮತಃ ಪಡೆದು ಕೊಂಡಿವೆ. ಇಂದು ಈ ಮೇಲ್ಜಾತಿಗಳು ಇಂತಹ 'ಲಾಭ'ವನ್ನು ಶ್ರಮವಹಿಸಿ ಪಡೆಯಲೆತ್ನಿಸುತ್ತಿರುವ ಜಾತಿಗಳಿಗೆ ನ್ಯಾಯ ಮತ್ತು ಸಮಾನ ಅವಕಾಶಗಳ ಸಂದೇಶವನ್ನು ಬೋಧಿಸ ಹೊರಟಿರುವುದು ಈ ಮೇಲ್ಜಾತಿ ಪ್ರತಿಭೆಯೆನ್ನುವುದು ಎಷ್ಟು ಅಚಾರಿತ್ರಿಕವಾದುದು ಎಂಬುದನ್ನಷ್ಟೇ ತೋರಿಸುತ್ತದೆ. ಚಾರಿತ್ರ್ಯ ಎಂಬ ಶಬ್ದ, ಚರಿತ್ರೆ ಎನ್ನುವ ಶಬ್ದದಿಂದ ಹುಟ್ಟಿದುದು ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇಂದಿನಮೀಸಲಾತಿ, ಈ ಹಿಂದಿನ ಮೀಸಲಾತಿಯ ದುಷ್ಪರಿಣಾಮಗಳನ್ನು ತೊಡೆದುಹಾಕಲಷ್ಟೇ ಜಾರಿಯಲ್ಲಿರುವುದು ಎಂಬುದನ್ನು ಅರಿಯಲಾಗದವರ ಚಾರಿತ್ರ್ಯ

ಅನುಮಾನಾಸ್ಪದವೆನಿಸಿಕೊಳ್ಳತ್ತದೆ. ಹಿಂದಿನ ವ್ಯವಸ್ಥೆಯ ಲಾಭವನ್ನು ಪಡೆದುಕೊಳ್ಳುತ್ತಿರುವ ಇಂದಿನವರು, ತಮ್ಮ ಹಿಂದಿನವರು ಮಾಡಿದ ತಪ್ಪಿಗೆ (ವಿದ್ಯೆಯ ನಿರ್ಬಂಧ) ನಮಗೇಕೆ ಶಿಕ್ಷೆ ಎಂದು ಕೇಳುವುದು ಕಲಿತವರ 'ಕಲಿತ' ಅಮಾಯಕತನ ಮಾತ್ರವಾದೀತು. ಇನ್ನು ಮೀಸಲಾತಿ ಮೂಲಕ ಶಿಕ್ಷಣ ಪಡೆದವರ ವೃತ್ತಿ ದಕ್ಷತೆ (ಕೆಟ್ಟ ವೈದ್ಯರು, ಕೆಟ್ಟ ಎಂಜಿನಿಯರ್ ಇತ್ಯಾದಿ.,) ಬಗ್ಗೆ ಇವರು ವ್ಯಕ್ತಪಡಿಸುತ್ತಿರುವ ಅನುಮಾನಗಳು, ಬುದ್ಧಿಪೂರ್ವಕ ಅಪಪ್ರಚಾರದ ಉದ್ದೇಶದಿಂದಲೇ ಹೊರಹೊಮ್ಮಿರುವಂತೆ ತೋರುತ್ತವೆ. ಏಕೆಂದರೆ ಮೀಸಲಾತಿಯಲ್ಲಿ ಶಿಕ್ಷಣ ಪಡೆದವರಿಗೆ ಪರೀಕ್ಷೆ ತೇರ್ಗಡೆ ಅಂಕಗಳಲ್ಲಿ ರಿಯಾಯಿತಿಯೇನೂ ಇಲ್ಲ. ಅಲ್ಲದೆ ಈ ಮೀಸಲಾತಿ ವಿರೋಧಿಗಳು ಹಣ (ಕ್ಯಾಪಿಟೇಷನ್) ಕೊಟ್ಟು ಪ್ರವೇಶ ಪಡೆದ ಹಾಗೂ ಅನಿವಾಸಿ ಭಾರತೀಯರಿಗಾಗಿ ಶೇಕಡಾ ೧೫ರ ಮೀಸಲಾತಿಯಡಿಯಲ್ಲಿ ನಡೆಯುವ ಸೀಟುಗಳ ಹರಾಜಿನಲ್ಲಿ ಪ್ರವೇಶ ಪಡೆಯುವ 'ಪ್ರತಿಭಾ'ವಿಹೀನರಿಂದ ಉಂಟಾಗುವ ಅನಾಹುತಗಳ ಬಗ್ಗೆ ಸೊಲ್ಲೇ ಎತ್ತುತ್ತಿಲ್ಲ! ಆದುದರಿಂದ ಇಂದಿನ ಮೀಸಲಾತಿ ವಿರೋಧಿ ಚಳುವಳಿ, ಈ ಅನಾಹುತಗಳ ಬಗ್ಗೆಯೂ ಸೊಲ್ಲೆತ್ತದಿರುವವರೆಗೆ ಜಾತೀಯತೆಯ ಕಳಂಕದಿಂದ ಸಂಪೂರ್ಣ ಮುಕ್ತವಾಗಲಾರದು.

ಇಷ್ಟೆಲ್ಲಾ ವಿಶ್ಲೇಷಣೆಯ ಆಚೆಯೂ ಇನ್ನೊಂದು ಮುಖ್ಯ ಪ್ರಶ್ನೆ ಉಳಿದೇ ಇದೆ. ಅದೆಂದರೆ ಉನ್ನತ ಶಿಕ್ಷಣದವರೆಗೂ ಮೀಸಲಾತಿ ಪಡೆದ ವರ್ಗಗಳೇಕೆ ಉನ್ನತ ಶಿಕ್ಷಣಕ್ಕೂ ಮೀಸಲಾತಿ ಅಗತ್ಯವೆನ್ನಿಸುವಷ್ಟರ ಮಟ್ಟದ ದುಃಸ್ಥಿತಿಗೆ ಈಡಾಗಿವೆ? ಇದನ್ನು 'ಮೀಸಲಾತಿ ಮಾನಸಿಕತೆ' ಎನ್ನಬಹುದೇ? ಮೀಸಲಾತಿಯ ಸುರಕ್ಷತೆಯಡಿಯಲ್ಲಿ ಮಾತ್ರ ಮುನ್ನಡೆಯಬಲ್ಲ ಜಡ ಚೇತನಗಳಾಗಿಬಿಟ್ಟಿಯವೇ ಈ ವರ್ಗಗಳು? ಹಿಂದಿನ ಮೀಸಲಾತಿಯ ಪ್ರೋತ್ಸಾಹದ ಲಾಭ ಪಡೆದುಕೊಂಡು ಮುಂದಿನ ಹಂತಕ್ಕೆ ತನ್ನ ಸ್ವಂತ ಶಕ್ತಿಯಿಂದ ಪ್ರವೇಶ ಪಡೆಯುವ ಸಾಮರ್ಥ್ಯವನ್ನು ಗಳಿಸಿಕೊಳ್ಳಲಾಗದ ವರ್ಗ; ದುರ್ಬಲತೆಯನ್ನೇ ಶಕ್ತಿಯನ್ನಾಗಿ ಬಳಸಿಕೊಳ್ಳಲೆಣಿಸುವ ಪ್ರವೃತ್ತಿ ಬೆಳೆಸಿಕೊಂಡು, ಒಟ್ಟಾರೆ ಸಮಾಜದ ಮುನ್ನಡೆಗೆ ಅಡ್ಡಿಯಾಗಬಹುದಲ್ಲವೇ? ಆದರೆ ಈ ವರ್ಗದ ಕೆಲವರಾದರೂ ಈವರೆಗಿನ ಮುಕ್ತ ಸ್ಪರ್ಧೆಯಲ್ಲಿಯೇ ಈ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಸ್ಥಾನ ಗಳಿಸಿದ್ದಾರೆಂಬ ಅಂಶ, ಈ ಪ್ರಶ್ನೆಯನ್ನು ಈ ವರ್ಗಗಳ ಬಗ್ಗೆ ಸಾರಾಸಗಟಾಗಿ ಕೇಳಲಾಗದೆಂದು ಸೂಚಿಸುತ್ತದೆ. ಅಲ್ಲದೆ, ಪ್ರತಿಕೂಲ ಪರಿಸ್ಥಿತಿಯಲ್ಲೂ ಈ ವರ್ಗದ ಅಭ್ಯರ್ಥಿಗಳು ಮುಕ್ತ ಸ್ಪರ್ಧೆಯಲ್ಲಿ ತೀವ್ರ ಪೈಪೋಟಿ ನೀಡುತ್ತಿದ್ದು, ಈಗಾಗಲೇ ಈ ಸಂಸ್ಥೆಗಳಲ್ಲಿ ತುಂಬಿ ಹೋಗಿರುವ 'ಪ್ರತಿಭಾ'ವಾದಿಗಳ ಅಚಾರಿತ್ರಿಕ ಮಾನಸಿಕತೆಯ ಪೂರ್ವಾಗ್ರಹಗಳಿಂದಾಗಿ, ಆಯ್ಕೆ ಪ್ರಕ್ರಿಯೆಗಳಲ್ಲಿ ತಾಂತ್ರಿಕವಾಗಿ (ಅಂದರೆ ಒಂದೆರೆಡು ಶೇಕಡಾವಾರು ಅಂಕಗಳ ಅಂತರದಲ್ಲಿ) ಹೊರಗುಳಿಯಲ್ಪಟ್ಟಿರುವ ಸಂಭವ ಇಲ್ಲದಿಲ್ಲ. ಅದೇನೇ ಇರಲಿ, ಯಾವುದೇ ಸಂಸ್ಥೆ–ಸಂಘಟನೆಯಲ್ಲಿ, ಚರಿತ್ರೆಯ ಒಂದು ಭಾಗದ– ಅದೂ ಅತ್ಯಲ್ಪ ಭಾಗದ–ವಾರಸುದಾರರು ಮಾತ್ರ ಇರುವುದು ಸಮಾಜದ ಒಟ್ಟಾರೆ ಮುನ್ನಡೆಯ ದೃಷ್ಟಿಯಿಂದ ಒಳ್ಳೆಯದಲ್ಲ. ಆದುದರಿಂದ ಈ ದಿಸೆಯಲ್ಲಿನ ಒಂದು

ನಿರ್ದಿಷ್ಟ ಕಾರ್ಯಕ್ರಮಾಧಾರಿತವಾದ ಸೀಮಿತ ಅವಧಿಯವರೆಗೆ. ಈ ಹಂತದಲ್ಲಿ ಮೀಸಲಾತಿ ಅಗತ್ಯವೆನಿಸುತ್ತದೆ.

ಈ ಸೀಮಿತ ಅವಧಿಯ ಮೀಸಲಾತಿ ಪ್ರಸ್ತಾಪಕ್ಕೆ ನಮ್ಮನ್ನು ತಂದು ನಿಲ್ಲಿಸಿದ ವಿಚಾರ ಲಹರಿಯು, ಮೀಸಲಾತಿ ಕುರಿತಂತೆ ಇನ್ನೂ ಅನೇಕ ಹೊಸ ಪ್ರಸ್ತಾಪಗಳಿಗೆ ದಾರಿ ಮಾಡಿಕೊಡುತ್ತದೆ. ನಾವು ಈವರೆಗೆ ಮೀಸಲಾತಿ ಪರವಾದ ತಾತ್ವಿಕ ಜಿಜ್ಞಾಸೆಯನ್ನಷ್ಟೇ ಮಾಡಿದೆವು. ಅಂದರೆ ಮೀಸಲಾತಿಯು ಸದ್ಯದ ಸಂದರ್ಭದಲ್ಲಿ ತಾತ್ವಿಕವಾಗಿ ಸರಿ ಎಂದು ಹೇಳಿದೆವು. ಆದರೆ ಮೀಸಲಾತಿ ಜಾರಿಗೆ ಬಂದು ಸರಿ ಸುಮಾರು ಐದು ದಶಕಗಳೇ ಕಳೆದಿವೆ. ಮೊದಲ ನಾಲ್ಕು ದಶಕಗಳಲ್ಲಿ ಈ ಮೀಸಲಾತಿಗೆ ಅಂತಹ ಯಾವುದೇ ವಿರೋಧ ಕಂಡು ಬರಲಿಲ್ಲ. ಈಗ ಕಳೆದೊಂದು ದಶಕದಲ್ಲಿ–ವಿಶೇಷವಾಗಿ ಮೀಸಲಾತಿಯ ವಿಸ್ತರಣೆಯ ವಿವಿಧ ಹಂತಗಳಲ್ಲಿ–ಅಪಸ್ವರಗಳೆದ್ದು, ಅದು ವ್ಯಾಪಕಗೊಳ್ಳುತ್ತಿದೆ. ಅಂದರೆ ಮೀಸಲಾತಿ ತತ್ವದ ಬಗ್ಗೆ ಹೆಚ್ಚೇನೂ ತಕರಾರಿಲ್ಲ; ಆದರೆ ಜಾರಿಯಾದ ರೀತಿ–ನೀತಿ ಹಾಗೂ ಅದರ ಅನುಭವಗಳು ಹಲವು ನೆಲೆಗಳಲ್ಲಿ ಪ್ರತಿಭಟನೆಗಳನ್ನು ಹುಟ್ಟುಹಾಕಿವೆ. ಈ ಪ್ರತಿಭಟನೆಗಳ ಒಂದು ನೆಲೆ ಮೀಸಲಾತಿಯ ಸದ್ಯದ ಸ್ವರೂಪವನ್ನು ಪ್ರಶ್ನಿಸುತ್ತಿದ್ದರೆ, ಇನ್ನೊಂದು ನೆಲೆ ಸದ್ಯದ ಜಾಗತೀಕರಣದ ಸಂದರ್ಭದಲ್ಲಿ ಮೀಸಲಾತಿಯ ಪ್ರಸ್ತುತತೆಯನ್ನೇ ಪ್ರಶ್ನಿಸುತ್ತಿದೆ. ಅಂದರೆ ಮೊದಲ ನೆಲೆ ಮೀಸಲಾತಿಯ ಸಾರಾಸಗಟುತನವನ್ನು ಪ್ರಶ್ನಿಸುತ್ತಿದ್ದರೆ, ಎರಡನೆಯ ನೆಲೆ ಅದರ ಸಾರ್ವಕಾಲಿಕತೆಯನ್ನು ಪ್ರಶ್ನಿಸುತ್ತದೆ.

ಒಂದು ಜಾತಿಯಲ್ಲಿ–ಅದು ಮೇಲು ಅಥವಾ ಕೆಳ ಜಾತಿಯೇ ಆಗಿರಲಿ–ನೆಲೆ ನಿಂತವರಿಗೆ, ಈ ಪ್ರಶ್ನೆಗಳು ಅಸಂಗತವಾಗಿ ಕಂಡಾವು. ಆದರೆ ಮೀಸಲಾತಿ ತತ್ವವನ್ನು ತಾತ್ವಿಕವಾಗಿ ಒಪ್ಪಿಕೊಳ್ಳಲು ಸಾಧ್ಯವಾಗುವುದು, ನಾವು ಜಾತಿ ಮೀರಿ ನಿಂತು ಒಟ್ಟಾರೆ ಸಮಾಜದ ಸಾರ್ವತ್ರಿಕ ಆರೋಗ್ಯದ ದೃಷ್ಟಿಯಿಂದ ಯೋಚಿಸಿದಾಗ. ಹೀಗಿರುವಾಗ, ಮೀಸಲಾತಿ ವಿರೋಧವನ್ನು ಅರ್ಥ ಮಾಡಿಕೊಳ್ಳಲು ಕೂಡ ಜಾತಿ ಮೀರಿ ನಿಲ್ಲಬೇಕಾದ್ದು ನಮ್ಮ ಧರ್ಮವೇ ಆಗಿದೆ. ಆದುದರಿಂದ ಮೀಸಲಾತಿ ವಿರೋಧಿ ಪ್ರತಿಭಟನೆಗಳನ್ನು ಜಾತಿ ನೆಲೆಯ ಆಧಾರದ ಮೇಲೆ, ಅಂದರೆ ಕೇವಲ ಮೇಲ್ಜಾತೀಯತೆಯ ಆಧಾರದ ಮೇಲೆ ತಳ್ಳಿ ಹಾಕದೇ (ಹಾಗೆ ಮಾಡಿದವರು ಕೆಳ ಜಾತೀಯತೆಯ ಆರೋಪಕ್ಕೆ ಗುರಿಯಾಗಬೇಕಾಗುತ್ತದೆ); ಐದು ದಶಕಗಳ ಈ ಮೀಸಲಾತಿ ಜಾರಿ ಅನುಭವದ ಹಿನ್ನಲೆಯಲ್ಲಿ ಈ ಪ್ರತಿಭಟನೆಗಳ ನೆಲೆಗಳನ್ನು ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳಲೆತ್ನಿಸಿ ತೀರ್ಮಾನಗಳಿಗೆ ಬರಬೇಕಾಗುತ್ತದೆ.

ಮೊದಲ ನೆಲೆ, ಮೀಸಲಾತಿಯ ಸಾರಾ ಸಗಟುತನದ ಪ್ರಶ್ನೆಯನ್ನೊಳಗೊಂಡದ್ದು. ಹಿಂದುಳಿದ ವರ್ಗಗಳೆಂದು ಗುರುತಿಸಲ್ಪಟ್ಟಿರುವ ಎಲ್ಲ ಜಾತಿಗಳಿಗೂ ಸಮಾನ ಮಾನದಂಡಗಳ ಮೀಸಲಾತಿ ಅಗತ್ಯವೇ ಎಂಬ ಪ್ರಶ್ನೆ ಇದು. ಈ ಹಿಂದುಳಿದ ಜಾತಿಗಳಲ್ಲಿ ಕೆಲವು ಆಧುನಿಕ ಜಮೀನ್ದಾರಿ ಅಥವಾ ಕಸುಬುದಾರಿಕೆಗೆ ಪರಿವರ್ತಿತವಾದ

ವರ್ಗಗಳಾಗಿದ್ದು, ಇವು ಇತರೆ ಹಿಂದುಳಿದ ಜಾತಿಗಳಿಗೆ ಹೋಲಿಸಿದರೆ ಆರ್ಥಿಕ ಹಾಗೂ ಸಾಮಾಜಿಕ ಮುನ್ನಡೆಯ ಚೇತನವನ್ನು ಗಳಿಸಿಕೊಂಡಿರುವಂತಹವುಗಳಾಗಿವೆ. ಈ ವರ್ಗಗಳೇ ಸಹಜವಾಗಿ ಮೀಸಲಾತಿಯ ಪ್ರಯೋಜನದ ಬಹು ಭಾಗವನ್ನು ಪಡೆಯಲು ಶಕ್ಯವಾಗಿವೆ. ಇದು ಅನೇಕ ಮಾದರಿ ಸಮೀಕ್ಷೆಗಳಿಂದ ಸಾಬೀತಾಗಿದೆ. ಇದರ ಪರಿಣಾಮವೆಂದರೆ, ಆಧುನೀಕರಣದ ಅನುಕೂಲಗಳಿಂದ ಇನ್ನೂ ವಂಚಿತವಾಗಿರುವ ಜಾತಿಗಳು ಮೀಸಲಾತಿಯಿಂದಲೂ ವಂಚಿತವಾಗುತ್ತಿವೆ. ಈ ಕಾರಣದಿಂದಾಗಿಯೇ ಸರ್ವೋಚ್ಚ ನ್ಯಾಯಾಲಯವು, ಹಿಂದುಳಿದ ಜಾತಿ ಮೀಸಲಾತಿ ವ್ಯಾಪ್ತಿಯಿಂದ ಅನುಕೂಲಸ್ಥ ವರ್ಗವನ್ನು ಹೊರಗಿಡಬೇಕೆಂದು ಸೂಚಿಸಿದೆ. ಆದರೆ ಇದು ಯಾವುದೇ ರಾಜ್ಯ ಸರ್ಕಾರದ ಮತ್ತು ಕೇಂದ್ರ ಸರ್ಕಾರದ ಗಂಭೀರ ಪರಿಗಣನೆಗೆ ಒಳಗಾಗಿಲ್ಲ. ಹೀಗಾಗಿ ದುರ್ಬಲ ಜಾತಿಗಳಿಗೆ ಬದಲಾಗಿ ಅದರಲ್ಲಿನ ಪ್ರತಿಷ್ಠಿತ ವರ್ಗಗಳೇ ಮೀಸಲಾತಿ ಪಡೆದು ಬರುತ್ತಿರುವುದು ತಮ್ಮ ವರ್ಗಕ್ಕಾಗುತ್ತಿರುವ ಅನ್ಯಾಯವೇ ಆಗಿದೆ ಎಂದು ಭಾವಿಸಿ, 'ಪ್ರತಿಭಾ'ವಾದಿಗಳು ಸದ್ಯದ ಮೀಸಲಾತಿ ಪದ್ಧತಿಯನ್ನು ವಿರೋಧಿಸುತ್ತಿದ್ದರೆ ಆಶ್ಚರ್ಯ ಪಡಬೇಕಿಲ್ಲ. ಆರ್ಥಿಕವಾಗಿ ಮುಂದುವರಿದ ಕೆಳ ಜಾತಿಗಳಿಗೂ ಮೀಸಲಾತಿ ಒದಗಿಸುವುದಾದರೆ, ಆರ್ಥಿಕವಾಗಿ ಹಿಂದುಳಿದ ಮೇಲ್ಜಾತಿಗಳಿಗೂ ಮೀಸಲಾತಿ ಒದಗಿಸಬೇಕಾಗುತ್ತದೆಯೆಂದು ಇವರು ವಾದಿಸಿದರೆ, ಅದನ್ನು ತಳ್ಳಿ ಹಾಕುವಂತೆಯೂ ಇಲ್ಲ. ಅದರೆ ಇದು ಚಾರಿತ್ರಿಕ ಅನ್ಯಾಯದ ವಾದವನ್ನೇ ಅಲ್ಲಗಳೆದು, ಮೀಸಾಲಾತಿ ತತ್ವವನ್ನೇ ಅಪಹಾಸ್ಯಕ್ಕೆ ಈಡು ಮಾಡುತ್ತದೆ. ಕರ್ನಾಟಕ ಸರ್ಕಾರವೂ ಸೇರಿದಂತೆ ಅನೇಕ ಸರ್ಕಾರಗಳು ಯಾವುದೇ ವ್ಯವಸ್ಥಿತ ಸಮೀಕ್ಷೆಗಳ ಆಧಾರವಿಲ್ಲದೆ, ಕೇವಲ ರಾಜಕೀಯ ಒತ್ತಡದಿಂದಾಗಿ ಹೆಚ್ಚೆಚ್ಚು ಜಾತಿಗಳನ್ನು ಮೀಸಲಾತಿ ಪಟ್ಟಿಗೆ ಸೇರಿಸುವ ಮೂಲಕ ಮಾಡಿರುವುದೂ ಇದನ್ನೇ. ಇದರಿಂದಾಗಿ ಮೀಸಲಾತಿ ತತ್ವದ ಕಾರ್ಯಾಚರಣೆಯೇ ದಾರಿ ತಪ್ಪಿ, ಅದರ ಉದ್ದೇಶಗಳೇ ವಿಚಲಿತವಾಗುತ್ತ ಹೋಗಿ, ಸಲ್ಲದ ದಾಳಿಗೆ ಈಡಾಗುತ್ತವೆ– ಈಗ ಆಗಿರುವ ಹಾಗೆ.

ಇದೇ ನೆಲೆಯ ಇನ್ನೊಂದು ಪ್ರಶ್ನೆಯೆಂದರೆ, ಪರಿಶಿಷ್ಟ ಜಾತಿ ಹಾಗೂ ವರ್ಗಗಳಿಗೂ ಅನ್ವಯವಾಗುವಂತೆ, ಒಮ್ಮೆ ಮೀಸಲಾತಿ ಪಡೆದು ಮೇಲ್ಮುಖ ಚಲನೆ ಒಳಗಾದ ಕುಟುಂಬಕ್ಕೆ ಮತ್ತೆ ಮೀಸಲಾತಿ ಸೌಲಭ್ಯ ಬೇಕೇ ಎಂಬುದು. ಅಂದರೆ, ತಂದೆಯೋ ತಾಯಿಯೋ ಒಮ್ಮೆ ಮೀಸಲಾತಿಯಿಂದ 'ಸಾಮಾಜಿಕ ಚೇತನ' ಪಡೆದು ಒಂದು ಹಂತ ತಲುಪಿದ ಮೇಲೂ ಅವರ ಮಕ್ಕಳಿಗೆ ಮೀಸಲಾತಿ ಸೌಲಭ್ಯ ನೀಡುವ ಮೂಲಕ ಆ ಸೌಲಭ್ಯದಿಂದ ವಂಚನೆಯಾಗುವುದಿಲ್ಲವೇ ಎಂಬ ಪ್ರಶ್ನೆ ಇದು. ಅವಕಾಶಗಳು ಕಡಿಮೆಯಾಗುತ್ತಾ, ಸ್ಪರ್ಧೆ ತೀವ್ರವಾಗುತ್ತಿರುವ ಇಂದಿನ ಸಂದರ್ಭದಲ್ಲಿ ಈ ಪ್ರಶ್ನೆ ಹೆಚ್ಚಿನ ಮಹತ್ವ ಪಡೆದುಕೊಳ್ಳುತ್ತದೆ. ನಿಜ, ಇಲ್ಲಿ ಮೊದಲ ಮೀಸಲಾತಿ ಸೌಲಭ್ಯದಿಂದ ಆ ಕುಟುಂಬ ತಲುಪಿರುವ ಸಾಮಾಜಿಕ–ಆರ್ಥಿಕ ಸ್ಥಿತಿಯು, ಆ ಕುಟುಂಬದ ಮುಂದಿನ ತಲೆಮಾರನ್ನು ಮಾನವ ಸಂಪನ್ಮೂಲಗಳ ನೆಲೆಯಲ್ಲಿ ಎಷ್ಟರ ಮಟ್ಟಿಗೆ ಸಜ್ಜುಗೊಳಿಸಿದೆ ಎಂಬುದರ ಆಧಾರದ ಮೇಲೆ ಈ ಹಂತವನ್ನು ನಿರ್ಧರಿಸಬೇಕಾಗಿದೆ. ಉದಾಹರಣೆಗೆ,

ಮೇಲ್ವಿಚಾರಣೆ ಜವಾಬ್ದಾರಿಯುಳ್ಳ ಹುದ್ದೆಗೆ ಸಮನಾದ ಎಲ್ಲ ಹುದ್ದೆಗಳನ್ನು ಆ ಕುಟುಂಬಕ್ಕೆ ಮೀಸಲಾತಿ ನಿಲ್ಲಿಸಲು ನಿರ್ಗಮನ (cut off) ಹಂತದ ಹುದ್ದೆಗಳೆಂದು ಗುರುತಿಸಲು ಸಾಧ್ಯವೇ ನೋಡಬೇಕು. ಹಾಗೇ, ಮೀಸಲಾತಿ ಕಾರ್ಯಕ್ರಮವನ್ನು ಉನ್ನತ ಹುದ್ದೆಗಳಿಗೆ ವಿಸ್ತರಿಸಿದಂತೆ, ಕೆಳ ಹಂತದ ಹುದ್ದೆಗಳಲ್ಲಿ ಮೀಸಲಾತಿ ಈಗ ಎಷ್ಟರ ಮಟ್ಟಿಗೆ ಅಗತ್ಯ ಎಂಬುದನ್ನು ಪರಿಶೀಲಿಸತೊಡಗಬೇಕು. ಇದನ್ನು ವಿವಿಧ ಸಮಾಜಿಕ ಹಿನ್ನೆಲೆಗಳುಳ್ಳ ವೃತ್ತಿಪರರಿಂದ ಕೂಡಿದ ಆಯೋಗಕ್ಕೆ ಒಪ್ಪಿಸಬೇಕು. ಅದರ ಶಿಫಾರ್ಸುಗಳಿಗೆ ಅನುಗುಣವಾಗಿ ಅಗತ್ಯವೆನಿಸಿದರೆ, ಕೆಳ ಹಂತಗಳಿಂದ ಮೊದಲ್ಗೊಂಡು ಮೀಸಲಾತಿಯನ್ನು ಕ್ರಮೇಣ ಶೇಕಡಾವಾರು ಕಡಿಮೆ ಮಾಡುತ್ತಾ ಹೋಗಿ, ಸಂಪೂರ್ಣವಾಗಿ ತೆಗೆದು ಹಾಕುವ ಕಾಲಮಿತಿಯುಳ್ಳ ಕಾರ್ಯಕ್ರಮವೊಂದನ್ನು ರೂಪಿಸಬೇಕು. ಇದಕ್ಕೆ ಮೊದಲಾಗಿ ಪರಿಶಿಷ್ಟ ಜಾತಿ–ವರ್ಗಗಳೂ ಸೇರಿದಂತೆ, ಸಮಾಜದ ಎಲ್ಲ ವರ್ಗಗಳನ್ನೂ ಮಾನಸಿಕವಾಗಿ ಸಿದ್ಧಗೊಳಿಸಬೇಕು. ಈ ಸಂದರ್ಭದಲ್ಲಿ ಉತ್ತರ ಪ್ರದೇಶದಲ್ಲಿ ಝಾಡಮಾಲಿ ಹುದ್ದೆಗಳಿಗೆ ಬ್ರಾಹ್ಮಣರೂ ಅರ್ಜಿ ಸಲ್ಲಿಸಿ, ಪರಿಶಿಷ್ಟ ಜಾತಿ ಸಂಘಟನೆಗಳಿಂದ ಪ್ರತಿಭಟನೆಯನ್ನು ಎದುರಿಸುತ್ತಿರುವ ವಿಚಿತ್ರ ಸನ್ನಿವೇಶವನ್ನು ನಾವು ಬಹು ಎಚ್ಚರಿಕೆಯಿಂದ ಗಮನಿಸಬೇಕಾಗಿದೆ.

ಇನ್ನು ಎರಡನೆಯ ನೆಲೆಯ ಸಾರ್ವಕಾಲಿಕತೆಯ ಪ್ರಶ್ನೆ. ಅಂದರೆ, ಎಷ್ಟು ವರ್ಷ ಈ ಮೀಸಲಾತಿ? ಜಾತಿ ಮೂಲವಾದ ಅಸಮಾನತೆ ಇರುವವರೆಗೆ ಈ ಮೀಸಲಾತಿ ಎಂಬುದು ಇದಕ್ಕೆ ಸರಿಯಾದ ತಾತ್ವಿಕ ಉತ್ತರವಿರಬಹುದು. ಆದರೆ ವಾಸ್ತವ ಮಟ್ಟದ ಉತ್ತರ? ಜಾತಿ–ಮೀಸಲಾತಿ ತತ್ವದ ಮೂಲ ಪ್ರತಿಪಾದಕರಾದ ಡಾ.ಅಂಬೇಡ್ಕರ್‌ರೇ ಮಿಸಲಾತಿಯ ಶಾಶ್ವತ ವ್ಯವಸ್ಥೆಯಾಗಬಾರದೆಂಬ ಎಚ್ಚರದಿಂದ ಹತ್ತು ವರ್ಷಗಳ ನಂತರ ಈ ಮೀಸಲಾತಿ ನೀತಿಯನ್ನು ಮರುವಿಮರ್ಶೆಗೆ ಒಳಪಡಿಸಬೇಕೆಂದು ಸೂಚಿಸಿದ್ದರೂ, ಇಂತಹ ಐದು ಹತ್ತು ವರ್ಷಗಳು ಕಳೆದು ಹೋದರೂ ಮೀಸಲಾತಿ ನೀತಿ ತನ್ನ ವ್ಯಾಪ್ತಿಯ್ನು ಕುಗ್ಗಿಸಿಕೊಳ್ಳುವುದಿರಲಿ, ವಿವಿಧ ರೀತಿಯಲ್ಲಿ ಹಿಗ್ಗಿಸಿಕೊಳ್ಳುತ್ತಲೇ ಹೋಗುತ್ತಿದೆ. ಅಲ್ಲದೆ, ಮುಕ್ತ ಸ್ಪರ್ಧೆ ಆಧಾರಿತ ಜಾಗತೀಕರಣದ ಪ್ರತಿಪಾದಕರಾದ ನಮ್ಮ ಪ್ರಧಾನಿ ಡಾ. ಮನಮೋಹನ ಸಿಂಗರೂ, ಈಚೆಗೆ ಜಾತಿ ಮೀಸಲಾತಿಯ–ಖಾಸಗಿ ವಲಯದಲ್ಲೂ–ಪ್ರತಿಪಾದನೆ ಮಾಡುತ್ತಿದ್ದಾರೆ. ಇದರ ಹಿಂದೆ, ನಿವಾಸಿ ಹಾಗೂ ಅನಿವಾಸಿ ಶ್ರೀಮಂತರಿಗಾಗಿರುವ ಕ್ಯಾಪಿಟೇಷನ್ ಆಧಾರಿತ ಹೊಸ ಹಾಗೂ ಶಾಶ್ವತವಾದ ಮೀಸಲಾತಿ ಪ್ರಭೇದಗಳಿಗೆ ಬೆಂಬಲ ಗಳಿಸಿಕೊಳ್ಳುವ ಹುನ್ನಾರವಿದ್ದರೆ ಆಶ್ಚರ್ಯ ಪಡಬೇಕಾಗಿಲ್ಲ. ಇವೆರಡೂ ನಿಜವಾಗಿಯೂ ಆತಂಕಕಾರಿ ಬೆಳವಣಿಗೆಗಳು. ನಮ್ಮ ದುರ್ಬಲ ವರ್ಗಗಳನ್ನು ಶಾಶ್ವತ ದುರ್ಬಲ ವರ್ಗಗಳನ್ನಾಗಿ ಪರಿವರ್ತಿಸಿ, ಆರ್ಥಿಕ ಸಬಲರ ಸಾಮ್ರಾಜ್ಯ ವಿಸ್ತರಣೆಗೆ ಅವರನ್ನು ಕಾಲಾಳುಗಳಾಗಿ ಬಳಸಬಹುದಾದ ಈ ಬೆಳವಣಿಗೆಗಳು, ಸದ್ಯದ ಮೀಸಲಾತಿ ನೀತಿಯಲ್ಲಿ ಅಂತರ್ಗತವಾಗಿರುವ ಅಪಾಯಗಳನ್ನು ಸಾಬೀತುಪಡಿಸುವಂತಿದೆ. ಹೀಗಾಗಿ ಮೀಸಲಾತಿ ನೀತಿಯು ತನ್ನ ಸದ್ಯದ ಸ್ವರೂಪದಲ್ಲಿ

ತನ್ನೆಲ್ಲಾ ತಾತ್ವಿಕತೆಯನ್ನು ಕಳೆದುಕೊಂಡು, ತನ್ನ ಮೂಲ ಉದ್ದೇಶವಾದ ಸಾಮಾಜಿಕ ಏಕೀಕರಣದ ಆಶಯವನ್ನು ಹುಟ್ಟಿಸುವಲ್ಲಿ ವಿಫಲವಾಗಿದೆ.

ಇದಕ್ಕೆ ಮುಖ್ಯ ಕಾರಣ, ಮೀಸಲಾತಿ ಕಾರ್ಯಕ್ರಮ ವಾಸ್ತವದ ಮಟ್ಟದಲ್ಲಿ ಒಂದು ಲಾಭದ ಜಡ ಸಾಧನವಾಗಿ ಪರಿವರ್ತಿತಗೊಂಡು; ಸಾಮಾಜಿಕ ಎಚ್ಚರದ, ಉನ್ನತಿಯ ಹಾಗೂ ಏಕೀಕರಣದ ಚೈತನ್ಯ-ಶಕ್ತಿಯಾಗಿ ಬೆಳೆದೇ ಇಲ್ಲದಿರುವುದು. ಜಾತಿ ವ್ಯವಸ್ಥೆಯನ್ನು ಪೋಷಿಸಿಕೊಂಡೇ ಮೀಸಲಾತಿ ನೀತಿಯನ್ನು ಜಾರಿಗೆ ತರುತ್ತಿರುವುದರ ದುರಂತವಿದು. ಈ ಸಂಬಂಧ ಸರ್ಕಾರವಾಗಲಿ, ಮೀಸಲಾತಿ ಜಾತಿ ಪ್ರಶ್ನೆ ವಿವಾದಕ್ಕೆ ಸಿಕ್ಕಾಗ ಮಾತ್ರ ಎಚ್ಚರಗೊಳ್ಳುವ ಸಾಮಾಜಿಕ ನ್ಯಾಯ ಚಳುವಳಿಕಾರರಾಗಲಿ ಅಥವಾ ಸಂಘಟನೆಗಳಾಗಲಿ ಯಾವುದೇ ಕಾರ್ಯಕ್ರಮ ಹಾಕಿಕೊಳ್ಳದೇ, ತಂತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವಷ್ಟರಲ್ಲೇ ತೃಪ್ತಗೊಂಡಿವೆ. ಹೀಗಾಗಿ ಈಗ ಮೀಸಲಾತಿಯ ಜೊತೆ ಜೊತೆಗೇ, ಜಾತಿ ವಿನಾಶ ಚಳುವಳಿಯನ್ನು ಸಮರೋಪಾದಿಯಲ್ಲಿ ಪುನಾರಚಿಸಬೇಕಿದೆ. ಅಂತರ್ಜಾತಿ ವಿವಾಹಗಳಿಗೆ ಪ್ರೋತ್ಸಾಹ; ಅವರಿಗೆ ಕೆಲಸದಲ್ಲಿ, ಅವರ ಮಕ್ಕಳಿಗೆ ಶಿಕ್ಷಣದಲ್ಲಿ ಮೀಸಲಾತಿ;ಜಾತಿ ಆಧಾರಿತ ಕಾಲೋನಿಗಳ, ವಿದ್ಯಾರ್ಥಿನಿಲಯಗಳ ಹಾಗೂ ಸಾರ್ವಜನಿಕ ಸಂಘ-ಸಂಸ್ಥೆಗಳ ರದ್ದತಿ; ಎಲ್ಲಾ ಪೂಜಾ ಸ್ಥಳಗಳನ್ನು ಸಾರ್ವಜನಿಕ ಸ್ಥಳಗಳೆಂದು ಘೋಷಿಸಿ, ಅಲ್ಲಿ ಯಾವುದೇ ರೀತಿಯ ಜಾತಿ ತಾರತಮ್ಯ ಆಚರಣೆಗಳನ್ನು ಶಿಕ್ಷಾರ್ಹ ಅಪರಾಧಗಳನ್ನಾಗಿ ಮಾಡುವುದು ಹಾಗೂ ಇದಕ್ಕಾಗಿ ನ್ಯಾಯಾಂಗ ಅಧಿಕಾರಗಳುಳ್ಳ ಪ್ರಾಧಿಕಾರವೊಂದನ್ನು ಸ್ಥಾಪಿಸುವುದು; ಜಾತಿ ಸಂಬಂಧಿ ವೃತ್ತಿಗಳಲ್ಲಿ (ಉದಾ: ಪೂಜಾರಿಕೆ ಹಾಗೂ ಪೌರ ಕಾರ್ಮಿಕ) ವಿಜಾತಿಯವರಿಗೆ ಪ್ರೋತ್ಸಾಹ ಕಾರ್ಯಕ್ರಮ ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಶಾಲಾ ಪಠ್ಯ ಪುಸ್ತಕಗಳಲ್ಲಿ, ಸದ್ಯದ ಸಾಮಾಜಿಕ ರಚನೆಯ ವೈರುಧ್ಯಗಳು ಮತ್ತು ಸರ್ವರ ಹಿತಕ್ಕಾಗಿ ಅವುಗಳನ್ನು ತುರ್ತಾಗಿ ನಿವಾರಿಸಬೇಕಾದ ಅಗತ್ಯವು ಮಕ್ಕಳಿಗೆ ಮನದಟ್ಟಾಗುವಂತೆ, ಜಾತಿ ವ್ಯವಸ್ಥೆ ಚರಿತ್ರೆಯ ಪರಿಚಯವನ್ನು ಅಳವಡಿಸುವುದು ಇತ್ಯಾದಿ ಕಾರ್ಯಕ್ರಮಗಳನ್ನು ಈ ಪುನಾರಚನೆ ಒಳಗೊಂಡಿರಬೇಕು. ಇವರಲ್ಲಿ ಸರ್ಕಾರದ ಜೊತೆಗೆ ಈಗ ಮೀಸಲಾತಿ ಸಂಬಂಧ ಪರಸ್ಪರ ದೂಷಣೆಯಲ್ಲಿ ತೊಡಗಿರುವ ಗುಂಪುಗಳು, ಮೀಸಲಾತಿ ಪರ ಅಥವಾ ವಿರೋಧಿ ಹೋರಾಟಗಳಲ್ಲಿ ತೋರಿದಷ್ಟೇ ಆಸಕ್ತಿಯೊಂದಿಗೆ ಸಕ್ರಿಯವಾಗಿ ಭಾಗಿಯಾಗಬೇಕಿವೆ. ಇಲ್ಲದೇ ಹೋದಲ್ಲಿ ಅವುಗಳ ಸದ್ಯದ ಹೋರಾಟಗಳು ಅನುಮಾನಾಸ್ಪದವೆನಿಸಿಕೊಳ್ಳುತ್ತವೆ.

ಸದಾ 'ದುರ್ಬಲತೆಯ ಸುರಕ್ಷತೆ'ಯಲ್ಲಿರ ಬಯಸುವ ಯಾವುದೇ ಸಾಮಾಜಿಕ ಗುಂಪು, ಒಟ್ಟಾರೆ ಸಮಾಜಕ್ಕೆ ಕಂಟಕಪ್ರಾಯವೇ ಆಗಿರುತ್ತದೆ. ಅದು ಪ್ರತ್ಯೇಕತೆಯಲ್ಲಿ ಸ್ವತಃ ದುರ್ಬಲವಾಗುತ್ತಾ ಹೋಗುವ ಮೂಲಕ ಸಮಾಜದ ಸೃಜನಶೀಲತೆಯನ್ನು ಮುಕ್ಕುಗೊಳಿಸಿ, ಒಟ್ಟಾರೆ ಸಮಾಜದ ಮುಂದುವರಿಕೆಗೂ ಅಡ್ಡಿಯಾಗಿ ನಿಲ್ಲುತ್ತದೆ. ಆದುದರಿಂದ, ಮೀಸಲಾತಿ ಎಂದರೆ ಅವಕಾಶ ವಂಚಿತ ವರ್ಗದವರೆಲ್ಲರಿಗೂ ಎಲ್ಲ

ಹಂತಗಳ ಕೆಲಸ ಕೊಡಿಸುವ ನಿರುದ್ಯೋಗ ಅಥವಾ ಬಡತನ ನಿವಾರಣಾ ಕಾರ್ಯಕ್ರಮವಲ್ಲ. ಬದಲಿಗೆ; ಆ ವರ್ಗಗಳಲ್ಲಿ, ಬದಲಾದ ಸಾಮಾಜಿಕ ಸಂದರ್ಭದಲ್ಲಿ ಇತರ ವರ್ಗಗಳೊಂದಿಗೆ ಒಟ್ಟಾರೆ ಸಮಾಜದ ಹಿತಕ್ಕಾಗಿ ಹಗಲಿಗೆ ಹೆಗಲು ಕೊಟ್ಟು ದುಡಿಯುವ ಹೊಸ ರೀತಿಯ ದಕ್ಷತೆ ಮತ್ತು ಆತ್ಮ ವಿಶ್ವಾಸ ರೂಢಿಸುವ ಸಾಮಾಜಿಕ ಏಕೀಕರಣದ ಪ್ರೇರಕ-ಸಾಧನ ಮಾತ್ರವಾಗಿದೆ ಎಂಬುದನ್ನು ಸಂಬಂಧಪಟ್ಟವರೆಲ್ಲರೂ ಮನಗಾಣಬೇಕಾಗಿದೆ. ಇಲ್ಲದೆ ಹೋದಲ್ಲಿ ಸದ್ಯದ ಮೀಸಲಾತಿ ನೀತಿಯು ಕೆಲವು ವರ್ಗಗಳಲ್ಲಿ ಎಂದೂ ತಣಿಯದ ನಿರಂತರ ಸಾಮಾಜಿಕ ದಾಹವನ್ನೂ, ಇನ್ನು ಕೆಲವು ವರ್ಗಗಳಲ್ಲಿ ಎಂದೂ ಆರದ ಸಾಮಾಜಿಕ ಅಶಾಂತಿಯನ್ನೂ ಉಂಟು ಮಾಡುವ ರಾಕ್ಷಸ ಸಾಧನವಾಗಿ ಪರಿವರ್ತಿತವಾಗುವ ಎಲ್ಲ ಸಾಧ್ಯತೆಗಳಿವೆ. ಇಂದಿನ ಜಾಗತೀಕರಣ ಸಂದರ್ಭದ ಸಾಮಾಜಿಕ-ಆರ್ಥಿಕ-ಸಾಂಸ್ಕೃತಿಕ ಒತ್ತಡಗಳ ಮಧ್ಯೆ ಇಂತಹ ಬೆಳವಣಿಗೆ ಉಂಟುಮಾಡಬಹುದಾದ ಸಾಮಾಜಿಕ ಅನಾಹುತಗಳು ಊಹಾತೀತವಾಗಿವೆ. ಈ ದೃಷ್ಟಿಯಿಂದ ಜ್ಞಾನ ಆಯೋಗದ (Knowledge Commission) ಓರ್ವ ಸದಸ್ಯರು ಮುಂದಿಟ್ಟಿರುವ, ಇನ್ನು ಹದಿನೈದು ವರ್ಷಗಳಲ್ಲಿ ಯಾವುದೇ ಮೀಸಲಾತಿಯ ಅಗತ್ಯವಿಲ್ಲದಂತಹ ಸಾಮಾಜಿಕ ವಾತಾವರಣ ನಿರ್ಮಾಣ ಮಾಡುವುದೆಂದು ಹೇಳಲಾದ, ಸರ್ವರಿಗೂ ಸಮಾನ ಹಾಗೂ ಗುಣಮಟ್ಟದ ಶಾಲಾಶಿಕ್ಷಣ ಕಾರ್ಯಕ್ರಮದ ಪ್ರಸ್ತಾಪವು, ಸಂಬಂಧಪಟ್ಟವರೆಲ್ಲರ ಪರಿಶೀಲನೆಗೆ ಅರ್ಹವಾಗಿದೆ. ಅದೇನೇ ಇರಲಿ, ಸದ್ಯದ ಮೀಸಲಾತಿ ನೀತಿಯನ್ನು ಪೂರಕ ಕಾರ್ಯಕ್ರಮಗಳೊಂದಿಗೆ, ಈವರೆಗಿನ ಅನುಭವದ ಆಧಾರದ ಮೇಲೆ ಅದರಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡುವ ಮೂಲಕ, ಅದು ದೀರ್ಘಕಾಲಿಕ ದೃಷ್ಟಿಯಲ್ಲಿ ಸರ್ವರ ಉನ್ನತಿಗೂ ಬದ್ಧವಾದ ಹಾಗೂ ಒಂದು ಕಾಲಮಿತಿಯಲ್ಲಿ ಅನುಷ್ಠಾನಗೊಳ್ಳಬೇಕಾದ ರಾಷ್ಟ್ರೀಯ ಕಾರ್ಯಕ್ರಮವಾಗಿದೆ ಎಂಬುದನ್ನು ಸಮಾಜದ ಎಲ್ಲ ವರ್ಗಗಳಿಗೆ ಮನವರಿಕೆ ಮಾಡಿಕೊಡಬೇಕಿದೆ.

ಇನ್ನು ಮೀಸಲಾತಿ ಪರವಾಗಿ ಇಂದು ಸಾರಾಸಗಟಾಗಿ ವಾದಿಸುತ್ತಿರುವವರು ಮುಂದಿಟ್ಟಿರುವ ಕೆಲವು ಸಲಹೆ-ಬೇಡಿಕೆಗಳನ್ನು ಪರಿಶೀಲಿಸೋಣ. ಮೊದಲನೆಯದು, ಕುಗ್ಗುತ್ತಿರುವ ಸರ್ಕಾರಿ ವಲಯಕ್ಕೆ ಪ್ರತಿಯಾಗಿ ಹಿಗ್ಗುತ್ತಿರುವ ಖಾಸಗಿ ವಲಯದಲ್ಲಿ ಮೀಸಲಾತಿ ಜಾರಿಯ ಸಲಹೆ. ಇದು ರಾಜಕೀಯವಾಗಿ ಖಾಸಗೀಕರಣವನ್ನು ಒಂದು ನೀತಿಯಾಗಿ ಪರಿಶಿಷ್ಟ ಹಾಗೂ ಹಿಂದುಳಿದ ಜಾತಿ-ವರ್ಗಗಳು ಒಪ್ಪಿಕೊಳ್ಳುತ್ತಿರುವ ಮೊದಲ ಸೂಚನೆಯಾಗಿದೆ. ಇದು ಎಷ್ಟರ ಮಟ್ಟಿಗೆ ಸರಿ ಎಂಬುದನ್ನು ಒತ್ತಟ್ಟಿಗಿಟ್ಟು ಯೋಚಿಸಿದರೂ, ಎಲ್ಲ ರೀತಿಯ ಮೀಸಲಾತಿಗಳನ್ನೂ ಕ್ರಮೇಣ ಕೊನೆಗಾಣಿಸಬೇಕಾದ ಅಗತ್ಯವನ್ನು ಸಮಾಜದ ಹೆಚ್ಚೆಚ್ಚು ಭಾಗಗಳು ಹಿಂದೆಂದಿಗಿಂತ ಇಂದು ಹೆಚ್ಚು ಮನಗಾಣುತ್ತಿರುವಾಗ, ಮೀಸಲಾತಿ ವಿಸ್ತರಣೆಯ ಆ ಸಲಹೆ ಮೊದಲ ನೋಟಕ್ಕೆ ಸರಿಯೆನಿಸುವುದಿಲ್ಲ. ಜೊತೆಗೆ ವೈಯುಕ್ತಿಕ ಸ್ಫೂರ್ತಿ-ಸಾಹಸ ಹಾಗೂ ಮುಕ್ತ ಸ್ಪರ್ಧೆಯನ್ನೇ ನಂಬಿ, ಸಾಮಾಜಿಕ ನ್ಯಾಯವನ್ನು ನಂಬಿದ ಸರ್ಕಾರಿ ವಲಯವನ್ನು ಬಹು ಹಿಂದಿಕ್ಕಿ ಬೆಳೆಯುತ್ತಿರುವ ಖಾಸಗಿ ವಲಯದಲ್ಲೂ ಮೀಸಲಾತಿ ಕೇಳುವುದು, ತಾತ್ವಿಕವಾಗಿ

ವಿರೋಧಾಭಾಸದ ಸಂಗತಿಯಾಗುತ್ತದೆ. ಆದರೆ ಭಾರತದ ಖಾಸಗಿ ವಲಯವು ಲಾಭವೊಂದನ್ನೇ ಗುರಿಯಾಗಿಟ್ಟುಕೊಂಡು, ಸರ್ಕಾರದಿಂದ-ಅಂದರೆ ಜನಸಾಮಾನ್ಯರಿಂದ-ಪೋಷಿಸಲ್ಪಟ್ಟ ನೈಸರ್ಗಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಬಳಸಿಕೊಂಡೇ ಬೆಳೆದಿದೆ. ಈ ವಲಯದಲ್ಲಿನ ಇತ್ತೀಚಿನ ಸಂಸ್ಥೆಗಳಂತೂ-ಮಾಹಿತಿ ಹಾಗೂ ಜೈವಿಕ ತಂತ್ರಜ್ಞಾನಕ್ಕೆ ಸಂಬಂಧಿಸಿದವು-ಕೋಟಿಗಟ್ಟಲೆ ಲಾಭ ಮಾಡಿ, ಸಮಾಜದಲ್ಲಿ ವರಮಾನ ತಾರತಮ್ಯವನ್ನು ತಾರಕಕ್ಕೇರಿಸುವ ಮೂಲಕ ಶ್ರೀಮಂತಿಕೆ ಎಂದರೇ ಸಾಮಾಜಿಕ ಅಶ್ಲೀಲತೆ ಎನ್ನುವಷ್ಟರ ಮಟ್ಟಿಗೆ ಸಾರ್ವಜನಿಕ ಅಭಿರುಚಿ-ಅದ್ಯತೆಗಳನ್ನು ಬುಡಮೇಲುಗೊಳಿಸಿವೆ. ಇದರಿಂದಾಗಿ ಉಂಟಾಗಿರುವ ಸಾಮಾಜಿಕ ಒತ್ತಡಗಳು, ಹೆಚ್ಚುತ್ತಿರುವ ಅಕಾರಣ ಹಿಂಸೆಯ ವೈವಿಧ್ಯ ಹಾಗೂ ಅದರ ಆಧಾರದ ಮೇಲೆ ವಾಣಿಜ್ಯೋದ್ಯಮ ಸಂಸ್ಥೆಗಳಂತೆ ಬೆಳೆಯುತ್ತಿರುವ ಮಾನಸಿಕ ಶಾಂತಿ ಕೇಂದ್ರಗಳು, ಪದೇ ಪದೇ ಭಂಗಗೊಳ್ಳುತ್ತಿರುವ ಕಾನೂನು-ಸುವ್ಯವಸ್ಥೆ ಪ್ರಕರಣಗಳ ಮೂಲಕ ಎದ್ದು ಕಾಣತೊಡಗಿವೆ.

ಅಲ್ಲದೆ ಈ ಸಂಸ್ಥೆಗಳ ಜಾತಿ ಸ್ವರೂಪವಂತೂ, ನಮ್ಮ ಖಾಸಗಿ ವಲಯವು ಮೇಲ್ಜಾತಿಗಳಲ್ಲಿ ಪ್ರಕಟಗೊಳ್ಳುವ ಪ್ರತಿಭೆ-ದಕ್ಷತೆಗಳ ಮುಲಕ ಮಾತ್ರ ತಮ್ಮ ಸ್ವತ್ತು ನಿರ್ಮಾಣವಾಗಬಲ್ಲುದು ಎಂಬ ಮೂಢ ನಂಬಿಕೆಗೆ ತುತ್ತಾಗಿರುವುದನ್ನು ಸಾಬೀತುಪಡಿಸುತ್ತದೆ. ಹೀಗಾಗಿ ಈ ಸಂಸ್ಥೆಗಳ ಸಾಮಾಜಿಕ ಲೆಕ್ಕಪರೀಕ್ಷೆ (Social auditing) ನಡೆಸಿ, ಅವುಗಳಲ್ಲಿ ಸಾಮಾಜಿಕ ಜವಾಬ್ದಾರಿಯ ಅರಿವು ಮೂಡಿಸಬೇಕಿದೆ. ಸಮಾಜ ಸೇವೆ ಎಂದರೆ ದಾನ-ಧರ್ಮ ಮಾತ್ರವಲ್ಲ; ಅದಕ್ಕಿಂತ ಮುಖ್ಯವಾಗಿ, ಅದು ಸಮಾನತೆಯ ಆಶಯವುಳ್ಳ ಮಾನವ ಸಂಪನ್ಮೂಲಗಳ ಅಭಿವೃದ್ಧಿ ಕಾರ್ಯಕ್ರಮ; ಅದರ ಮೂಲಕ ಮಾತ್ರ ಯಾವುದೇ ಉದ್ಯಮ ಸಂಸ್ಥೆ ತನ್ನ ದಕ್ಷತೆಯ ಪರಿಕಲ್ಪನೆಗೆ ಹೊಸ ಆಯಾಮಗಳನ್ನು ಸೇರಿಸಿಕೊಂಡು ತಾನು ಸೃಷ್ಟಿಸುವ ಸ್ವತ್ತಿನ ಮೌಲ್ಯವನ್ನು ಮಾತ್ರವಲ್ಲ, ಮೌಲಿಕತೆಯನ್ನೂ ಹೆಚ್ಚಿಸಿಕೊಳ್ಳಬಲ್ಲುದು. ಇದು ಮಾತ್ರ ತಾನು ಬದುಕುತ್ತಿರುವ ಅಭಿವೃದ್ಧಿಶೀಲ ಅಸಮಾನ ಸಮಾಜದಲ್ಲಿ ನಿಜವಾದ ಹಾಗೂ ಸ್ಥಿರವಾದ ಸಾಧನೆ ಎಂದು ಅವುಗಳಿಗೆ ತಿಳಿ ಹೇಳಬೇಕಿದೆ. ಈ ಸಂಬಂಧವಾಗಿ ಖಾಸಗಿ ವಲಯದ ಆರ್ಥಿಕತೆಯನ್ನೇ ಆಧರಿಸಿದ ಅಮೆರಿಕ, ತನ್ನ ಕರಿ ಜನರ ಸಾಮಾಜಿಕ ಏಕೀಕರಣಕ್ಕಾಗಿ ಅಳವಡಿಸಿಕೊಂಡ ಸಕಾರಾತ್ಮಕ ಕ್ರಿಯಾ ಯೋಜನೆ (Affirmative action) ಯ ಕಡೆ ಅವುಗಳ ಗಮನ ಸೆಳೆಯಬೇಕಾಗಿದೆ.

ಮಾರ್ಟಿನ್ ಲೂಥರ್ ಕಿಂಗ್ ನೇತೃತ್ವದಲ್ಲಿ ಕರಿ ಜನರ ಹಕ್ಕುಗಳಿಗಾಗಿ ನಡೆದ ಚಳುವಳಿಯ ಫಲವಾಗಿ ರೂಪುಗೊಂಡ ನಾಗರಿಕ ಹಕ್ಕುಗಳ ಕಾಯಿದೆಯಡಿ ಅಮೆರಿಕಾ ಸರ್ಕಾರವು, ಕರಿಜನರು ಗಣನೀಯ ಸಂಖ್ಯೆಯಲ್ಲಿರುವ ತನ್ನ ೧೯ ರಾಜ್ಯಗಳಲ್ಲಿ ಈ ಕ್ರಿಯಾ ಯೋಜನೆಯನ್ನು ಜಾರಿಗೊಳಿಸಿ, ಮಿಕ್ಕ ರಾಜ್ಯಗಳಲ್ಲಿ ಅದನ್ನು ಸ್ವಯಂ ಇಚ್ಛೆಗೆ ಬಿಟ್ಟಿದೆ. ಈ ಯೋಜನೆ ಯಾವುದೇ ಮೀಸಲಾತಿಯನ್ನು ಮೇಲಿನಿಂದ ಹೇರದೆ, ಶಿಕ್ಷಣ

ಹಾಗೂ ಉದ್ಯಮ ಸಂಸ್ಥೆಗಳು ರಾಷ್ಟ್ರದ ಸಾಮಾಜಿಕ ವೈವಿಧ್ಯತೆಯನ್ನು ತನ್ನ ಶಿಕ್ಷಣಾರ್ಥಿ ಹಾಗೂ ಸಿಬ್ಬಂದಿ ವಲಯದಲ್ಲಿ ಪ್ರತಿಬಿಂಬಿಸುವಂತೆ ಶಾಸನಾತ್ಮಕವಾಗಿ ಸೂಚಿಸುತ್ತದೆ. ಆಶ್ಚರ್ಯವೆಂದರೆ, ಈ ಯೋಜನೆಯನ್ನು ಕಡ್ಡಾಯಗೊಳಿಸದ ರಾಜ್ಯಗಳ ಉದ್ಯಮ ಹಾಗೂ ಶಿಕ್ಷಣ ಸಂಸ್ಥೆಗಳೂ–ಹಾರ್ವರ್ಡ್‌ನಂತಹ ಪ್ರತಿಷ್ಠಿತ ವಿಶ್ವವಿದ್ಯಾಲಯಗಳೂ ಸೇರಿದಂತೆ–ಅನುಷ್ಠಾನಕ್ಕೆ ತಂದಿವೆ. ಇದಕ್ಕೆ ಕಾರಣ, ಎಲ್ಲ ರೀತಿಯ ಮಾನವ ಸಂಪನ್ಮೂಲಗಳ ಸೂಕ್ತ ಸಂಯೋಜನೆ ಮಾತ್ರ ಸಂಸ್ಥೆಯೊಂದರ ದಕ್ಷತೆಯನ್ನು ಎಲ್ಲ ರೀತಿಯಲ್ಲಿ ಹೆಚ್ಚಿಸಬಲ್ಲುದು ಎಂಬುದನ್ನು ಅಲ್ಲಿನ ಉದ್ಯಮಿಗಳು ಮನಗಂಡಿರುವುದು ಹಾಗೂ ಅಲ್ಲಿನ ಕರಿ ಜನರು ಯಾವುದೇ ಪೂರ್ವಾಗ್ರಹವಿಲ್ಲದೆ ಅದಕ್ಕೆ ಸೂಕ್ತವಾಗಿ ಪ್ರತಿ ಸ್ಪಂದಿಸುತ್ತಿರುವುದು.

ಹೀಗಾಗಿ ಸ್ವತಃ ಉದ್ಯಮ ಸಂಸ್ಥೆಗಳೇ–ಮಾಹಿತಿ ತಂತ್ರಜ್ಞಾನದ ಜಾಗತಿಕ ಸಂಸ್ಥೆ ಎನ್ನಿಸಿರುವ ಮೈಕ್ರೋಸಾಫ್ಟ್ ಕಂಪನಿ ಸೇರಿದಂತೆ–ಕರಿ ಜನರಲ್ಲಿ ಪ್ರತಿಭಾವಂತರನ್ನು ಗುರುತಿಸಿ, ವಿಶೇಷ ಶಿಕ್ಷಣ–ತರಬೇತಿ ನೀಡಿ, ಅವರನ್ನು ತಮ್ಮ ಸಂಸ್ಥೆಗಳಲ್ಲಿ ಎಲ್ಲ ಹಂತಗಳ ಹುದ್ದೆಗಳಿಗೆ ನೇಮಿಸುತ್ತಿವೆ. ಆದರೆ ಇದಕ್ಕಾಗಿ ಆಯ್ಕೆ ಕೇವಲ ಅಂಕ ಗಳಿಕೆಯ ಮೇಲೆ ನಡೆಯುದೆ, ವ್ಯಕ್ತಿತ್ವ ಪರಿಶೀಲನೆಯ ಮೇಲೆ ಆಧಾರಿತವಾಗಿರುತ್ತದೆ. ಎಲ್ಲ ರೀತಿಯ ಸಾಮಾಜಿಕ ಹಿನ್ನಲೆಯುಳ್ಳ ಮತ್ತು ತನ್ನ ಪರಿಶ್ರಮಶೀಲತೆಯ ಬಗ್ಗೆ ಸ್ಪಷ್ಟತೆ ಹಾಗೂ ನಂಬಿಕೆಯುಳ್ಳ ವಿದ್ಯಾರ್ಥಿ–ನೌಕರ ವರ್ಗದಿಂದ ಕೂಡಿದ ಸಂಸ್ಥೆಗಳು ಮಾತ್ರ ತಮ್ಮ ಸಮಾಜಕ್ಕೆ ಹಾಗೂ ರಾಷ್ಟ್ರಕ್ಕೆ ಕೊಡುಗೆ ಸಲ್ಲಿಸಬಲ್ಲವು ಎಂಬ ನಂಬಿಕೆಯೇ ಈ ಕ್ರಿಯಾ ಯೋಜನೆಯ ಯಶಸ್ಸಿಗೆ ಕಾರಣವಾಗಿರುವುದು. ಅಮೆರಿಕಾದ ಮಾಜಿ ರಕ್ಷಣಾ ಮಂತ್ರಿ ಕಾಲಿನ್ ಪೊವೆಲ್ ಹಾಗೂ ಹಾಲಿ ವಿದೇಶಾಂಗ ಮಂತ್ರಿ ಕಾಂಡೊಲಿನಾ ರೈಸ್ ಈ ಯೋಜನೆಯ ಉತ್ಕೃಷ್ಟ ಫಲಗಳು. ಜಾತಿ ವ್ಯವಸ್ಥೆಯ ಪೂರ್ವಾಗ್ರಹಗಳಿಲ್ಲದ ಸೂಕ್ತ ವಾತಾವರಣ ನಿರ್ಮಾಣವಾದಲ್ಲಿ, ಎಲ್ಲ ಮಾದರಿಗಳಿಗೂ ಅಮೆರಿಕಾದ ಕಡೆ ನೋಡುವ ಹಾಗೂ ಉದಾಹರಣೆ ನೀಡುವ ನಮ್ಮ ಖಾಸಗಿ ಉದ್ಯಮಪತಿಗಳನ್ನು ಈ ವಿಷಯದಲ್ಲಿ ಒಪ್ಪಿಸುವುದು ಕಷ್ಟವಾಗಲಾರದು. ಸರ್ಕಾರ ಹಾಗೂ ಸಾಮಾಜಿಕ ನ್ಯಾಯದ ಪರವಾದ ಸಂಘಟನೆಗಳು ಈ ದಿಸೆಯಲ್ಲಿ ಕೂಡಲೇ ಪ್ರಯತ್ನಗಳನ್ನು ಆರಂಭಿಸಬೇಕಿದೆ.

ಮೀಸಲಾತಿ ಪರವಾದಿಗಳ ಇನ್ನೊಂದು ಸಲಹೆ, ಜಾತಿ ಜನಸಂಖ್ಯೆಗನುಗುಣವಾಗಿ ಮೀಸಲಾತಿ. ಮೀಸಲಾತಿ ನೀತಿಯ ಅಸಮರ್ಪಕ ಅನುಷ್ಠಾನದಿಂದ ಉಂಟಾದ ಹತಾಶೆಯಿಂದ ಮೂಡಿರಬಹುದಾದ ಈ ಸಲಹೆ, ಸಮಾಜ ಹಾಗೂ ರಾಷ್ಟ್ರದ ಹಿತ ದೃಷ್ಟಿಯಿಂದ ಅತ್ಯಂತ ಅಪಾಯಕಾರಿ ಹಾಗೂ ಅವಪ್ರಗತಿ (retrograde)ಯಾದುದಾಗಿದೆ. ಏಕೆಂದರೆ ಇದು, ಮೀಸಾಲಾತಿಯನ್ನು ಅಗತ್ಯಗೊಳಿಸಿದ ಜಾತಿ ವ್ಯವಸ್ಥೆಯನ್ನು ಆರ್ಥಿಕವಾಗಿಯಲ್ಲದಿದ್ದರೂ, ಸಾಮಾಜಿಕವಾಗಿ ಸುಸ್ಥಿರಗೊಳಿಸುತ್ತದೆ ಹಾಗೂ ಸಮಾಜದಲ್ಲಿ ಜಾತಿ ಮೀರಿದ ಸಾರ್ವತಿಕ ಉನ್ನತೀಕರಣದ ಸ್ಫೂರ್ತಿಯನ್ನೇ ಇಲ್ಲವಾಗಿಸುತ್ತದೆ. ಇದರಿಂದ ದೀರ್ಘಕಾಲಿಕ ದೃಷ್ಟಿಯಿಂದ ಹೆಚ್ಚು ನಷ್ಟಕ್ಕೊಳಗಾಗುವವರು

ಜಾತಿ–ಮೀಸಲಾತಿಯವರೇ. ಏಕೆಂದರೆ ಉನ್ನತೀಕರಣಕ್ಕಾಗಿ ಇಂದಿನ ವ್ಯವಸ್ಥೆ ಒಪ್ಪಿಕೊಂಡಿರುವ ದಕ್ಷತೆಯ ಮಟ್ಟದಲ್ಲಿ ಹಿಂದುಳಿದಿರುವುರಿಂದಲೇ ಅಲ್ಲವೆ, ಈ ಜಾತಿ–ವರ್ಗಗಳಿಗೆ ಮೀಸಲಾತಿ ಅಗತ್ಯವೆನಿಸಿರುವುದು? ಆದುದರಿಂದ ಈ ಜಾತಿ ವರ್ಗಗಳ ಹಿತ ದೃಷ್ಟಿಯಿಂದಲೇ ಸದ್ಯದ ಸಂದರ್ಭದಲ್ಲಿ ಒಂದು ನಿರ್ದಿಷ್ಟ ಪ್ರಮಾಣದ ಮುಕ್ತ ಸ್ಪರ್ಧೆ ಅವಶ್ಯಕವೆನಿಸಿಕೊಳ್ಳುತ್ತದೆ. ಅಲ್ಲದೆ, ಸಾವಿರಾರು ಜಾತಿ ಉಪಜಾತಿಗಳಾಗಿ ಒಡೆದುಹೋಗಿರುವ ಭಾರತೀಯ ಸಮಾಜದಲ್ಲಿ, ಜಾತಿ ಜನಸಂಖ್ಯಾಧಾರಿತ ಮೀಸಲಾತಿ ನೀತಿಯು, ಅನುಷ್ಠಾನದ ನೆಲೆಯಲ್ಲಿ ಅನೇಕ ಸಮಸ್ಯೆಗಳನ್ನು ಹುಟ್ಟು ಹಾಕುವುದಲ್ಲದೆ, ಅಲ್ಪಸಂಖ್ಯಾತ ಜಾತಿಗಳನ್ನು ಇನ್ನಷ್ಟು ಅವಕಾಶ ವಂಚಿತರನ್ನಾಗಿಸುವ ಸಾಧ್ಯತೆಗಳನ್ನೊಳಗೊಂಡಿದೆ.

ಇದು ಮೀಸಲಾತಿ ಪರವಾದಿಗಳು ಮಂಡಿಸುವ ಇನ್ನೊಂದು ವಾದದ ವಿರೋಧಾಭಾಸದೆಡೆಗೂ ನಮ್ಮ ಗಮನ ಸೆಳೆಯುತ್ತದೆ. ಅದೆಂದರೆ 'ಪ್ರತಿಭೆ'ಯ ಪುನರ್ನಿರೂಪಣೆ. ಆಧುನಿಕ ಜ್ಞಾನ ಗಳಿಕೆಗೆ ಬೇಕಾದ–ಮೇಲ್ಜಾತಿಗಳು ನಿರೂಪಿಸುವುವೆಂದು ಹೇಳಲಾದ–ಪ್ರತಿಭೆಗೆ ಪ್ರತಿಯಾಗಿ ಇವರು ನಿರೂಪಿಸುವ, ಯಾವ ಜ್ಯಾಮಿತೀಯ ಉಪಕರಣದ ನೆರವಿಲ್ಲದೆ ಹೊಲದಲ್ಲಿ ನೇರವಾಗಿ ಉಕ್ಕೆ ಹೊಡೆಯುವ ರೈತ ಮಕ್ಕಳ ಪ್ರತಿಭೆ ಹಾಗೂ ಹಲವು ಹಗಲು–ರಾತ್ರಿ ನಿರಂತರವಾಗಿ ಹಾಡಬಲ್ಲ ಜಾನಪದ ಗಾಯನ ಪ್ರತಿಭೆ ಮುಂತಾದ ಉದಾಹರಣೆಗಳು, ಇಂದಿನ 'ಪ್ರಗತಿಪರ ವ್ಯವಸ್ಥೆ'ಗೆ ಅಗತ್ಯವಾದ ದಕ್ಷತೆಯ ದೃಷ್ಟಿಯಿಂದ ಅಸಂಗತವೆನ್ನಿಸುತ್ತವೆ. ಅವು ಪ್ರತಿಭೆಗಳೇ ಹೌದು, ಆದರೆ ಈ ಆಧುನಿಕ ವಿಜ್ಞಾನಾಧಾರಿತ ವ್ಯವಸ್ಥೆಯನ್ನು ಕಟ್ಟಬಲ್ಲ ದಕ್ಷತೆಗೆ ಬೇಕಾದ ಪ್ರತಿಭೆಗಳಲ್ಲ. ಅಥವಾ ಅವು ಈವರೆಗೆ ಅಂತಹ ಸಾಧ್ಯತೆಗಳನ್ನು ಪ್ರಕಟಪಡಿಸಿಲ್ಲ. ನಿಜವಾಗಿ ಅಂತಹ ಪ್ರತಿಭೆಗಳೂ ಸಮಾಜವೊಂದರ ದಕ್ಷತೆಯ ಆಧಾರಗಳಾಗಬೇಕಾದರೆ, ಹಿಂದುಳಿದ ವರ್ಗಗಳು ಮೀಸಲಾತಿ ಹೋರಾಟವನ್ನು ನಿಲ್ಲಿಸಿ, 'ಪ್ರಗತಿಪರತೆ'ಯ ಬೇರೆಯೇ ವ್ಯಾಖ್ಯಾನವನ್ನು–ತನಗೆ ಸೂಕ್ತ ಕಂಡಂತಹುದನ್ನು–ಆಧರಿಸಿದ ಅಭಿವೃದ್ಧಿ ಮಾದರಿಯ ಮೇಲೆ ಕಟ್ಟಬೇಕಾದ ಹೊಸ ವ್ಯವಸ್ಥೆಗಾಗಿ ಹೋರಾಟ ರೂಪಿಸಬೇಕಾಗುತ್ತದೆ.

ಇದು ಸಾಧ್ಯವೇ? ಸಾರಾಸಗಟಾಗಿ ಮೀಸಲಾತಿ ಪರ ವಾದಿಸುವವರು ಯೋಚಿಸಬೇಕು. ಸಾಧ್ಯವಿಲ್ಲವೆಂದಾದರೆ, ಈವರೆಗಿನ ಅನುಭವದ ಆಧಾರದ ಮೇಲೆ ಒಟ್ಟಾರೆ ಸಮಾಜ ಹಾಗೂ ರಾಷ್ಟ್ರದ ಹಿತ ದೃಷ್ಟಿಯಿಂದ ಮೀಸಲಾತಿ ನೀತಿಯ ಇಂದಿನ ಗೊತ್ತು–ಗುರಿ ಹಾಗೂ ಸ್ವರೂಪಗಳನ್ನು ಮರುವಿಮರ್ಶೆಗೆ ಒಳಪಡಿಸಬೇಕು. ಈ ಮರು ವಿಮರ್ಶೆಯಲ್ಲಿ ಸದ್ಯದ ಮೀಸಲಾತಿ ನೀತಿಯು, ಮೀಸಲಾತಿಯನ್ನು ಅಗತ್ಯಗೊಳಿಸಿದ ಜಾತಿ ಪದ್ಧತಿಯನ್ನು ನಾಶಮಾಡಹೊರಟಿದೆಯೋ ಅಥವಾ ಅದನ್ನು ಇನ್ನೊಂದು ರೂಪದಲ್ಲಿ ಪೋಷಿಸ ಹೊರಟಿದೆಯೋ; ಸಮಾಜದ–ಕ್ರಿಯಾಶೀಲತೆಯ–ಒಟ್ಟು ದಕ್ಷತೆಯನ್ನು ಹೆಚ್ಚಿಸುತ್ತಿದೆಯೋ ಎಂಬುದರ ಪರಿಶೀಲನೆಯೂ ಒಳಗೊಂಡಿರಬೇಕು. ಇಂತಹ ಪರಿಶೀಲನೆಯ ಆಧಾರದ ಮೇಲೆ ಮೀಸಲಾತಿ ನೀತಿಯನ್ನು ಪುನರ್ರೂಪಿಸಬೇಕು.

ಹಾಗೇ, ಸದ್ಯದ ಚರ್ಚೆಯನ್ನು ಹುಟ್ಟು ಹಾಕಿರುವ ಮೀಸಲಾತಿ ವಿಸ್ತರಣೆ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಬಹುದಾದ ರೀತಿ ನೀತಿಗಳ ಅಧ್ಯಯನ ಮಾಡುತ್ತಿರುವ ವೀರಪ್ಪ ಮೊಯ್ಲಿ ಸಮಿತಿಯು, ಎಲ್ಲರನ್ನೂ ಮೆಚ್ಚಿಸಲು ಹೋಗಿ–ಸೂಕ್ತ ಮೂಲ ಸೌಲಭ್ಯಗಳನ್ನು ಕಲ್ಪಿಸಲಾಗದೆಯೇ ಮತ್ತು ಪ್ರಸ್ತಾಪಿತ ಮೀಸಲಾತಿಯ ಅನುಷ್ಠಾನಕ್ಕಾಗಿಯೇ, ಶಿಕ್ಷಣ ಸಂಸ್ಥೆಗಳಲ್ಲಿನ ಸೀಟುಗಳನ್ನು ಹೆಚ್ಚಿಸಿ–ಶಿಕ್ಷಣದ ಗುಣಮಟ್ಟವನ್ನು ಕೆಡಿಸುವಂತಹ ಕ್ರಮಗಳನ್ನು ಶಿಫಾರ್ಸು ಮಾಡಿ ಮೀಸಲಾತಿ ನೀತಿಯನ್ನು ಇನ್ನಷ್ಟು ವಿವಾದಾಸ್ಪದಗೊಳಿಸದಂತೆ ನೋಡಿಕೊಳ್ಳಬೇಕಾಗಿದೆ.

'ಕೆನೆಪದರ'ದ ಪ್ರಶ್ನೆ :

ಮೀಸಲಾತಿಗೆ ಸಂಬಂಧಪಟ್ಟಂತೆ ಸರ್ವೋನ್ನತ ನ್ಯಾಯಾಲಯವು ೨೦೦೬ರ ಅಕ್ಟೋಬರ್‌ನಲ್ಲಿ ಪರಿಶಿಷ್ಟಜಾತಿ–ಪಂಗಡಗಳ ಮೀಸಲಾತಿಯಲ್ಲೂ, ಹಿಂದುಳಿದ ವರ್ಗಗಳ ಮೀಸಲಾತಿಯಲ್ಲಿರುವಂತೆ 'ಕೆನೆಪದರದ'ದ(ಸಾಮಾಜಿಕ–ಶೈಕ್ಷಣಿಕದ ಜೊತೆಗೇ ಆರ್ಥಿಕ ಮಾನದಂಡದ) ತತ್ವವನ್ನು ಜಾರಿಗೆ ತರಬೇಕೆಂದು ಕೊಟ್ಟಿರುವ ತೀರ್ಪು ಮತ್ತೆ ವಿವಾದಗಳನ್ನೆಬ್ಬಿಸಿದೆ. ಅನೇಕ ರಾಜಕೀಯ ಪಕ್ಷಗಳು, ಜಾತಿಗುಂಪುಗಳು ಹಾಗೂ ಸಾಮಾಜಿಕ ನ್ಯಾಯ ಚಳುವಳಿಯ ನಾಯಕರನೇಕರು, ಈ ತೀರ್ಪನ್ನು ಟೀಕಿಸಿ, ವಿರೋಧಿಸಿ ಹೇಳಿಕೆಗಳನ್ನು ನೀಡುತ್ತಿದ್ದಾರಲ್ಲದೆ; ಸರ್ಕಾರ ಈ ತೀರ್ಪನ್ನು ಮಾನ್ಯ ಮಾಡುವ ಅಗತ್ಯವಿಲ್ಲವೆಂದೂ, ಮಾನ್ಯ ಮಾಡಿದಲ್ಲಿ ಮೀಸಲಾತಿಯ ಅರ್ಥೋದ್ದೇಶಗಳಿಗೇ ಭಂಗ ಬರುವುದೆಂದೂ ವಾದಿಸುತ್ತ ಅಚ್ಚರಿ ಹುಟ್ಟಿಸಿದ್ದಾರೆ. ಅವರ ವಾದಗಳ ನೆಲೆಗಳಲ್ಲಿ ಕೆಲವು ತಾತ್ವಿಕವಾದುದಾದರೆ, ಮತ್ತೆ ಕೆಲವು ತಾಂತ್ರಿಕವಾದವುಗಳಾಗಿವೆ. ತಾತ್ವಿಕವಾದ ವಾದಗಳಲ್ಲಿ ಮುಖ್ಯವಾದುದೆಂದರೆ–

೧. ಹಿಂದುಳಿದ ವರ್ಗಗಳನ್ನು ಸಾಮಾಜಿಕ ಹಾಗೂ ಶೈಕ್ಷಣಿಕ ಹಿಂದುಳಿದಿರುವಿಕೆ ಆಧಾರದ ಮೇಲೆ ನಿರೂಪಿಸಲಾಗಿರುವುದರಿಂದ, ಆ ವರ್ಗಗಳಲ್ಲಿ ಆ ಅಂಶಗಳ ಆಧಾರದ ಮೇಲೆ ಮೇಲ್ಮುಖ ಚಲನೆ ಸಾಧ್ಯವಾಗಿ 'ಕೆನೆ ಪದರ' ಸೃಷ್ಟಿಯಾಗುವ ಸಾಧ್ಯತೆ ಇರುವಂತೆ, ಪರಿಶಿಷ್ಟ ಜಾತಿ ಪಂಗಡಗಳ ವಿಷಯದಲ್ಲಿ ಅಂತಹ ಸಾಧ್ಯತೆಗೆ ಅವಕಾಶವೇ ಇಲ್ಲ. ಏಕೆಂದರೆ ಈ ಜಾತಿ–ಪಂಗಡಗಳು ನಿರೂಪಿತವಾಗಿರುವುದೇ ಅಸ್ಪೃಶ್ಯತೆ–ಪ್ರತ್ಯೇಕತೆಗಳೆಂಬ ಅಂಶಗಳ ಆಧಾರದ ಮೇಲೆ.

೨. 'ಕೆನೆ ಪದರ' ಷರತ್ತು ಜಾರಿಯಾದರೆ, ಮೀಸಲಾತಿಯನ್ನು ಆಡಳಿತ ದಕ್ಷತೆಗೆ ಧಕ್ಕೆಯಾಗದಂತೆ ಅನುಷ್ಠಾನಗೊಳ್ಳಬೇಕೆಂಬ ಸಾಂವಿಧಾನಿಕ ನಿರ್ದೇಶನಕ್ಕೆ ಭಂಗ ತಂದಂತಾಗುತ್ತದೆ.

೩. 'ಕೆನೆಪದರ'ದವರು ಅವಕಾಶ ವಿಹೀನರಾಗಿ, ಸಮಾನ ಅವಕಾಶದ ಸಾಂವಿಧಾನಿಕ ತತ್ವಕ್ಕೇ ಭಂಗ ಬಂದಂತಾಗುತ್ತದೆ.

ಇವುಗಳನ್ನು ಒಂದೊಂದಾಗಿ ನೋಡೋಣ. ಮೊದಲನೆಯ ವಾದವು ಪರಿಶಿಷ್ಟರಲ್ಲಿ ಚಲನೆಯ ಸಾಧ್ಯತೆಯನ್ನೇ ಅಲ್ಲಗಳೆಯುತ್ತದೆ. ಇದು ಸಂವಿಧಾನವು ಮೀಸಲಾತಿ ತತ್ವವನ್ನು ಅಳವಡಿಸಿಕೊಂಡಿರುವುದರ ಉದ್ದೇಶವನ್ನೇ ಅಪ್ರಸ್ತುತಗೊಳಿಸಿ, ಮೀಸಲಾತಿಯನ್ನು ಪರಿಶಿಷ್ಟರಲ್ಲೇ ಒಂದು ಪ್ರತಿಷ್ಠಿತ ವರ್ಗದ ಸೃಷ್ಟಿ ಹಾಗೂ ವಿಸ್ತರಣೆಗಾಗಿ ಮಾತ್ರ ಬಳಕೆಯಾಗುವ ಶಾಶ್ವತ ಸೌಲಭ್ಯವನ್ನಾಗಿ ಪರಿವರ್ತಿಸುವ ಹುನ್ನಾರದಂತೆ ತೋರುತ್ತದೆ. ಮೀಸಲಾತಿಯ ಉದ್ದೇಶವೇ ಅವಕಾಶ ಹಾಗೂ ಪ್ರಾತಿನಿಧ್ಯದ ಅಸಮಾನತೆಗಳನ್ನು ನಿವಾರಿಸಲು ಅಸ್ಪೃಶ್ಯತೆ ಮತ್ತು ಪ್ರತ್ಯೇಕತೆಗಳ ಗೋಡೆಗಳನ್ನೊಡೆದು ಸಮಾಜದ ಏಕೀಕರಣವನ್ನು ಸಾಧಿಸುವುದಾಗಿರುವಾಗ, ಅದರ ಸಾಧ್ಯತೆಯನ್ನೇ ನಿರಾಕರಿಸುವುದು ಮೀಸಲಾತಿ ತತ್ವದ ಸ್ವಯಂ ವಿರೋಧವಾಗುತ್ತದೆ.

ಇನ್ನು 'ಕೆನೆಪದರ'ದವರನ್ನು ಬಿಟ್ಟರೆ ಆಡಳಿತ ದಕ್ಷತೆಗೆ ಧಕ್ಕೆಯುಂಟಾಗುತ್ತದೆ ಎಂಬ ವಾದವು ಮೀಸಲಾತಿ ತತ್ವ ಮೀಮಾಂಸೆಗೇ ವಿರುದ್ಧವಾಗಿದೆ. ಏಕೆಂದರೆ ಮೀಸಲಾತಿ ಮೀಮಾಂಸೆಯ ಮೊದಲ ತತ್ವವೇ 'ಅವಕಾಶವೇ ದಕ್ಷತೆಯ ಮೊದಲ ಮೆಟ್ಟಿಲು' ಎಂಬುದಾಗಿದೆ. ಕೆಲವರಿಗೆ ಪರೋಕ್ಷವಾಗಿ ಅವಕಾಶವನ್ನೇ ನಿರಾಕರಿಸುವ ಮೂಲಕ ಈ ವಾದ, ಸಮಾನ ಅವಕಾಶದ ತತ್ವವನ್ನು ಪ್ರತ್ಯಕ್ಷವಾಗಿ ನಿರಾಕರಿಸುತ್ತದೆ. ಈ ವಾದದ ಪ್ರಕಾರ ಈವರೆಗಿನ ಮೀಸಲಾತಿ 'ಕೆನೆಪದರ'ಕ್ಕೆ ಲಭ್ಯವಾಗಿದ್ದು, ಆ ಕಾರಣ ಆಡಳಿತ ದಕ್ಷತೆಗೆ ಧಕ್ಕೆಯಾಗಿಲ್ಲ! ಇದು ಈವರೆಗಿನ ಮೀಸಲಾತಿ ತತ್ವದ ಕ್ರಿಯಾಶೀಲತೆಯನ್ನೇ ವಿರೋಧಾಭಾಸಕ್ಕೆ ಈಡು ಮಾಡುತ್ತದೆ.


ಕೊನೆಯದಾಗಿ, 'ಕೆನೆಪದರ'ದವರು ಅವಕಾಶ ವಿಹೀನರಾಗುವ ವಿಷಯ. ಏಕೆ ಅವರಿಗೆ ಶೇ.೫೦ ರಷ್ಟಿರುವ ಸಾರ್ವತ್ರಿಕ ಸ್ಪರ್ಧೆಯಲ್ಲಿ ಅವಕಾಶ ನಿಷೇಧಿಸಲಾಗಿದೆಯೇ? ಇಲ್ಲವಲ್ಲ!

ಇನ್ನು ತಾಂತ್ರಿಕ ನೆಲೆಯ ವಾದಗಳಿಗೆ ಬಂದರೆ, ಮುಖ್ಯವಾದದ್ದು: ಹಿಂದುಳಿದ ವರ್ಗಗಳಿಗೆ 'ಕೆನೆಪದರ' ತತ್ವವನ್ನು ಅನುಸರಿಸಬೇಕೆಂಬ ತೀರ್ಪು ಕೊಟ್ಟ ಈ ಹಿಂದಿನ ಪೀಠವು, ಸದ್ಯದ ತೀರ್ಪುಕೊಟ್ಟಿರುವ ಪೀಠಕ್ಕಿಂತ ದೊಡ್ಡದಿದ್ದುದರಿಂದ ಮತ್ತು ಅದು ತನ್ನ ತೀರ್ಪು ಪರಿಶಿಷ್ಟ ಜಾತಿ-ಪಂಗಡಗಳಿಗೆ ಅನ್ವಯವಾಗದು ಎಂದು ಹೇಳಿರುವುದರಿಂದ, ಸದ್ಯದ ತೀರ್ಪು ತಪ್ಪಿನಿಂದ ಕೂಡಿದೆ ಎಂಬುದು. ಆದರೆ ಮೊದಲ ತೀರ್ಪು ಒಂದು ವಿಶಿಷ್ಟ ಪ್ರಕರಣ-ಸಂದರ್ಭಕ್ಕೆ ಸಂಬಂಧಪಟ್ಟುದುದು ಎಂಬುದನ್ನು ಮರೆತಂತೆ ಈ ವಾದವು ತೋರುತ್ತದೆ. ಆ ಪೀಠ ತನ್ನ ತೀರ್ಪಿನ ಅನ್ವಯ ವ್ಯಾಪ್ತಿಯನ್ನು ಸ್ಪಷ್ಟೀಕರಿಸಲು ಮಾತ್ರ ಹೇಳಿದ ಮಾತನ್ನು ಸಾರ್ವತ್ರಿಕ ತೀರ್ಪನ್ನಾಗಿ ಪರಿವರ್ತಿಸಲು ಇದು ಯತ್ನಿಸುತ್ತಿರುವಂತಿದೆ. ಹಾಗಾಗಿ ಈ ವಾದ-ದೊಡ್ಡ, ಚಿಕ್ಕಪೀಠದ ಮಾತೂ ಸೇರಿದಂತೆ-ಅಸಂಬದ್ಧವಾಗಿ ತೋರುತ್ತದೆ.

'ಕೆನೆಪದರ' ತತ್ವದ ವಿರೋಧಿಗಳು ಮಂಡಿಸುತ್ತಿರುವ ಮತ್ತೊಂದು ವಾದವೆಂದರೆ, ಸಂವಿಧಾನದ ೩೪೧ ಹಾಗೂ ೩೪೨ನೇ ಅನುಚ್ಛೇದಗಳ ಪ್ರಕಾರ ಪರಿಶಿಷ್ಟಜಾತಿ

ಪಂಗಡಗಳ ಪಟ್ಟಿಯನ್ನು ಪರಿಷ್ಕರಿಸುವ ಅಧಿಕಾರ ಸಂಸತ್ತಿಗೆ ಮಾತ್ರ ಇರುವುದರಿಂದ, ಸರ್ವೋನ್ನತ ನ್ಯಾಯಾಲಯದ ತೀರ್ಪನ್ನು ಜಾರಿಗೆ ತರುವ ಜರೂರತ್ತು ಸರ್ಕಾರಕ್ಕೆ ಇರಬೇಕಾದ್ದಿಲ್ಲ ಎಂಬುದು. ಇದು ತೀರ್ಪನ್ನು ಉದ್ದೇಶಪೂರ್ವಕವಾಗಿ ಎಂಬಂತೆ, ತಿರುಗುಮುರುಗಾಗಿ ನೋಡುವ ಹಾಗೂ ಆ ಮೂಲಕ ನ್ಯಾಯಾಂಗ ಹಾಗೂ ಶಾಸಕಾಂಗಗಳ ನಡುವೆ ಸಲ್ಲದ ಸಂಘರ್ಷವನ್ನುಂಟು ಮಾಡುವ ಪ್ರಯತ್ನ. ಸರ್ವೋನ್ನತ ನ್ಯಾಯಾಲಯವನ್ನು ನಮ್ಮ ಸಂವಿಧಾನದ ಪ್ರಕಾರ ಶಾಸನ ಪರಾಮರ್ಶೆಯ ಅಂತಿಮ ವೇದಿಕೆಯೆಂದು ಒಪ್ಪಿಕೊಂಡಿರುವುದರಿಂದ, ಅದರ ತೀರ್ಪನ್ನು ಗೌರವದಿಂದ ಪರಿಶೀಲಿಸಬೇಕಾದದ್ದು ಸಂವಿಧಾನಿಕ ಧರ್ಮ. ಸಂಸತ್ತು ಅದನ್ನು ಪಾಲಿಸುವ ಜರೂರತ್ತು ಇಲ್ಲವೆಂದು ಹೇಳುವುದು, ಸಂವಿಧಾನದ ಚೇತನದಲ್ಲೇ ಅಪನಂಬಿಕೆಯನ್ನು ಬಿತ್ತುವಂತಹ ಪ್ರಯತ್ನವಾಗುತ್ತದೆ. ಇದು ಒಟ್ಟಾರೆಯಾಗಿ ಯಾರ ಮೀಸಲಾತಿ ತತ್ವದಿಂದಾಗಿ ಸಾಂಪ್ರದಾಯಿಕ ಸಾಮಾಜಿಕ ಪಟ್ಟ ಭದ್ರ ಹಿತಾಸಕ್ತಿಗಳಿಂದ ರಕ್ಷಣೆ ಪಡೆದರೋ, ಅವರೇ ಇಂದು ಹೊಸ ಸಾಮಾಜಿಕ ಪಟ್ಟಭದ್ರ ಹಿತಾಸಕ್ತಿಗಳಾಗಿ ಮೂಡಿ ನಿಂತಿರುವ ದುರಂತ ಚಿತ್ರವಾಗಿದೆ. ಮೀಸಲಾತಿ ತತ್ವವನ್ನು ಚಲನಶೀಲಗೊಳಿಸಿ, ಅದರ ಆತ್ಯಂತಿಕ ಗುರಿಯನ್ನು ಸಾಧಿಸುವಂತೆ ಮಾಡುವ ರಾಷ್ಟ್ರೀಯ ಕರ್ತವ್ಯವನ್ನೇ ಮರೆತಂತಿರುವ ಇವರು, ಅಂತಿಮವಾಗಿ ಮೀಸಲಾತಿ ತತ್ವದ ಸಾರ್ವತ್ರಿಕ ವಿಶ್ವಾಸಾರ್ಹತೆಯನ್ನು ಹಾಳು ಗೆಡಹುವುದರಲ್ಲಿ ಯಶಸ್ವಿಯಾದರೆ ಆಶ್ಚರ್ಯವೇನಿಲ್ಲ.

'ಕೆನೆಪದರ' ತತ್ವದ ನಿರ್ಬಂಧಗಳಿಂದಾಗಿ ಮೀಸಲು ಸ್ಥಾನಗಳು ಬಹುಕಾಲ ಖಾಲಿ ಉಳಿದು ಹೋಗುವ ಆತಂಕವೇನಾದರೂ ಈ 'ಕೆನೆಪದರ'ವಿರೋಧಿಗಳಲ್ಲಿದ್ದರೆ, ಹಾಗೆ ಉಳಿದು ಹೋಗದ ಹಾಗೆ ನೋಡಿಕೊಳ್ಳುವ ಉಪಕ್ರಮಗಳನ್ನು ಸುಚಿಸುವುದು ಹೆಚ್ಚು ರಚನಾತ್ಮಕವಾದ ಪ್ರತಿಕ್ರಿಯೆ ಎನ್ನಿಸಿಕೊಳ್ಳುತ್ತದೆ. ಉದಾಹರಣೆಗೆ, ನೇಮಕಾತಿಯ ಮೊದಲ ಸುತ್ತಿನಲ್ಲಿ 'ಕೆನೆಪದರ' ದವರನ್ನು ಹೊರಗಿಟ್ಟು ನೋಡಿ, ನಂತರ ಅಗತ್ಯ ಬಿದ್ದರೆ ಒಂದು ಸೀಮಿತ ಅವಧಿಯೊಳಗೆ ಇನ್ನೊಂದು ಸುತ್ತಿನಲ್ಲಿ 'ಕೆನೆಪದರ'ದವರನ್ನೂ ನೇಮಕಾತಿಗೆ ಪರಿಗಣಿಸುವ ವ್ಯವಸ್ಥೆಯನ್ನು ಅಳವಡಿಸಬಹುದು. ಅಥವಾ 'ಕೆನೆಪದರ'ದಲ್ಲೇ ಎರಡು ಅಥವಾ ಮೂರು ವಿಭಾಗ ಮಾಡಿ, ಹಂತಾನುಹಂತವಾಗಿ ಈ ವಿಭಾಗಗಳನ್ನು, ಅಲಭ್ಯ ಅಭ್ಯರ್ಥಿಗಳು ಸ್ಥಾನಗಳನ್ನು ತುಂಬಲು, ಮಿಸಲಾತಿಗೆ ತೆರೆದಿಡಬಹುದು.



ಗಾಂಧೀಜಿಯೊಂದಿಗೆ ಲೋಹಿಯಾ



ಜೆ.ಪಿ., ಆಚಾರ್ಯ ನರೇಂದ್ರ ದೇವ, ಡಾ. ಸಂಪೂರ್ಣಾನಂದ
(ಕುಳಿತಿರುವವರು) ಅವರೊಂದಿಗೆ ಲೋಹಿಯಾ



ಗೋವಾ ಹೋರಾಟದಲ್ಲಿ ಲೋಹಿಯಾ



ಶಾಂತವೇರಿ ಗೋಪಾಲಗೌಡ ಹಾಗೂ ಲೋಹಿಯಾ



ಕರ್ನಾಟಕದ ಸಮಾಜವಾದಿಗಳೊಂದಿಗೆ ಲೋಹಿಯಾ



ಜೆ.ಪಿ. (ಧ್ವನಿವರ್ಧಕದ ಮುಂದೆ), ಎಸ್. ಎಂ. ಜೋಷಿ (ಬಲತುದಿ)
ಅವರೊಂದಿಗೆ ಸುದ್ದಿಗೋಷ್ಠಿಯೊಂದರಲ್ಲಿ ಲೋಹಿಯಾ



ಲೋಹಿಯಾ – ಅಂತಿಮ ಯಾತ್ರೆ

ಗ್ರಂಥಋಣ

1. **Lohia: A Study** by *Dr. N. C. Mehrotra,* Atma Ram and sons (1978)

2. **Dr. Ram Manohar Lohia: His life and Philosophy** by *Smt. Indumathi Kelkar,* Presige Publications (1996)

3. **Marx, Gandhi and Socialism** by *Dr. Ram Manohar Lohia,* Ram Manohar Lohia Samata Vidyalaya Nyas (1978)

4. **The Caste System** by *Dr. Ram Manohar Lohia,* Ram Manohar Lohia Samata Vidyalaya Nyas (1978)

5. **Guilty Men of India's Partition** by *Dr. Ram Manohar Lohia,* Ram Manohar Lohia Samaja Vidyalaya Nyas (1978)

6. **Studies in Socialism** by *Ashok Mehta,* Bharateeya Vidya Bhavan (1959)

೭. **ಲೋಹಿಯಾ** (ಜೀವನ ಚಿತ್ರ) *ಲೇ: ಓಂಕಾರ್ ಶರದ್ (ಹಿಂದಿಯಲ್ಲಿ) ಅನು: ಹಸನ್ ನಯೀಂ ಸುರಕೋಡ್ ಪ್ರ: ಲೋಹಿಯಾ ಪ್ರಕಾಶನ* (೨೦೦೦)

೮. **ಲೋಹಿಯಾ: ವ್ಯಕ್ತಿ-ವಿಚಾರ-ವಿಮರ್ಶೆ** *ಸಂ: ಡಿ.ಎಸ್. ನಾಗಭೂಷಣ, ಪ್ರ: ಸಂಕ್ರಮಣ ಪ್ರಕಾಶನ* (೧೯೮೦)

೯. **ಸಮಾಜವಾದ ಅಂದಿನಿಂದ ಇಂದಿನವರೆಗೆ** *ಲೇ: ಬಾಪು ಹೆದ್ದೂರಶೆಟ್ಟಿ ಪ್ರ: ಜನಪ್ರಕಾಶನ* (೧೯೮೨)

೧೦. **ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು** *ಲೇ: ಎನ್.ಪಿ. ಶಂಕರನಾರಾಯಣರಾವ್ ಪ್ರ: ನವಕರ್ನಾಟಕ ಪ್ರಕಾಶನ*

ಇದೇ ಲೇಖಕರ ಇತರ ಕೃತಿಗಳು

- ಅನೇಕ (ಸಾಹಿತ್ಯ ವಿಮರ್ಶೆ-ಸಾಮಾಜಿಕ ಚಿಂತನೆ)
- ಗಮನ (ಸಾಹಿತ್ಯ ವಿಮರ್ಶೆ-ಸಾಮಾಜಿಕ ಚಿಂತನೆ)
- ಕುವೆಂಪು ಸಾಹಿತ್ಯ ದರ್ಶನ
- ಮರಳಿ ಬರಲಿದೆ ಸಮಾಜವಾದ!
- ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ
- ಲೋಹಿಯಾ ಸಮಾಜವಾದ ದರ್ಶನ
- ಒಂದನೇ ತರಗತಿಯಿಂದ ಇಂಗ್ಲೀಷ್ ಕಲಿಕೆ : ಏಕೆ ಬೇಡ
- ಬೇರು ಬೀಳಲು (ಸಮಾಜವಾದಿ ಸಂಕಥನಗಳು)
- ಜಯಪ್ರಕಾಶ್ ನಾರಾಯಣ : ಒಂದು ಅಪೂರ್ಣಕ್ರಾಂತಿಯ ಕಥೆ
- ಜೆ.ಪಿ. ಸೆರೆಮನೆಯ ದಿನಚರಿ (ಅನುವಾದ)

ಸಂಪಾದನೆ

- ಕುವೆಂಪು : ಒಂದು ಪುನರನ್ವೇಷಣೆ
- ಮಾನವ (ಸಮಾಜವಾದಿ ಮಾಸಿಕ)
- ಸಾಹಿತ್ಯ ಸಂವಾದ (ಸಾಹಿತ್ಯಕ ದ್ವೈಮಾಸಿಕ)
- ಲೋಹಿಯಾ : ವ್ಯಕ್ತಿ-ವಿಚಾರ-ವಿಮರ್ಶೆ
- ಒಲವು (ಅಂತರ್ಜಾತಿ ವಿವಾಹಿತರ ಸಮಾವೇಶದ ಸ್ಮರಣ ಸಂಪುಟ)

ಸಹ ಸಂಪಾದನೆ

- ಹಣತೆ (ಜಿ.ಎಸ್. ಶಿವರುದ್ರಪ್ಪ ಅಭಿನಂದನ ಗ್ರಂಥ)
- ಮಾಸ್ತಿ ಸಾಹಿತ್ಯ: ಸಮಗ್ರ ದರ್ಶನ (ಮಾಸ್ತಿ ಸಾಹಿತ್ಯ ಸಮೀಕ್ಷೆ)
- ಕಾಡಿನ ಹುಡುಗ ಕೃಷ್ಣ (ಶ್ರೀಕೃಷ್ಣ ಆಲನಹಳ್ಳಿ ನೆನಪಿನ ಸಂಪುಟ)



ಸಮಾನತೆಯ ಪರಿಕಲ್ಪನೆಯನ್ನು,

ಅದರ ನಾಲ್ಕು ಅರ್ಥಗಳಲ್ಲಿ ಗ್ರಹಿಸಬೇಕಾಗಿದೆ.

ಲೌಕಿಕ ಸಮಾನತೆಯೆಂದರೆ ರಾಷ್ಟ್ರಗಳ ನಡುವಣ

ಬಾಹ್ಯಾಂತರ ಸಮೀಕರಣವಲ್ಲದೆ

ರಾಷ್ಟ್ರದೊಳಗಿನ ಆಂತರಿಕ ಸಮೀಕರಣವೆಂದೂ;

ಆಧ್ಯಾತ್ಮಿಕ ಸಮಾನತೆಯೆಂದರೆ

ಬಾಹ್ಯ ಬಂಧುತ್ವವೆಂದಲ್ಲದೆ ಆಂತರಿಕ ಪ್ರಶಾಂತಿಯೆಂದೂ

ಅರ್ಥವಾಗಬೇಕು. ಈ ಪ್ರಶಾಂತಿ, ಬಂಧುತ್ವ ಹಾಗೂ

ರಾಷ್ಟ್ರದೊಳಗೆ ಮತ್ತು ರಾಷ್ಟ್ರಗಳ ನಡುವಣ

ಲೌಕಿಕ ಸಮಾನತೆ – ಈ ನಾಲ್ಕೂ ಅರ್ಥಗಳನ್ನೊಳಗೊಂಡ

ಒಂದು ಸಮಗ್ರ ಕಲ್ಪನೆ ಮಾತ್ರ

ಬದುಕಿನ ಪರಮ ಗುರಿ ಹಾಗೂ ಉದ್ದೇಶವಾಗಲು

ಅರ್ಹತೆ ಪಡೆಯುತ್ತದೆ.

– ಡಾ. ರಾಮಮನೋಹರ ಲೋಹಿಯಾ

ಕನ್ನಡ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು